₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 06.04.2025 ಸಂಪುಟ: 10 ಸಂಚಿಕೆ: 82 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ರಾಮ ನವಮಿ ಶುಭಾಶಯಗಳು

ಅಮೆರಿಕದಲ್ಲಿ
ವಿಶ್ವವಾಣಿ TV SPECIAL
HOME TOUR!
ಖ್ಯಾತ ನಟಿ ಯಮುನಾ ಶ್ರೀನಿಧಿಯವರ ನಿರೂಪಣೆ
ಅಂತಾರಾಷ್ಟ್ರೀಯ ಖ್ಯಾತಿಯ ಸೈಕ್ಲಿಸ್ಟ್ ಸತೀಶ್ ರಾವ್ ಅವರ ವಿಶಿಷ್ಟ ಮನೆಯಲ್ಲೊಂದು ಕುತೂಹಲದ ರೌಂಡಪ್!

ಸೊಂಪಾದ ಪುಟಗಳು



ಕಡಲಾಮೆಗಳನ್ನು ಉಳಿಸಲು ಅವರು ರೈಲು ಮಾರ್ಗದಲ್ಲಿ ಸುರಂಗ ಕೊರೆದರು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ನೀತಿಯುತ ರಾಮಪಥ, ಇಂದಿಗೂ ಪ್ರಸ್ತುತ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ



ನೀವು ಯಾವ ದಿಕ್ಕಿನಲ್ಲಿ ಕ್ರಮಿಸುತ್ತಿದ್ದೀರಿ ಎಂಬುದು ಮುಖ್ಯವೇ ಹೊರತು, ಎಷ್ಟು ವೇಗದಲ್ಲಿ ಹೋಗುತ್ತಿದ್ದೀರಿ ಎಂಬುದು ಮುಖ್ಯ ಅಲ್ಲ. ಅನೇಕ ಜನ ತಮಗೆ ಗೊತ್ತಿಲ್ಲದ ಕಡೆ ವೇಗವಾಗಿ ಹೋಗುತ್ತಿರುತ್ತಾರೆ. ಅವರು ನಿಮಗೆ ಆದರ್ಶ ಆಗಬೇಕಿಲ್ಲ.

ವಕ್ರತುಂಡೋಕ್ತಿ

ನಿಜವಾದ ಪ್ರೀತಿ ಕೋಲ್ಡ್ ಆಗಿದ್ದರೆ, ಅದಕ್ಕೆ ಬಿಯರ್ ಅಂತಾರೆ.

ಅವಳಿ ಅಪಘಾತ 8 ಮಂದಿ ಬಲಿ

ಕಲಬುರಗಿ/ದಾವಣಗೆರೆ: ಜೇವರ್ಗಿ ತಾಲೂಕಿನ ಸೊನ್ನ ಕ್ರಾಸ್ ಬಳಿ ನಿಂತಿದ್ದ ಲಾರಿಗೆ ಮ್ಯಾಕ್ಸಿಕ್ಯಾಬ್ ಡಿಕ್ಕಿ ಹೊಡೆದ ಪರಿಣಾಮ ಬಾಗಲಕೋಟೆ ಮೂಲದ ಐವರು ಸ್ಥಳದಲ್ಲೇ ಮೃತಪಟ್ಟಿದ್ದು, 11 ಜನರಿಗೆ ಗಂಭೀರ ಗಾಯಗಳಾಗಿವೆ. ಮಾಲನ್ (52), ವಾಜೀದ್ (2), ಮೆಹಬೂಬ್ (53), ಮೆಹಬೂಬ್ (29) ಪ್ರಿಯಾಂಕಾ (13) ಮೃತರು. ದಾವಣಗೆರೆ ತಾಲೂಕಿನ ಅತ್ತಿಗೆರೆ ಗ್ರಾಮದ ಬಳಿ ಬೀರೂರು ಸಮ್ಮಸಗಿ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ಬೆಳಗಿನ ಜಾವ 5 ಗಂಟೆಗೆ ಕಾರು ಮತ್ತು ಬಸ್ ನಡುವೆ ಮತ್ತೊಂದು ಭೀಕರ ಅಪಘಾತ ಸಂಭವಿಸಿದ್ದು, ಮೂವರು ಸಾವನ್ನಪ್ಪಿದ್ದಾರೆ. ಮೃತರನ್ನು ಬೆಳಗಾವಿ ಮೂಲದ ಕಾಗವಾಡ ತಾಲೂಕಿನ ಶಿರಗುಪ್ಪ ಗ್ರಾಮದ ಬಸವರಾಜಪ್ಪ (38), ಶ್ರೀಧರ್ (32), ವಿಜಯ್ ಕುಮಾರ್ (35) ಎಂದು ಗುರುತಿಸಲಾಗಿದೆ.

ಅತ್ಯಾಚಾರವೆಸಗಿ ನಗ್ನ ಫೋಟೊ ತೆಗೆದಿದ್ದ ತರಬೇತುದಾರ ಸೆರೆ

ಬೆಂಗಳೂರು: ಬ್ಯಾಡ್ಮಿಂಟನ್ ತರಬೇತಿಗೆ ಬರುತ್ತಿದ್ದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಆಕೆಯ ನಗ್ನ ಫೋಟೊ ಹಾಗೂ ವಿಡಿಯೊಗಳನ್ನು ಚಿತ್ರೀಕರಿಸಿಕೊಂಡಿದ್ದ ತರಬೇತುದಾರನನ್ನು ಹುಳಿಮಾವು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡಿನ ಸುರೇಶ್ ಬಾಲಾಜಿ (26) ಬಂಧಿತ ಆರೋಪಿ. ಅತ್ಯಾಚಾರಕ್ಕೆ ಒಳಗಾದ ಬಾಲಕಿಯ ತಾಯಿ ನೀಡಿದ ದೂರು ಆಧರಿಸಿ, ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಕುಶಾಲನಗರದಲ್ಲಿ ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಯತ್ನ, ಬಿವೈವಿ, ಯದುವೀರ್, ಬೋಪಯ್ಯ, ಪ್ರತಾಪ್ ಬಂಧನ

ವಿನಯ್ ಸೋಮಯ್ಯ ಸಾವು ಸಿಬಿಐ ತನಿಖೆಗೆ ಬಿಜೆಪಿ ಪಟ್ಟು

ಮಡಿಕೇರಿ: ಬಿಜೆಪಿ ಕಾರ್ಯಕರ್ತ ಗೋಣಿಮರೂರು ನಿವಾಸಿ ವಿನಯ್ ಸೋಮಯ್ಯ ಅವರ ಆತ್ಮಹತ್ಯೆಗೆ ಕಾರಣರಾದ ಜಿಲ್ಲೆಯ ಇಬ್ಬರು ಕಾಂಗ್ರೆಸ್ ಶಾಸಕರ ವಿರುದ್ಧವೂ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು. ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಕುಶಾಲನಗರದ ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಲಾಯಿತು. ಕಚೇರಿ ಮುಂಭಾಗವೇ ಬ್ಯಾರಿಕೇಡ್ ಸಹಿತ ಸಿದ್ಧರಾಗಿ ನಿಂತಿದ್ದ ನೂರಾರು ಪೊಲೀಸರು ಪ್ರತಿಭಟನಾಕಾರರನ್ನು ರಸ್ತೆಯಲ್ಲೇ ತಡೆಯುವ ಪ್ರಯತ್ನ ನಡೆಸಿದರು. ಈ ವೇಳೆ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ತಳ್ಳಾಟ-ನೂಕಾಟ ನಡೆಯಿತು. ಕೂಡಲೇ ಪೊಲೀಸರು ಬಿ.ವೈ.ವಿಜಯೇಂದ್ರ ಸೇರಿ ಮತ್ತಿತರ ಬಿಜೆಪಿ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಮೃತದೇಹವನ್ನು ಪೊಲೀಸ್ ಭದ್ರತೆಯೊಂದಿಗೆ ವಿನಯ್ ಅವರ ಹುಟ್ಟೂರು ಗೋಣಿಮರೂರು ಗ್ರಾಮಕ್ಕೆ ಕೊಂಡೊಯ್ಯಲಾಯಿತು.

ಮೈನಾಗೆ ನೋಟಿಸ್ ನೀಡಲು ಸಿದ್ಧತೆ: ವಿನಯ್ ಅವರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿದ ಹಾಗೂ ಬೆದರಿಕೆ ಹಾಕಿದ ಆರೋಪಡಿ ಕೊಡಗು ಜಿಲ್ಲೆಯ ಕಾಂಗ್ರೆಸ್ ಮುಖಂಡರೂ ಆಗಿರುವ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾ ಅಧ್ಯಕ್ಷ ತನ್ನೀರಾ ಮೈನಾ ಅವರ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣದ ತನಿಖೆಯನ್ನು ನಗರದ ಪೂರ್ವ ವಿಭಾಗದ ಪೊಲೀಸರು ಆರಂಭಿಸಿದ್ದಾರೆ. ತನ್ನೀರಾ ಮೈನಾಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಕರೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪ್ರಕರಣದ ಕುರಿತು ಪ್ರಾಥಮಿಕ ಮಾಹಿತಿ ಕಲೆ ಹಾಕಲಾಗಿದೆ. ವಿನಯ್ ಅವರ ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಅವರು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದ ಬರಹವನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ವಿನಯ್ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಯಾರ ಜತೆಗೆ ಮೊಬೈಲ್‌ನಲ್ಲಿ ಮಾತನಾಡಿದ್ದರು. ಅವರ ಮೊಬೈಲ್‌ನಲ್ಲಿ ಏನೆಲ್ಲಾ ದಾಖಲೆಗಳಿವೆ ಎಂಬುದನ್ನೂ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾನೂನು ತಜ್ಞರ ಮೊರೆ: ಮತ್ತೊಂದೆಡೆ ವಿರಾಜಪೇಟೆ ಕ್ಷೇತ್ರದ ಶಾಸಕ, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಹಾಗೂ ಮಡಿಕೇರಿ ಶಾಸಕ ಡಾ. ಮಂಥರ್‌ಗೌಡ ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸುವಂತೆ ಬಿಜೆಪಿ ಹಾಗೂ ವಿನಯ್ ಕುಟುಂಬದ ಸದಸ್ಯರು ಆಗ್ರಹಿಸಿ ಎರಡನೇ ಬಾರಿಗೆ ದೂರು ನೀಡಿದ್ದು, ಹೆಣ್ಣೂರು ಪೊಲೀಸರು ಕಾನೂನು ತಜ್ಞರ ಮೊರೆ ಹೋಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಕುಶಾಲನಗರದ ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಲಾಯಿತು.

ಗೌಡ ಸಂಪ್ರದಾಯದಂತೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ

ವಿನಯ್ ಸೋಮಯ್ಯ (40) ಅವರ ಅಂತ್ಯಕ್ರಿಯೆ ಅರೇಭಾಷಿಕ ಗೌಡ ಜನಾಂಗದ ಸಂಪ್ರದಾಯದಂತೆ ಸ್ವಗ್ರಾಮದಲ್ಲಿ ಶನಿವಾರ ಸಂಜೆ ನೆರವೇರಿತು. ಅಪರಾಹ್ನ 12.30ಕ್ಕೆ ಪಾರ್ಥಿವ ಶರೀರವನ್ನು ಮನೆಗೆ ತರಲಾಯಿತು. ಗಾಳಿಯಲ್ಲಿ ಎರಡು ಸುತ್ತು ಗುಂಡು ಹಾರಿಸುವ ಮೂಲಕ ಕುಟುಂಬಸ್ಥರು ಗೌರವ ಸಲ್ಲಿಸಿದರು. ಮನೆಯೊಳಗೆ ಶವವನ್ನು ಇರಿಸಿದ ನಂತರ ಅವಳಿ ಸಹೋದರ ವಿವೇಕ್ ಅಂತಿಮ ವಿಧಿವಿಧಾನ ನೆರವೇರಿಸಿದರು. ಮೃತನ ತಾಯಿ ಚಂಡಿರ ದೇವಕ್ಕಿ, ಪತ್ನಿ ಪೂಜೆ ಸಲ್ಲಿಸಿದರು. ಸಂಸದ ಯದುವೀರ್, ಶಾಸಕ ಶ್ರೀವತ್ಸ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಸೇರಿ ಅನೇಕರು ಅಂತಿಮ ನಮನ ಸಲ್ಲಿಸಿದರು. ಕಾಫಿ ತೋಟದಲ್ಲಿ ಚಿತೆಗೆ ಸಹೋದರ ವಿವೇಕ್ ಆಗ್ನಿಸ್ಪರ್ಶ ಮಾಡಿದರು. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.



ಕಾಂಗ್ರೆಸ್ ಶಾಸಕರಾದ ಪೊನ್ನಣ್ಣ, ಮಂಥರ್ ಗೌಡ ಅವರ ಹೆಸರನ್ನು ವಿನಯ್ ಆತ್ಮಹತ್ಯೆ ಪ್ರಕರಣದ ಎಫ್‌ಐಆರ್‌ನಲ್ಲಿ ಸೇರಿಸಬೇಕು ಎನ್ನುವ ಬಿಜೆಪಿ ನಾಯಕರ ಬೇಡಿಕೆ ಒಪ್ಪಲು ಆಗದು. ವಿನಯ್ ಸೋಮಣ್ಣ ಆತ್ಮಹತ್ಯೆ ಪ್ರಕರಣದಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ತನಿಖೆ ಆರಂಭವಾಗಿದ್ದು, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ತನಿಖೆ ನಡೆಯುವಾಗ ಪ್ರಕರಣ ಕುರಿತು ಮಾತನಾಡುವುದು ಸರಿಯಲ್ಲ. ಬಿಜೆಪಿ ನಾಯಕರು ಹತಾಶರಾಗಿ ಮಾತನಾಡುತ್ತಿದ್ದಾರೆ. ಸಾವಿನಲ್ಲೂ ರಾಜಕೀಯ ಮಾಡುವುದು ಅವರಿಗೆ ಕರಗತವಾಗಿದೆ.
- ಸಿದ್ದರಾಮಯ್ಯ ಮುಖ್ಯಮಂತ್ರಿ

ಬಿಜೆಪಿ ಮುಖಂಡರು ಸಾವಿನ ಪ್ರಕರಣದಲ್ಲಿಯೂ ರಾಜಕೀಯ ಮುಂದುವರಿಸಿರುವುದು ಖಂಡನೀಯ. ಬಿಜೆಪಿಯವರ ಈ ಹೆಣದ ಮೇಲಿನ ರಾಜಕೀಯವನ್ನು ರಾಜ್ಯದ ಪ್ರಜ್ಞಾವಂತ ಜನತೆ ಧಿಕ್ಕರಿಸಬೇಕು. ವಿನಯ್ ಸಾವಿಗೆ ಆತನನ್ನು ಸರಿಯಾಗಿ ನೋಡಿಕೊಳ್ಳದ ಬಿಜೆಪಿ ಕಾರಣವೇ ಹೊರತು ಬೇರೆ ಯಾರೂ ಅಲ್ಲ.
- ಎ.ಎಸ್.ಪೊನ್ನಣ್ಣ ಶಾಸಕ

ಕಳೆದ ನವೆಂಬರ್ 25ರಂದು ನಾನು ಕುಶಾಲನಗರ ಆಸ್ಪತ್ರೆ ಸಮಸ್ಯೆಗೆ ಸಂಬಂಧಿಸಿದಂತೆ ವಿನಯ್ ಜತೆ ವಾಟ್ಸಪ್ ಕಾಲ್‌ನಲ್ಲಿ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಹೇಳಿದ್ದೆ. ಆತ ಯಾರೆಂದೇ ನನಗೆ ಗೊತ್ತಿಲ್ಲ. ಹೀಗಿರುವಾಗ ಅನವಶ್ಯಕವಾಗಿ ನನ್ನ ಹೆಸರನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ.
- ಡಾ.ಮಂಥರ್ ಗೌಡ, ಶಾಸಕ

ದ್ವೀಪರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿ ಸ್ವೀಕರಿಸಿದ ಪ್ರಧಾನಿ ಮೋದಿ

ಶ್ರೀಲಂಕಾ ಜತೆ ಏಳು ಒಪ್ಪಂದಗಳಿಗೆ ಸಹಿ

ಕೊಲಂಬೊ: ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ ಭಾರತ-ಶ್ರೀಲಂಕಾ ಮಹತ್ವಾಕಾಂಕ್ಷೆಯ ರಕ್ಷಣಾ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿವೆ. ಇದು ದ್ವಿಪಕ್ಷೀಯ ಸಹಕಾರಕ್ಕಾಗಿ ವಿಶಾಲವಾದ ಮಾರ್ಗಸೂಚಿಯನ್ನು ರೂಪಿಸಲಿದೆ ಎನ್ನಲಾಗಿದೆ.

ಪ್ರಧಾನಿ ಮೋದಿ ಹಾಗೂ ದಿಸ್ಸನಾಯಕೆ ನಡುವೆ ವಿಸ್ತೃತವಾದ ಮಾತುಕತೆಯ ಬಳಿಕ ಏಳು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಈ ಪೈಕಿ ರಕ್ಷಣಾ ಒಪ್ಪಂದವು ಕಾರ್ಯತಂತ್ರದ ಪಾಲುದಾರಿಕೆಯಲ್ಲಿ ಮಹತ್ವದ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಇದೇ ಸಂದರ್ಭದಲ್ಲಿ ಮೋದಿ ಹಾಗೂ ದಿಸ್ಸನಾಯಕೆ ಅವರು ಸಂಪೂರ್ ಸೌರ ವಿದ್ಯುತ್ ಯೋಜನೆ ವರ್ಚುವಲ್ ಆಗಿ ಉದ್ಘಾಟಿಸಿದ್ದಾರೆ. → 4

ಪ್ರಧಾನಿ ಮೋದಿ ಅವರಿಗೆ ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವ 'ಮಿತ್ರ ವಿಭೂಷಣ' ಪ್ರಶಸ್ತಿ ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ನೀಡಲಾಯಿತು.

ನಮ್ಮ ರಕ್ಷಣಾ ಹಿತಾಸಕ್ತಿಗಳು ಒಂದೇ ಆಗಿವೆ ಎಂದು ನಾವು ನಂಬುತ್ತೇವೆ. ಎರಡೂ ದೇಶಗಳ ಭದ್ರತೆ ನಂಟು ಹೊಂದಿದ್ದು, ಪರಸ್ಪರ ಅವಲಂಬಿತವಾಗಿವೆ. ಭಾರತದ ನೆರೆಹೊರೆಯ ರಾಷ್ಟ್ರ ಮೊದಲು ನೀತಿ ಹಾಗೂ ಮಹಾಸಾಗರ ದೂರದೃಷ್ಟಿಯಲ್ಲಿ ಶ್ರೀಲಂಕಾಕ್ಕೆ ವಿಶೇಷ ಸ್ಥಾನವಿದೆ.
- ನರೇಂದ್ರ ಮೋದಿ ಪ್ರಧಾನಿ

ಭಾರತದ ಭದ್ರತಾ ಹಿತಾಸಕ್ತಿಗೆ ವಿರುದ್ಧವಾಗಿ ಶ್ರೀಲಂಕಾ ತನ್ನ ಪ್ರದೇಶವನ್ನು ಯಾವುದೇ ರೀತಿಯಲ್ಲಿ ಬಳಕೆ ಮಾಡಲು ಬಿಡುವುದಿಲ್ಲ. ಎಂದು ಪ್ರಧಾನಿ ಮೋದಿಗೆ ಭರವಸೆ ನೀಡಿದ್ದೇನೆ. **- ಅನುರಾ ಕುಮಾರ ದಿಸ್ಸನಾಯಕೆ** ಶ್ರೀಲಂಕಾ ಅಧ್ಯಕ್ಷ

'ಮಿತ್ರ ವಿಭೂಷಣ' ಪ್ರಶಸ್ತಿ ಪಡೆದ ಮೋದಿ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾದ ಅತ್ಯುನ್ನತ ನಾಗರಿಕ ಗೌರವ 'ಮಿತ್ರ ವಿಭೂಷಣ' ಪ್ರಶಸ್ತಿಯನ್ನು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ನೀಡಿ ಸನ್ಮಾನಿಸಿದ್ದಾರೆ. ಶ್ರೀಲಂಕಾ ಜತೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆಯನ್ನು ಗುರುತಿಸಿ ದ್ವೀಪ ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಬಾಬು ಜಗಜೀವನ್‌ರಾಮ್ ಜಯಂತಿ ಕಾರ್ಯಕ್ರಮದಲ್ಲಿ ಸಿಎಂ ಭಾಗಿ

ಒಳಮೀಸಲಾತಿಗೆ ಬದ್ಧ: ಸಿಎಂ



ಡಾ.ಬಾಬು ಜಗಜೀವನರಾಮ್ ಪ್ರತಿಮೆಗೆ ಸಿಎಂ ಸಿದ್ದರಾಮಯ್ಯ ಮಾಲಾರ್ಪಣೆ ಮಾಡಿದರು.

ಬೆಂಗಳೂರು: ಒಳ ಮೀಸಲಾತಿ ಜಾರಿ ಮಾಡೇ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್ ಮೇಲೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ.ಬಾಬು ಜಗಜೀವನರಾಮ್ ಅವರ 118ನೇ ಜನ್ಮದಿನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಒಳಮೀಸಲಾತಿ ಬಗ್ಗೆ ಅನುಮಾನ ಬೇಡ. ಜಾರಿ ಮಾಡೇ ಮಾಡ್ತೀವಿ. ನೀವು ಬೇಡ ಅಂದರೂ ನಾವು ಜಾರಿ ಮಾಡ್ತೀವಿ. ಸುಪ್ರೀಂಕೋರ್ಟ್ ಆದೇಶವನ್ನು ನಾವು ಖಚಿತವಾಗಿ ಪಾಲಿಸುತ್ತೇವೆ. ನಾಗಮೋಹನ್ ದಾಸ್ ಅವರು ಎರಡು ತಿಂಗಳ ಕಾಲಾವಧಿ ಕೇಳಿದ್ದಾರೆ. ನಾವು ಕೊಟ್ಟಿದ್ದೇವೆ. ಬಳಿಕ ಯಾರಿಗೂ ಅನ್ಯಾಯ ಆಗದಂತೆ ಜಾರಿ ಮಾಡುತ್ತೇವೆ ಎಂದರು. → 4

ವಕ್ಫ್: ಸುಪ್ರೀಂಗೆ ಕಾಂಗ್ರೆಸ್, ಆಪ್, ಓವೈಸಿ ಅರ್ಜಿ ಸಲ್ಲಿಕೆ

ದೆಹಲಿ: ಕಾಂಗ್ರೆಸ್, ಆಮ್ ಆದ್ಮಿ ಪಕ್ಷ (ಎಎಪಿ) ಮತ್ತು ಆಲ್ ಇಂಡಿಯ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷಗಳು ವಕ್ಫ್ ತಿದ್ದುಪಡಿ ವಿಧೇಯಕ ವಿರುದ್ಧ ಸುಪ್ರೀಂಕೋರ್ಟ್‌ಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿದ್ದು, ವಕ್ಫ್ ತಿದ್ದುಪಡಿ ವಿಧೇಯಕದ ಸಿಂಧುತ್ವವನ್ನು ಪ್ರಶ್ನಿಸಿವೆ. ವಿಧೇಯಕ ಸಾಂವಿಧಾನಿಕ ನಿಬಂಧನೆಗಳನ್ನು ಉಲ್ಲಂಘಿಸಿದೆ ಎಂದು ವಾದಿಸಿವೆ.

ಈ ನಡುವೆ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ), ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭೇಟಿಗೆ ಸಮಯ ಕೇಳಿದ್ದು, ವಕ್ಫ್ ಮಸೂದೆಗೆ ಒಪ್ಪಿಗೆ ನೀಡುವ ಮೊದಲು ತಮ್ಮ ಮನವಿ ಆಲಿಸುವಂತೆ ಕೋರಿದೆ.

ವಕ್ಫ್ ಮಂಡಳಿಗೆ ಈ ಹಿಂದೆ ನೀಡಲಾಗಿರುವ ರಕ್ಷಣೆಗಳನ್ನು ತಿದ್ದುಪಡಿ ವಿಧೇಯಕ ತೆಗೆದುಹಾಕುತ್ತದೆ. ಸಂವಿಧಾನದ 14 ಮತ್ತು 15ನೇ ವಿಧಿಗಳ ಉಲ್ಲಂಘನೆಯಾಗಿದೆ.
- ಅಸಾದುದ್ದೀನ್ ಒವೈಸಿ ಎಐಎಂಐಎಂ ಅಧ್ಯಕ್ಷ

ವಕ್ಫ್ ಆಸ್ತಿ, ನಿರ್ವಹಣೆ ಮೇಲೆ ಹೊಸ ವಿಧೇಯಕ ನಿರ್ಬಂಧಗಳನ್ನು ವಿಧಿಸುತ್ತದೆ. ಅದು ಮುಸ್ಲಿಮರ ಧಾರ್ಮಿಕ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುತ್ತದೆ ತಾರತಮ್ಯ ಮಾಡುತ್ತದೆ.
- ಮೊಹಮ್ಮದ್ ಜಾವೇದ್, ಕಾಂಗ್ರೆಸ್ ಸಂಸದ

ವಕ್ಫ್ ವಿಧೇಯಕ ಸಂಸತ್ತಿನಲ್ಲಿ ಅಂಗೀಕಾರಗೊಂಡ ಬೆನ್ನಲ್ಲೇ ದೇಶದ ವಿವಿಧೆಡೆ ಪ್ರತಿಭಟನೆಗಳು ನಡೆಯಲಾರಂಭಿಸಿವೆ.

ಏ.15ರಿಂದಲೇ ಸಿಇಟಿ ಪರೀಕ್ಷೆ

ಬೆಂಗಳೂರು: ಏ.15ರಿಂದ 17ರವರೆಗೆ ಸಿಇಟಿ ಪರೀಕ್ಷೆ ನಡೆಯಲಿದೆ ಎಂದು ಕೆಇಎ ಪ್ರಕಟಿಸಿದೆ. ಈ ವರ್ಷ 3 ಲಕ್ಷ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಬರೆಯುವ ನಿರೀಕ್ಷೆಯಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ. ಏ.18ರಂದು ಗುಡ್ ಫ್ರೈಡೇ ಇರುವುದರಿಂದ ಅಂದು ನಿಗದಿಯಾಗಿದ್ದ ಕನ್ನಡ ಭಾಷೆಯ ಪರೀಕ್ಷೆಯನ್ನು ಏ.15ಕ್ಕೆ ನಿಗದಿ ಮಾಡಲಾಗಿದೆ. ಏಪ್ರಿಲ್ 15ರಂದು ಬೆಂಗಳೂರು, ಮಂಗಳೂರು, ವಿಜಯಪುರ, ಬೆಳಗಾವಿ ಕೇಂದ್ರಗಳಲ್ಲಿ ಮಾತ್ರ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

ಮತ್ತೆ ಉಕ್ರೇನ್ ಮೇಲೆರಗಿದ ರಷ್ಯಾ

ಕೀವ್: ಕೇಂದ್ರ ಉಕ್ರೇನ್‌ನ ನಗರ ಕ್ರಿವ್ವಿ ರಿಹ್ ಮೇಲೆ ರಷ್ಯಾ ಸೇನೆ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 18ಕ್ಕೆ ಏರಿಕೆಯಾಗಿದೆ. ಮೃತರಲ್ಲಿ 9 ಮಕ್ಕಳೂ ಸೇರಿದ್ದಾರೆ ಎಂದು ಪ್ರಾಂತೀಯ ಗವರ್ನರ್ ಸೆರ್ಹಿಲ್ ಲಿಸಾಕ್ ಶನಿವಾರ ಹೇಳಿದ್ದಾರೆ. ಶುಕ್ರವಾರ ನಡೆದ ದಾಳಿಯಲ್ಲಿ, ಮಗುವಿನಿಂದ ಹಿಡಿದು ವಯೋವೃದ್ಧರ ವರೆಗೆ ಸುಮಾರು 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ರಾಜ್ಯದಲ್ಲಿ ಮದ್ಯ ಕೊರತೆ | ಬೇಡಿಕೆಯಷ್ಟು ಪೂರೈಕೆಯಿಲ್ಲ

ಸದ್ಯದಲ್ಲೇ ಎಣ್ಣೆ ದರ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಬೆಲೆ ಏರಿಕೆಯ ದುಬಾರಿ ದುನಿಯಾ ನಡೆಯುತ್ತಿರುವಾಗಲೇ ಆರ್ಥಿಕ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಶೀಘ್ರದಲ್ಲೇ ಕಡಿಮೆ ದರದ ಮದ್ಯಗಳ ದರ ಹೆಚ್ಚಿಸಲು ರಾಜ್ಯ ಸರಕಾರ ಮುಂದಾಗಿದ್ದು, ಮದ್ಯಪ್ರಿಯರ 'ಮತ್ತು' ಇಳಿಸುವ ಕಹಿ ಸೂಚನೆ ಸಿಕ್ಕಿದೆ. ಒರಿಜನಲ್ ಚಾಯ್ಸ್, ಹೈವಾರ್ಡ್ಸ್, ರಾಜಾ ವಿಸ್ಕಿ, ಒಟಿ ಸೇರಿ ಇತರೆ ಕಡಿಮೆ ದರದ ಮದ್ಯ ಬಾಟಲ್‌ಗಳ ಮೇಲೆ 10 ರಿಂದ 20 ರು. ಹೆಚ್ಚಳವಾಗಲಿದ್ದು ಈ ಬಗ್ಗೆ ಸದ್ಯದಲ್ಲೇ ಅಬಕಾರಿ ಇಲಾಖೆಯು ಅಧಿಕೃತ ಆದೇಶ ಹೊರಡಿಸುವ ಸಾಧ್ಯತೆ ಇದೆ.

ವಿಶ್ವವಾಣಿ ವಿಶೇಷ

ರಾಜ್ಯದಲ್ಲಿ 3,988 ವೈನ್‌ಶಾಪ್ (ಸಿಎಲ್2), 279 ಕ್ಲಬ್ (ಸಿಎಲ್4), 78 ಸ್ಟಾರ್ ಹೋಟೆಲ್ (ಸಿಎಲ್6ಎ), 2,382 ಹೋಟೆಲ್ ಮತ್ತು ವಸತಿ ಗೃಹ (ಸಿಎಲ್7), 68 ಮಿಲಿಟರಿ ಕ್ಯಾಂಟೀನ್ ಮಳಿಗೆ (ಸಿಎಲ್8), 3,634 ಬಾರ್ ಆ್ಯಂಡ್ ರೆಸ್ಟೋರೆಂಟ್ (ಸಿಎಲ್9), 1,041 ಎಂಎಸ್‌ಐಎಲ್ (ಸಿಎಲ್11ಸಿ) ಮತ್ತು 745 ಆರ್‌ವಿಬಿ ಸೇರಿ ಒಟ್ಟು 12,614 ಮದ್ಯದಂಗಡಿಗಳಿವೆ. ನಿತ್ಯ ಮದ್ಯ ಮಾರಾಟದಿಂದಾಗಿ 6,570 ಕೋಟಿ ರು. ಇಲಾಖೆ ಮೂಲಕ ಸರಕಾರಕ್ಕೆ ಆದಾಯ ಬರುತ್ತಿದೆ. 2024-25ನೇ ಸಾಲಿನಲ್ಲಿ ಇಲಾಖೆಗೆ 36,500 ಕೋಟಿ ರು. ರಾಜಸ್ವ ಸಂಗ್ರಹ ನಿಗದಿಪಡಿಸಲಾಗಿತ್ತು. → 4

- ಮದ್ಯ ಕೊರತೆಯಿಂದ ಸರಕಾರಕ್ಕೆ ಆದಾಯ ನಷ್ಟ
- 40 ಸಾವಿರ ಕೋಟಿ ರು. ಆದಾಯ ಸಂಗ್ರಹ ಗುರಿ
- ನಿಗದಿಪಡಿಸಿದ್ದ ಗುರಿ ಮುಟ್ಟಲು ದರ ಏರಿಕೆ

ಅರ್ಧಕ್ಕರ್ಧ ಕಡಿಮೆ ಪೂರೈಕೆ

ಬಿಯರ್ ಮತ್ತು ಐಎಂಎಲ್ ಲಿಕ್ಕರ್‌ಗಳ ದರವನ್ನು ಇಲಾಖೆ ಸತತ ಹೆಚ್ಚಿಸುತ್ತಿದೆ. ಆದರೆ, ರಾಜ್ಯದಲ್ಲಿ ಬೇಡಿಕೆಗೆ ತಕ್ಕಂತೆ ಮದ್ಯ ಪೂರೈಕೆಯಾಗುತ್ತಿಲ್ಲ. ಇದರಿಂದ ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಸಮರ್ಪಕವಾಗಿ ಕಡಿಮೆ ದರದ ಮದ್ಯ ಪೂರೈಕೆಯಾಗದ ಹಿನ್ನೆಲೆಯಲ್ಲಿ ಮಾಲೀಕರಿಂದ ಸರಕಾರಕ್ಕೆ ಬರಬೇಕಿದ್ದ ಆದಾಯದಲ್ಲಿಯೂ ನಷ್ಟವಾಗುತ್ತಿದೆ. 10 ಲಕ್ಷ ರು. ಮೌಲ್ಯದ ಮದ್ಯ ನೀಡುವಂತೆ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ (ಕೆಎಸ್‌ಬಿಸಿಎಲ್) ಇಂಡೆಂಡ್ ಕಳುಹಿಸಿದರೆ 5 ಲಕ್ಷ ರು. ಮೌಲ್ಯದ ಮಾತ್ರ ಮದ್ಯ ಪೂರೈಕೆಯಾಗುತ್ತಿದೆ.

ವಿಶ್ವವಾಣಿ ಕುಟುಂಬದ ಸದಸ್ಯರಾಗಲು ಬಯಸುತ್ತೀರಾ ಇಲ್ಲಿದೆ ಅವಕಾಶ

ಮುಖ್ಯ ಉಪಸಂಪಾದಕ
- ದಿನಪತ್ರಿಕೆಯಲ್ಲಿ 8-10 ವರ್ಷಗಳ ಅನುಭವ. ಎಲ್ಲ ವಿಭಾಗಗಳ ಪರಿಣತಿ.
- ಉತ್ತಮ ಭಾಷಾಂತರ ಜ್ಞಾನ, ನವಮಾಧ್ಯಮದ ಕಲಿಕಾಸಕ್ತಿ

ಹಿರಿಯ ಉಪ ಸಂಪಾದಕ
- ದಿನಪತ್ರಿಕೆಯಲ್ಲಿ 5-7 ವರ್ಷಗಳ ಅನುಭವ. ಎಲ್ಲ ವಿಭಾಗಗಳ ಪರಿಣತಿ.
- ಪ್ರಚಲಿತ ವಿದ್ಯಮಾನಗಳ ಜ್ಞಾನ, ಉತ್ತಮ ಭಾಷಾ ಪ್ರೌಢಿಮೆ, ವಿನ್ಯಾಸ ಕೌಶಲ್ಯ.

ಉಪ ಸಂಪಾದಕ
- ದಿನಪತ್ರಿಕೆಯಲ್ಲಿ 2-3 ವರ್ಷಗಳ ಸುದ್ದಿ ಮನೆ ಅನುಭವ.
- ಪ್ರಚಲಿತ ವಿದ್ಯಮಾನಗಳ ಜ್ಞಾನ, ಭಾಷಾ ಪ್ರೌಢಿಮೆ, ಪುಟ ವಿನ್ಯಾಸ ಪರಿಣತಿ.

ಟ್ರೈನಿ ಉಪಸಂಪಾದಕ
- ಕನ್ನಡದಲ್ಲಿ ಸ್ಪಷ್ಟವಾಗಿ, ತಪ್ಪಿಲ್ಲದೆ ಬರೆಯುವ ಪರಿಣತಿ.
- ಪ್ರಚಲಿತ ವಿದ್ಯಮಾನಗಳ ತಿಳಿವಳಿಕೆ. ಕಲಿಯುವ ಆಸಕ್ತಿ.

ಆಸಕ್ತರು,
ಏಪ್ರಿಲ್ 15ರೊಳಗಾಗಿ ಕೆಳಗೆ ಸೂಚಿಸಿದ ಸಂಪರ್ಕ ಸಂಖ್ಯೆಗೆ ವಾಟ್ಸ್ಆ್ಯಪ್ ಅಥವಾ ಇಮೇಲ್‌ಗೆ ಅರ್ಜಿಯನ್ನು ಕಳಿಸಬಹುದು

ವಿಶ್ವವಾಣಿ hr@vishwavani.news 63623 93988

ಸಮಾಚಾರ ಸಣ್ಣದಲ್ಲ

ಅನಾರೋಗ್ಯಕ್ಕೆ ಬೇಸತ್ತು ಆತ್ಮಹತ್ಯೆ

ಬೆಂಗಳೂರು: ಅನಾರೋಗ್ಯಕ್ಕೆ ಬೇಸತ್ತು ವ್ಯಕ್ತಿಯೋರ್ವ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಗೊಲ್ಲರಹಟ್ಟಿಯಲ್ಲಿ ನಡೆದಿದೆ. ಪುರುಷೋತ್ತಮ್ (27) ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ಮೂಲತಃ ಮಾಗಡಿ ತಾಲೂಕು ರಾಮನಗರ ಜಿಲ್ಲೆ ಬಾಳೆನಹಳ್ಳಿಯ ಪುರುಷೋತ್ತಮ್ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪುರುಷೋತ್ತಮ್ ಕಳೆದ 5 ವರ್ಷದಿಂದ ಹೆಂಡತಿ ಹಾಗೂ ಮಗುವಿನೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಅನಾರೋಗ್ಯದಿಂದ ಬೇಸತ್ತು ಗೊಲ್ಲರಹಟ್ಟಿಯಲ್ಲಿರುವ ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ಸ್ಥಳಕ್ಕೆ ಬ್ಯಾಡರಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೌರವಧನ ವಾಪಸ್ ನೀಡಲು ನಿರ್ಧಾರ

ಬೆಂಗಳೂರು: ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ ನೀಡುವ ಗೌರವಧನವನ್ನು ಪದ್ಮನಾಭ ನಗರ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಮೋದ್ ಶ್ರೀನಿವಾಸ್ ಸರಕಾರಕ್ಕೆ ವಾಪಸ್ ನೀಡಲು ಮುಂದಾಗಿದ್ದಾರೆ. ಈ ಕುರಿತು ಗ್ಯಾರಂಟಿ ಅನುಷ್ಠಾನ ರಾಜ್ಯ ಸಮಿತಿ ಉಪಾಧ್ಯಕ್ಷ ಹಾಗೂ ಬಿಬಿಎಂಪಿ ಅಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ, ಸರಕಾರ ನಮಗೆ ಕೊಟ್ಟಿರುವ ಜವಾಬ್ದಾರಿ ಮಹತ್ವದ್ದಾಗಿದ್ದು, ಈ ಹೊಣೆಗಾರಿಕೆ ಬಡ, ಮಧ್ಯಮ ವರ್ಗದ ಜನರಿಗೆ ಯೋಜನೆ ತಲುಪಿಸುವುದಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರದಿಂದ ಸಂಬಳ ಪಡೆದು ಕೆಲಸ ಮಾಡುವುದಕ್ಕಿಂತ ಜನರ ಸೇವೆ ಮಾಡುವುದು ನನ್ನ ಗುರಿಯಾಗಿದೆ. ಸರಕಾರ ಗೌರವಧನ ಎಂದು ಕೇವಲ ಒಂದು ರುಪಾಯಿ ಮಾತ್ರವೇ ನೀಡಲಿ. ಅದನ್ನು ಗೌರವದಿಂದ ಸ್ವೀಕಾರ ಮಾಡುತ್ತೇನೆ. 25 ಸಾವಿರ ರುಪಾಯಿ ಮಾಸಿಕ ವೇತನ ಸರಕಾರ ಬೇರೆ ಯಾವುದಾದರೂ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಿ ಎಂಬುದು ನನ್ನ ಆಶಯ ಎಂದು ತಿಳಿಸಿದ್ದಾರೆ.

ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿರುವ ಚಿನ್ನ ಕಳ್ಳಸಾಗಣೆ ಪ್ರಕರಣ | ರನ್ಯಾರಾವ್ ಮೊಬೈಲ್‌ನಲ್ಲಿ ಸೇವ್ ಆಗಿದ್ದ ನಂಬರ್‌ನಿಂದ ಸ್ಫೋಟಕ ರಹಸ್ಯ ಬಯಲು

ರನ್ಯಾ ಬಳಸುತ್ತಿದ್ದ ಕೋಡ್‌ವರ್ಡ್ ರಹಸ್ಯ ಬೆಳಕಿಗೆ

ಬೆಂಗಳೂರು: ದುಬೈನಿಂದ ಚಿನ್ನ ತಂದು ಪರಪ್ಪನ ಅಗ್ರಹಾರ ಸೇರಿರುವ ರನ್ಯಾ ರಾವ್ ಪ್ರಕರಣದಲ್ಲಿ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ರನ್ಯಾ ಕಳ್ಳಸಾಗಾಣಿಕೆಗೆ ಬಳಸುತ್ತಿದ್ದ ಕೋಡ್‌ವರ್ಡ್‌ಗಳ ರಹಸ್ಯ ಬಯಲಾಗಿದೆ.

ರನ್ಯಾರಾವ್ ಗೋಲ್ಡ್ ಸ್ಮಗ್ಲಿಂಗ್ ಕೇಸ್ ತನಿಖೆ ಮಾಡುತ್ತಿರುವ ಡಿಆರ್‌ಐ ಅಧಿಕಾರಿಗಳು ಹಲವು ಸಂಗತಿಗಳನ್ನು ಬಯಲಿಗೆಳೆದಿದ್ದಾರೆ. ಗೋಲ್ಡ್ ಸ್ಮಗ್ಲಿಂಗ್ ನಲ್ಲಿ ಹವಾಲ ನಂಟಿನ ಬಗ್ಗೆ ಸಾಕ್ಷ್ಯ ಕಲೆ ಹಾಕಿದ್ದಾರೆ. ರನ್ಯಾರಾವ್ ಮೊಬೈಲ್‌ನಲ್ಲಿ ಸೇವ್ ಆಗಿದ್ದ ಆ ಒಂದು ನಂಬರ್‌ನಿಂದ ಚಿನ್ನ ಕಳ್ಳಸಾಗಾಣಿಕೆಯ ಸ್ಫೋಟಕ ರಹಸ್ಯ ಹೊರಬಂದಿದೆ.

ರನ್ಯಾ ಮೊಬೈಲ್‌ನಲ್ಲಿ 'ಏಯು ಬೆಂಗಳೂರು ಡಿಸ್ಪ್ಯಾಚ್ ನ್ಯೂಟನ್' ಎಂಬ ಹೆಸರಿನಲ್ಲಿ ಒಂದು ನಂಬರ್ ಸೇವ್ ಆಗಿತ್ತು. ಆ ನಂಬನರ್ ಮೂಲಕವೇ ರನ್ಯಾ ಮತ್ತು ಸಾಹಿಲ್ ಮೆಸೇಜ್ ಮಾಡುತ್ತಿದ್ದರು. ಅಲ್ಲದೇ ಸ್ಮಗ್ಲಿಂಗ್ ನಡೆಸಲು ಐದು ಸ್ಟೆಪ್‌ಗಳನ್ನು ಫಾಲೋ ಮಾಡಿದ್ದರು ಎಂಬ ವಿಚಾರವೂ ಗೊತ್ತಾಗಿದೆ. ಅದರಲ್ಲಿ ಮೊದಲನೇಯ ಹಂತ ಇನೀಶಿಯೇಷನ್, ಎರಡನೇಯದು ಕಮ್ಯೂನಿಕೇಷನ್, ಮೂರನೇಯದು ಅಥನ್ಟಿಕೇಷನ್, ಇನ್ನೂ ನಾಲ್ಕನೆಯದು ಡೆಲಿವರಿ, ಕೊನೆಯದ್ದು ಸೆಟಲ್ಮೆಂಟ್. ಈ 5 ಹಂತಗಳ ಮೂಲಕ ಗೋಲ್ಡ್ ಗ್ಯಾಂಗ್ ಚಿನ್ನ ನೀಡಿ ಹಣ ಪಡೆದು ಸೆಟಲ್ಮೆಂಟ್ ಮಾಡಿರುವ ವಿಚಾರ ತನಿಖೆಯಲ್ಲಿ ಬಯಲಾಗಿದೆ.

ರನ್ಯಾರಾವ್ ಚಿನ್ನ ಸಾಗಾಟ ಮತ್ತು ಮಾರಾಟದ ನಡುವೆ ಅವಿನಾಶ್ ಎಂಬಾತ ಭಾಗಿಯಾಗಿದ್ದ ಬಗ್ಗೆ ಅಧಿಕಾರಿಗಳಿಗೆ ಸಾಕ್ಷಿ ಸಿಕ್ಕಿದೆ. ರನ್ಯಾ ಈ ಹಿಂದೆ ಅವಿನಾಶ್ ಜತೆಗೆ ಸಾಕಷ್ಟು ಬಾರಿ ವ್ಯವಹಾರ ನಡೆಸಿರುವುದು ಗೊತ್ತಾಗಿದೆ. ರನ್ಯಾ ಅವಿನಾಶ್ ಗೋಲ್ಡ್ ಸ್ಮಗ್ಲಿಂಗ್ ಬಗ್ಗೆ ತಿಳಿಸಿದ ನಂತರ ಸಾಹಿಲ್ ಜೈನ್ ಪ್ರವೇಶ ಮಾಡ್ತಿದ್ದ. ಕಳೆದ ನವೆಂಬರ್ ನವೆಂಬರ್1 ರಂದು ಮೊದಲ ಬಾರಿಗೆ ರನ್ಯಾ ಹಾಗೂ ಸಾಹಿಲ್ ಸಂಪರ್ಕ ವಾಗುತ್ತೆ. ಅಲ್ಲದೆ ರನ್ಯಾ ರಾವ್ ಒಮ್ಮೆ ಸಾಹಿಲ್ ಜೈನ್ ನಡೆಸುತ್ತಿದ್ದ ಚಿನ್ನದ ಅಂಗಡಿಗೆ ಹೋಗಿ ಡಿಲಿವರಿ ಮಾಡಿದ್ದು ತನಿಖೆಯಿಂದ ಬಹಿರಂಗವಾಗಿದೆ. ಜತೆಗೆ ರನ್ಯಾ ರಾವ್ ಕಳೆದ ಆರು ತಿಂಗಳಿನಲ್ಲಿ ಬರೋಬ್ಬರಿ 49.6 ಕೆಜಿ ಚಿನ್ನ ಭಾರತಕ್ಕೆ ತಂದಿದ್ದಳು.

ರನ್ಯಾ ಚಿನ್ನದಾಟ ಮತ್ತು ಕಮಿಷನ್

ತಿಂಗಳು	ಚಿನ್ನ	ಮೌಲ್ಯ	ಹವಾಲ ಹಣ	ಕಮಿಷನ್
ನವೆಂಬರ್ 2024	8 ಕೆ.ಜಿ 981 ಗ್ರಾಂ	6.82 ಕೋಟಿ ರು.	6.50 ಕೋಟಿ ರು.	32 ಲಕ್ಷ ರು.
ಡಿಸೆಂಬರ್ 2024	12 ಕೆ.ಜಿ 621 ಗ್ರಾಂ	9. 94 ಕೋಟಿ ರು.	9. 64 ಕೋಟಿ ರು.	32 ಲಕ್ಷ ರು.
ಜನವರಿ 2025	14 ಕೆ.ಜಿ 562 ಗ್ರಾಂ	11.56 ಕೋಟಿ ರು.	11.10 ಕೋಟಿ ರು.	55 ಲಕ್ಷ ರು.
ಫೆಬ್ರವರಿ 2025	13 ಕೆ.ಜಿ 433 ಗ್ರಾಂ	11.81 ಕೋಟಿ ರು.	11.25 ಕೋಟಿ ರು.	56 ಲಕ್ಷ ರು.
ಮಾರ್ಚ್ 2025	14 ಕೆ.ಜಿ 213 ಗ್ರಾಂ	13 ಕೋಟಿ ರು.	11 ಕೋಟಿ ರು.	-

ಕೋಚ್ ಮೊಬೈಲ್‌ನಲ್ಲಿ ಬಾಲಕಿಯರ ನಗ್ನ ವಿಡಿಯೊ

ರಜಾ ಕಳೆಯಲು ಅಜ್ಜಿಯ ಮನೆಗೆ ಬಾಲಕಿ ತೆರಳಿದ್ದಾಗ ಅತ್ಯಾಚಾರ ಪ್ರಕರಣ ಬೆಳಕಿಗೆ

ಬೆಂಗಳೂರು: ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಬ್ಯಾಡ್ಮಿಂಟನ್ ಕೋಚ್‌ವೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಬ್ಯಾಡ್ಮಿಂಟನ್ ತರಬೇತಿ ಪಡೆಯುತ್ತಿದ್ದ ಬಾಲಕಿಯನ್ನು ಸಾಕಷ್ಟು ಬಾರಿ ಆಕೆಯ ತರಬೇತುದಾರ ಖಾಸಗಿಯಾಗಿ ಭೇಟಿಯಾಗಿದ್ದಾನೆ. ತನ್ನ ಮನೆಗೂ ಕರೆದೊಯ್ದು ಕೃತ್ಯ ಎಸಗಿ ಫೋಟೊ, ವಿಡಿಯೊಗಳನ್ನು ಚಿತ್ರೀಕರಣ ಮಾಡಿಕೊಂಡಿರುವುದು ತನಿಖೆಯ ವೇಳೆ ತಿಳಿದುಬಂದಿದೆ. ಹುಳಿಮಾವು ಪೊಲೀಸರು ಆರೋಪಿ ಮೊಬೈಲ್ ವಶಕ್ಕೆ ಪಡೆದು ಪರಿಶೀಲಿಸಿದಾಗ ಕ್ರೀಡಾ ತರಬೇತಿ ಕೇಂದ್ರದಲ್ಲಿ ಹಲವು ಬಾಲಕಿಯರಿಗೆ ಲೈಂಗಿಕ ದೌರ್ಜನ್ಯ ನೀಡಿರೋದು ಬೆಳಕಿಗೆ ಬಂದಿದೆ. ಸುರೇಶ್ ಬಾಲಾಜಿ ಮೊಬೈಲ್‌ನಲ್ಲಿ 13-16 ವಯಸ್ಸಿನ 8 ಹುಡುಗಿಯರ ನಗ್ನ ಫೋಟೊಗಳು ಮತ್ತು ವಿಡಿಯೊಗಳು ಪತ್ತೆಯಾಗಿದೆ.

16 ವರ್ಷದ ಬಾಲಕಿಯ ತಾಯಿ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು, ತಮಿಳುನಾಡು ಮೂಲದ 30 ವರ್ಷ ವಯಸ್ಸಿನ ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಾಲಕಿಯ ಮೇಲೆ ಹಲವು ಬಾರಿ ಅತ್ಯಾಚಾರವೆಸಗಿದ್ದನೆನ್ನಲಾದ ಆರೋಪಿಯ ಮೊಬೈಲ್ ಫೋನ್‌ನಲ್ಲಿ ಸಂತ್ರಸ್ತ ಬಾಲಕಿಯಲ್ಲದೆ, ಇನ್ನೂ ಕೆಲ ಬಾಲಕಿಯರ ಬೆತ್ತಲೆ ಫೋಟೋ, ವಿಡಿಯೋಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಿಚಿತ ನಂಬರ್‌ಗೆ ಬೆತ್ತಲೆ ಫೋಟೊ ರವಾನೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದ ನಿರೀಕ್ಷೆಯಲ್ಲಿದ್ದ ಬಾಲಕಿ, ರಜಾ ದಿನಗಳನ್ನು ಕಳೆಯಲು ಅಜ್ಜಿಯ ಮನೆಗೆ ತೆರಳಿದ್ದಳು. ಫೋನ್‌ನಿಂದ ಅಪರಿಚಿತ ನಂಬರ್‌ಗೆ ಮೊಮ್ಮಗಳ ಬೆತ್ತಲೆ ಫೋಟೊ ರವಾನೆಯಾಗಿರುವುದನ್ನು ಗಮನಿಸಿದ್ದ ಸಂತ್ರಸ್ತೆಯ ಅಜ್ಜಿ, ತಕ್ಷಣ ಆಕೆಯ ಪೋಷಕರಿಗೆ ಮಾಹಿತಿ ನೀಡಿದ್ದರು. ಬಳಿಕ ಬಾಲಕಿಯ ತಾಯಿಯು ಮಗಳನ್ನು ವಿಚಾರಿಸಿದಾಗ ಸಾಕಷ್ಟು ಬಾರಿ ಬ್ಯಾಡ್ಮಿಂಟನ್ ಕೋಚ್, ಲೈಂಗಿಕ ದೌರ್ಜನ್ಯ ಎಸಗಿರುವುದು ತಿಳಿದು ಬಂದಿದೆ. ಅನೇಕ ಸಂದರ್ಭಗಳಲ್ಲಿ ಡ್ಯಾನ್ಸ್ ಕ್ಲಾಸ್, ಟ್ಯೂಷನ್ ತ್ಯಜಿಸಿ ಆರೋಪಿಯನ್ನು ಭೇಟಿ ಮಾಡಿರುವುದಾಗಿ ಬಾಲಕಿಯು ತನ್ನ ತಾಯಿಯ ಬಳಿ ಹೇಳಿಕೊಂಡಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಮಗಳಿಂದ ಎಲ್ಲ ವಿಚಾರ ತಿಳಿದು ಹುಳಿಮಾವು ಠಾಣೆಗೆ ಬಾಲಕಿಯ ತಾಯಿ ದೂರು ನೀಡಿದ್ದರು.

ವಿಚಾರಣೆಗೆ ಹಾಜರಾಗಲು ಐಶ್ವರ್ಯಾಗೆ ನೋಟಿಸ್

ಬೆಂಗಳೂರು: ಅಕ್ರಮವಾಗಿ ಹಲವು ವ್ಯಕ್ತಿಗಳ ಫೋನ್ ಕರೆ ದಾಖಲೆಗಳನ್ನು ಪಡೆದುಕೊಂಡಿರುವ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡಗೆ ಫೆ.13ರಂದು ವಿಚಾರಣೆಗೆ ಹಾಜರಾಗುವಂತೆ ವಿಜಯನಗರ ಉಪ ವಿಭಾಗದ ಎಸಿಪಿ ಚಂದನ್ ನೋಟಿಸ್ ನೀಡಿದ್ದಾರೆ.

ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿ ಎಂದು ಕೋಟ್ಯಂತರ ರು. ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ಹಾಗೂ ಅವರ ಪತಿಯ 2 ಮೊಬೈಲ್ ಫೋನ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ನಂತರ ಅವುಗಳಲ್ಲಿದ್ದ ಡೇಟಾ ಸಂಗ್ರಹಣೆಗಾಗಿ ನ್ಯಾಯಾಲಯದ ಅನುಮತಿ ಪಡೆದು ಪಶ್ಚಿಮ ವಿಭಾಗದ ಸಿಇಎನ್ ಠಾಣೆಗೆ ರವಾನಿಸಿದ್ದರು. ಆ ಫೋನ್‌ಗಳಲ್ಲಿರುವ ಡೇಟಾವನ್ನು ಸಂಗ್ರಹಿಸಿದಾಗ ಅದರಲ್ಲಿ ಹಲವು ವ್ಯಕ್ತಿಗಳ ಫೋನ್ ಕರೆ ದಾಖಲೆಗಳು ಪತ್ತೆಯಾಗಿದ್ದವು. ಐಶ್ವರ್ಯಾ ಗೌಡ ಹಾಗೂ ಅವರಿಗೆ ಸಿಡಿಆರ್ ಒದಗಿಸಿದ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಅಸಭ್ಯ ವರ್ತನೆ

ಬೆಂಗಳೂರು: ಯುವತಿಗೆ ಬ್ಯಾಡ್ ಟಚ್ ಮಾಡಿ ಅಸಭ್ಯ ವರ್ತನೆ ಮಾಡಿದ್ದಲ್ಲದೇ, ಅವಾಚ್ಯ ಶಬ್ದಗಳಿಂದ ನಿಂದಿಸಿ ನಮ್ಮ ಜತೆ ಬರುತ್ತೀಯಾ ಎಂದು ಕಿರುಕುಳ ನೀಡಿರುವಂತಹ ಘಟನೆ ಹೆಣ್ಣೂರು ಮುಖ್ಯ ರಸ್ತೆಯ ಇಂಡಿಯನ್ ಪೆಟ್ರೋಲ್ ಬಂಕ್ ಬಳಿ ಮೂರು ದಿನಗಳ ಹಿಂದೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಬಾಣಸವಾಡಿ ಪೊಲೀಸರಿಂದ ಎಫ್‌ಐಆರ್ ದಾಖಲಾಗಿದೆ.

ನಡೆದದ್ದೇನು?: ಯುವತಿ ತನ್ನ ಸ್ನೇಹಿತರ ಮನೆಯಿಂದ ಬೆಳಗ್ಗಿನ ಜಾವ 4.30 ರ ವೇಳೆ ಸ್ಕೂಟರ್‌ನಲ್ಲಿ ಹೊರಟ್ಟಿದ್ದರು. ಈ ವೇಳೆ ಇಬ್ಬರು ಅಪರಿಚಿತ ವ್ಯಕ್ತಿಗಳು ಸ್ಕೂಟರ್ ಹಿಂಬಾಲಿಸಿಕೊಂಡು ಬಂದಿದ್ದು, ಅಡ್ಡ ಹಾಕಿ ಖಾಸಗಿ ಭಾಗ ಟಚ್ ಮಾಡಿ ಲೈಂಗಿಕ ಕಿರುಕುಳ ನೀಡಿದ್ದಾರೆ. ಈ ವೇಳೆ ಕಾಮುಕರನ್ನ ಹಿಡಿಯಲು ಬಂದ ಸಾರ್ವಜನಿಕರಿಗೆ ಚಾಕು ತೋರಿಸಿ ಪರಾರಿಯಾಗಿದ್ದಾರೆ. ಸದ್ಯ ಬಾಣಸವಾಡಿ ಪೊಲೀಸ್ ಠಾಣೆಗೆ ಯುವತಿ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಕ್ಲಬ್‌ಗೆ ನುಗ್ಗಿ ದರೋಡೆ: ನಾಲ್ವರ ಬಂಧನ

ಬೆಂಗಳೂರು: ಸಿನಿಮೀಯ ಶೈಲಿಯಲ್ಲಿ ಕ್ಲಬ್‌ವೊಂದರಲ್ಲಿ ಜೂಜು ಆಡುತ್ತಿದ್ದವರಿಗೆ ಮಾರಕಾಸ್ತ್ರ ತೋರಿಸಿ ಹಲ್ಲೆ ಮಾಡಿ ಲಕ್ಷಾಂತರ ಮೌಲ್ಯದ ಚಿನ್ನ ಹಾಗೂ ನಗದು ದೋಚಿ ಪರಾರಿಯಾಗಿದ್ದ ನಾಲ್ಕು ಮಂದಿ ದರೋಡೆಕೋರರನ್ನ ಬನಶಂಕರಿ ಠಾಣೆ ಪೊಲೀಸರು ಸೆರೆಹಿಡಿದಿದ್ದಾರೆ.

ಹಲ್ಲೆಗೊಳಗಾದ ರಮೇಶ್ ಎಂಬುವರು ನೀಡಿದ ದೂರಿನ ಮೇರೆಗೆ ಬನ್ನೇರುಘಟ್ಟ ಪೊಲೀಸ್ ಠಾಣೆಯ ರೌಡಿಶೀಟರ್ ಪ್ರವೀಣ್, ಸಹಚರರಾದ ಮನೋಹರ್, ಶ್ರೀಕಾಂತ್, ಸತೀಶ್ ಎಂಬುವರನ್ನ ಬಂಧಿಸಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನಿಬ್ಬರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಶೋಧಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾರ್ಚ್ 31ರಂದು ನಡೆದ ಘಟನೆ: ಮಾ.31ರಂದು ಬನಶಂಕರಿ ದೂರುದಾರ ರಮೇಶ್ ಹಾಗೂ ಅವರ ಸ್ನೇಹಿತರೊಂದಿಗೆ ಮಾ.31ರಂದು ಸಂಜೆ ಇಸ್ಪೀಟ್ ಆಡಲು ಬೆಂಗಳೂರು ವಿಹಾರ ಕೇಂದ್ರ ಕ್ಲಬ್‌ಗೆ ಹೋಗಿದ್ದರು. ಕ್ಲಬ್‌ನ ಕೊಠಡಿಯೊಂದರಲ್ಲಿ ಮದ್ಯಪಾನ ಮಾಡಿ ಅಂದರ್ ಬಾಹರ್ ಆಡುವಾಗ ಸಂಜೆ 6 ಗಂಟೆ ಸುಮಾರಿಗೆ ಆರು ಮಂದಿ ಆರೋಪಿಗಳು ಮಾಸ್ಕ್ ಹಾಗೂ ಟೋಪಿ ಧರಿಸಿ ಒಳನುಗ್ಗಿದ್ದರು. ಮಾರಕಾಸ್ತ್ರ ತೋರಿಸಿ ಕೈಗಳಿಂದ ಹಲ್ಲೆ ಮಾಡಿ 10 ಲಕ್ಷ ನಗದು ಹಾಗೂ 700 ಗ್ರಾಂ ಚಿನ್ನಾಭರಣ ಹಾಗೂ ಮೊಬೈಲ್ ಫೋನ್‌ಗಳನ್ನ ದೋಚಿ ಪರಾರಿಯಾಗಿದ್ದರು. ದರೋಡೆ ಸಂಬಂಧ ಪ್ರಕರಣ ದಾಖಲಿಸಿಕೊಂಡು ನಾಲ್ವರನ್ನ ಬಂಧಿಸಲಾಗಿದೆ. ಬಂಧಿತರ ಪೈಕಿ ಪ್ರವೀಣ್ ವಿರುದ್ಧ ಮೂರು ಪ್ರಕರಣ ದಾಖಲಾಗಿದೆ. ಆರೋಪಿಗಳನ್ನ ಹೆಚ್ಚಿನ ವಿಚಾರಣೆಗೊಳಪಡಿಸಲಾಗಿದೆ. ಪರಾರಿಯಾಗಿರುವ ಆರೋಪಿಗಳಿಗಾಗಿ ಪತ್ತೆ ಕಾರ್ಯ ನಡೆಸಲಾಗುತ್ತಿದೆ. ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೊಕೇಶ್ ಜಗಲಾಸರ್ ತಿಳಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda
ವಲಯ ಕಚೇರಿ, ಬೆಂಗಳೂರು: 2ನೇ ಮಹಡಿ, 41/2, ಎಂ.ಜಿ ರಸ್ತೆ, ಟ್ರಿನಿಟಿ ವೃತ್ತ, ಬೆಂಗಳೂರು–560001.

ಸಾರ್ವಜನಿಕ ಪ್ರಕಟಣೆ

ವಂಚನೆ ನೇಮಕಾತಿಗೆ ಬಲಿಯಾಗಬೇಡಿ

ನಮ್ಮ ಗಮನಕ್ಕೆ ಬಂದಿರುವ ಹಾಗೆ, ನೀತಿಬಾಹಿರವಾಗಿ ವ್ಯಕ್ತಿಗಳು / ಏಜೆನ್ಸಿಗಳು, ಪತ್ರಗಳು / ಇ–ಮೇಲ್ / ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ವಂಚನೆ ನೇಮಕಾತಿ ಜಾಹೀರಾತನ್ನು ಪ್ರಸಾರ ಮಾಡುತ್ತಿವೆ ಮತ್ತು ಬ್ಯಾಂಕ್ ಆಫ್ ಬರೋಡದಲ್ಲಿ (ಬಿ.ಒ.ಬಿ) ಉದ್ಯೋಗಗಳನ್ನು ಖಾತರಿಪಡಿಸುವ ಸುಳ್ಳು ಭರವಸೆಯೊಂದಿಗೆ ಸಾರ್ವಜನಿಕರನ್ನು ವಂಚಿಸಲು ಪ್ರಯತ್ನಪಡುತ್ತಿವೆ. ನಕಲಿ ಸುದ್ದಿಗಳ ಮೂಲಕ ಜನರನ್ನು ವಂಚಿಸುವ ಮತ್ತು ಸಾರ್ವಜನಿಕರಲ್ಲಿ ಬ್ಯಾಂಕಿನ ಬಗ್ಗೆ ನಕಾರಾತ್ಮಕ ಚಿತ್ರಣವನ್ನು ಸೃಷ್ಟಿಸುವ ಉದ್ದೇಶದಿಂದ ಬಿ.ಒ.ಬಿಯ ನಕಲಿ ಹೆಸರು/ಲೋಗೋ ಇರುವ ನಕಲಿ ಮಾನವ ಸಂಸಾಧನ ಪತ್ರಗಳನ್ನು ಸಹ ಪ್ರಸಾರ ಮಾಡಲಾಗುತ್ತಿದೆ. ಕೆಲವರು ಇಂತಹ ಕಿಡಿಗೇಡಿಗಳ ಬಲೆಗೆ ಬಿದ್ದಿದ್ದು, ನೇಮಕಾತಿಗೆ ಅನುಕೂಲ ಮಾಡಿಕೊಡುವುದಾಗಿ ಭರವಸೆಯಿಂದ ಹಣ ಖರ್ಚು ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಈ ಸೂಚನೆಯ ಮೂಲಕ, ಯಾವುದೇ ನಕಲಿ ಅಥವಾ ಸುಳ್ಳು ಜಾಹೀರಾತುಗಳಿಂದ ದಾರಿತಪ್ಪದಂತೆ ಎಚ್ಚರಿಕೆ ವಹಿಸಲು ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ. ಬ್ಯಾಂಕ್ ಆಫ್ ಬರೋಡ ತನ್ನ ನೇಮಕಾತಿ ಜಾಹೀರಾತುಗಳನ್ನು, ಹೆಸರಾಂತ ಪತ್ರಿಕೆಗಳು ಮತ್ತು ಕಾಲಕಾಲಕ್ಕೆ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ (www.bankofbaroda.in) ವೃತ್ತಿ ವಿಭಾಗದ– "ಪ್ರಸ್ತುತ ಅವಕಾಶಗಳು" ಇದರ ಅಡಿಯಲ್ಲಿ ಅಧಿಸೂಚನೆಗಳ ಮೂಲಕ ಬಿಡುಗಡೆ ಮಾಡುತ್ತದೆ. ವಂಚನೆ ನೇಮಕಾತಿಯ ಯಾವುದೇ ಘಟನೆಯನ್ನು ನೀವು ಕಂಡಲ್ಲಿ, ದಯವಿಟ್ಟು ನಿಮ್ಮ ಹತ್ತಿರದ ವಲಯ ಕಚೇರಿ/ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸಿ.

ದಿನಾಂಕ: 05.04.2025 ಸಹಿ/– ವಲಯ ಮುಖ್ಯಸ್ಥರು,
ಸ್ಥಳ: ಬೆಂಗಳೂರು ಬ್ಯಾಂಕ್ ಆಫ್ ಬರೋಡ, ಬೆಂಗಳೂರು ವಲಯ ಕಚೇರಿ

SOUTH INDIAN Bank
ಸೌತ್ ಇಂಡಿಯನ್ ಬ್ಯಾಂಕ್ ಲಿಮಿಟೆಡ್ : ಮಾರತಹಳ್ಳಿ, ಶಾಖೆ ನಂ.9, 2ನೇ ಕ್ರಾಸ್, ವಿಜಯ ಪಾರ್ವತಿ ಕಾಂಪ್ಲೆಕ್ಸ್, ಮುನ್ನೇಕೊಳಲ, ಮಾರತಹಳ್ಳಿ, ಬೆಂಗಳೂರು–560 037. ದೂರವಾಣಿ :080–28543519, ಇ–ಮೇಲ್: br0491@sib.co.in
ನೋಂದಾಯಿತ ಕಚೇರಿ: ಎಸ್.ಐ.ಬಿ ಹೌಸ್, ಟಿ.ಬಿ. ರಸ್ತೆ, ಮಿಷನ್ ಕ್ವಾರ್ಟರ್ಸ್, ತ್ರಿಶೂರ್ – 680 001 ಕೇರಳ ದೂರವಾಣಿ ಸಂಖ್ಯೆ: +91–487–2420020, ಫ್ಯಾಕ್ಸ್ ಸಂಖ್ಯೆ: +91–487–2442021, ಇ–ಮೇಲ್: sibcorporate@sib.co.in, ವೆಬ್‌ಸೈಟ್: www.southindianbank.com
ಕಾರ್ಪೊರೇಟ್ ಗುರುತಿನ ಸಂಖ್ಯೆ: L65191KL1929PLC001017

ಚಿನ್ನದ ಆಭರಣಗಳ ಹರಾಜು ನೋಟೀಸು

ನಮ್ಮ ಮಾರತಹಳ್ಳಿ ಶಾಖೆಯಲ್ಲಿ ಈ ಕೆಳಗಿನ ಖಾತೆ ಸಂಖ್ಯೆಯಲ್ಲಿ ಅಡವಿಟ್ಟಿರುವ ಚಿನ್ನದ ಆಭರಣಗಳನ್ನು ನೋಂದಾಯಿತ ನೋಟೀಸ್ ನೀಡಿದ ನಂತರವೂ ಬ್ಯಾಂಕಿನ ಬಾಕಿಗಳನ್ನು ಪಾವತಿಸದೇ ಇರುವುದರಿಂದ ಮತ್ತು ನೋಂದಾಯಿತ ನೋಟಿಸ್‌ಗಳನ್ನು ನೀಡಲಾಗಿ / ತಲುಪದೇ ಹಿಂತಿರುಗಿರುವುದರಿಂದ ಅದೇ ಸಂಖ್ಯೆಯ ಅಡಿಯಲ್ಲಿ ಅಡವಿಡಲಾದ ಚಿನ್ನದ ಆಭರಣಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಆಧಾರದ ಮೇಲೆ ಸಾರ್ವಜನಿಕ ಹರಾಜು ಅಥವಾ ಖಾಸಗಿ ಒಪ್ಪಂದದಲ್ಲಿ ಬ್ಯಾಂಕಿನ ಆವರಣದಲ್ಲಿ ಕೆಳಗಿನ ದಿನಾಂಕದಂದು ಅಥವಾ ಇನ್ನಾವುದೇ ಅನುಕೂಲಕರ ದಿನಾಂಕದಂದು, ಅಡಮಾನದಾರರು ಅವುಗಳನ್ನು ಬಿಡಿಸಿಕೊಳ್ಳದೆ ಇದ್ದಲ್ಲಿ ಅದರ ಅಪಾಯ ಮತ್ತು ಜವಾಬ್ದಾರಿಯಲ್ಲಿ ಹೆಚ್ಚಿನ ಸೂಚನೆ ಕೊಡದೆ ಮಾರಾಟ ಮಾಡಲಾಗುವುದು. ಈ ಕೆಳಗಿನ ಖಾತೆಗಳ ಅಡಿಯಲ್ಲಿ ಅಡವಿಟ್ಟ ಚಿನ್ನದ ಆಭರಣಗಳ ಹರಾಜು ಮಾರತಹಳ್ಳಿ ಶಾಖೆಯಲ್ಲಿ ದಿನಾಂಕ 15.04.2025 ರ ಮಧ್ಯಾಹ್ನ 3.30 ಗಂಟೆಗೆ ನಡೆಯಲಿದೆ. ಇಎಂಡಿ ಮೊತ್ತ : ರೂ.5,000/–.

ಕ್ರ ಸಂ	ಹೆಸರು	ಖಾತೆ ನಂ.	ಒಟ್ಟು ತೂಕ ಗ್ರಾಂ.ಗಳಲ್ಲಿ
1.	ಕಾಯಲಾ ಬಾಬು	0491653000035103	9

ಯಾವುದೇ ಸಮಯದಲ್ಲಿ ಯಾವುದೇ ಕಾರಣವನ್ನು ನೀಡದೆ ಹರಾಜನ್ನು ರದ್ದುಗೊಳಿಸುವ/ ಮುಂದೂಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

ದಿನಾಂಕ : 03.04.2025 ಸಹಿ/– ಪ್ರಬಂಧಕರು
ಸ್ಥಳ : ಬೆಂಗಳೂರು ದಿ ಸೌತ್ ಇಂಡಿಯನ್ ಬ್ಯಾಂಕ್ ಲಿ.

BEFORE THE ASSISTANT COMMISSIONER
BANGALORE SOUTH SUB-DIVISION AT BANGALORE
R.A.(S) No.302/2024
BETWEEN : SMT. RATHNAMMA ...APPELLANTS
AND : THASILDAHAR AND OTHERS ....RESPONDENTS
12. SMT. SANJEEVAMMA
D/o Late Dasappa Aged about 62 years,
13. SMT. MUNILAKSHMAMMA
D/o Late Dasappa Aged about 62 years Defendant No.8 and 9 are R/at Sarige beedi Near Gangamma Temple Sarjapura Hobli Taluk Anekal Taluk Bangalore District
....RESPONDENTS No.12 AND 13

NOTICE TO RESPONDENT No.12 &13

Whereas the above mentioned named Petitioner filed R.A. (s) No.302/2024 before the Assistant Commissioner, bangalore south Sub-division at bangalore has filed the above petition against the Respondents.
Therefore are hereby Warned to appear in person or through pleader duly instructed before the Assistant Commissioner, Bangalore South Sub-division at Bangalore **16-04-2025 at 3.00 PM** to Answer the said petition, failing the application will be heard and determined Ex-parte.
Given under hand and the seal of the court **this the 03 day of April 2025**
By Order Of The Court, Assistant Commissioner
Bangalore South Sub-division At Bangalore

PUBLIC NOTICE

The general public are hereby notified that, my client **MR.D.Viswanatha Naidu S/o Sri.Ramachandra Naidu** lost Original Sale deed bearing document no.18122/2006-07 dated 13-10-2006 of Book–I, stored CD.No.YAND-239 registered at the Sub-registrar office Yelahanka, Bangalore, pertaining to the immovable Residential vacant site being southern portion bearing No.83, Khatha No.190/191 situated at **Kattigenahalli village, Jala Hobli, Bangalore North Taluk,** in this regard a **Lost report No.1548209/2025**, was lodged before the Bangalore City Police on **02.04.2025.** If any person/s finds the said documents kindly inform the above stated person or address mentioned below. If any person/s misuses the said document, the same is not binding on my client and they shall do so at their own risk.

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 8951856652, 9845846428
E- Mail: rvlaw.76@gmail.com

ಮಾದಕ ವಸ್ತು ಮಾರಾಟ: 10 ಮಂದಿ ವಿದೇಶಿಯರು ವಶಕ್ಕೆ

ಬೆಂಗಳೂರು: ಮಾದಕ ವಸ್ತುಗಳ ಮಾರಾ ಟದಲ್ಲಿ ತೊಡಗಿದ್ದ 10 ಮಂದಿ ವಿದೇಶಿ ಯರನ್ನು ಬಂಧಿಸಿರುವ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

ಹೆಣ್ಣೂರಿನಲ್ಲಿ ಸ್ಥಳೀಯ ಪೊಲೀಸರ ಜೊತೆ ಜಂಟಿ ಕಾರ್ಯಾಚರಣೆ ನಡೆಸಿ, ವಿದೇಶಿ ಪ್ರಜೆಯನ್ನು ವಶಕ್ಕೆ ಪಡೆದು ಆತನ ವಶದಿಂದ 8 ಲಕ್ಷ ಮೌಲ್ಯದ ನಿಷೇದಿತ ಮಾದಕ ವಸ್ತುಗಳಾದ 55 ಗ್ರಾಂ ಎಂ.ಡಿ. ಎಂ.ಎ ಕ್ರಿಸ್ಟಲ್ ಮತ್ತು 3 ಕೆ.ಜಿ ಗಾಂಜಾ ವಶಪಡಿಸಿಕೊಳ್ಳಲಾಯಿತು. ಆರೋಪಿಯ ವಿರುದ್ಧ ಈ ಹಿಂದೆ 2024 ರಲ್ಲಿ ಬೈಯಪ್ಪನ ಹಳ್ಳಿ ಪೊಲೀಸ್ ಠಾಣೆಯ ಎನ್.ಡಿ.ಪಿ. ಎಸ್ ರಿತ್ಯಾ ಪ್ರಕರಣ ದಾಖಲಾಗಿತ್ತು. ಚಿಕ್ಕ ಜಾಲದಲ್ಲಿ ಕಾರ್ಯಾ ಚರಣೆ ನಡೆಸಿ, ಅಕ್ರಮವಾಗಿ ನೆಲೆಸಿದ್ದ ಮೂವರು ವಿದೇಶಿ ಯರನ್ನು (ಇಬ್ಬರು ಪುರುಷರು ಮತ್ತು ಓರ್ವ ಮಹಿಳೆ) ಬಂಧಿಸಿ, ಮಾನ್ಯ ಎಫ್‌ಆರ್ ಆರ್‌ಓ ರವರ ಮುಂದೆ ಹಾಜರುಪಡಿಸಿದ್ದು, ಅವರುಗಳನ್ನು ಫಾರಿನರ್ಸ್ ಡಿಟೆಂಷನ್ ಸೆಂಟರ್ ಗೆ ಕಳುಹಿಸಲಾಗಿದೆ.

ಅಮೃತಹಳ್ಳಿಯಲ್ಲಿ ಕಾರ್ಯಾಚರಣೆ ನಡೆಸಿ, ಅಕ್ರಮವಾಗಿ ನೆಲೆಸಿದ್ದ ಓರ್ವ ವಿದೇಶಿ ವ್ಯಕ್ತಿಯನ್ನು ಬಂಧಿಸಿ, ಎಫ್‌ಆರ್ ಆರ್‌ಓ ರವರ ಮುಂದೆ ಹಾಜರುಪಡಿಸಿದ್ದು, ಅವರುಗಳನ್ನು ಫಾರಿನರ್ಸ್ ಡಿಟೆಂಷನ್ ಸೆಂಟರ್‌ಗೆ ಬಿಡಲಾಗಿದೆ. ವಿದ್ಯಾರಣ್ಯಪುರದಲ್ಲಿ ಕಾರ್ಯಾಚರಣೆ ನಡೆಸಿ, ಅಕ್ರಮವಾಗಿ ನೆಲೆಸಿದ್ದ ಇಬ್ಬರು ವಿದೇಶಿಯರನ್ನು (ಓರ್ವ ಪುರುಷ ಮತ್ತು ಓರ್ವ ಮಹಿಳೆ) ಬಂಧಿಸಿ, ಎಫ್‌ಆರ್ ಆರ್‌ಓ ರವರ ಮುಂದೆ ಹಾಜರು ಪಡಿಸಿದ್ದು, ಅವರುಗಳನ್ನು ಫಾರಿನರ್ಸ್ ಡಿಟೆಂಷನ್ ಸೆಂಟರ್ ಗೆ ಕಳುಹಿಸಲಾಗಿದೆ. ಗೋವಿಂದಪುರದಲ್ಲಿ ಓರ್ವ ವಿದೇಶಿ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದು, ಈ ಹಿಂದೆ ಎನ್‌ಡಿಪಿಎಸ್ ಪ್ರಕರಣದಲ್ಲಿ ಮಾನ್ಯ ನ್ಯಾಯಾ ಲಯದಿಂದ ಜಾಮೀನು ಪಡೆದು ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆ ಸಿಕೊಂಡಿದ್ದು, ಈತನ ವಿರುದ್ಧ ಮಾನ್ಯ ನ್ಯಾಯಾಲಯವು ವಾರೆಂಟ್ ಹೊರಡಿಸಿ ಪ್ರಕರಣ ದಾಖಲಿಸಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತಾರೆ.

ಪುಟ್ಟೇನಹಳ್ಳಿಯಲ್ಲಿ ಓರ್ವ ವಿದೇಶಿ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದು, ಈ ಹಿಂದೆ ಎನ್‌ಡಿಪಿಎಸ್ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದು ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆ ಸಿಕೊಂಡಿದ್ದು, ಈತನ ವಿರುದ್ಧ ಮಾನ್ಯ ನ್ಯಾಯಾಲಯವು ವಾರೆಂಟ್ ಹೊರಡಿ ಸಿದ್ದು ತಲೆಮರೆಸಿಕೊಂಡಿದ್ದ ಬಗ್ಗೆ ಪ್ರಕರಣ ದಾಖಲಿಸಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರು ತ್ತಾರೆ. ಅಕ್ರಮವಾಗಿ ನೆಲೆಸಿದ್ದ ವಿದೇಶಿ ವ್ಯಕ್ತಿಯನ್ನು ಎಫ್‌ಆರ್ ಆರ್‌ಓ ರವರ ಆದೇಶದ ಮೇರೆಗೆ ಫಾರಿನರ್ಸ್ ಡಿಟೆಂ ಷನ್ ಸೆಂಟರ್‌ನಿಂದ ಆತನ ದೇಶಕ್ಕೆ ವಾಪಸ್ ಕಳುಹಿಸಿಕೊಡಲಾಗಿದೆ ಎಂದು ತಿಳಿಸಿದರು.

ಏಕರೂಪ ನಾಗರಿಕ ಸಂಹಿತೆಗೆ ಸಲಹೆ

ಬೆಂಗಳೂರು: ಸಂವಿಧಾನದ ಪೀಠಿಕೆಯಲ್ಲಿ ಪ್ರತಿಪಾದಿಸಿರುವ ತತ್ವಗಳ ಉದ್ದೇಶ ಈಡೇರಿಸಲು ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಕುರಿತಂತೆ ಕಾನೂನು ಜಾರಿಗೆ ತರಲು ಪ್ರಯತ್ನ ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಹೈಕೋರ್ಟ್ ಸಲಹೆ ನೀಡಿದೆ.

ಆಸ್ತಿ ಹಂಚಿಕೆಗೆ ಸಂಬಂಧಿಸಿದಂತೆ ಸಮೀವುಲ್ಲಾ ಖಾನ್ ಮತ್ತಿತರರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರಿದ್ದ ನ್ಯಾಯಪೀಠ ಈ ಸಲಹೆ ನೀಡಿದೆ.

ಭಾರತ ಸಂವಿಧಾನದ 44ನೇ ಪರಿಚ್ಛೇದದ ಅಡಿಯಲ್ಲಿ ಪ್ರತಿಪಾದಿಸಲಾಗಿರುವ ಏಕರೂಪ ನಾಗರಿಕ ಸಂಹಿತೆಯ ಶಾಸನವನ್ನು ಜಾರಿಗೆ ತರವುದರಿಂದ ನಿಜವಾದ ಜಾತ್ಯಾತೀತ, ಪ್ರಜಾತಂತ್ರ, ಗಣರಾಜ್ಯ ಏಕತೆ, ರಾಷ್ಟ್ರೀಯ ಸಮಗ್ರತೆ, ನ್ಯಾಯ ಮತ್ತು ಸ್ವಾತಂತ್ರ್ಯ ಸೇರಿದಂತೆ ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖಿಸಿರುವ ಸಮಾನತೆ ಮತ್ತು ಭ್ರಾತೃತ್ವದ ಉದ್ದೇಶ ಈಡೇರಿಸಬಹುದಾಗಿದೆ ಎಂದು ಪೀಠ ತಿಳಿಸಿದೆ. ಅಲ್ಲದೆ, ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುವುದರಿಂದ ಮಹಿಳೆಯರಿಗೆ ನ್ಯಾಯ ಒದಗಿಸಿದಂತಾಗಲಿದೆ. ಎಲ್ಲರಿಗೂ ಸಮಾನ ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆ ಸಾಧಿಸಬಹುದಾಗಿದೆ. ಜಾತಿ ಧರ್ಮ ಬದಿಗಿರಿಸಿ ಸಮಾನತೆ ಕನಸನ್ನು ಕಾಣುವ ಮತ್ತು ಭ್ರಾತೃತ್ವದ ಮೂಲಕ ವೈಯಕ್ತಿಕ ಘನತೆ ಖಾತರಿಪಡಿಸುತ್ತದೆ ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಸಂವಿಧಾನ ರಚನಾ ಸಭೆಯಲ್ಲಿನ ಚರ್ಚೆಯ ಕುರಿತಂತೆ ಆದೇಶದಲ್ಲಿ ಉಲ್ಲೇಖಿಸಿರುವ ನ್ಯಾಯಪೀಠ, ಸಂವಿಧಾನದ ರಚನಾ ಸಮಿತಿಯ ಹಲವು ಸದಸ್ಯರು ಏಕರೂಪ ನಾಗರಿಕ ಸಂಹಿತೆಯ ಪರವಾಗಿದ್ದರು. ಕೆಲವು ಸದಸ್ಯರು ವಿರೋಧಿಸಿದ್ದರು. ಕರಡು ಸಮಿತಿಯ ಅಧ್ಯಕ್ಷ ಡಾ.ಬಿ.ಆರ್.ಅಂಬೇಡ್ಕರ್ ಏಕರೂಪ ನಾಗರಿಕ ಸಂಹಿತೆ ಪರವಾಗಿ ವಾದಿಸಿದ್ದರು. ಸರ್ದಾರ್ ವಲ್ಲಭಭಾಯಿ ಪಟೇಲ್, ಡಾ.ರಾಜೇಂದ್ರ ಪ್ರಸಾದ್, ಟಿ.ಕೃಷ್ಣಮಾಚಾರಿ ಮತ್ತು ಮೌಲಾನ ಹಸ್ರತ್ ಮೊಹಾನಿ ಅವರಂತಹ ನಾಯಕರು ಸಂಹಿತೆಯ ಪರವಾಗಿದ್ದರು ಎಂದು ತಿಳಿಸಿರುವ ನ್ಯಾಯಪೀಠ, ಸುಪ್ರೀಂಕೋರ್ಟ್ ಹಲವು ಪ್ರಕರಣಗಳನ್ನು ಉಲ್ಲೇಖಿಸಿರುವ ಪೀಠ ಈ ಸಲಹೆ ನೀಡಿದೆ.

ನಡು ರಸ್ತೆಯಲ್ಲೇ ಪತ್ನಿಯ ಬರ್ಬರ ಹತ್ಯೆ

ಬೆಂಗಳೂರು: ಪತಿಯೊಬ್ಬ ನಡು ರಸ್ತೆಯಲ್ಲೇ ತನ್ನ ಪತ್ನಿಯ ಕತ್ತು ಕೊಯ್ದು, ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಗಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬಾಗೇಪಲ್ಲಿ ಮೂಲದ ಶಾರದ (35) ಮೃತ ಮಹಿಳೆ. ಕೃಷ್ಣ ಪತ್ನಿಯನ್ನು ಕೊಂದ ಪತಿ. ಅಕ್ರಮ ಸಂಬಂಧದ ಶಂಕೆ ಹಿನ್ನೆಲೆ ಪತಿ ತನ್ನ ಪತ್ನಿಯನ್ನು ಕೊಲೆ ಮಾಡಿದ್ದಾನೆ ಎಂಬ ಶಂಕೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ನಗರದ ದೊಡ್ಡ ತೋಗೂರು ಬಳಿಯ ಪ್ರಗತಿ ನಗರದಲ್ಲಿ ಈ ಘಟನೆ ನಡೆದಿದೆ. ಪತ್ನಿ ಕೆಲಸ ಮುಗಿಸಿ ನಿರ್ಜನ ರಸ್ತೆಯಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ಪತಿ ದಾಳಿ ನಡೆಸಿದ್ದಾನೆ. ಪತ್ನಿಯನ್ನು ಕೊಲ್ಲಲು ಎರಡು ಚಾಕು ತಂದಿದ್ದ ಪತಿ ಆಕೆಯ ಕುತ್ತಿಗೆ ಸೀಳಿ ಕೊಲೆ ಮಾಡಿದ್ದಾನೆ. ಕೊಲೆ ಮಾಡಿ ಪರಾರಿಯಾಗುತ್ತಿದ್ದ ಆರೋಪಿ ಪತಿಯನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಮಾನ್ಯ 1ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 122/2025
ಅರ್ಜಿದಾರರು: ಶ್ರೀಮತಿ ಚನ್ನವೀರಮ್ಮ ಕೋಂ ಲೇಟ್ ಮಾದಯ್ಯ @ ಮಹದೇವಯ್ಯ ವಯಸ್ಸು 65 ವರ್ಷ ವಾಸ: ಕೊಳಗೊಂಡನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಳಗೊಂಡನಹಳ್ಳಿ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ ಹಾಗೂ 2ನೇ ಅರ್ಜಿದಾರರ ಮಾವ, 3ನೇ ಅರ್ಜಿದಾರರ ಚಿಕ್ಕಪ್ಪ, 4ನೇ ಅರ್ಜಿದಾರರ ಸಹೋದರ ಶ್ರೀ ಮಾದಯ್ಯ @ ಮಹಾದೇವಯ್ಯ ಬಿನ್ ಮಾದ @ ಕುಂಟಶೆಟ್ಟಿ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೊಳಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ 18.05.2008 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 13.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 121/2025
ಅರ್ಜಿದಾರರು: ಶ್ರೀಮತಿ ಚನ್ನವೀರಮ್ಮ ಕೋಂ ಲೇಟ್ ಮಾದಯ್ಯ @ ಮಹದೇವಯ್ಯ ವಯಸ್ಸು 65 ವರ್ಷ ವಾಸ: ಕೊಳಗೊಂಡನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಳಗೊಂಡನಹಳ್ಳಿ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅಳಿಯ ಹಾಗೂ 2ನೇ ಅರ್ಜಿದಾರರ ಗಂಡ, 3ನೇ ಅರ್ಜಿದಾರರ ತಂದೆ, 4ನೇ ಅರ್ಜಿದಾರರ ಸಹೋದರ ಶ್ರೀ ಮಾದಪ್ಪ @ ನಲ್ಲೋಡಶೆಟ್ಟಿ @ ಕರಿಯಪ್ಪ ಬಿನ್ ಲೇಟ್ ಮಾದ @ ಕುಂಟಶೆಟ್ಟಿ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೊಳಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ 22.06.1989 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 13.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 120/2025
ಅರ್ಜಿದಾರರು: ಶ್ರೀಮತಿ ಚನ್ನವೀರಮ್ಮ ಕೋಂ ಲೇಟ್ ಮಾದಯ್ಯ @ ಮಹದೇವಯ್ಯ ವಯಸ್ಸು 65 ವರ್ಷ ವಾಸ: ಕೊಳಗೊಂಡನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಳಗೊಂಡನಹಳ್ಳಿ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ಮಾವ ಹಾಗೂ 3ನೇ ಅರ್ಜಿದಾರರ ತಾತ, 4ನೇ ಅರ್ಜಿದಾರರ ತಂದೆಯವರಾದ ಶ್ರೀ ಮಾದ @ ಕುಂಟಶೆಟ್ಟಿ ಬಿನ್ ಲೇಟ್ ಕುಂಟೊಡಶೆಟ್ಟಿ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೊಳಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ 01.01.1974 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, 13.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 04/2025
ಅರ್ಜಿದಾರರು: ಶ್ರೀಮತಿ ಶಿವಮ್ಮ ಕೋಂ ರಾಮದಾಸೇಗೌಡ ಬಿನ್ ಲೇಟ್ ದೊಡ್ಡಕೆಂಪೇಗೌಡ ವಯಸ್ಸು 60 ವರ್ಷ ವಾಸ: ಕೋಟೆಕೊಪ್ಪ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಟೆಕೊಪ್ಪ ಗ್ರಾಮ, ಕೋಟೆಕೊಪ್ಪ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆ ಯವರಾದ ಶ್ರೀ ದೊಡ್ಡಕೆಂಪೇಗೌಡ ಬಿನ್ ಲೇಟ್ ಮಾರೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೋಟೆಕೊಪ್ಪ ಗ್ರಾಮದಲ್ಲಿ ದಿನಾಂಕ 03.10.1960 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 09.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 03/2025
ಅರ್ಜಿದಾರರು: ಶ್ರೀಮತಿ ಶಿವಮ್ಮ ಕೋಂ ರಾಮದಾಸೇಗೌಡ ಬಿನ್ ಲೇಟ್ ದೊಡ್ಡಕೆಂಪೇಗೌಡ ವಯಸ್ಸು 60 ವರ್ಷ ವಾಸ: ಕೋಟೆಕೊಪ್ಪ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಟೆಕೊಪ್ಪ ಗ್ರಾಮ, ಕೋಟೆಕೊಪ್ಪ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿ ಯವರಾದ ಶ್ರೀಮತಿ ವಡ್ಡಮ್ಮ ಕೋಂ ಲೇಟ್ ದೊಡ್ಡಕೆಂಪೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೋಟೆಕೊಪ್ಪ ಗ್ರಾಮದಲ್ಲಿ ದಿನಾಂಕ 29.06.1985 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 09.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 175/2025
ಅರ್ಜಿದಾರರು: ಶ್ರೀಮತಿ ಕಮಲಮ್ಮ ಬಿನ್ ಲೇಟ್ ಚಿಕ್ಕಾಳಯ್ಯ ವಯಸ್ಸು 59 ವರ್ಷ ವಾಸ: ಜೋಗಮಾನಹೊಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಬೇಕುಪ್ಪೆ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಾವ, 2 ರಿಂದ 4ನೇ ಅರ್ಜಿದಾರರ ತಾತ ಮತ್ತು 5 ರಿಂದ 7ನೇ ಅರ್ಜಿದಾರರ ತಂದೆಯವರಾದ ಶ್ರೀ ಕುನ್ನಿಕಾಳಯ್ಯ ಬಿನ್ ಲೇಟ್ ಚಿಕ್ಕೈದಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಜೋಗಮಾನಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 08.06.1986 ರಂದು ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ 15.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 04ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ವಿ. ವೆಂಕಟೇಶ್
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 04.04.2025

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 172/2025
ಅರ್ಜಿದಾರರು: ಶ್ರೀಮತಿ ಕಮಲಮ್ಮ ಬಿನ್ ಲೇಟ್ ಚಿಕ್ಕಾಳಯ್ಯ ವಯಸ್ಸು 59 ವರ್ಷ ವಾಸ: ಜೋಗಮಾನಹೊಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಬೇಕುಪ್ಪೆ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ, 2 ರಿಂದ 4ನೇ ಅರ್ಜಿದಾರರ ಅಜ್ಜಿ ಮತ್ತು 5 ರಿಂದ 7ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ಕುನ್ನಿಕಾಳಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಜೋಗಮಾನಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 18.01.1993 ರಂದು ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ 15.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಏಪ್ರಿಲ್ 04ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ವಿ. ವೆಂಕಟೇಶ್
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 04.04.2025

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 823/2024
ಅರ್ಜಿದಾರರು: ಶ್ರೀ ಕೆ.ಟಿ.ಶಿವಮಾದಯ್ಯ ಬಿನ್ ಲೇಟ್ ತಗಡಮಾದೇಗೌಡ ವಯಸ್ಸು 49 ವರ್ಷ ವಾಸ: ಕೊಟ್ಟಗಾಳು ಗ್ರಾಮ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು. ರಾಮನಗರ ಜಿಲ್ಲೆ ಮತ್ತು ಮತ್ತೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಲ ತಾಯಿ, 2 ಮತ್ತು 3ನೇ ಅರ್ಜಿದಾರರ ತಾಯಿಯವರಾದ ಕಾಳಮ್ಮ ಕೋಂ ಲೇಟ್ ತಗಡಮಾದೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಸೋಮೇದ್ಯಾಪನಹಳ್ಳಿ ಗ್ರಾಮದಲ್ಲಿ ದಿನಾಂಕ 21.11.2002 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 10/02/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಗೊಳಿಸಲಾಗುವುದು.
2025ರ ಜನವರಿ 6ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಉಮೇಶ್ ಕೆ.ಎಲ್.
ವಕೀಲರು,
ಕನಕಪುರ
ಸ್ಥಳ : ಕನಕಪುರ
ದಿನಾಂಕ: 06/01/2025

ಸಮಾಚಾರ ಸಣ್ಣದಲ್ಲ

ಕೃತಿ ಬಿಡುಗಡೆ ಸಮಾರಂಭ ಇಂದು

ಬೆಂಗಳೂರು: ಸುದ್ದಿ ಸಂಗಾತಿಯ ಸ್ವಗತ ಕೃತಿ ಬಿಡುಗಡೆ ಸಮಾರಂಭ ಭಾನುವಾರ ಬೆಳಗ್ಗೆ 10.30ಕ್ಕೆ ಬಿಎಂಶ್ರೀ ಪ್ರತಿಷ್ಠಾನ ಸಭಾಂಗಣದಲ್ಲಿ ನಡೆಯಲಿದೆ. ಈ ಕೃತಿ ಆಕಾಶವಾಣಿಯ ನಿವೃತ್ತ ಸುದ್ದಿ ಸಂಪಾದಕಿ ನಾಗಮಣಿ.ಎಸ್.ರಾವ್ ಅವರ ಆತ್ಮಕಥನವಾಗಿದ್ದು, ಅವರ ಮಾಧ್ಯಮ ರಂಗದಲ್ಲಿನ ದಶಕಗಳ ಅನುಭವ ಮತ್ತು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿ ಮಾಡಿದ ವಿಶಿಷ್ಟ ಕಾರ್ಯವನ್ನು ಮಾಲತಿ ಭಟ್ ಸಂಯೋಜಿಸಿ ದಾಖಲಿಸಿ ಆರ್.ಪೂರ್ಣಿಮಾ ವಿಕಾಸ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಕೃತಿಯನ್ನು ನಾಡೋಜ ಡಾ.ಹಂ.ಪ. ನಾಗರಾಜಯ್ಯ ಲೋಕಾರ್ಪಣೆ ಮಾಡಲಿದ್ದಾರೆ. ಸಮಾರಂಭದಲ್ಲಿ ಎಚ್.ಎಲ್.ಪುಷ್ಪ, ಕೆ.ಎಚ್. ಸಾವಿತ್ರಿ, ಆಯೇಶಾ ಖಾನಂ, ಪದ್ಮಾ ಶಿವಮೊಗ್ಗ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಪಾವಗಡ ತಾಲೂಕು ಕ್ಷೇಮಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಸ್ಥೆಯ 2025-2028ನೇ ಸಾಲಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಪದಾಧಿಕಾರಿಗಳಾಗಿ ಎಸ್.ಕೆ.ವೆಂಕಟರೆಡ್ಡಿ (ಗೌರವಾಧ್ಯಕ್ಷ), ಎಂ.ಈರಪ್ಪರೆಡ್ಡಿ (ಅಧ್ಯಕ್ಷ), ಆರ್.ಪಿ. ಸಾಂಬಸದಾಶಿವರೆಡ್ಡಿ (ಉಪಾಧ್ಯಕ್ಷ), ಡಾ.ಡಿ. ಪರಮೇಶ ನಾಯಕ್ (ಕಾರ್ಯದರ್ಶಿ), ಡಾ. ವೆಂಕಟೇಶಲು (ಸಂಘಟನಾ ಕಾರ್ಯದರ್ಶಿ), ಡಾ.ಡಿ.ಗೋವಿಂದಪ್ಪ (ಖಜಾಂಜಿ) ಆಯ್ಕೆಯಾಗಿದ್ದಾರೆ. ಕೆಬಿವಿ ಪತಿ, ಎಂ.ಜೆ.ಚಿತ್ತಯ್ಯ, ಜೆ.ಎಚ್. ಸತ್ಯನಾರಾಯಣ ಗುಪ್ತ, ಚನ್ನಕೇಶವರೆಡ್ಡಿ, ವಿದ್ಯಾಸಾಗರ್, ಸಂದೀಪ್ (ಕಾರ್ಯಕಾರಿ ಸಮಿತಿ ಸದಸ್ಯರು) ನೇಮಕ ಮಾಡಲಾಗಿದೆ. ಶಿಕ್ಷಣ ಸಮಿತಿ ಸದಸ್ಯರಾಗಿ ಡಾ.ಲಕ್ಷ್ಮಿಪತಿ, ಸ್ಥಳೀಯ ಸಮಿತಿ ಸದಸ್ಯರಾಗಿ ಆರ್.ಟಿ.ಖಾನ್, ದೈವಾದಿನಂ, ಡಾ. ಕೆ.ಎನ್.ಪ್ರಭಾಕರ್, ನರಸಿಂಹ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಾರ್ಯದರ್ಶಿ ಡಾ.ಡಿ. ಪರಮೇಶ ನಾಯಕ್ ಅವರು ತಿಳಿಸಿದ್ದಾರೆ.

ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅ.ನ. ಕೃಷ್ಣರಾಯರ ಸ್ಮಾರಕ ವಿದ್ಯಾರಣ್ಯ ಸಮಗ್ರ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಶನಿವಾರ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯಿತು. ಸಮಾರಂಭದಲ್ಲಿ ಹಿರಿಯ ಜನಪದ ತಜ್ಞ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಅವರು ಕುಮಾರ ವ್ಯಾಸ ಭಾರತದ ವ್ಯಾಖ್ಯಾನ, ಹಾಸ್ಯೋತ್ತವಗಳ ಮೂಲಕ ಹೆಸರಾಗಿರುವ ಪ್ರೊ.ಅ.ರಾ.ಮಿತ್ರ ಅವರಿಗೆ ವಿದ್ಯಾರಣ್ಯ ದತ್ತಿ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ, ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ, ವಿದ್ಯಾರಣ್ಯ ಪ್ರತಿಷ್ಠಾನ ಅಧ್ಯಕ್ಷ ಎಂ.ವಿ.ಸತ್ಯನಾರಾಯಣ ಉಪಸ್ಥಿತರಿದ್ದರು.

ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಕೆಎಸ್ಆರ್‌ಟಿಸಿಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಬಾಕಿ ಇದ್ದ ತೋಟಗಾರಿಕೆ-ಐಗಿರ ಕಚೇರಿ ಸಹಾಯಕ ಪರಿಶಿಷ್ಟ ಜಾತಿ ಹಿಂಬಾಕಿ ಹುದ್ದೆಯ ಸಂಭವನೀಯ ಆಯ್ಕೆಪಟ್ಟಿ-2 ನ್ನು ಏ.2 ರಂದು ನಿಗಮದ ಕೇಂದ್ರ ಕಚೇರಿಯ ಸೂಚನಾ ಫಲಕ ಮತ್ತು ಅಧಿಕೃತ ವೆಬ್ ಸೈಟ್ ksrtcjobs.karnataka.gov.in ನಲ್ಲಿ ಪ್ರಕಟಿಸಿದೆ. ಆಯ್ಕೆಪಟ್ಟಿ-2 ಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದರೆ ಪ್ರಕಟಣೆಯ 15 ದಿನಗಳ ಒಳಗಾಗಿ ಪೂರಕ ದಾಖಲಾತಿಗಳೊಂದಿಗೆ ಅಧ್ಯಕ್ಷರು, ಆಯ್ಕೆ ಸಮಿತಿ, ಕೆಎಸ್ಆರ್‌ಟಿಸಿ ಗೆ ಸಲ್ಲಿಸುವುದು ಎಂದು ಪ್ರಕಟಣೆ ತಿಳಿಸಿದೆ.

ಪ್ರವೀಣ ಸಿದ್ದಪ್ಪಗೆ ಡಾಕ್ಟರೇಟ್: ಅಭಿನಂದನೆ

ಬೆಂಗಳೂರು: ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 60 ವರ್ಷಗಳ ಇತಿಹಾಸವಿರುವ ರಾಷ್ಟ್ರೋತ್ಥಾನ ಪರಿಷತ್ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯ ಬಗ್ಗೆ ಗುರುವ ಪ್ರವೀಣ ಸಿದ್ದಪ್ಪ ಇವರು ಮಹಾಪ್ರಬಂಧವನ್ನು ಮಂಡಿಸಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಪಡೆದಿದ್ದಾರೆ. ಶ್ರೀ ಗುರುವ ಪ್ರವೀಣ ಸಿದ್ದಪ್ಪ ಅವರ ಈ ಮಹತ್ಕಾರ್ಯಕ್ಕೆ ಪರಿಷತ್ ಪರಿವಾರವು ಅಭಿನಂದಿಸಿದೆ.

ವಿರಾಮ
ಪ್ರತಿ ಭಾನುವಾರ

{ ಶಿವರಾಜ್ ತಂಗಡಗಿ } ಸಚಿವ

ಯತ್ನಾಳ್ ನಮ್ಮ ಪಕ್ಷದ ಸಿದ್ಧಾಂತ ಒಪ್ಪುವುದಿಲ್ಲ. ಅವರು ನಮ್ಮ ಪಕ್ಷಕ್ಕೆ ಬರುವುದಿಲ್ಲ. ಅವರನ್ನು ಕರೆದುಕೊಳ್ಳುವ ಪ್ರಮೇಯವೇ ಇಲ್ಲ. ಬಿಜೆಪಿಯಿಂದ ಯತ್ನಾಳ್ ಗೆ ಅನ್ಯಾಯವಾಗಿದೆ. ಎಲ್.ಕೆ ಅಡ್ವಾಣಿ, ಮುರಳಿ ಮನೋಹರ್ ಅಂತ ಹಿರಿಯ ನಾಯಕರಿಗೂ ಅನ್ಯಾಯವಾಗಿದೆ. 75 ವರ್ಷ ಆದವರಿಗೆ ಬಿಜೆಪಿಯಲ್ಲಿ ಸ್ಥಾನಮಾನವಿಲ್ಲ. ಮೋದಿ ಅವರಿಗೂ 75 ವರ್ಷವಾಗಿದೆ. ಏನು ನಿರ್ಧಾರ ಮಾಡುತ್ತಾರೋ ನೋಡೋಣ.

ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನ

ಯೋಜನೆಗಳಲ್ಲಿರುವ ಸಣ್ಣ ಪುಟ್ಟ ನ್ಯೂನತೆಗಳು ಸರಿಪಡಿಸಲು ಕ್ರಮ

ಬಿಬಿಎಂಪಿ ವ್ಯಾಪ್ತಿಯ 28 ವಿಧಾನ ಸಭಾ ಕ್ಷೇತ್ರಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನದ ಸಭೆಯಲ್ಲಿಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಸೂರಜ್ ಹೆಗ್ಡೆ ಮಾತನಾಡಿದರು.

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಹಾಗೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಸೂರಜ್ ಹೆಗ್ಡೆ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯ 28 ವಿಧಾನ ಸಭಾ ಕ್ಷೇತ್ರಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನದ ಸಭೆಯ ಬಳಿಕ ಮಾತನಾಡಿ, ಗೃಹಲಕ್ಷ್ಮಿ ಯೋಜನೆ ರಾಜ್ಯಾದ್ಯಂತ ಶೇ. 98ರಷ್ಟು ಫಲಾನುಭವಿಗಳಿಗೆ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಖಾತೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಹಸಿದವರಿಗೆ ಅನ್ನಭಾಗ್ಯ ಯೋಜನೆ ಆಸರೆಯಾಗಿದೆ. ಗೃಹ ಜ್ಯೋತಿಯಿಂದ ಸಾಕಷ್ಟು ಕುಂಟುಂಬಗಳಿಗೆ ಅನುಕೂಲವಾಗಿದೆ. ಗ್ಯಾರಂಟಿ ಯೋಜನೆಗಳಲ್ಲಿರುವ ಸಣ್ಣ-ಪುಟ್ಟ ನ್ಯೂನತೆಗಳನ್ನು ಸರಿಪಡಿಸಲು ಕ್ರಮವಹಿಸಲಾಗುತ್ತಿದೆ ಎಂದರು.

ಕೆಲವು ನ್ಯಾಯ ಬೆಲೆ ಅಂಗಡಿಗಳ ಮೇಲೆ ಪಡಿತರ ವಿತರಿಸುವ ಸಮಯ ಪ್ರದರ್ಶಿಸದಿರುವುದು ಕಂಡು ಬಂದಿದೆ ಹಾಗೂ ಕೆಲವು ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡಿತರ ವಿತರಿಸುವಾಗ ತೂಕದಲ್ಲಿ ವ್ಯತ್ಯಾಸಗಳು ಕಂಡುಬರುತ್ತಿದೆ. ಅದನ್ನು ಆಹಾರ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು ಅದನ್ನು ಸರಿಪಡಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ ಎಂದರು.

ಬಿಬಿಎಂಪಿ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಜಿ. ಕೃಷ್ಣಪ್ಪ ಮಾತನಾಡಿ, ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮವಹಿಸಲಾಗುತ್ತಿದೆ. ಅದರಂತೆ ನಗರದಲ್ಲಿ 20,48,961 ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹೊಣೆ ಹೋರಲಾಗಿದೆ ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 8,156 ಬೂತ್ ಗಳಿಂದ ಸುಮಾರು 93,32,000 ಮತದಾರರನ್ನು ಹೊಂದಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿ 756 ನ್ಯಾಯ ಬೆಲೆ ಅಂಗಡಿಗಳಿಂದ ಒಟ್ಟು 5,08,426 ಪಡಿತರ ಚೀಟಿಗಳಿವೆ, 68,021 ಎಪಿಎಲ್ ಕಾರ್ಡ್ ಸೇರಿ ಒಟ್ಟು 5,76,447 ಪಡಿತರ ಚೀಟಿಗಳಿವೆ. ಈ ಪೈಕಿ ಒಟ್ಟು ಫಲಾನುಭವಿಗಳು 18,07,151 ಮತ್ತು 2,41,810 ಎಪಿಎಲ್ ಫಲಾನುಭವಿಗಳು ಸೇರಿ ಒಟ್ಟಾಗಿ 20,48,961 ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹೊಣೆಯನ್ನು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದೆ.

ಈ ವೇಳೆ ಬಿಬಿಎಂಪಿ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರುಗಳಾದ ರಮೇಶ್, ಸ್ವಪ್ನಚಂದ್ರ ಶೆಟ್ಟಿ, 28 ವಿಧಾನಸಭಾ ಕ್ಷೇತ್ರಗಳು ಅಧ್ಯಕ್ಷರುಗಳು, ಬಿಬಿಎಂಪಿ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಅವಿನಾಶ್ ಮೆನನ್ ರಾಜೇಂದ್ರನ್, ಗ್ಯಾರಂಟಿ ಸೇವೆ ಒದಗಿಸುವ ವಿವಿಧ ಇಲಾಖೆಯ ನೋಡಲ್ ಅಧಿಕಾರಿಗಳು ಇದ್ದರು.

ರಂಗೋಲಿ ಬಿಡಿಸುವ ಮೂಲಕ ವರ್ಷಾಚರಣೆ: ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚನೆಯಾಗಿ ಒಂದು ವರ್ಷ ಕಳೆದಿರುವ ಹಿನ್ನೆಲೆಯಲ್ಲಿ ಪ್ರತಿ ಫಲಾನುಭವಿಗಳ ಮನೆ ಮುಂದೆ ರಂಗೋಲಿ ಬಿಡಿಸಿ ಮನೆ-ಮನೆ ಭೇಟಿ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಬಿಬಿಎಂಪಿ ವ್ಯಾಪ್ತಿಯ 28 ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷರುಗಳಿಗೆ ಮನವಿ ಮಾಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಫಲಾನುಭವಿಗಳ ವಿವರ: ಬಿಬಿಎಂಪಿ ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳಾದ ಶಕ್ತಿ ಯೋಜನೆ, ಗೃಹಜ್ಯೋತಿ ಯೋಜನೆ, ಯುವ ನಿಧಿ ಯೋಜನೆ, ಗೃಹಲಕ್ಷ್ಮಿ ಅನ್ನ ಭಾಗ್ಯ ಯೋಜನೆಯ ಫಲಾನುಭವಿಗಳ ವಿವರಗಳು ಈ ಕೆಳಗಿನಂತಿವೆ.

- **ಅನ್ನಭಾಗ್ಯ ಯೋಜನೆ: ಡಿಸೆಂಬರ್-2024 ಅಂತ್ಯಕ್ಕೆ 32,35,457 ಫಲಾನುಭವಿಗಳು ಅನ್ನಭಾಗ್ಯ ಯೋಜನೆ ಪಡೆದಿದ್ದು, ಅದಕ್ಕಾಗಿ 54.42 ಕೋಟಿ ರು. ಗಳನ್ನು ಭರಿಸಲಾಗಿದೆ.**
- **ಗೃಹಲಕ್ಷ್ಮಿ ಯೋಜನೆ: ಡಿಸೆಂಬರ್-2024 ರ ಅಂತ್ಯಕ್ಕೆ 8,80,415 ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆ ಪಡೆದಿದ್ದು, ಅದಕ್ಕಾಗಿ 176.083 ಕೋಟಿ ರು. ಗಳನ್ನು ಭರಿಸಲಾಗಿದೆ.**
- **ಗೃಹಜ್ಯೋತಿ ಯೋಜನೆ: ಫೆಬ್ರವರಿ-2025 ರ ಅಂತ್ಯಕ್ಕೆ 33,21,262 ಫಲಾನುಭವಿಗಳು ಗೃಹಜ್ಯೋತಿ ಯೋಜನೆ ಪಡೆದಿದ್ದು, ಅದಕ್ಕಾಗಿ 222.12 ಕೋಟಿ ರು. ಗಳನ್ನು ಭರಿಸಲಾಗಿದೆ.**
- **ಯುವನಿಧಿ ಯೋಜನೆ: ಫೆಬ್ರವರಿ-2025ರ ಅಂತ್ಯಕ್ಕೆ 12,470 ಫಲಾನುಭವಿಗಳು ಯುವನಿಧಿ ಯೋಜನೆಯನ್ನು ಪಡೆದಿದ್ದು, ಅದಕ್ಕಾಗಿ 3.72 ಕೋಟಿ ರು. ಗಳನ್ನು ಭರಿಸಲಾಗಿದೆ.**
- **ಶಕ್ತಿ ಯೋಜನೆ: ಫೆಬ್ರವರಿ-2025 ರ ಅಂತ್ಯಕ್ಕೆ 6,21,52,268 ಫಲಾನುಭವಿಗಳು ಶಕ್ತಿ ಯೋಜನೆಯನ್ನು ಪಡೆದಿದ್ದು, ಅದಕ್ಕಾಗಿ 95.63 ಕೋಟಿ ರು. ಗಳನ್ನು ಭರಿಸಲಾಗಿದೆ.**

ಕಾಫಿ, ಟೀ ಜತೆಗೆ ತಿಂಡಿ ದರ 5 ರು. ಏರಿಕೆ!

ಬೆಲೆ ಏರಿಕೆಯಿಂದ ತತ್ತರಿಸಿದ ಜನತೆಗೆ ಮತ್ತೊಂದು ಬರೆ

ಬೆಂಗಳೂರು: ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿದ ಜನತೆಯ ಮೇಲೆ ಮತ್ತಷ್ಟು ಬೆಲೆ ಏರಿಕೆಯ ಹೊರೆ ಬೀಳಲಿದ್ದು, ಟೀ, ಕಾಫಿ ಜತೆಗೆ ತಿಂಡಿಗಳ ದರ ಗರಿಷ್ಠ 5 ರು. ವರೆಗೆ ಹೆಚ್ಚಳ ಮಾಡಲು ಹೋಟೆಲ್ ಮಾಲೀಕರು ನಿರ್ಧರಿಸಿದ್ದಾರೆ.

ಬೃಹತ್ ಬೆಂಗಳೂರು ಹೋಟೆಲ್ ಗಳ ಸಂಘ ಗ್ರಾಹಕರಿಗೆ ಹೊರೆಯಾಗದಂತೆ ದರ ಹೆಚ್ಚಳ ಮಾಡಲು ಹೋಟೆಲ್ ಮಾಲೀಕರಿಗೆ ಸೂಚನೆ ನೀಡಿದ್ದು, ಕಾಫಿ ಪುಡಿ ದರ ಹೆಚ್ಚಳವಾಗಿರುವ ಹಿನ್ನೆಲೆ ಎಲ್ಲ ಹೋಟೆಲ್ ಗಳಲ್ಲಿ ಕಾಫಿಯ ದರವನ್ನು ಶೇ.10 ರಿಂದ 15 ರಷ್ಟು ಅಥವಾ 2-3 ರುಪಾಯಿ ಹೆಚ್ಚಳ ಮಾಡುವಂತೆ ಹೋಟೆಲ್ ಮಾಲೀಕರ ಸಂಘ ಸೂಚಿಸಿತ್ತು. ಇದರ ಬೆನ್ನಲ್ಲೇ ಕೆಲವು ಹೋಟೆಲ್ ಗಳಲ್ಲಿ ಕಾಫಿ ದರ ಹೆಚ್ಚಳ ಮಾಡಲಾಗಿತ್ತು, ಇದೀಗ ಹಾಲಿನ ದರ ಕೂಡ ಏರಿಕೆಯಾದ ಹಿನ್ನೆಲೆಯಲ್ಲಿ ಕಾಫಿ ಜತೆಗೆ ಟೀ ದರ ಕೂಡ 2-3 ರುಪಾಯಿ ಹೆಚ್ಚಳ ಮಾಡಲಾಗಿದೆ.

ಪಾನೀಯದ ಜತೆಗೆ ತಿಂಡಿ ದರ 3 ರು.ನಿಂದ 5 ರು.ವರೆಗೆ ಹೆಚ್ಚಳ ಮಾಡುವಂತೆ ಹೋಟೆಲ್ ಮಾಲೀಕರ ಸಂಘ ಹೋಟೆಲ್‌ಗಳಿಗೆ ಸೂಚನೆ ನೀಡಿದ್ದು, ಈ ಮೂಲಕ ರಾಜ್ಯದ ಜನತೆಗೆ ಮತ್ತೊಂದು ಬೆಲೆಯೇರಿಕೆಯ ಹೊರೆಯುಂಟಾಗಲಿದ್ದು, ಹಾಲಿನ ದರ, ಡೀಸೆಲ್, ಸಿಲೆಂಡರ್ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿದೆ. ಇದೀಗ ಪುನಃ ತಿಂಡಿ

ದರವೂ ಹೆಚ್ಚಾಗಲಿದೆ.

ಕಳೆದೊಂದು ವರ್ಷದಲ್ಲಿ ದಿನಸಿ ವಸ್ತುಗಳು ಬೆಲೆಯೇರಿಕೆ ಕಂಡಿವೆ. ಅಕ್ಕಿ, ಬೇಳೆ, ತರಕಾರಿ, ಎಣ್ಣೆ ಎಲ್ಲವೂ ಕಳೆದ ಒಂದು ವರ್ಷದಲ್ಲಿ ಶೇ.30 ರಷ್ಟು ಏರಿಕೆಯಾಗಿದೆ. ಆ ಕಾರಣ ತಿಂಡಿ, ತಿನಿಸುಗಳ ಬೆಲೆಯೂ ಏರಿಕೆ ಆಗಲಿದೆ. ಈ ಹಿಂದೆ ಕಾಫಿ ಪುಡಿ ಬೆಲೆ ಏರಿಕೆ ಆಗಿತ್ತು, ಈಗ ಹಾಲಿನ ದರವೂ ಏರಿಕೆ ಆಗಿದೆ. ಈ ಕಾರಣದಿಂದ ಚಹಾದ ದರ 2ರಿಂದ 3 ರು. ಹೆಚ್ಚಿಸಲಾಗಿದೆ ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಗೌರವಾಧ್ಯಕ್ಷ ಪಿಸಿ ರಾವ್ ತಿಳಿಸಿದ್ದಾರೆ.

ರಜತ ಮಹೋತ್ಸವ ಸಭಾಂಗಣ ಉದ್ಘಾಟನೆ

ಕೆಎಸ್‌ಐಟಿ ರಜತ ಮಹೋತ್ಸವ ಸಭಾಂಗಣವನ್ನು ಸಚಿವ ರಾಮಲಿಂಗಾರೆಡ್ಡಿ, ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಉದ್ಘಾಟಿಸಿದರು.

ಬೆಂಗಳೂರು: ಕೆಎಸ್‌ಐಟಿ ರಜತ ಮಹೋತ್ಸವ ಸಭಾಂಗಣ ಉದ್ಘಾಟನಾ ಸಮಾರಂಭ ಶುಕ್ರವಾರ ಕೆಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆಯಿತು.

ಸುಧಾರಿತ ಆಡಿಯೊ-ವಿಜುವಲ್ ತಂತ್ರಜ್ಞಾನ ಮತ್ತು ಆಧುನಿಕ ಮೂಲಸೌಕರ್ಯ ಹೊಂದಿರುವ ಸಭಾಂಗಣ ಉದ್ಘಾಟಿಸಿ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, ಕಮ್ಮಾವಾರಿ ಸಂಘದ ಆಡಳಿತ ಮಂಡಳಿ ಶೈಕ್ಷಣಿಕ ಮೂಲಸೌಕರ್ಯ ವೃದ್ಧಿಯಲ್ಲಿ ತೊಡಗಿಕೊಂಡಿರುವುದು ಅಭಿನಂದನಾರ್ಹ. ವಿದ್ಯಾರ್ಥಿಗಳ ಸಬಲೀಕರಣಕ್ಕಾಗಿ ಗುಣಮಟ್ಟದ ಮೂಲಸೌಕರ್ಯ ಅತ್ಯಂತ ಅಗತ್ಯ, ರಾಜ್ಯದ ಶೈಕ್ಷಣಿಕ ಸಂಸ್ಥೆಗಳು ಇದರತ್ತ ಹೆಚ್ಚು ಗಮನಹರಿಸಬೇಕು ಎಂದರು.

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾತನಾಡಿ, ಕಮ್ಮಾವಾರಿ ಸಂಘದ ಐತಿಹಾಸಿಕ ಪಯಣ ಸ್ಮರಣೀಯ, ಕೆಎಸ್ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯಲ್ಲಿ ವಿವಿಧ ಸಮಿತಿಗಳ ಪಾಲಿನ ಮಹತ್ವ ಹೆಚ್ಚಿದೆ. ಸಂಸ್ಥೆಗೆ ಸಮಾಜಕ್ಕೆ ಮತ್ತಷ್ಟು ಸೇವೆ ಸಲ್ಲಿಸಲು ಶಿಕ್ಷಣದ ಹೊಸ ಕ್ಷೇತ್ರಗಳತ್ತ ವಿಸ್ತರಿಸಲಿ ಎಂದರು.

ಸಮಾರಂಭದಲ್ಲಿ ಕಮ್ಮಾವಾರಿ ಸಂಘದ ಅಧ್ಯಕ್ಷ ಆರ್. ರಾಜಗೋಪಾಲ್ ನಾಯ್ಡು, ಸಂಘದ ಸಲಹಾ ಸಮಿತಿ ಅಧ್ಯಕ್ಷ ಕೆ. ಕೃಷ್ಣ, ಗೌರವ ಕಾರ್ಯದರ್ಶಿ ಆರ್.ಲೀಲಾಶಂಕರ್ ರಾವ್, ಕೋಶಾಧಿಕಾರಿ ಟಿ.ನೀರಜಾಕ್ಷುಲು ನಾಯ್ಡು, ಡಾ.ಕೆ.ವಿ.ಎ.ಬಾಲಾಜಿ ಮತ್ತು ನಿರ್ದೇಶಕ ಡಾ.ದಿಲೀಪ್ ಕುಮಾರ್.ಕೆ ಉಪಸ್ಥಿತರಿದ್ದರು.

ಎಂಲ್ಯಾಕ್ ವಾರ್ಷಿಕ ಪದವಿ ಪ್ರದಾನ

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು 5ನೇ ವಾರ್ಷಿಕ ಪದವಿ ಪ್ರದಾನ ಸಮಾರಂಭದಲ್ಲಿ ಚಿನ್ನದ ಪದಕ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರು: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು 5ನೇ ವಾರ್ಷಿಕ ಪದವಿ ಪ್ರದಾನ ಸಮಾರಂಭ ಶನಿವಾರ ಮಲ್ಲೇಶ್ವರಂನ ಕಾಲೇಜು ಆವರಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಎಂಲ್ಯಾಕ್ ಟ್ರಸ್ಟ್ ಅಧ್ಯಕ್ಷ ಎಸ್.ಎಸ್.ನಾಗಾನಂದ್ ಮಾತನಾಡಿ, ವಿದ್ಯಾರ್ಥಿಗಳು, ಶಿಕ್ಷಕರ ಹಾಗೂ ಪೋಷಕರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು. ಎಂಲ್ಯಾಕ್ ಕಾಲೇಜು ವಿದ್ಯಾರ್ಥಿಗಳಿಗೆ ಎಲ್ಲಾ ಅವಕಾಶ ನೀಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ದಾರಿದೀಪವಾಗಿದೆ ಎಂದರು.

ಐಐಎಸ್‌ಸಿ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್ ಮಾತನಾಡಿ, ಕೃತಕ ಬುದ್ಧಿಮತ್ತೆ ವಿಶ್ವದೆಲ್ಲೆಡೆ ಆವರಿಸಿ ಇದೀಗ ಚಾಟ್ ಜಿಪಿಟಿ ಎಲ್ಲೆಡೆ ಆಳವಡಿಸಿದ್ದೇವೆ. ಹಾಗಾಗಿ ಸಾಮಾಜಿಕ ಮಾಧ್ಯಮ ಹಾಗೂ ಕೃತಕ ಬುದ್ಧಿಮತ್ತೆಯನ್ನು ವಿದ್ಯಾರ್ಥಿಗಳು ತುಂಬಾ ಜಾಗರೂಕತೆಯಿಂದ ಹಾಗೂ ಜವಾಬ್ದಾರಿಯುತವಾಗಿ ಬಳಸಬೇಕು ಎಂದರು.

ಸಮಾರಂಭದಲ್ಲಿ ಶೈಕ್ಷಣಿಕ ಚಿನ್ನದ ಪದಕ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪದಕ ಪಡೆದ ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕರಿಸಿದರು. ಮ್ಯಾನೇಜಿಂಗ್ ಟ್ರಸ್ಟಿ ಕೆ.ಜೈರಾಜ್, ಕಾಲೇಜಿನ ಪ್ರಾಂಶುಪಾಲ ಡಾ.ಷರ್ಮಿಷ್ಠ ದತ್ತ, ಡಾ.ಕಮಲಾ.ಎ, ಡಾ.ಸೌಮ್ಯ.ಪಿ, ಡಾ.ಪ್ರದೀಪ್ ಕೌಶಿಕ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನಿಸುವ ಅವಧಿ ಮೇ 2ರವರೆಗೆ ವಿಸ್ತರಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಅವಧಿಯನ್ನು ಮೇ 2ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿದರು. ನಗರದಲ್ಲಿ ಅತಿ ಹೆಚ್ಚು ನಾಗರಿಕರು ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳಾಗಬೇಕು ಎಂಬ ಉದ್ದೇಶದಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ನಿರ್ದೇಶನದ ಮೇರೆಗೆ, 2024-25ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಅವಧಿ ಮೇ 2 ರವರೆಗೆ ವಿಸ್ತರಿಸಲಾಗಿದೆ. ಅರ್ಹ ಫಲಾನುಭವಿಗಳು ಪಾಲಿಕೆ ವೆಬ್ ಸೈಟ್ ಅಥವಾ https://site.bbmp.gov.in/departmentwebsites/welfare/ ಅಥವಾ https://site.bbmp.gov.in/departmentwebsites/welfare/welfareactivities.htmlನಿಂದ ಪಡೆದುಕೊಳ್ಳಬಹುದು.

ಜುಲೈನಲ್ಲಿ ಹಳದಿ ಮಾರ್ಗ ಮೆಟ್ರೋ ಆರಂಭ?

ಬೆಂಗಳೂರು: ಮೆಟ್ರೋದ ಹಳದಿ ಮಾರ್ಗದಲ್ಲಿ ಜುಲೈನಲ್ಲಿ ಸಂಚಾರ ಆರಂಭಿಸಲಾಗುವುದು ಎಂದು ನಮ್ಮ ಮೆಟ್ರೋ ಮೂಲಗಳು ತಿಳಿಸಿದೆ.

ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ರೈಲು ಸಂಚಾರವು ಹಲವು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ರೈಲು ಸಂಚಾರದ ದಿನಾಂಕವು ಹಲವು ಬಾರಿ ಮುಂದೂಡಿಕೆ ಆಗುತ್ತಲೇ ಇತ್ತು. ಆದರೆ ಆದಷ್ಟು ಬೇಗ ಈ ಮಾರ್ಗ ಮೆಟ್ರೋ ಸಂಚಾರಕ್ಕೆ ಮುಕ್ತ ಮಾಡಬೇಕು ಎಂದು ನಮ್ಮ ಮೆಟ್ರೋ

ನಿರ್ಧರಿಸಿದ್ದು, ಅಗತ್ಯ ಕಾಮಗಾರಿಗಳು ಭರದಿಂದ ಸಾಗಿವೆ.

ಹಳದಿ ಮಾರ್ಗದಲ್ಲಿ ಸಂಚಾರ ನಡೆಸಬೇಕಾಗಿದ್ದ ರೈಲುಗಳ ಬರುವಿಕೆ ವಿಳಂಬದಿಂದಾಗಿ ಮೆಟ್ರೋ ಸಂಚಾರವು ಆರಂಭವಾಗಿಲ್ಲ. ಈಗಲೂ ಪೂರ್ಣ ಪ್ರಮಾಣದಲ್ಲಿ ಮೆಟ್ರೋ ರೈಲುಗಳು ನಮ್ಮ ಮೆಟ್ರೋಗೆ ಲಭ್ಯವಾಗಿಲ್ಲ. ಈ ಹಿನ್ನೆಲೆ ಬಿಎಂಆರ್‌ಸಿಎಲ್ ಬಳಿಯಿರುವ ರೈಲುಗಳಿಂದಲೇ ಸಂಚಾರ ಆರಂಭಿಸಲು ನಿಗಮ ಸಿದ್ಧತೆ ನಡೆಸಿದೆ. ಇದೇ ತಿಂಗಳ ಅಂತ್ಯಕ್ಕೆ ಒಂದು ರೈಲು ಬರಲಿದ್ದು, ಜೂನ್ ಮೊದಲ ವಾರಕ್ಕೆ ಮತ್ತೊಂದು ರೈಲು ಬರಲಿದೆ. ಅಲ್ಲಿಗೆ ಒಟ್ಟು 4 ರೈಲು ಈ ಮಾರ್ಗಕ್ಕೆ ತಲಪಿದಂತಾಗಲಿದೆ. ನಂತರ ಸಂಪೂರ್ಣ ಮಾರ್ಗ ಪರಿಶೀಲನೆ ಮಾಡಿ ಜುಲೈ ಮೊದಲ ವಾರದಲ್ಲಿ ಈ ನಾಲ್ಕು ರೈಲುಗಳ ಮೂಲಕವೇ ಮಾರ್ಗ ಸಂಚಾರ ಮುಕ್ತ ಮಾಡುವುದು ಬಹುತೇಕ ಖಚಿತವಾಗಿದೆ ಎಂದು ತಿಳಿಸಿದೆ.

30 ನಿಮಿಷಕ್ಕೊಂದು ರೈಲು ಸಂಚಾರ

ರೈಲುಗಳು ಕಡಿಮೆಯಿರುವ ಹಿನ್ನೆಲೆ ಪ್ರತಿ 30 ನಿಮಿಷಕ್ಕೊಂದು ರೈಲಿನಂತೆ ಸಂಚಾರ ಮಾಡುವ ಸಾಧ್ಯತೆಯಿದೆ. ಅಲ್ಲದೇ, ಒಟ್ಟು ನಿಲ್ದಾಣಗಳ ಪೈಕಿ 3 ಅಥವಾ 5 ನಿಲ್ದಾಣಕ್ಕೊಂದು ನಿಲ್ದಾಣದಂತೆ ಜನಸಂಖ್ಯೆಗೆ ಅನುಗುಣವಾಗಿ ಕಾರ್ಯಾಚರಣೆ ಮಾಡಲು ಯೋಜನೆಯನ್ನು ಕೂಡ ಮಾಡಲಾಗಿದೆ. ಈ ಮಾರ್ಗ ಸಂಚಾರ ಮುಕ್ತ ಸಂಬಂಧ 4ನೇ ರೈಲು ಬರುತ್ತಿದ್ದಂತೆ ಮತ್ತೊಮ್ಮೆ ಕೇಂದ್ರ ರೈಲ್ವೆ ಸುರಕ್ಷತಾ ಅಧಿಕಾರಿಗಳಿಗೆ ಮಾರ್ಗ ಪರಿಶೀಲನೆಗೆ ಬಿಎಂಆರ್‌ಸಿಎಲ್ ಆಹ್ವಾನಿಸಲಿದೆ. ಅದರಂತೆಯೇ ಅಧಿಕಾರಿಗಳು ಭೇಟಿ ನೀಡಿ, ಮತ್ತೆ ಸಿಗ್ನಲಿಂಗ್ ಪರೀಕ್ಷೆ ನಡೆಸಿ ಮಾರ್ಗ ಆರಂಭಕ್ಕೆ ಅನುಮತಿ ನೀಡಲಿದ್ದಾರೆ. ಕೂಡಲೇ ಸರಕಾರಕ್ಕೆ ಪತ್ರ ಬರೆದು ಅನುಮತಿ ಪಡೆದು ಜುಲೈ ಅಂತ್ಯದೊಳಗೆ ಮಾರ್ಗ ಸಂಚಾರ ಮುಕ್ತವಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಕಳೆದ ಡಿಸೆಂಬರ್ ವೇಳೆಗೆ ಹಳದಿ ಮಾರ್ಗದಲ್ಲಿ ಮೆಟ್ರೋ ಸಂಚಾರ ಆರಂಭ ಆಗಬೇಕಿತ್ತು. ಆದರೆ ಕಾರಣಾಂತರಗಳಿಂದ ಈ ಮಾರ್ಗದಲ್ಲಿ ಮೆಟ್ರೋ ಸಂಚಾರ ವಿಳಂಬ ಆಯಿತು. ಅದರಲ್ಲೂ ಅಂದುಕೊಂಡಂತೆ ಮೆಟ್ರೋ ರೈಲುಗಳು ಕೂಡ ರವಾನೆಯಾಗಲಿಲ್ಲ. ಇದು ಕೂಡ ಒಂದು ವಿಳಂಬಕ್ಕೆ ಕಾರಣವಾಗಿದೆ.

ಬೆಲೆ ಏರಿಕೆ ಪ್ರಾರಂಭ ಮಾಡಿದ್ದೇ ಬಿಜೆಪಿ: ಡಿ.ಕೆ. ಶಿವಕುಮಾರ್

ಬೆಂಗಳೂರು: ಬೆಲೆ ಏರಿಕೆ ಪ್ರಾರಂಭ ಮಾಡಿದವರೇ ಬಿಜೆಪಿಯವರು. ರೈತರಿಗೆ ನೆರವಾಗಲು ನಾವು ಹಾಲಿನ ದರ ಏರಿಸಿದ್ದೇವೆ ಎಂದು ಡಿಸಿಎಂ ಡಿ. ಕೆ.ಶಿವಕುಮಾರ್ ಹೇಳಿದರು.

ಸದಾಶಿವನಗರದ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಬೆಲೆ ಏರಿಕೆ ವಿರುದ್ಧ ಬಿಜೆಪಿ ಹೋರಾಟದ ಬಗ್ಗೆ ಕೇಳಿದಾಗ, ನಾವೇನು ಈಗ ಬೆಲೆ ಏರಿಕೆ ಮಾಡಿಲ್ಲ. ಅವರು ಬೆಲೆ ಏರಿಕೆ ಮಾಡಿದ ಕಾರಣಕ್ಕೆ ನಾವು ಗ್ಯಾರಂಟಿ ಯೋಜನೆಗಳನ್ನು ನೀಡಿದ್ದು. ರೈತರಿಗೆ ಸಹಾಯವಾಗಲು ಹಾಲಿನ ಬೆಲೆ ಏರಿಕೆ ಮಾಡಲಾಗಿದೆ. ಬೆಲೆ ಏರಿಕೆ ನಂತರವೂ ಬೇರೆ ರಾಜ್ಯಗಳಿಗಿಂತ ನಮ್ಮಲ್ಲಿ ಹಾಲಿನ ದರ ಕಡಿಮೆಯಿದೆ ಎಂದರು.

ಭದ್ರಾ, ಮೇಲ್ದಂಡೆ ಅನುದಾನ ಕೇಂದ್ರದ ಮುಂದಿದೆ: ಭದ್ರಾ ಮೇಲ್ದಂಡೆ ಯೋಜನೆಗೆ ರೂ. 5,300 ಕೋಟಿ ಅನುದಾನ ಬಿಡುಗಡೆ ವಿಚಾರ ಕೇಂದ್ರ ಸಚಿವ ಸಂಪುಟದ ಮುಂದೆ ಇಡಲಾಗಿದೆ ಎಂದು ಕೇಂದ್ರ ಜಲಶಕ್ತಿ ಸಚಿವರು ತಿಳಿಸಿದ್ದಾರೆ. ನಾವು ಭದ್ರಾ ಯೋಜನೆಗೆ ಎಷ್ಟು ಖರ್ಚು ಮಾಡಿದ್ದೇವೆ, ಕೇಂದ್ರ ಎಷ್ಟು ಕೊಡಬೇಕು ಎಂಬುದನ್ನೂ ತಿಳಿಸಿದ್ದೇವೆ.

ದೆಹಲಿ ಭೇಟಿ ವೇಳೆ ಕೇಂದ್ರ ಜಲಶಕ್ತಿ ಸಚಿವರನ್ನು ನಾನು ಹಾಗೂ ಮುಖ್ಯಮಂತ್ರಿಯವರು ಭೇಟಿ ಮಾಡಿ ರಾಜ್ಯದ ನೀರಾವರಿ ಸಂಬಂಧಿತ ವಿಚಾರ ಚರ್ಚೆ ಮಾಡಿದೆವು. ಮಹದಾಯಿ, ಮೇಕೆದಾಟು, ಕಳಸಾ ಬಂಡೂರಿ, ಭದ್ರಾ, ಮೇಲ್ದಂಡೆ ವಿಚಾರಗಳನ್ನು ಮನವರಿಕೆ ಮಾಡಿದ್ದೇವೆ. ನಮ್ಮ ಸಮಸ್ಯೆಗಳು ಅವರಿಗೆ ಅರ್ಥವಾಗಿದೆ. ಈ ವಿಚಾರವಾಗಿ ಒಬ್ಬೊಬ್ಬರನ್ನೇ ಕರೆಸಿ ಮಾತುಕಥೆ ನಡೆಸುವುದಾಗಿ ತಿಳಿಸಿದ್ದಾರೆ ಎಂದರು.



ಹಂಪಿ ಕನ್ನಡ ವಿಶ್ವವಿದ್ಯಾಲಯದ 33ನೇ ನುಡಿಹಬ್ಬದಲ್ಲಿ ಸಾಹಿತಿ ಕುಂ.ವೀರಭದ್ರಪ್ಪ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾ, ಶಿವರಾಜ್ ವಿ.ಪಾಟೀಲ ಮತ್ತು ಹಿಂದೂಸ್ತಾನಿ ಸಂಗೀತ ಕಲಾವಿದ ಪಂ.ಎಂ.ವೆಂಕಟೇಶ್ ಕುಮಾರ್ ಅವರಿಗೆ ನಾಡೋಜ ಪದವಿ ನೀಡಿ ಗೌರವಿಸಲಾಯಿತು.

ಪ್ರತ್ಯೇಕ ದುರಂತ: ಎಂಟು ಜನರ ಸಾವು

ಕಲಬುರಗಿಯಲ್ಲಿ ಭೀಕರ ಅಪಘಾತ । ಸ್ಥಳದಲ್ಲೇ ಐವರ ದುರ್ಮರಣ, 11 ಜನರಿಗೆ ಗಾಯ

ಕಲಬುರಗಿ/ದಾವಣಗೆರೆ: ನಿಂತಿದ್ದ ಲಾರಿಗೆ ಮ್ಯಾಕ್ಸಿಕ್ಯಾಬ್ ಡಿಕ್ಕಿ ಹೊಡೆದ ಪರಿಣಾಮ ಐವರು ಸ್ಥಳದಲ್ಲೇ ದುರ್ಮರಣ ಹೊಂದಿದ್ದು, 11 ಜನರಿಗೆ ಗಂಭೀರ ಗಾಯಗಳಾಗಿರುವ ದಾರುಣ ಘಟನೆ ಜಿಲ್ಲೆಯ ಜೇವರ್ಗಿ ತಾಲೂಕಿನ ಸೊನ್ನ ಕ್ರಾಸ್ ಬಳಿ ತಡರಾತ್ರಿ ನಡೆದಿದೆ.

ಮ್ಯಾಕ್ಸಿಕ್ಯಾಬ್‌ನಲ್ಲಿದ್ದ 31 ಜನರಲ್ಲಿ ಐವರು ಸ್ಥಳದಲ್ಲೇ ಮೃತಪಟ್ಟಿದ್ದು, ಮಾಲನ್ (52), ವಾಜೀದ್ (2), ಮೆಹಬೂಬ್ ಬಿ (53), ಮೆಹಬೂಬ್ (29) ಮತ್ತು ಪ್ರಿಯಾಂಕಾ (13) ಮೃತರೆಂದು ಗುರುತಿಸಲಾಗಿದೆ. ಮೃತರೆಲ್ಲರೂ ಬಾಗಲಕೋಟೆ ಜಿಲ್ಲೆಯವರಾಗಿದ್ದು, ಬಾಗಲಕೋಟೆಯಿಂದ ಕಲಬುರಗಿ ನಗರದ ಖ್ವಾಜಾ ಬಂದೇ ನವಾಜ್ ದರ್ಗಾಕ್ಕೆ ಒಂದೇ ಮ್ಯಾಕ್ಸಿಕ್ಯಾಬ್‌ನಲ್ಲಿ ಬರುತ್ತಿದ್ದ ವೇಳೆ ಅವಘಡ ಸಂಭವಿಸಿದೆ. ಇನ್ನು ಅಪಘಾತದಲ್ಲಿ 11 ಜನರಿಗೆ ತೀವ್ರ ಗಾಯಗಳಾಗಿದ್ದು, ಗಾಯಾಳುಗಳನ್ನು ಸ್ಥಳೀಯ ಮತ್ತು ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ಜೇವರ್ಗಿಯ ಸೋನ್ನಾ ಕ್ರಾಸ್ ಬಳಿ ನಿಂತಿದ್ದ ಲಾರಿಗೆ ಮ್ಯಾಕ್ಸಿಕ್ಯಾಬ್ ಡಿಕ್ಕಿ ಹೊಡೆದ ಪರಿಣಾಮ ದುರ್ಘಟನೆ ನಡೆದಿದೆ. ಈ ಕುರಿತು ನೇಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರ ಕುಟುಂಬಕ್ಕೆ ತಲಾ 2 ಲಕ್ಷ ಪರಿಹಾರ: ಕಲಬುರಗಿಗೆ ತೆರಳುತ್ತಿದ್ದ ವೇಳೆ ಜೇವರ್ಗಿ ಬಳಿ ರಸ್ತೆ ಅಪಘಾತದಲ್ಲಿ ಬಾಗಲಕೋಟೆ ಐವರು ಮೃತ ಪಟ್ಟಿದ್ದು, ಮೃತರ ಕುಟುಂಬಗಳಿಗೆ 2 ಲಕ್ಷ ರು. ಪರಿಹಾರ ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ. ನಗರದ ನಿವಾಸಿಗಳು ಕಲಬುರಗಿಗೆ ತೆರಳುವ ಸಂದರ್ಭದಲ್ಲಿ ಜೇವರ್ಗಿ ಬಳಿ ನಡೆದ ಅಪಘಾತದಲ್ಲಿ ಒಟ್ಟು ಐವರು ಮೃತ ಪಟ್ಟಿದ್ದು, 11 ಜನ ತೀವ್ರ ಗಾಯಗೊಂಡಿರುವುದು ದುರದುಷ್ಟಕರ. ಇವರಿಗೆ ಸೂಕ್ತ ಪರಿಹಾರ ನೀಡುವಂತೆ

ಮುಖ್ಯಮಂತ್ರಿಗಳೊಂದಿಗೆ ಮಾತಾಡಿದ್ದು, ಅವರು ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರು. ಘೋಷಣೆ ಮಾಡಿದ್ದಾರೆ. ಜತೆಗೆ ಗಾಯಾಳುಗಳ ಚಿಕಿತ್ಸಾ ವೆಚ್ಚ ಸರಕಾರದಿಂದ ಭರಿಸುವುದಾಗಿ ತಿಳಿಸಿದ್ದಾರೆ ಎಂದು ಸಚಿವ ಆರ್.ಬಿ. ತಿಮ್ಮಾಪುರ ಹಾಗೂ ಶಾಸಕ ಎಚ್.ವೈ.ಮೇಟಿ ತಿಳಿಸಿದ್ದಾರೆ.

ಶಾಸಕ ಡಾ. ಅಜಯ್ ಸಿಂಗ್ ಭೇಟಿ ಸಾಂತ್ವನ: ಜೇವರ್ಗಿಯ ಸೋನ್ನಾ ಕ್ರಾಸ್ ಬಳಿ ನಡೆದ ಘಟನೆ ಹಿನ್ನಲೆ ತಾಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಕ ಶಾಸಕ ಡಾ. ಅಜಯ್ ಸಿಂಗ್ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ವಾಹನದಲ್ಲಿ ಇದ್ದ ಇತರೆ ಜನರನ್ನು ಮಾತನಾಡಿಸಿ ಧೈರ್ಯ ತುಂಬಿದರು.

ಮೃತರಿಗೆ ಎರಡು ಲಕ್ಷ ಪರಿಹಾರ: ಭೀಕರ ಅಪಘಾತ ಘಟನೆಯಲ್ಲಿ ಮೃತ ಪಟ್ಟವರು ಹಾಗೂ ಗಾಯಗೊಂಡವರೆಲ್ಲ ಬಡ ಕೂಲಿ ಕಾರ್ಮಿಕ ಕುಟುಂಬದ ವರಾಗಿದ್ದಾರೆ ಎಂದು ತಿಳಿದಬಂದಿದ್ದು, ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎನ್ನುವ ಒತ್ತಡ ಹೆಚ್ಚಾದ ಬೆನ್ನಲೆ, ಇದೀಗ ಮುಖ್ಯಮಂತ್ರಿಗಳು ಮೃತರ ಕುಟುಂಬಕ್ಕೆ ತಲಾ 2 ಲಕ್ಷ ಘೋಷಣೆ ಮಾಡಿದ್ದಾರೆ.

ದಾವಣಗೆರೆಯಲ್ಲಿ ಬೆಳಗಾವಿಯ ಮೂವರು ವ್ಯಕ್ತಿಗಳ ಸಾವು

ದಾವಣಗೆರೆ ತಾಲೂಕಿನ ಅತ್ತಿಗೆರೆ ಗ್ರಾಮದ ಬಳಿಯ ಬೀರೂರು ಸಮ್ಮಸಗಿ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ಬೆಳಗಿನ ಜಾವ 5 ಗಂಟೆಗೆ ಕಾರು ಮತ್ತು

ಬಸ್ ನಡುವೆ ಭೀಕರ ಅಪಘಾತ ಸಂಭವಿಸಿ, ಮೂವರು ಸಾವನ್ನಪ್ಪಿದ್ದಾರೆ. ಮೃತರನ್ನು ಬೆಳಗಾವಿ ಮೂಲದ ಕಾಗವಾಡ ತಾಲೂಕಿನ ಶಿರಗುಪ್ಪ ಗ್ರಾಮದ ಬಸವರಾಜಪ್ಪ (38), ಶ್ರೀಧರ್ (32) ಹಾಗೂ ವಿಜಯ್ ಕುಮಾರ್ (35) ಎಂದು ಗುರುತಿಸಲಾಗಿದೆ. ದಾವಣಗೆರೆ ಕಡೆಯಿಂದ ಸಂತೇಬೆನ್ನೂರು ಕಡೆ ಹೋಗುತ್ತಿದ್ದ ಮಾರುತಿ ಇಕೋ ಹಾಗೂ ಸಂತೇಬೆನ್ನೂರು ಕಡೆಯಿಂದ ದಾವಣಗೆರೆಗೆ ವೇಗವಾಗಿ ಬರುತ್ತಿದ್ದ ಖಾಸಗಿ ಬಸ್ ನಡುವೆ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಕಾರಿನಲ್ಲಿದ್ದ ಮೂವರು ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಳಮೀಸಲಾತಿಗೆ ಬದ್ಧ: ಸಿಎಂ

← ಮೊದಲಪುಟದಿಂದ

ಮೀಸಲಾತಿ ವಿರುದ್ಧ ಮಾತಾಡುತ್ತಿದ್ದವರೆಲ್ಲಾ ಈಗ ಮೀಸಲಾತಿ ಪಡೆದು ಸವಲತ್ತು ಅನುಭವಿಸುತ್ತಿದ್ದಾರೆ. ಹೀಗಾಗಿ ಈಗ ಮೀಸಲಾತಿ ವಿರೋಧಿಸುವವರು ಯಾರೂ ಇಲ್ಲ. ಬಾಬು ಜಗಜೀವನ್ ರಾಮ್ ಸ್ವಾತಂತ್ರ್ಯ ಪ್ರೇಮಿ, ಸಾಮಾಜಿಕ ನ್ಯಾಯದ ಪರವಾಗಿದ್ದವರು. ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಇದೆ. ಜಾತಿ ಇರುವವರೆಗೂ ಮೀಸಲಾತಿ ಇರಬೇಕು ಎಂದು ಸ್ಪಷ್ಟವಾದ ನಿಲುವು ಹೊಂದಿದ್ದರು. ಮೋದಿ ಇಡಬ್ಲ್ಯೂಎಸ್ ಹೆಸರಲ್ಲಿ ಶೇ.10ರಷ್ಟು ಮೀಸಲಾತಿ ಕಲ್ಪಿಸಿದ ಬಳಿಕ ಎಲ್ಲರೂ ಮೀಸಲಾತಿ ಫಲಾನುಭವಿಗಳೇ ಆಗಿಬಿಟ್ಟಿದ್ದಾರೆ ಎಂದರು.

ಸಿಎಂ ಭಾಷಣದ ಮುಖ್ಯಾಂಶ:
- ಸುಪ್ತ ಪ್ರತಿಭೆ ಹೊರಗೆ ತರುವ ಶಿಕ್ಷಣದಿಂದ ಯುವ ಸಮೂಹ ಸ್ವಾಭಿಮಾನಿಗಳಾಗಿ ಬೆಳೆಯಲು ಸಾಧ್ಯ
- ನಮ್ಮ ರಾಜ್ಯದಲ್ಲಿ ಮತ್ತು ತೆಲಂಗಾಣ, ಆಂಧ್ರದಲ್ಲಿ ಮಾತ್ರ ಎಸ್‌ಇಪಿ-ಡಿಎಸ್‌ಪಿ ಕಾಯಿದೆ ಜಾರಿಯಲ್ಲಿದೆ
- ಸಾಮಾಜಿಕ ನ್ಯಾಯದ ಬಗ್ಗೆ ಭಾಷಣ ಮಾಡುವ ಬಿಜೆಪಿಯವರ ಆಡಳಿತದ ರಾಜ್ಯಗಳಲ್ಲಿ ಈ ಕಾಯ್ದೆ ತಂದಿಲ್ಲವೇಕೆ?

..ಮದ್ಯ ಕೊರತೆ

← ಮೊದಲಪುಟದಿಂದ

ಸತತ ಮದ್ಯ ದರ ಏರಿಕೆ: ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಎರಡು ವರ್ಷಗಳಲ್ಲಿ 4ನೇ ಬಾರಿ ಬಿಯರ್, 2 ಬಾರಿ ಇಂಡಿಯನ್ ಮೇಡ್ (ಐಎಂಎಲ್ ಲಿಕ್ಕರ್) ದರ ಹೆಚ್ಚಿಸಲಾಗಿದೆ. ಜತೆಗೆ, ಪ್ರೀಮಿಯಂ ಮದ್ಯದ ದರ ಇಳಿಸಲಾಗಿತ್ತು. 2023ರ ಜುಲೈನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ, ಐಎಂಎಲ್ ಮೇಲೆ ಶೇ.20, ಬಿಯರ್ ಮೇಲೆ ಶೇ.10 ಅಬಕಾರಿ ಶುಂಕ ಹೆಚ್ಚಿಸಿದ್ದರು. ಇದಕ್ಕೂ ಮುನ್ನ ರಾಜ್ಯದಲ್ಲಿ ತಯಾರಿಸಲಾದ ಅಥವಾ ಆಮದು ಮಾಡಿಕೊಳ್ಳುವ ಬಿಯರ್ ಬಾಟಲ್ ಮೇಲೆ ಶೇ.10ರಷ್ಟು ಅಬಕಾರಿ ಸುಂಕ ಹೆಚ್ಚಿಸಲಾಗಿತ್ತು. ಇದೀಗ ಚೀಪ್ ಲಿಕ್ಕರ್‌ಗಳ ದರ ಹೆಚ್ಚಿಸಲು ಸರಕಾರ ತಯಾರಿ ಮಾಡಿಕೊಂಡಿದೆ. ಅಲ್ಲದೆ, ಪ್ರೀಮಿಯಂ ಮದ್ಯದ ಬೆಲೆಯನ್ನು ನೆರೆಯ ರಾಜ್ಯಗಳಲ್ಲಿ ವಿಧಿಸುತ್ತಿರುವ ಬೆಲೆಗಳಿಗೆ ಅನುಸಾರವಾಗಿ ಪರಿಷ್ಕರಿಸುವುದರೊಂದಿಗೆ ಅಬಕಾರಿ ಸ್ಲ್ಯಾಬ್‌ಗಳನ್ನು ಸರಕಾರ ತರ್ಕಬದ್ಧಗೊಳಿಸಿದೆ. 2025-26ರಲ್ಲಿ ಅಬಕಾರಿ ಸ್ಲ್ಯಾಬ್ ತರ್ಕಬದ್ಧಗೊಳಿಸುವ ಪ್ರಕ್ರಿಯೆ ಮುಂದುವರಿಸುವುದಾಗಿ ಸರಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.

ನೆರೆಯ ರಾಜ್ಯದಿಂದ 1,500 ಕೋಟಿ ರು. ನಷ್ಟ : ಆಂಧ್ರ, ತೆಲಂಗಾಣದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಗಡಿಭಾಗಕ್ಕೆ ಬಂದು ಮದ್ಯ ಸೇವಿಸುತ್ತಿದ್ದ ಪರಿಣಾಮ ಸರಕಾರಕ್ಕೆ ನೂರಾರು ಕೋಟಿ ರು. ಆದಾಯ ಬರುತ್ತಿತ್ತು. ಆದರೆ, ಆಂಧ್ರ ಸರಕಾರ, ತನ್ನ ರಾಜ್ಯದಲ್ಲಿ ಮದ್ಯ ದರ ಇಳಿಸಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯ ಗಡಿಭಾಗದ ಜನರು ಆಂಧ್ರದಲ್ಲೇ ಮದ್ಯ ಸೇವಿಸುತ್ತಿದ್ದಾರೆ. ಈ ಕಾರಣದಿಂದ 1,500 ಕೋಟಿ ರು. ಆದಾಯ ನಷ್ಟವಾಗಿದೆ.

ಶ್ರೀಲಂಕಾ ಜತೆ ಏಳು ಒಪ್ಪಂದಗಳಿಗೆ ಸಹಿ

← ಮೊದಲಪುಟದಿಂದ

ಮೀನುಗಾರರ ಬಿಡುಗಡೆಗೆ ಒತ್ತಾಯ: ಭಾರತ ಮತ್ತು ಶ್ರೀಲಂಕಾ ಮೀನುಗಾರರ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ ಮೋದಿ, ತಮಿಳುನಾಡಿನ ಮೀನುಗಾರರು ಮತ್ತು ಅವರ ದೋಣಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ತಮಿಳು ನಾಡಿನ ಮೀನುಗಾರರ ಪುನರಾವರ್ತಿತ ಬಂಧನ ಮತ್ತು ಶ್ರೀಲಂಕಾ ಅಧಿಕಾರಿಗಳು ಅವರ ದೋಣಿಗಳನ್ನು ವಶಪಡಿಸಿಕೊಂಡಿರುವುದು ಎರಡೂ ದೇಶಗಳ ನಡುವಿನ ದೀರ್ಘಕಾಲದ ಸಂಘರ್ಷವಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರೀ, ಶ್ರೀಲಂಕಾ ಅಧಿಕಾರಿಗಳು 11 ಮೀನುಗಾರರನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲು ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ನಮಗೆ ತಿಳಿಸಲಾಗಿದೆ. ಬಹುಶಃ ಮುಂಬರುವ ದಿನಗಳಲ್ಲಿ ಇನ್ನೂ ಕೆಲವರನ್ನು ಬಿಡುಗಡೆ ಮಾಡಬಹುದು ಎಂದಿದ್ದಾರೆ.

ಲಿಫ್ಟ್ ಸೇತುವೆಗೆ ಇಂದು ಚಾಲನೆ: ರಾಮೇಶ್ವರಂದಲ್ಲಿ ₹ 550 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಭಾರತದ ಮೊದಲ ಲಿಫ್ಟ್ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 6ರಂದು ಲೋಕಾರ್ಪಣೆ ಮಾಡಲಿದ್ದಾರೆ. ಲಿಫ್ಟ್ ಸೇತುವೆ ಲಂಬವಾಗಿ ತೆರೆಯುತ್ತಿದ್ದಂತೆ ಭದ್ರತಾ ಪಡೆ ಹಡಗು ಸಾಗಲಿದ್ದು, ಕಾರ್ಯಾಚರಣೆ ಆರಂಭವಾಗಲಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ.
ದೂರವಾಣಿ : 0831–2498100 ಫ್ಯಾಕ್ಸ್ : 0831–2405467.

ಸಂಖ್ಯೆ : ವಿ.ತಾ.ವಿ./ಬೆ./ಎಸ್.ಎ.ಪಿ./ಸಿ.ಡಬ್ಲ್ಯೂ–1/56/ಟಿ.ನಂ.696/2025–26/112
ದಿನಾಂಕ : 04–04–2025

ಟೆಂಡರ್ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕೆಲಸದ ಹೆಸರು : Tender for Procurement of Equipment for Centralized Research Facility at Centre for Distance and Online Education at VTU Mysuru. ಟೆಂಡರಿಗಿಟ್ಟ ಮೊತ್ತ : ರೂ. 1,71,10,000/– ಮುಂಗಡ ಠೇವಣಿ : ರೂ. 2,56,650/–, ಟೆಂಡರ್ ಪ್ರಿ–ಬಿಡ್ ಮಿಟಿಂಗ್ ದಿನಾಂಕ ; 09–04–2025 ರ ಬೆಳಿಗ್ಗೆ 11.00 ಗಂಟೆಗೆ ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 21–04–2025 ರ ಮಧ್ಯಾಹ್ನ 2.30 ರವರೆಗೆ. ಟೆಂಡರ್ ತೆರೆಯುವ ದಿನಾಂಕ : 22–04–2025 ರ ಸಂಜೆ 4.00 ಘಂಟೆಗೆ.

ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.

ಸಹಿ/– ಕುಲಸಚಿವರು,
ವಿ.ತಾಂ.ವಿ., ಬೆಳಗಾವಿ.

ಡಿಐಪಿಆರ್/ಬೆಳಗಾವಿ/31/ಮಣಿಪಾಲ್/2025–26

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009.
ಫೋನ್ : 080–22341230/35, ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಪಿಎ/ಭೂಉಬ–04/97/2024–25/37 ದಿನಾಂಕ: 05.04.2025

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ. ಎಂ.ನಂಜಪ್ಪ ಬಿನ್ ಲೇಟ್ ಎಂ.ಎನ್.ಮರಡಯ್ಯ ಇವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ : 173/3 ರ 0ಎ–20ಗು ಮತ್ತು ಸರ್ವೆ ಸಂಖ್ಯೆ : 173/4ರ 0ಎ–10ಗು ಒಟ್ಟು 0ಎ–30ಗು ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ದೊರಕುವುದಲ್ಲದೇ ಉದ್ಯೋಗಗಳು ಸೃಷ್ಟಿಯಾಗುತ್ತವೆ.
2) ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಾಣಿಜ್ಯ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಆದಾಯ ಬರುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/95/ಎಸ್‌ಎಸ್‌ಸಿ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ – ರಾರಾ ನಗರ ವಿಭಾಗ, ಬೆಂಗಳೂರು–560 098.
ಇ–ಮೇಲ್: eerirrn@gmail.com

ಸಂ: ಕಾಪಾಅ(ರಮೂಸೌ–ರಾರಾನ)/ಟೆಂಡರ್/01/2025–26 ದಿನಾಂಕ: 05.04.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಜಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಮೂಸೌ–ರಾರಾ ನಗರ ವಿಭಾಗ, ಬೃಬೆಂಮಪಾ, ಬೆಂಗಳೂರು, ಇವರು ಕೆಳಕಂಡ ನಿರ್ಮಾಣದ ಕಾಮಗಾರಿಗೆ ಬೃಬೆಂಮಪಾಲಿಕೆಯಲ್ಲಿ ನೋಂದಾಯಿತ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ರಮೂಸೌ–ರಾರಾ ನಗರ ವಿಭಾಗದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಸೇರಿದಂತೆ ಆರ್ಟೀರಿಯಲ್ ಹಾಗೂ ಸಬ್–ಆರ್ಟೀರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ. **ಟೆಂಡರ್‌ಗಿಟ್ಟ ಮೊತ್ತ: ರೂ.83.85 ಲಕ್ಷಗಳು. ಇಎಂಡಿ:** ರೂ.1,68,000/–. **ಪೂರ್ಣಗೊಳಿಸುವ ಕಾಲಾವಧಿ:** 12 ತಿಂಗಳು (ಮಳೆಗಾಲ ಸೇರಿದಂತೆ).
2	ರಮೂಸೌ–ರಾರಾ ನಗರ ವಿಭಾಗದ ಯಶವಂತಪುರ ವಿಧಾನಸಭಾ ಕ್ಷೇತ್ರದ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಸೇರಿದಂತೆ ಆರ್ಟೀರಿಯಲ್ ಹಾಗೂ ಸಬ್–ಆರ್ಟೀರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ. **ಟೆಂಡರ್‌ಗಿಟ್ಟ ಮೊತ್ತ: ರೂ.83.85 ಲಕ್ಷಗಳು. ಇಎಂಡಿ:** ರೂ.1,68,000/–. **ಪೂರ್ಣಗೊಳಿಸುವ ಕಾಲಾವಧಿ:** 12 ತಿಂಗಳು (ಮಳೆಗಾಲ ಸೇರಿದಂತೆ).

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದೊರೆಯುವ ದಿನಾಂಕ: **07.04.2025ರಿಂದ.** (2) ಪ್ರಶ್ನಾವಳಿಗಳು: **11.04.2025ಕ್ಕೂ ಮುಂಚಿತವಾಗಿ.** (3) ಪೂರ್ವಭಾವಿ ಸಭೆ ದಿನಾಂಕ: **11.04.2025ರ ಮಧ್ಯಾಹ್ನ 3:30 ಗಂಟೆಗೆ.** (4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ: **19.04.2025 ರ ಸಂಜೆ 4:00 ಗಂಟೆಯವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **21.04.2025 ರ ಸಂಜೆ 4:30 ಗಂಟೆಗೆ.** (6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಮೌಲ್ಯಮಾಪನದ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಮೂಸೌ–ರಾರಾ ನಗರ ವಿಭಾಗ, ಬೃಬೆಂಮಪಾ

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/56/2024–25 ದಿನಾಂಕ: 04–04–2025

ಸಾರ್ವಜನಿಕ ಪ್ರಕಟಣೆ

ವಿಷಯ: **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.**

ಮಾಲೀಕರಾದ **ಶ್ರೀಮತಿ ವಿ. ಅಮುದ ಕೋಂ ವಿ.ಸಿ. ವಿಜಯ್ ಕುಮಾರ್** ಇವರು ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಗೊಣಕನಹಳ್ಳಿ ಗ್ರಾಮದ ಸ.ನಂ. 114 ರಲ್ಲಿನ 02 ಎಕರೆ 14 ಗುಂಟೆ, ಸ.ನಂ. 117 ರಲ್ಲಿನ 02 ಎಕರೆ, ಸ.ನಂ. 118 ರ ಪೈಕಿ 01 ಎಕರೆ, ಸ.ನಂ. 119 ರಲ್ಲಿನ 02 ಎಕರೆ, ಸ.ನಂ. 120 ರಲ್ಲಿನ 02 ಎಕರೆ ಮತ್ತು ಸ.ನಂ. 121 ರಲ್ಲಿನ 02 ಎಕರೆ ಒಟ್ಟು 11 ಎಕರೆ 14 ಗುಂಟೆ ವಿಸ್ತೀರ್ಣದ ಜಮೀನುಗಳನ್ನು **"ಕೃಷಿ ವಲಯದಿಂದ ಕೈಗಾರಿಕಾ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ಕೈಗಾರಿಕೆ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ಕೈಗಾರಿಕಾ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ವಾಸಾಸಂಇ/ವಾ.ಪ್ರ/94/ಅಡ್ವಟೋರ್/2025–26

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್/ಸಿಆರ್–01/2024–25 ದಿನಾಂಕ:04.04.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025–26 ನೇ ಸಾಲಿನಲ್ಲಿ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಮಾನ್ಸೂನ್ ನೆಡುತೋಪು ರಚನೆ" ಕಾಮಗಾರಿ ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024–25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:19.04.2025 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/18/04/21

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್ (ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ ಯೋಜನೆ), ಕೊಪ್ಪಳ

ಸಂ:ಜಿಪಂಕೊ/ಅದಾ/PM POSHAN/ಆಧಾಸಾ/20/2024–25/04/2025–26 ದಿನಾಂಕ: 05.04.2025

ಅಲ್ಪಾವಧಿ ಟೆಂಡರ್ ಇ–ಪ್ರಕ್ಯೂರಮೆಂಟ್

2025–26 ನೇ ಸಾಲಿಗಾಗಿ ಕೊಪ್ಪಳ ಜಿಲ್ಲಾ ಪಂಚಾಯತ್ ಕೊಪ್ಪಳ, ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ ಯೋಜನೆ ಶಾಲೆಗಳಿಗೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಆಹಾರ ಧಾನ್ಯಗಳನ್ನು ಆಯಾ ತಾಲ್ಲೂಕಿನ KFCSC ಗೋದಾಮುಗಳಿಂದ ತಾಲೂಕಿನ ಸರ್ಕಾರಿ/ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯಗಳನ್ನು ಸಾಗಾಣಿಕೆ ಮಾಡಲು (ಪ್ರತ್ಯೇಕವಾಗಿ) ಅರ್ಹ ಸಾಗಾಣಿದಾರರಿಂದ ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸುವ ಅವಧಿ ದಿನಾಂಕ : **02.04.2025** ರಿಂದ ದಿನಾಂಕ : **16–04–2025** ರವರೆಗೆ ಇದ್ದು ಆಸಕ್ತಿಯುಳ್ಳ ಟೆಂಡರ್ ದಾರರು https://www.kppp.karnataka.gov.in ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಲಾಗಿದೆ. (ಟೆಂಡರ್ ಅಂದಾಜು ಮೊತ್ತ – **80.00 ಲಕ್ಷ** ನಾಲ್ಕು ತಾಲ್ಲೂಕುಗಳು ಸೇರಿ)

ಸಹಿ/– ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ
ಜಿಲ್ಲಾ ಪಂಚಾಯತ್ ಕೊಪ್ಪಳ

ವಾ.ಸಾ.ಇ/ಕೊಪ್ಪಳ/13/ದೇಶಪಾಂಡೆಪಬ್ಲಿಸಿಟಿ/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
CHAMUNDESHWARI ELECTRICITY SUPPLY CORPORATION LIMITED

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ,
ಚಾವಿಸನಿನಿ, ಮೈಸೂರು
Telephone No: 9448994705

(A Government of Karnataka Undertaking)
Corporate Office, Procurement Section,
CESC, Mysuru-570017.
Website: www.cescmysore.karnataka.gov.in
E-mail ID: gmit@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಸ.ಪ್ರ.ವ್ಯ(ಖ–2)2025–26/643 ದಿನಾಂಕ : 04.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿ ವತಿಯಿಂದ ಅರ್ಹ ಬಿಡುದಾರರಿಂದ ಈ ಕೆಳಕಂಡ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡನ್ನು ಆಹ್ವಾನಿಸಿದೆ.

ಕ್ರ.ಸಂ	ಸಾಮಾಗ್ರಿಗಳ ವಿವರ	ವಿಚಾರಣೆ ಸಂಖ್ಯೆ/ ದಿನಾಂಕ
1.	ಚಾವಿಸನಿನಿಗೆ ಟ್ರಕ್ ಮೌಂಟೆಡ್ ಕ್ರೇನ್‌ಗಳನ್ನು ಸರಬರಾಜು ಮಾಡಲು	ಸಿ2–6185/01–04–2025
2.	ಚಾವಿಸನಿನಿಗೆ ಮಿನಿ ಹಾಯಿಸ್ಟ್ ಕ್ರೇನ್‌ಗಳನ್ನು ಸರಬರಾಜು ಮಾಡಲು	ಸಿ2–6185/01–04–2025

ಟೆಂಡರ್‌ನಲ್ಲಿ ವಿವರಗಳನ್ನು ಹೆಚ್ಚಿನ ವೆಬ್‌ಸೈಟ್ ಬಗ್ಗೆ ಭಾಗವಹಿಸುವ https://kppp.karnataka.gov.in ನಲ್ಲಿ ದಿನಾಂಕ : 10.04.2025ರ ನಂತರ ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾವಿಸನಿನಿ, ಮೈಸೂರು

DIPR-DD-MYS/35/KSMCA-026/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU–349/59/2024–25 ದಿನಾಂಕ: 05.04.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ–2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s. Nambiar Ensemble Commercial Projects LLP GPA Holder for Anitha N & Others	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	255/1	1–06	ವ್ಯವಸಾಯ ವಲಯ	ವಾಣಿಜ್ಯ
2					256/2	2–17		
					ಒಟ್ಟು	3–23 ಗುಂ		

ಷರಾ: ಅರ್ಜಿದಾರರು ಈ ಜಮೀನುಗಳಲ್ಲಿ ವಾಣಿಜ್ಯ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ಜಮೀನಿನಲ್ಲಿ ವಾಣಿಜ್ಯ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಜಮೀನಿನಲ್ಲಿ ವಾಣಿಜ್ಯ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ಉದ್ಯಾವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-348/62/2024–25 ದಿನಾಂಕ:05/04/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೇ ನಂ:	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋರಿರುವ ಭೂ ಉಪಯೋಗ:
1	ಶ್ರೀ ಎಂ.ಎಸ್. ನಟರಾಜ್ ಮತ್ತು ಇತರರು ಹಾಗೂ ಶ್ರೀ ವೇಲುಸ್ವಾಮಿ ಮತ್ತು ಇತರರ ಪರವಾಗಿ M/s Ensemble Residential Projects LLP Rep by its Authorised signatory Bindu.G	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	126/2	1–00	ವ್ಯವಸಾಯ ವಲಯ	ವಸತಿ
2					126/3	1–02		
3					135	3–35		
4					136/1	1–00		
5					138	3–20		
6					139	4–06		
7					153/1	1–08		
8					156/5ರ ಪೈಕಿ	1–14		
9					156/6	0–09		
10					157/3	0–12		
11					157/11ರ ಪೈಕಿ	0–15		
12					242	1–10		
13					254ರ ಪೈಕಿ	1–10		
					ಒಟ್ಟು	20-21		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ಜಮೀನಿನಲ್ಲಿ ವಾಸದ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಜಮೀನಿನಲ್ಲಿ ವಾಸದ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಾಸದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಟ್ವೀಟಾ-ಖಾರಾ

ಕಾಂಗ್ರೆಸ್ ಕರ್ನಾಟಕ

ಹುಬ್ಬಳ್ಳಿ ವಿಮಾನ ನಿಲ್ದಾಣ ಸೇರಿದಂತೆ ದೇಶದ 11 ವಿಮಾನ ನಿಲ್ದಾಣಗಳ ಖಾಸಗೀಕರಣಕ್ಕೆ ಮುಂದಾದ ಕೇಂದ್ರ ಬಿಜೆಪಿ ಸರಕಾರ. ಶ್ರೀಮಂತ ಗೆಳೆಯರಿಗೆ ಲಾಭ ಮಾಡಿಕೊಡಲು ಸರಕಾರಿ ಸಂಸ್ಥೆಗಳು, ಸ್ವತ್ತುಗಳನ್ನು ಖಾಸಗೀಕರಣದ ಹೆಸರಿನಲ್ಲಿ ಹಸ್ತಾಂತರಿಸುತ್ತಿರುವ ಮೋದಿ ಸರಕಾರ.

ಮಯೂರ

ಖಾಸಗೀಕರಣ ಮಾಡೋದು ತುಂಬಾ ಒಳ್ಳೆಯದು. ಇಲ್ಲದೆ ಹೋದರೆ ಬರೀ ಲಂಚ ಬಾಕ ಸರಕಾರಿ ಕಚೇರಿಗಳ ರೀತಿ ಕಳ್ಳ ಸಾಗಾಣಿಕೆಗಳು ಎಗ್ಗಿಲ್ಲದೆ ನಡೆಯುವ ಸ್ಥಳವಾಗಿ ಮಾರ್ಪಟ್ಟರೂ ಆಶ್ಚರ್ಯ ಪಡಬೇಕಿಲ್ಲ. ಕೇಂದ್ರ ಸರಕಾರಕ್ಕೆ ಧನ್ಯವಾದಗಳು.

ಮಾನವೀಯ ನೆಲೆಗಟ್ಟಿನಲ್ಲಿ ವೇತನ ನೀಡಿ ಎಂದು ಉದ್ಯೋಗದಾತರರಿಗೆ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಮನವಿ

ಉದ್ಯೋಗ ನೀಡುವ ಜತೆಗೆ ಉತ್ತಮ ಸಂಬಳ ನೀಡಿ

ಬೆಂಗಳೂರು: ಬೃಹತ್ ಉದ್ಯೋಗ ಮೇಳಗಳಲ್ಲಿ ಕಂಪನಿಗಳು ಅರ್ಹರಿಗೆ ಉದ್ಯೋಗ ನೀಡುತ್ತಿರುವುದು ಮಹತ್ಕಾರ್ಯ. ಇದರ ಜತೆಗೆ ಉದ್ಯೋಗ ಪಡೆಯುವವರು ಉತ್ತಮ ರೀತಿನಲ್ಲಿ ಜೀವನ ಸಾಗಿಸಲು ಅನುವಾಗುವಂತೆ ಗೌರವಾನ್ವಿತ ಅಥವಾ ಉತ್ತಮ ಜೀವನ ಸಾಗಿಸಲ ಅನುವಾಗುವಂತೆ ವೇತನ ನೀಡಿ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಸಲಹೆ ನೀಡಿದ್ದಾರೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ (ಎಫ್‌ಕೆಸಿಸಿ) ವತಿಯಿದ ಸಂಸ್ಥೆಯ ಸರ್.ಎಂ.ವಿ. ಆಡಿಟೋರಿಯಂನಲ್ಲಿ ಶನಿವಾರ ಆಯೋಜಿಸಿದ್ದ ಎಫ್‌ಕೆಸಿಸಿಐ ಉದ್ಯೋಗ ಉತ್ಸವ್ 2025-26 ಉದ್ಘಾಟಿಸಿ ಮಾತನಾಡಿ, ಬೆಂಗಳೂರು, ಕಲಬುರಗಿ, ಹುಬ್ಬಳ್ಳಿ, ಬೆಳಗಾವಿ, ಮಂಗಳೂರಿನಲ್ಲಿ ಕೆಲಸಕ್ಕೆ ಹೋಗುವ ವ್ಯಕ್ತಿಗೆ ಜೀವನ ಸಾಗಿಸಲು ಕೈ ತುಂಬಾ ಸಂಬಳ ಬೇಕಾಗುತ್ತದೆ. ಒಂದು ವೇಳೆ ಸಂಬಳ ಸಿಗದಿದ್ದರೆ ಆತ ಮತ್ತೆ ತನ್ನ ಗ್ರಾಮಕ್ಕೆ ತೆರಳಿ, ನಿರುದ್ಯೋಗಿಯಾಗುವ ಸಾಧ್ಯತೆ ಇರುತ್ತದೆ. ಈ ನಿಟ್ಟಿನಲ್ಲಿ ಉದ್ಯೋಗದಾತರು ಮಾನವೀಯ ದೃಷ್ಟಿಯಿಂದಲೂ ಈ ರೀತಿಯ ಕ್ರಮಕ್ಕೆ ಚಿಂತನೆ ನಡೆಸಬೇಕು ಎಂದು ಸಲಹೆ ನೀಡಿದರು.

ಕೌಶಲ್ಯಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹಾಗೂ ರಾಜ್ಯ ಸರಕಾರದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ ಮಾತನಾಡಿ, ದೇಶದಲ್ಲಿ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡುತ್ತಿದ್ದುದರಿಂದ ಶಿಕ್ಷಣ ಮುಗಿಸಿ ಹೊರಬರುತ್ತಿ ರುವವರ ಪೈಕಿ ಶೇ. 85 ಮಂದಿಯಲ್ಲಿ ಕೌಶಲ್ಯದ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಉದ್ಯೋಗ ಮೇಳಗಳ ಮೂಲಕ ಕಂಪನಿ, ಕೈಗಾರಿಕೆಗಳಿಂದ ಬರುವ ಕೌಶಲ ಬೇಡಿಕೆ ಆಧರಿಸಿ ಕೌಶಲ್ಯಾ ಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಬೆಂಗಳೂರು ಹೊರತುಪಡಿಸಿ (ಬಿಯಾಂಡ್ ಬೆಂಗಳೂರು) ಇತರೆ ಪ್ರದೇಶಗಳಲ್ಲೂ ಕೌಶಲ್ಯಾಧರಿತ ಶಿಕ್ಷಣಕ್ಕೆ ಗಮನ ಹರಿಸಲಾಗುತ್ತಿದೆ. ಇದಕ್ಕೆ ಎಫ್ ಕೆಸಿಸಿಐ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಎಫ್ ಕೆಸಿಸಿಐ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷ ಉಮಾರೆಡ್ಡಿ, ಉಪಾಧ್ಯಕ್ಷ ಟಿ.ಸಾಯಿರಾಂ ಪ್ರಸಾದ್, ಡೆವಲಪ್ ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಒ ತೇಜಸ್ ಎನ್.ಗೌಡ, ಎಫ್ ಕೆಸಿಸಿಐ ಪದಾಧಿಕಾರಿಗಳು ಮತ್ತು ಸದಸ್ಯರು ಪಾಲ್ಗೊಂಡಿದ್ದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ (ಎಫ್‌ಕೆಸಿಸಿ) ವತಿಯಿದ ಸಂಸ್ಥೆಯ ಸರ್.ಎಂ.ವಿ. ಆಡಿಟೋರಿಯಂನಲ್ಲಿ ಶನಿವಾರ ಆಯೋಜಿಸಿದ್ದ ಎಫ್‌ಕೆಸಿಸಿಐ ಉದ್ಯೋಗ ಉತ್ಸವ್‌ದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್, ಎಫ್ ಕೆಸಿಸಿಐ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷ ಉಮಾರೆಡ್ಡಿ, ಉಪಾಧ್ಯಕ್ಷ ಟಿ.ಸಾಯಿರಾಂ ಪ್ರಸಾದ್, ಡೆವಲಪ್ ಸಂಸ್ಥೆಯ ಸಂಸ್ಥಾಪಕ ಮತ್ತು ಸಿಇಒ ತೇಜಸ್ ಎನ್.ಗೌಡ ಪಾಲ್ಗೊಂಡಿದ್ದರು.

120ಕ್ಕೂ ಹೆಚ್ಚು ಕಂಪನಿಗಳು ಭಾಗಿ

ಎಫ್ ಕೆಸಿಸಿಐ ಕೌಶಲ್ಯಾಭಿವೃದ್ಧಿ ಸಮಿತಿ ಅಧ್ಯಕ್ಷ ಅಭಿಷೇಕ್ ಬಿ.ಎ.ಮಾತನಾಡಿ, ಎಫ್ ಕೆಸಿಸಿಐ ಉದ್ಯೋಗ ಉತ್ಸವ್ ನಲ್ಲಿ 120ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದು, ಉದ್ಯೋಗಾಂಕ್ಷಿಗಳಿಗೆ ಅವಕಾಶ ಮಾಡಿಕೊಡಲಿವೆ. ಈ ಪೈಕಿ 55 ಕಂಪನಿಗಳು ಎಫ್ ಕೆಸಿಸಿಐ ಸದಸ್ಯರದ್ದಾಗಿರುವುದು ವಿಶೇಷ. 9000 ಮಂದಿ ಇಲ್ಲಿ ನೋಂದಣಿ ಮಾಡಿಕೊಂಡಿದ್ದು,5000 ಉದ್ಯೋಗಾಂಕ್ಷಿಗಳು ಭಾಗವಹಿಸಿದ್ದಾರೆ. ಬ್ಯಾಂಕಿಂಗ್, ಸೇವಾ ವಲಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಕೊಡಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದರು.

ವಿದೇಶದಲ್ಲಿ ಉದ್ಯೋಗ

ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಸರಕಾರದ ವತಿಯಿಂದ ರಾಜ್ಯದ ವಿವಿಧೆಡೆ ಉದ್ಯೋಗ ಮೇಳಗಳನ್ನು ಆಯೋ ಜಿಸುವುದರ ಜತೆಗೆ ಆರೋಗ್ಯ ವೃತ್ತಿಪರರಿಗಾಗಿ ಸಾಗರೋತ್ತರ ಉದ್ಯೋಗ ಮೇಳ ಆಯೋಜಿಸಲು ನಿರ್ಧರಿಸ ಲಾಗಿದೆ. ಜರ್ಮನಿ, ಜಪಾನ್, ಇಟಲಿ ಮತ್ತಿತರ ರಾಷ್ಟ್ರಗಳಿಂದ ನರ್ಸ್, ಅರೆ ವೈದ್ಯಕೀಯ ಮುಂತಾದ ಆರೋಗ್ಯ ವೃತ್ತಿಪರರಿಗೆ ಸಾಕಷ್ಟು ಬೇಡಿಕೆ ಇದೆ. ಹೀಗಾಗಿ ಮುಂದಿನ ಮೂರು ತಿಂಗಳಲ್ಲಿ ಈ ಆರೋಗ್ಯ ವೃತ್ತಿಪರರಿಗಾಗಿಯೇ ಸಾಗರೋತ್ತರ ಉದ್ಯೋಗ ಮೇಳವನ್ನು ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಆಯೋಜಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಹೇಳಿದರು.

ರಾಜ್ಯದ ಆರೋಗ್ಯ ವೃತ್ತಿಪರರಿಗೆ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆ ಇದ್ದರೂ ಭಾಷೆ ಎಂಬುದು ಅವರಿಗೆ ಅಡ್ಡಿಯಾಗುತ್ತಿದೆ. ಹೀಗಾಗಿ ರಾಜ್ಯದ ನರ್ಸಿಂಗ್ ಕಾಲೇಜುಗಳಲ್ಲಿ ಜರ್ಮನ್ ಮತ್ತು ಜಾಪಾನೀಸ್ ಭಾಷೆಯನ್ನು ಪರಿಚಯಿಸಲು ಕೂಡ ನಿರ್ಧರಿಸಲಾಗಿದೆ. ಆ ಮೂಲಕ ಭಾಷಾ ಸಮಸ್ಯೆ ಬಗೆಹರಿಸಲಾಗುವುದು.

-ಡಾ. ಶರಣ್ ಪ್ರಕಾಶ್ ಪಾಟೀಲ್, ಸಚಿವ

ಸಮಾಚಾರ ಸಣ್ಣದಲ್ಲ

ಚಂಡಿಕಾ ಹೋಮ: 1.77 ಕೋಟಿ ಆದಾಯ

ಉಡುಪಿ: ದಕ್ಷಿಣ ಭಾರತಾದ್ಯಂತ ಭಕ್ತರನ್ನು ಹೊಂದಿರುವ ಕೊಲ್ಲೂರಿನ ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಚಂಡಿಕಾ ಹೋಮದಂದಲೇ ವಾರ್ಷಿಕ

1.77 ಕೋಟಿ ರು. ಆದಾಯ ಬಂದಿದೆ. ದೇಗುಲದ ಆದಾಯವು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದ್ದು, 2024-25ನೇ ಸಾಲಿನಲ್ಲಿ 71 ಕೋಟಿ ರು. ದಾಟಿದೆ. ಇದು ಕಳೆದ ವರ್ಷಕ್ಕಿಂತ 3 ಕೋಟಿ ರು. ಹೆಚ್ಚು. ಹುಂಡಿಯಲ್ಲಿ ಕಾಣಿಕೆ ರೂಪದಲ್ಲಿ ಸಂಗ್ರಹವಾದ ನಗದು ಹಾಗೂ ಚಿನ್ನಾಭರಣ, ಚಂಡಿಕಾ ಹೋಮ ಸೇರಿ ವಿವಿಧ ಪೂಜೆಗಳಿಂದ ಬರುವ ಆದಾಯ, ನಿತ್ಯ ಪೂಜೆ, ಆನ್‌ಲೈನ್ ಪೂಜೆಗಳ ಆದಾಯವನ್ನು ಇದು ಒಳಗೊಂಡಿದೆ. ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವನ್ನು ಹೊರತುಪಡಿಸಿದರೆ ಕೊಲ್ಲೂರು ರಾಜ್ಯದಲ್ಲೇ ಅತಿ ಹೆಚ್ಚು ಆದಾಯವಿರುವ ಕ್ಷೇತ್ರ.

ಯತ್ನಾಳ್ ಹೊಸ ಪಕ್ಷ ಕಟ್ಟಲು ಬಿಡಲ್ಲ

ದಾವಣಗೆರೆ: ಪಕ್ಷದಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷಕ್ಕೆ ಮರಳಿ ಕರೆತರುತ್ತೇವೆಯೇ ಹೊರತು ಹೊಸ ಪಕ್ಷ ಕಟ್ಟಲು ಬಿಡುವುದಿಲ್ಲ. ನಮ್ಮ ಪ್ರಯತ್ನವನ್ನೂ ಮೀರಿ ಹೊಸ ಪಕ್ಷ ಕಟ್ಟಿದರೆ ನಾವು ಬಿಜೆಪಿಯಲ್ಲೇ ಇರಲು ನಿರ್ಧರಿಸಿದ್ದೇವೆ ಎಂದು ಶಾಸಕ ಬಿ.ಪಿ.ಹರೀಶ್, ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಈಗಲೂ ಯತ್ನಾಳ ಅವರೇ ನಮ್ಮ ನಾಯಕ. ಅವರು ಹೊಸ ಪಕ್ಷ ಕಟ್ಟುತ್ತಾರೆ ಎಂಬುದು ಮಾಧ್ಯಮಗಳ ಸೃಷ್ಟಿ. ಪಕ್ಷ ಕಟ್ಟುವ ಆಲೋಚನೆ ಇಲ್ಲ ಎಂಬುದನ್ನು ನಮ್ಮ ತಂಡಕ್ಕೆ ಸ್ಪಷ್ಟಪಡಿಸಿದ್ದಾರೆ. ಅವರನ್ನು ಪಕ್ಷಕ್ಕೆ ಮರಳಿ ಕರೆತರಲು ದೆಹಲಿಗೆ ನಿಯೋಗ ತೆರಳಲಿದ್ದೇವೆ ಎಂದು ತಿಳಿಸಿದರು. 2028ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಯತ್ನಾಳ್ ನಾಯಕತ್ವದ ಅಗತ್ಯವಿದೆ. ಉತ್ತರ ಕರ್ನಾಟಕ ಸೇರಿ ರಾಜ್ಯದ ಎಲ್ಲೆಡೆ ಅವರಿಗೆ ಜನಬೆಂಬಲವಿದೆ. ಅವರು ಬಿಜೆಪಿಗೆ ಮರಳುವುದು ನಿಶ್ಚಿತ ಎಂದು ಹೇಳಿದರು.

ಅಣ್ಣಾಮಲೈಗೆ ಬಿಜೆಪಿ ಮೋಸ: ತಂಗಡಗಿ

ಕೊಪ್ಪಳ: ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಕಪ್ಪು ಹಣ ತರುವುದಾಗಿ ಹೇಳಿದ್ದರು ತಂದರಾ? 15 ಲಕ್ಷ ಕೊಡುವುದಾಗಿ ಹೇಳಿದ್ದರು, ಆದರೆ ಕೊಟ್ಟರಾ? ಅವರು ಜನರಿಗೆ ಎಷ್ಟು ಮೋಸ ಮಾಡಬೇಕು ಅಷ್ಟು ಮಾಡಿದ್ದಾರೆ. ಅಣ್ಣಾಮಲೈ ಪೊಲೀಸ್ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡಿಕೊಂಡು ಇದ್ದರು. ಅವರನ್ನು ಬಿಜೆಪಿಗೆ ಕರ್ಕೊಂಡು ಹೋಗಿ ಮೋಸ ಮಾಡಿದರು ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಣ್ಣಾಮಲೈ ಬಾರುಕೋಲು ತಗೊಂಡು ಬಡ್ಕೊಂಡರು. ಅವರನ್ನು ಉಪಯೋಗ ಮಾಡಿಕೊಂಡು ಬಿಸಾಡಿದ್ದರು. ಬಿಜೆಪಿ ಅವರು ಇದನ್ನೇ ಮಾಡಿಕೊಂಡು ಬರುತ್ತಿದ್ದಾರೆ. ಬಿಜೆಪಿಯವರು ನನ್ನನ್ನು ಕರ್ಕೊಂಡು ಹೋಗಿದ್ದರು. ಅವರು ನಮಗೇನು ಕೊಟ್ಟರೆನ್ನುವುದು ಗೊತ್ತಿದೆ? ಬಿಪಿ, ಶುಗರ್ ಬರುವ ಖಾತೆಯನ್ನು ಕೊಟ್ಟಿದ್ದು, ಅಮೇಲೆ ಬಳಸಿಕೊಂಡು ಬಿಸಾಡಿದರು ಎಂದರು.

ವಕ್ಫ್ ವಿಚಾರದಲ್ಲಿ ಕೇಂದ್ರ ದಬ್ಬಾಳಿಕೆ

ಮಂಗಳೂರು: ಕೇಂದ್ರ ಸರಕಾರ ಅಂಗೀಕರಿಸಿರುವ ವಕ್ಫ್ ತಿದ್ದುಪಡಿ ಮಸೂದೆ ಸಂವಿಧಾನ ವಿರೋಧಿಯಾಗಿದ್ದು, ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ. ಯಾರನ್ನೂ ಗಮನಕ್ಕೆ ತೆಗೆದುಕೊಳ್ಳದೆ ಕೇಂದ್ರ ಸರಕಾರ ವಕ್ಫ್ ವಿಚಾರದಲ್ಲಿ ದಬ್ಬಾಳಿಕೆ ನಡೆಸುತ್ತಿದೆ ಎಂದು ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರಕಾರದ ವಕ್ ತಿದ್ದುಪಡಿ ಮಸೂದೆ ಜಾರಿ ವಿಚಾರದಲ್ಲಿ ವಕ್ಫ್‌ನಲ್ಲೇ ತಪ್ಪಾಗಿದ್ದರೆ ಅಥವಾ ಭೂಮಿದುರುಪಯೋಗ ಆಗಿದ್ದರೆ ಸರಿ, ಆದರೆ ಕಾನೂನಿಗೆ ಅದಕ್ಕೂ ಸಂಬಂಧ ಇಲ್ಲ. ಈ ಕಾನೂನು ಸಂವಿಧಾನ ವಿರೋಧಿಯಾಗಿದೆ. ವಕ್ಫ್ ವಿಚಾರ ಸೂಕ್ಷ್ಮವಾಗಿದ್ದು, ಇದರಲ್ಲಿ ದ್ವೇಷ ಸಾಧಿಸುವಂಥದ್ದು ಸರಿಯಲ್ಲ ಎಂದರು.

ಸವದತ್ತಿ ಯಲ್ಲಮ್ಮ ಗುಡ್ಡ ಅಭಿವೃದ್ಧಿಗೆ ಯೋಜನೆ

ಬೆಂಗಳೂರು: ಉತ್ತರ ಕರ್ನಾಟಕದ ಪ್ರಮುಖ ಶ್ರದ್ಧಾಕೇಂದ್ರ ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ ಭಕ್ತರ ಅನುಕೂಲಕ್ಕಾಗಿ ಮೂಲಸೌಕರ್ಯ ಕಲ್ಪಿಸುವ ಸಮಗ್ರ ಯೋಜನೆ ಸಿದ್ಧಗೊಂಡಿದ್ದು, ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲು ಪ್ರವಾಸೋದ್ಯಮ ಸಚಿವ ಎಚ್..ಕೆ ಪಾಟೀಲ ತಿಳಿಸಿದರು.

ಭಕ್ತರ ಅನುಕೂಲಕ್ಕಾಗಿ ಮೂಲಸೌಕರ್ಯ ಕಲ್ಪಿಸಲು ಬದ್ಧ

ರೇಣುಕಾ ಯಲ್ಲಮ್ಮ ಕ್ಷೇತ್ರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ರಾಜ್ಯಮಟ್ಟದ ಸಮಿತಿಯ ಸಭೆ ಉದ್ದೇಶಿಸಿ ಮಾತನಾಡಿ, ಪ್ರಸ್ತುತ ಸರಕಾರ ಅಧಿಕಾರಕ್ಕೆ ಬಂದಮೇಲೆ ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ ಸಮಗ್ರ ಅಭಿವೃದ್ಧಿಯ ಬದ್ಧತೆ ಪ್ರಕಟಿಸಲಾಗಿತ್ತು. ಭಾರತ ಹುಣ್ಣಿಮೆಯ ಸಂದರ್ಭದಲ್ಲಿ ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ ಬದಲಾವಣೆ ಕಾಣುತ್ತೇವೆ ಎಂಬುದು ಭಕ್ತರಿಗೆ ವಿಧಿತವಾಯಿತು. ಕಳೆದ ಭಾರತ ಹುಣ್ಣಿಮೆ ಸಂದರ್ಭದಲ್ಲಿ 3 ಲಕ್ಷ ಭಕ್ತರಿಗೆ ಮಜ್ಜಿಗೆ ದಾಸೋಹ ಕೈಗೊಂಡಿದ್ದು, ಭಕ್ತರನ್ನು ಸರಕಾರ ಕಾಳಜಿ ಮಾಡುತ್ತಿದೆ ಎಂಬ ಭಾವನೆ ಮೂಡಿತು ಎಂದರು. ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ, ತಿರುಪತಿ ಮಾದರಿಯಲ್ಲಿ ಕ್ಯೂ ಕಾಂಪ್ಲೆಕ್ಸ್ ಉಳಿದುಕೊಳ್ಳಲು ವ್ಯವಸ್ಥೆ, ಚಕ್ಕಡಿ ಕಟ್ಟಿಕೊಂಡು ಬರುವವರಿಗೆ ಪಶು ಆಹಾರಕ್ಕಾಗಿ ಮೇವು ದಾಸೋಹ, ರಿಂಗ್ ರಸ್ತೆ, ವಯಸ್ಸಾದವರಿಗೆ ದರ್ಶನಕ್ಕೆ ವ್ಯವಸ್ಥೆ ಮುಂತಾದವು ಸೇರಿದಂತೆ ಎಲ್ಲಾ ಮೂಲಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸವದತ್ತಿ ಶಾಸಕ ವಿಶ್ವಾಸ ವೈದ್ಯ, ಪ್ರವಾಸೋದ್ಯಮ ಕಾರ್ಯದರ್ಶಿ ಸಲ್ಮಾ ಫಾಹೀಮ್, ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಟಿ.ವೆಂಕಟೇಶ, ಬೆಳಗಾವಿ ಜಿಲ್ಲಾಧಿಕಾರಿ ರೋಶನ್ ಮುಂತಾದ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನೇಮಕಾತಿ ವಿಚಾರವಾಗಿ ಮೋಸ ಹೋಗಬೇಡಿ

ಇಲಾಖೆಯಲ್ಲಿ ಯಾವುದೇ ನೇಮಕ ಇಲ್ಲ: ಹೆಬ್ಬಾಳ್ಕರ್

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ನೇಮಕಾತಿ ವಿಚಾರವಾಗಿ

ಕೆಲವರು ಹಣ ವಸೂಲು ಮಾಡುತ್ತಿರುವ ಕುರಿತು ದೂರುಗಳು ಕೇಳಿ ಬಂದಿದ್ದು, ಯಾರೂ ಮೋಸ ಹೋಗಬಾರದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ನೇಮಕಾತಿ ವಿಚಾರವಾಗಿ ಮೋಸ ಹೋಗುವ ಪ್ರಕರಣಗಳು ಹೆಚ್ಚುತ್ತಿದೆ. ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ನೇಮಕಾತಿ ವಿಚಾರವಾಗಿ ಸಾರ್ವಜನಿಕರಿಂದ ಕೆಲವು ಅನಾಮಧೇಯ ವ್ಯಕ್ತಿಗಳು ಹಣ ವಸೂಲು ಮಾಡುತ್ತಿರುವ ಬಗ್ಗೆ ಹಲವು ದೂರು ಕೇಳಿಬಂದಿದೆ. ಈ ಕುರಿತು ಪ್ರಸ್ತುತ ಸಾಕ್ಷ್ಯಾಧಾರಗಳು ಸಹ ಲಭ್ಯವಾಗಿವೆ. ಈ ಕುರಿತು ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಗೆ ಸಾಕ್ಷ್ಯಾಧಾರ ಸಮೇತ ದೂರು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಪ್ರಸ್ತುತ ಯಾವುದೇ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲಿರುವುದಿಲ್ಲ. ಹಾಗೇನಾದರೂ ನೇಮಕಾತಿ ಇದ್ದಲ್ಲಿ ಸಕ್ಷಮ ಪ್ರಾಧಿಕಾರದ ಮೂಲಕವೇ ನೇಮಕಾತಿ ಪ್ರಕ್ರಿಯೆ ಪಾರದರ್ಶಕವಾಗಿ ನಡೆಸಲಾಗುವುದು. ಸಾರ್ವಜನಿಕರು ಯಾವುದೇ ನೇಮಕಾತಿ ಆಮಿಷಕ್ಕೆ ಒಳಗಾಗದೇ, ಯಾವುದೇ ಮಧ್ಯವರ್ತಿ ತಮ್ಮನ್ನು ನೇಮಕಾತಿ ಕುರಿತು ಸಂಪರ್ಕಿಸಿದಲ್ಲಿ ಕೂಡಲೇ ಹತ್ತಿರದ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಬೇಕು ಎಂದು ಸಚಿವೆ ಕೋರಿದ್ದಾರೆ.

ಸತತ 27 ವರ್ಷಗಳಿಂದ ವಿದ್ಯುತ್ ಉತ್ಪಾದನೆ

ಕೈಗಾದ ಅಣು ವಿದ್ಯುತ್ ಸ್ಥಾವರ: ಮೊದಲ ಘಟಕ ಕಾರ್ಯ ಸ್ಥಗಿತ

ಉತ್ತರ ಕನ್ನಡ: ಜಿಲ್ಲೆಯ ಕಾರವಾರ ತಾಲೂಕಿನ ಕೈಗಾ ಅಣು ಸ್ಥಾವರದಲ್ಲಿ ಸತತ 27 ವರ್ಷಗಳಿಂದ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದ ಘಟಕ-1 ತನ್ನ ಕಾರ್ಯ ಚಟುವಟಿಕೆಯನ್ನು ಸ್ಥಗಿತ ಮಾಡಿದ್ದು, 2018ರ ಡಿಸೆಂಬರ್ 10 ರಂದು ಸತತ 962 ದಿನ ವಿದ್ಯುತ್ ಉತ್ಪಾದಿಸುವ ಮೂಲಕ ಇಂಗ್ಲೆಂಡ್‌ನ ಹೇಶಮ್ ಅಣುಸ್ಥಾವರದ ದಾಖಲೆಯನ್ನು ಅಳಿಸಿ ವಿಶ್ವ ದಾಖಲೆ ಬರೆದಿದ್ದ ಕೈಗಾದ ಘಟಕ -1 ಅಣು ವಿದ್ಯುತ್ ಸ್ಥಾವರಕ್ಕೆ ಶೀತಕ ಕೊಳವೆ ಮರು ಅಳವಡಿಸುವ ಕಾರಣದಿಂದ ಸ್ಥಗಿತ ಮಾಡಲಾಗಿದೆ. ಸ್ಥಾವರದ ಮೊದಲ ಘಟಕದಲ್ಲಿ ಅಣು ಶಕ್ತಿ ಉತ್ಪಾದನೆಗೆ ಯುರೇನಿಯಂ ಬಂಡಲ್‌ಗಳನ್ನು ರವಾನಿಸುವ ಮತ್ತು ಸ್ಥಾವರದಲ್ಲಿ ತಾಪಮಾನ ನಿಯಂತ್ರಿಸುವ 306 ಕೊಳವೆಗಳಿವೆ. ಅಧಿಕ ತಾಪಮಾನದಿಂದ ಅವು ಬಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ನಿಗದಿತ ಅವಧಿಗೆ ಅವುಗಳನ್ನು ಬದಲಿಸಿ, ಹೊಸದು ಅಳವಡಿಸಬೇಕಿದೆ. ಪ್ರತಿ 25 ರಿಂದ 30 ವರ್ಷಕ್ಕೊಮ್ಮೆ ಈ ಪ್ರಕ್ರಿಯೆ ನಡೆ

ಯುತ್ತದೆ. ಸ್ಥಾವರದಲ್ಲಿ ಶೀತಕ ಕೊಳವೆಗಳ ಜತೆಗೆ ಅದರಲ್ಲಿನ ಇನ್ನಿತರ ಯಂತ್ರೋಪಕರಣ ಪರಿಶೀಲಿಸಿ ದುರಸ್ತಿ ಪಡಿಸಲಾಗುತ್ತದೆ. ಪ್ರಕ್ರಿಯೆ ಪೂರ್ಣಗೊಳ್ಳಲು ಒಂದು ವರ್ಷಕ್ಕಿಂತ ಹೆಚ್ಚು ಅವಧಿ ತಗುಲುತಿದ್ದು ಇನ್ನು ಒಂದು ವರ್ಷಗಳ ಕಾಲ 220 ಮೆಗಾ ವ್ಯಾಟ್ ಉತ್ಪಾದಿಸುತಿದ್ದ ಈ ಘಟಕ ಉತ್ಪಾದನೆ ಕೊರತೆ ಎದುರಿಸಲಿದೆ. ಸದ್ಯ ಕೈಗಾದಲ್ಲಿ ನಾಲ್ಕು ಅಣು ವಿದ್ಯುತ್ ಘಟಕಗಳಿದ್ದು ,5 ಮತ್ತು 6 ನೇ ಘಟಕಗಳು ನಿರ್ಮಾಣ ಹಂತದಲ್ಲಿ ಪರಿಸರ ವಾದಿಗಳ ವಿರೋಧ ಎದುರಿಸುತ್ತಿದೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಯಡೆಯೂರು ಸಿದ್ಧಲಿಂಗೇಶ್ವರ ಸ್ವಾಮಿಯ ರಥೋತ್ಸವ ಶನಿವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ಶಾಸಕರ ಲೊಕೇಶನ್ ತೆಗೆಸುತ್ತಿರುವ ವಿಚಾರ ಗೊತ್ತಿಲ್ಲ

ಲೊಕೇಶನ್ ಟ್ರ್ಯಾಕ್: ಕಾನೂನು ಕ್ರಮ

ರಾಯಚೂರು: ಶಾಸಕರ ಲೊಕೇಶನ್ ತೆಗೆಸುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಯಾರೇ ಆಗಲಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಅಂದ್ರೆ ಮೊದಲು ದೂರು ನೀಡಲಿ. ಆ ಮೇಲೆ ತಪ್ಪಿತಸ್ಥರಿಗೆ

ಕಾನೂನು ಪ್ರಕಾರ ಶಿಕ್ಷೆಯಾಗುತ್ತೆ ಎಂದು ಸಣ್ಣ ನೀರಾವರಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ ಎನ್. ಎಸ್. ಬೋಸರಾಜು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ರಾಯಚೂರು ನಗರದ ಬಿಜೆಪಿ ಶಾಸಕ ಡಾ. ಶಿವರಾಜ್ ಪಾಟೀಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯನವರ ಮುಂದೆ ತಮ್ಮ ಮೊಬೈಲ್ ಲೊಕೇಶನ್ ತೆಗೆಸುತ್ತಿದ್ದಾರೆ ಎಂದು ಅಳಲು ತೊಡಿಕೊಂಡ ವಿಚಾರದ ಕುರಿತು ಪ್ರತಿಕ್ರಿಯೆ ನೀಡಿದರು. ಶಾಸಕರು ಇರಲಿ, ನಾನು ಇರಲಿ, ಸಾಮಾನ್ಯ ಜನರು ಇರಲಿ, ಏನಾದರೂ ತೊಂದರೆಯಾದರೆ ಅದಕ್ಕೆ ದೂರು ಕೊಡಬೇಕು. ಆಗ ದೂರಿನ ಮೇಲೆ ವಿಚಾರಣೆ ಮಾಡಬಹುದು. ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಕ್ಯಾಬಿನೆಟ್‌ನಲ್ಲಿ ಸಹಿ ಮಾಡಿಸಿಕೊಡುವೆ

ಏಮ್ಸ್‌ಗಾಗಿ ರಾಜ್ಯ ಸರಕಾರದಿಂದ ಸರಿಯಾಗಿ ಪ್ರಸ್ತಾವನೆ ಹೋಗಿಲ್ಲ ಎನ್ನುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನಮ್ಮ ಮುಖ್ಯಮಂತ್ರಿ ಹೆಡ್ ಆಫ್ ದಿ ಕ್ಯಾಬಿನೆಟ್. ನಾಲ್ಕು ಬಾರಿ ಸಿಎಂ ಸಿದ್ದರಾಮಯ್ಯ ಸಹಿ ಮಾಡಿ ಪತ್ರ ಕಳುಹಿಸಿದ್ದಾರೆ. ಬಿಜೆಪಿಯವರಿಗೆ ನಾಲಿಗೆ ಸರಿಯಿಲ್ಲ. ಏನ್ ಮಾತನಾಡುತ್ತಾರೋ ಅವರಿಗೆ ಗೊತ್ತಿಲ್ಲ. ಜನರಿಗೆ ಮತ್ತು ಸಿಸ್ಟಮ್‌ಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಾರೆ. ನಾಳೆ ಯೇ ಕ್ಯಾಬಿನೆಟ್‌ನಲ್ಲಿ ಸಹಿ ಮಾಡಿಸಿಕೊಡುವೆ. ಬಿಜೆಪಿ ನಾಯಕರಿಗೆ ತಾಕತ್ ಇದ್ರೆ ಬಾ ಅಂತ ಹೇಳಿ. ಏಮ್ಸ್ ಮಾಡಿಸಿಕೊಂಡು ಬರುತ್ತಾರೋ, ತಾಖತ್ ಇದ್ರೆ ನಮ್ಮ ಎದುರಿಗೆ ಬರಬೇಕು ಎಂದು ಸಚಿವ ಎನ್. ಎಸ್. ಬೋಸರಾಜು ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಭಾವುಕರಾಗಿ ಮಾತನಾಡಿದ ಶಾಸಕ ಪೊನ್ನಣ್ಣ, ಮಂಥರ್ ಗೌಡ

ಹೆಣದ ಮೇಲೆ ಬಿಜೆಪಿ ರಾಜಕೀಯ: ಪೊನ್ನಣ್ಣ

ಮಡಿಕೇರಿ: ವಿನಯ್ ಸಾವಿನ ಸಂಬಂಧಿತ ತನಿಖೆಯನ್ನು ನಂಬದೇ ಸಾವಿನ ಪ್ರಕರಣದಲ್ಲಿಯೂ ರಾಜಕೀಯ ಮಾಡುತ್ತಿರುವ ಬಿಜೆಪಿ ಹೆಣದ ಮುಂದೆ ರಾಜಕೀಯ ಮುಂದವರಿಸಿರುವುದು ಖಂಡನೀಯ ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರರಾದ ಶಾಸಕ ಎ.ಎಸ್. ಪೊನ್ನಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಭಾವುಕರಾಗಿ ಮಾತನಾಡಿದ ಪೊನ್ನಣ್ಣ, ಕೊಡಗಿನಾದ್ಯಂತ ಇಬ್ಬರು ಶಾಸಕರ ಸಹಿಸಲಾರದೇ ಮತ್ಸರದಿಂದ ಬಿಜೆಪಿಯು ಈಗ ವಿನಯ್ ಸಾವಿನ ಪ್ರಕರಣವನ್ನು ಬಳಸಿಕೊಂಡು ರಾಜಕೀಯ ಮಾಡುತ್ತಿದೆ. ವಿನಯ್ ಸಾವಿಗೇ ಆತನನ್ನು ಸರಿಯಾಗಿ ನೋಡಿಕೊಳ್ಳದ ಬಿಜೆಪಿಯೇ ಕಾರಣವೇ ಹೊರತು ಬೇರೆ ಯಾರೂ ಅಲ್ಲ ಎಂದರು. ವಾಸ್ತವಾಂಶವನ್ನು ತಿರುಚಿ ಹೇಳಿಕೆ ನೀಡುತ್ತಿರುವ ಬಿಜೆಪಿ ನಾಯಕರು ವಿನಯ್ ಹೆಣವನ್ನು ಕೂಡ ಎತ್ತಲು ಬಿಡಲಾರೆವು ಎಂಬ ಹೇಳಿಕೆಯಿಂದ ತಮ್ಮ ಹೀನಾ ಮನಸ್ಥಿತಿಯನ್ನು ಬಹಿರಂಗಗೊಳಿಸಿದ್ದಾರೆ ಎಂದೂ ಪೊನ್ನಣ್ಣ ಟೀಕಿಸಿದರು.

ವಿನಯ್ ಕುಟುಂಬಸ್ಥರ ನೋವಿಗೆ ದನಿಯಾಗದ ಬಿಜೆಪಿ ನಾಯಕರು ಕಾಂಗ್ರೆಸ್‌ನ್ನು ಮತ್ತು ತಮ್ಮಿಬ್ಬರನ್ನು ಬೊಬ್ಬಿರಿದು ಟೀಕಿಸಿ ಸ್ಥಳದಿಂದ ಪಲಾಯನ ಮಾಡುವುದಕ್ಕೆ ಸೀಮಿತರಾಗಿದ್ದಾರೆ ಎಂದು ಕಿಡಿಕಾರಿದರು. ವಿನಯ್ ಸಾವಿನ ಹಿನ್ನಲೆಯಲ್ಲಿ ಕೆಲವೊಂದು ನಿಗೂಢತೆಗಳು ಅಡಗಿದ್ದು, ವಿನಯ್ ಸಾವಿನ ಸಮಯ, ವಿನಯ್ ಮಾಡಿದ್ದು ಎನ್ನಲಾದ ವಾಟ್ಸಪ್ ನಿಜವಾಗಿಯೂ ಆತನೇ ಟೈಪ್ ಮಾಡಿದ್ದೇ, ವಿನಯ್ ಸಾವಿಗೆ ನಿಜವಾದ ಕಾರಣಗಳೇನು ಎಂಬೆಲ್ಲಾ ತನಿಖೆಗಳನ್ನು ಪೊಲೀಸರು ಕೈಗೊಂಡಿದ್ದಾರೆ. ಇನ್ನು 3-4 ದಿನಗಳಲ್ಲಿ ಸಾವಿನ ಹಿಂದಿನ ನೈಜಾಂಶ ಬೆಳಕಿಗೆ ಬರಲಿದೆ. ಬಿಜೆಪಿಯ ಐಟಿ ಸೆಲ್ ಎಂಬುದೇ ವಾಸ್ತವ ವಿರೂಪಗೊಳಿಸುವ ಘಟಕವಾಗಿದ್ದು, ಹೀಗಾಗಿ ನಿಜಕ್ಕೂ ವಿನಯ್ ತಾನೇ ಸಂದೇಶ ರವಾನಿಸಿದ್ದನೇ ಎಂಬ ಬಗ್ಗೆಯೂ ತನಿಖೆಯಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಎ.ಎಸ್. ಪೊನ್ನಣ್ಣ, ಮಂಥರ್ ಗೌಡ ಮಾತನಾಡಿದರು.

ಮಾಜಿಗಳ ಹೇಳಿಕೆಗೆ ಪ್ರತಿಕ್ರಿಯೆ ಇಲ್ಲ

ಮಾಜಿ ಸಂಸದ ಪ್ರತಾಪ್ ಸಿಂಹ, ಕುಶಾಲನಗರದಲ್ಲಿ ತನ್ನ ವಿರುದ್ಧ ಮಾಡಿರುವ ಟೀಕೆಗಳಿಗೆ ಪ್ರತಿಕ್ರಿಯಿಸಿದ ಪೊನ್ನಣ್ಣ, ಸಾಮಾನ್ಯವಾಗಿ ತಾನು ಯಾವುದೇ ಮಾಜಿಗಳ ಹೇಳಿಕೆಗಳಿಗೆ ಪ್ರತಿಕ್ರಿಯಿಸಲಾರೆ. ಮಾಜಿಗಳಿಗೆ ಮಾಡಲು ಬೇರೇನೂ ಕೆಲಸವಿರುವುದಿಲ್ಲ. ರೋಲ್ ಕಾಲ್ ರಾಜಕಾರಣಿಗಳಿಗೆ ಮರ್ಯಾದೆಯೂ ಇರುವುದಿಲ್ಲ. ತಾನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರನಾಗಿ ಅವರಿಗೆ ಸಂಬಂಧಿಸಿದ ಪ್ರಕರಣಗಳನ್ನು ಸಲೀಸಾಗಿ ಗೆದ್ದು ತೋರಿಸಿದ್ದೇನೆ. ಕಾವೇರಿ ನೀರಿನ ವಿಚಾರದಲ್ಲಿಯೂ ಪರಿಣಾಮಕಾರಿಯಾಗಿ ಕಾನೂನು ಹೋರಾಟ ಮಾಡಲಾಗಿದೆ. ನನ್ನದೇ ಕಾನೂನು ಸಂಸ್ಥೆಯಿಂದ 30 ಲಕ್ಷ ರು.ಗೂ ಹೆಚ್ಚು ಅನುದಾನವನ್ನು ಸಾಮಾಜಿಕ ಕಾರ್ಯಚಟುವಟಿಕೆಗಳಿಗೆ ನೀಡಿದ್ದೇನೆ. ಹೀಗಿರುವಾಗ ನನ್ನ ವಿರುದ್ಧ ವೈಯಕ್ತಿಕ ಟೀಕೆ ಮಾಡುವವರಿಗೆ ವಾಸ್ತವಾಂಶ ತಿಳಿದಿಲ್ಲ ಎಂದು ಸುಮ್ಮನಿರುವುದೇ ಸೂಕ್ತ ಎಂದರು.

ಕಳೆದ ನವೆಂಬರ್ 25 ರಂದು ತಾನು ಕುಶಾಲನಗರ ಆಸ್ಪತ್ರೆ ಸಮಸ್ಯೆಗೆ ಸಂಬಂಧಿಸಿದಂತೆ ವಿನಯ್ ಜತೆ ವಾಟ್ಸ್ ಕಾಲ್ ನಲ್ಲಿ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಹೇಳಿದ್ದೆ. ಆತ ಯಾರೆಂದೇ ತನಗೆ ತಿಳಿದಿಲ್ಲ. ಹೀಗಿರವಾಗ ಅನವಶ್ಯಕವಾಗಿ ತನ್ನ ಹೆಸರನ್ನು ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ.

-ಡಾ.ಮಂಥರ್ ಗೌಡ, ಶಾಸಕ

ಬಸ್ಸಿನಲ್ಲಿ ಲೈಂಗಿಕ ಕಿರುಕುಳ: ಮೂವರ ವಿರುದ್ಧ ಕೇಸ್

ಹೊಸಪೇಟೆ: ಖಾಸಗಿ ಬಸ್‌ನಲ್ಲಿ ತನ್ನ ಇಬ್ಬರು ಮಕ್ಕಳೊಂದಿಗೆ ಪ್ರಯಾಣಿಸುತ್ತಿದ್ದ ದಲಿತ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ. ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದ ಬಳಿಯ ಚನ್ನಾಪುರ ಬಳಿ ಘಟನೆ ನಡೆದಿದೆ. ಬೆಳಗಾವಿಯ ಮೂಲದ ಸಂತ್ರಸ್ತೆ ಉಚ್ಚಂಗೆಮ್ಮ ದೇವಸ್ಥಾನದ ಜಾತ್ರೆಗೆ

ಬಂದಿದ್ದಳು ಮತ್ತು ಮನೆಗೆ ಮರಳಲು ಬಸ್‌ಗಾಗಿ ಕಾಯುತ್ತಿದ್ದಳು. ಈ ವೇಳೆ 10 ಪ್ರಯಾಣಿಕರಿದ್ದ ಖಾಸಗಿ ಬಸ್ ಬಂದಿತು, ಅವರೆಲ್ಲರೂ ಮುಂದಿನ ನಿಲ್ದಾಣದಲ್ಲಿ ಇಳಿದರು. ಕೊಟ್ಟೂರು ತಾಲೂಕಿನ ಅಲಬುರ ನಿವಾಸಿ ಪ್ರಕಾಶ್ ಮಡಿವಾಳ (42) (ಬಸ್ ಚಾಲಕ), ಹರಪ್ಪನಹಳ್ಳಿ ತಾಲೂಕಿನ ಅರಸೀಕೆರೆಯ ರಾಜಶೇಖರ್ (40) (ಕಂಡಕ್ಟರ್) ಮತ್ತು ಬಸ್ ಏಜೆಂಟ್ ಸುರೇಶ್ (46) ಎಂಬ ಮೂವರು ಆರೋಪಿಗಳು ಮಹಿಳೆ ತನ್ನ ಇಬ್ಬರು ಚಿಕ್ಕ ಮಕ್ಕಳೊಂದಿಗೆ ಒಂಟಿಯಾಗಿ ಪ್ರಯಾಣಿಸುತ್ತಿರುವುದನ್ನು ಗಮನಿಸಿದರು. ಮೂವರು ಬಸ್ ಏಜೆಂಟ್‌ಗಳು ಬಸ್‌ನ ಮಾರ್ಗವನ್ನು ದಾವಣಗೆರೆ ಕಡೆಗೆ ತಿರುಗಿಸುವ ಮೂಲಕ ಅದನ್ನು ಬದಲಾಯಿಸಿದರು. ಬದಲಾಗಿ ಮಹಿಳೆಯನ್ನು ಚನ್ನಾಪುರಕ್ಕೆ ಕರೆದೊಯ್ದು, ಅಲ್ಲಿ ಅವರು ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಸಂತ್ರಸ್ತೆ ಪೊಲೀಸ್ ಠಾಣೆಗೆ ಬಂದಿದ್ದು, ಆಕೆಯ ಹೇಳಿಕೆಯ ಮೇರೆಗೆ ಅರಸೀಕೆರೆ ಪೊಲೀಸರು ದೌರ್ಜನ್ಯ ಪ್ರಕರಣ ಮತ್ತು ಮೂವರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪಗಳನ್ನು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವೈದ್ಯಕೀಯ ವರದಿಗಾಗಿ ಕಾಯಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಡಲಾಮೆಗಳನ್ನು ಉಳಿಸಲು ಅವರು ರೈಲುಮಾರ್ಗದಲ್ಲಿ ಸುರಂಗ ಕೊರೆದರು!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ವೊನ್ನಿನ ಗುರುವಾರದ ಅಂಕಣದಲ್ಲಿ, ಕೇವಲ ಒಂದು ಮರವನ್ನು ಉಳಿಸಲು, ಒಂದೂವರೆ ಕಿ.ಮೀ. ಸುತ್ತು ಬಳಸಿ, ಸುಮಾರು ಮುನ್ನೂರು ಕೋಟಿ ರುಪಾಯಿ ಹೆಚ್ಚುವರಿ ಖರ್ಚಾದರೂ, ಪರ್ಯಾಯ ಮಾರ್ಗವನ್ನು ರೂಪಿಸಿ, ಇಡೀ ಯೋಜನೆಯನ್ನೇ ಬದಲಿಸಿದ ಜಪಾನ್ ಸರಕಾರದ ಬಗ್ಗೆ ಬರೆದಿದ್ದೆ. ಅದು ಕೇವಲ ಒಂದು isolated ಪ್ರಸಂಗ ಅಲ್ಲ. ಆ ಮನಸ್ಥಿತಿ ಜಪಾನಿಯರಲ್ಲಿ ಅಂತರ್ಗತವಾಗಿದೆ. ಒಂದು ಯೋಜನೆ ರೂಪಿಸುವಾಗ ಅವರು ಸಣ್ಣ ಸಣ್ಣ, ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳ ಬಗೆಗೂ ಯೋಚಿಸುತ್ತಾರೆ. ಅದರಲ್ಲೂ ಸ್ವಚ್ಛತೆ, ಪರಿಸರ, ವನ್ಯಜೀವಿಗಳ ಕಾಳಜಿ ವಿಷಯದಲ್ಲಿ ಯಾವ ರಾಜಿಯನ್ನೂ ಮಾಡಿಕೊಳ್ಳುವುದಿಲ್ಲ.

ಪ್ರಕೃತಿಯ ವೈವಿಧ್ಯಮಯ ಜೀವಿಗಳು ಮನುಷ್ಯನ ಜತೆ ಸಮತೋಲನದಲ್ಲಿ ಬದುಕಲು ಪ್ರಯತ್ನಿಸುತ್ತವೆ. ಆದರೆ, ನಗರೀಕರಣ ಮತ್ತು ಮಾನವ ಸೌಕರ್ಯಗಳ ಅಭಿವೃದ್ಧಿಯೊಂದಿಗೆ ಹಲವಾರು ಪ್ರಾಣಿಗಳ ಅಸ್ತಿತ್ವಕ್ಕೆ ತೊಂದರೆಯಾಗುತ್ತದೆ. ಇಂಥ ಸಂದರ್ಭದಲ್ಲಿ ಅಭಿವೃದ್ಧಿಯಷ್ಟೇ, ಅಪರೂಪದ ಪ್ರಾಣಿಗಳ ಅಸ್ತಿತ್ವವನ್ನು ಕಾಪಾಡುವುದು ಸಹ ಮುಖ್ಯ. ಈ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಯನ್ನು ರೂಪಿಸಬೇಕು ಎಂಬುದು ಜಪಾನಿನ ಅಭಿವೃದ್ಧಿಯ ಬೀಜಮಂತ್ರ.

ಕೆಲ ವರ್ಷಗಳ ಹಿಂದೆ, ಜಪಾನಿನ ಪಶ್ಚಿಮ ರೈಲುಮಾರ್ಗದ ಕೊಬೆ ಮತ್ತು ಟೋಕಿಯೊ ನಡುವೆ ರೈಲು ಹಳಿಗಳನ್ನು ಹಾಕು

ವಾಗ ಆ ಪ್ರದೇಶದಲ್ಲಿ ಆಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಗಮನಕ್ಕೆ ಬಂದಿತು. ಅದು ಆಮೆಗಳು ಮೊಟ್ಟೆ ಇಡುವ ತಾಣ (breeding ground)ವೂ ಆಗಿತ್ತು. ವರ್ಷದ ಮೂರ್ನಾಲ್ಕು ತಿಂಗಳುಗಳ ಕಾಲ ಲಕ್ಷಾಂತರ ಕಡಲಾಮೆಗಳು ಆ ರೈಲು ಹಳಿಗಳಗುಂಟ ಇರುವ ಪ್ರದೇಶದಲ್ಲಿ ಮೊಟ್ಟೆ ಇಡಲು ಬರುತ್ತವೆ ಎಂಬುದು ತಿಳಿದುಬಂದಿತು. ಮೊಟ್ಟೆ ಇಡುವ ಜಾಗ ತಲುಪಲು ಅವು ರೈಲು ಹಳಿಗಳನ್ನು ದಾಟಿಯೇ ಹೋಗಬೇಕಿತ್ತು. ರೈಲುಗಳು ಓಡಾಡಲು ಆರಂಭಿಸಿದ ಬಳಿಕ, ಆ ಮಾರ್ಗದಲ್ಲಿ ಭಾರಿ ಸಂಖ್ಯೆಯಲ್ಲಿ ಆಮೆಗಳು ಸಾಯುವುದು ನಿಶ್ಚಿತ ಎಂಬುದು ರೈಲ್ವೆ ಅಧಿಕಾರಿಗಳಿಗೆ ಮನವರಿಕೆಯಾಯಿತು. ರೈಲು ಹಳಿಗಳನ್ನು ಹಾಕುವಾಗಲೇ ನೂರಾರು ಆಮೆಗಳು ಸತ್ತು ಹೋಗಿದ್ದವು.

ಕಡಲಾಮೆಗಳು ಹಳಿಗಳ ನಡುವೆ ಸಿಕ್ಕಿಹಾಕಿಕೊಂಡರೆ, ರೈಲು ಚಾಲಕರು ತಕ್ಷಣ ಬ್ರೇಕ್ ಹಾಕಬೇಕಾಗುತ್ತದೆ. ಇದರಿಂದ ರೈಲು ಸಂಚಾರ ವಿಳಂಬವಾಗುತ್ತದೆ. ಹಳಿಗಳ ಮೇಲೆ ಸಿಕ್ಕಿರುವ ಕಡಲಾಮೆಗಳನ್ನು ಹಳಿಯಿಂದ ತೆಗೆದು ಹಾಕುವ ಪ್ರಕ್ರಿಯೆ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ, ಇದರಿಂದ ಪ್ರಯಾಣಿಕರಿಗೆ ತೊಂದರೆ ಆಗಬಹುದು. ಅಲ್ಲದೆ, ಕಡಲಾಮೆಗಳು ಪರಿಸರ ಪರಿತಂತ್ರದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳ ಸಂಖ್ಯೆ ಕಡಿಮೆಯಾದರೆ, ಸಮುದ್ರದ ಆಹಾರ ಸರಪಳಿಗೆ ತೊಂದರೆ ಉಂಟಾಗಬಹುದು. ಹೀಗಾಗಿ ಅವುಗಳ ಸಂರಕ್ಷಣೆ ಪ್ರಾಕೃತಿಕ ಸಮತೋಲನಕ್ಕೆ ಅಗತ್ಯ. ಇನ್ನು ಈ ಎಲ್ಲ ಸಂಗತಿ ಸರಕಾರದ ಗಮನಕ್ಕೆ ಬಂದರೆ, ಇಡೀ ಯೋಜನೆಗೆ ಅನುಮತಿ ಸಿಗಲಿಕ್ಕಿಲ್ಲ ಎಂದು ಈ ಸಮಸ್ಯೆಗೆ ಪರಿಹಾರ ಹುಡುಕಲು ನಿರ್ಧರಿಸಿದರು.

ಆ ಸಮಸ್ಯೆಗೆ ಅವರು ಕಂಡುಕೊಂಡ ಒಂದು ವಿಶಿಷ್ಟ ಮತ್ತು ವೈಜ್ಞಾನಿಕ ಪರಿಹಾರವೇ 'ಟರ್ಟಲ್ ರೈಲ್ವೇ ಕ್ರಾಸಿಂಗ್' (Turtle Railway Crossing) ಎಂಬ ಯೋಜನೆ! ಇದು ಕಡಲಾಮೆಗಳ ಜೀವ ಉಳಿಸುವ ಮತ್ತು ರೈಲು ಸಂಚಾರವನ್ನು ಸುಗಮಗೊಳಿಸುವ ಒಂದು ಮಹತ್ವದ ಯೋಜನೆ. ಈ ಟರ್ಟಲ್ ರೈಲ್ವೇ ಕ್ರಾಸಿಂಗ್ ಹೇಗೆ ಕೆಲಸ ಮಾಡುತ್ತದೆ? ಹಳಿಯಗುಂಟ ರೈಲು ಮಾರ್ಗದ ಅಡಿಯಲ್ಲಿ ಒಂದು ಅಡಿ ಅಗಲ, ಒಂದು ಅಡಿ ಆಳದ ಕಿರಿದಾದ ಸುರಂಗವನ್ನು ನಿರ್ಮಿಸಲಾಗಿದೆ. ಕಡಲಾಮೆಗಳು ಹಳಿಗಳನ್ನು ದಾಟಲು ಬಯಸಿದರೆ, ಈ ಸುರಂಗ ಮಾರ್ಗದ ಮೂಲಕ ಸರಾಗವಾಗಿ ಹಾದು ಹೋಗಬಹುದು. ಕೆಲವು ಪ್ರದೇಶಗಳಲ್ಲಿ ಆಮೆಗಳನ್ನು ನಿರ್ದಿಷ್ಟ ಹಾದಿಯ ಕಡೆಗೆ ಒಯ್ಯುವ ಗೈಡ್ ರೇಲ್‌ಗಳನ್ನು (Guide Rails) ಅಳವಡಿಸಲಾಗಿದೆ. ಇದರಿಂದಾಗಿ, ಆಮೆಗಳು ರೈಲು ಹಳಿಗಳ ಮೇಲೆ ಹತ್ತದೇ, ಸುರಕ್ಷಿತ ದಾರಿಯ ಮೂಲಕ ಸಾಗಬಹುದು. ಈ ವ್ಯವಸ್ಥೆಯ ಮೂಲಕ ಅನೇಕ ಸಮುದ್ರ ಆಮೆಗಳು ಜೀವ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಇದು ಪೂರ್ಣವಾಗಿ ಪರಿಸರ ಸ್ನೇಹಿ ಯೋಜನೆ ಆಗಿದೆ. ಇದರಿಂದ ಆಮೆಗಳು ಹಳಿಗಳ ಮೇಲೆ ಸಿಕ್ಕಿಹಾಕಿಕೊಳ್ಳುವ ಸಮಸ್ಯೆ ಕಡಿಮೆಯಾಗಿದೆ. ರೈಲುಗಳ ಸಂಚಾರಕ್ಕೆ ವ್ಯತ್ಯಯವಾಗುವುದು ಹೆಚ್ಚುಕಮ್ಮಿ ನಿಂತುಹೋಗಿದೆ.

ಆಮೆಗಳಿಗೆ ಜಿಪಿಎಸ್ ಟ್ರ್ಯಾಕಿಂಗ್, ಕೆಮೆರಾ ಅನುಸರಣೆ, ಚಲನವಲನ ನಿರ್ವಹಣೆ ಮುಂತಾದ ಹೊಸ ತಂತ್ರಜ್ಞಾನಗಳನ್ನು ಬಳಸುವ ಮೂಲಕ ಈ ವ್ಯವಸ್ಥೆಯನ್ನು ಸುಧಾರಿಸಲಾಗಿದೆ. ಈ ಯೋಜನೆ ವೈಜ್ಞಾನಿಕ ಹಾಗೂ ಮಾನವೀಯತೆಯ ಮೂಸೆಯಲ್ಲಿ ಮೂಡಿದ ಜೀವಮುಖಿ ಚಿಂತನೆಯ ಫಲ. ಇದು ರೈಲು ಸಂಚಾರಕ್ಕೂ ಹಾನಿ ಇಲ್ಲದಂತೆ, ಜೀವ ವೈವಿಧ್ಯಕ್ಕೂ ಅಪಾಯವಿಲ್ಲದಂತೆ ನಿರ್ಮಿಸಲಾದ ಸೂಕ್ಷ್ಮಸಂವೇದಿ ಯೋಜನೆಯಾಗಿದೆ.

ಬಾಂಧವ್ಯ ವೃದ್ಧಿಗೆ ಉಡುಗೊರೆ

ಜಪಾನಿಗೆ ಹೋಗುವಾಗ ಖಾಲಿ ಕೈಯಲ್ಲಿ ಹೋಗಬೇಡಿ! ಆದರೆ ನಾನು ಅಲ್ಲಿಗೆ ಹೋಗುವಾಗ ಖಾಲಿ ಕೈಯಲ್ಲಿಯೇ ಹೋಗಿದ್ದೆ. ಅಲ್ಲಿಗೆ ಹೋಗಿ ಬಂದ ನಂತರ ನನಗೆ ಗೊತ್ತಾಗಿದ್ದೇನೆಂದರೆ, ಹಾಗೆ ಹೋಗಬಾರದಿತ್ತೆಂಬುದು. ಕಾರಣ ಜಪಾನಿಯರು ಭೇಟಿಯಾದಾಗ ಉಡುಗೊರೆಯನ್ನು ನಿರೀಕ್ಷಿಸುತ್ತಾರೆ. ಮೊದಲ ಬಾರಿಗೆ ಅದನ್ನು ನಿರೀಕ್ಷಿಸದಿರಬಹುದು. ಒಮ್ಮೆ ಪರಿಚಯವಾದ ಬಳಿಕ, ನೀವು ಬೇರೆ ಊರಿನಿಂದ ಮರಳುವಾಗ ಉಡುಗೊರೆಯನ್ನು ನಿರೀಕ್ಷಿಸುತ್ತಾರೆ. ಅವರು ನಿಮ್ಮನ್ನು ಭೇಟಿ ಮಾಡಿದಾಗಲೂ ಉಡುಗೊರೆ ನೀಡಲು ಮರೆಯುವುದಿಲ್ಲ. ಉಡುಗೊರೆ ನೀಡುವುದು ಅವರ ಸಂಸ್ಕೃತಿಯ ಒಂದು ಪ್ರಮುಖ ಭಾಗ. ಇದನ್ನು 'ಒಮಿಯಾಗೆ' ಎಂದು ಕರೆಯಲಾಗುತ್ತದೆ, ಇದರರ್ಥ 'ಸ್ಮರಣಿಕೆ' ಅಥವಾ 'ಕಾಣಿಕೆ'.

ನೀವು ಪ್ರವಾಸಕ್ಕೆ ಹೋದರೆ, ನಿಮ್ಮ ಕಚೇರಿಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಒಂದು ಸಣ್ಣ ಉಡುಗೊರೆಯನ್ನಾದರೂ ತರಬೇಕು. 'ನಾನು ಕಚೇರಿ ಬಿಟ್ಟು ದೂರದಲ್ಲಿರುವಾಗಲೂ ನಿಮ್ಮ ಬಗ್ಗೆ ಯೋಚಿಸುತ್ತಿದ್ದೆ' ಎಂಬುದನ್ನು ಇದು ಸೂಚಿಸುತ್ತದೆ. ಸಹೋದ್ಯೋಗಿಗಳು ಅಥವಾ ಸ್ನೇಹಿತರು ದೈಹಿಕವಾಗಿ ನನ್ನೊಂದಿಗಿಲ್ಲದಿದ್ದರೂ, ನನ್ನ ಯೋಚನೆಯಲ್ಲಿದ್ದಾರೆ ಎಂದು ನೆನಪಿಸಲು ಸಣ್ಣ, ಚಿಂತನಶೀಲ ಉಡುಗೊರೆಗಳನ್ನು ತೆಗೆದುಕೊಂಡು ಹೋಗುತ್ತಾರೆ.

ಇದನ್ನು ಗಮನಿಸಿದರೆ, ಒಮಿಯಾಗೆ ಎನ್ನುವುದು ಕೇವಲ ಉಡುಗೊರೆಯಷ್ಟೇ ಅಲ್ಲ, ಅದು ಸಂಬಂಧವನ್ನು ಬಲಪಡಿಸುವ, ಬಾಂಧವ್ಯವನ್ನು ಹಸನುಗೊಳಿಸುವ, ಗೌರವ ಹೆಚ್ಚಿಸುವ ಮತ್ತು ಶಿಷ್ಟಾಚಾರವನ್ನು ಪಾಲಿಸುವ ಪ್ರತೀಕವಾಗಿದೆ. ಅದು ಸಂಬಂಧಗಳ ನಿರಂತರ ಪಾಲನೆ, ಆತ್ಮೀಯತೆ ಮತ್ತು ಶ್ರದ್ಧೆಯನ್ನು ತೋರಿಸುತ್ತದೆ. ಇಂಥ ಸಂಸ್ಕೃತಿಯು ಜಪಾನಿನ ಬಾಹ್ಯ ಶಿಸ್ತಿನೊಂದಿಗೆ ಆಂತರಿಕ ಮಾನವೀಯ ಸಂಬಂಧಗಳ ಸಂಕೇತವಾಗಿದೆ. ಯಾರಾದರೂ ಪ್ರವಾಸಕ್ಕೆ ಹೋಗಿ ಬರಿಗೈಲಿ ಹಿಂತಿರುಗಿದರೆ, ಅದು ಉತ್ತಮ ನಡೆ ಅನಿಸಿಕೊಳ್ಳುವುದಿಲ್ಲ. ಏನು ತರುತ್ತೀರಿ, ಎಷ್ಟು ದುಬಾರಿ ಗಿಫ್ಟ್ ತರುತ್ತೀರಿ ಎಂಬುದು ಮುಖ್ಯವಲ್ಲ. ಕನಿಷ್ಠ ಕೀ ಚೈನ್ ಅನ್ನಾದರೂ ತರಬೇಕು. ಇಲ್ಲವೇ ಒಂದು ಚಾಕೊಲೇಟ್ ಅನ್ನಾದರೂ ತರಬೇಕು. ಯಾಕೆಂದರೆ, ಇದು 'ನಾನು ನಿಮ್ಮನ್ನು ಮರೆತಿಲ್ಲ, ನಿಮ್ಮ ಬಗ್ಗೆಯೇ ಯೋಚಿಸುತ್ತಿದ್ದೆ' ಎಂಬುದನ್ನು ಮಾತಿಗಿಂತ ಪರಿಣಾಮಕಾರಿಯಾಗಿ ವಿವರಿಸುತ್ತದೆ.

ಇದು ಮಾನವೀಯ ಸಂಬಂಧಗಳ ನೈಸರ್ಗಿಕ ಪ್ರಜ್ಞೆಯಾಗಿ ಬೆಳೆದು ಬಂದಿದೆ. ಒಮಿಯಾಗೆ ತರುವ ಮೂಲಕ ವ್ಯಕ್ತಿಯು ತನ್ನ ಪಂಗಡದ ಅಥವಾ ಸಮುದಾಯದ ಭಾಗವಾಗಿರುವುದನ್ನು, ಅವರಿಗಾಗಿ ಆಲೋಚನೆ ಮಾಡಿರುವುದನ್ನು ಸಾಬೀತು ಮಾಡುವುದು ಬಾಂಧವ್ಯವನ್ನು ಗಟ್ಟಿಗೊಳಿಸಲು ಸಹಾಯಕ ಎಂದು ಭಾವಿಸಲಾಗುತ್ತದೆ. ಒಮಿಯಾಗೆ ರೂಪದಲ್ಲಿ ಏನನ್ನಾದರೂ ತೆಗೆದುಕೊಂಡು ಹೋಗಬಹುದು. ಸಾಮಾನ್ಯವಾಗಿ ಸ್ಥಳೀಯವಾಗಿ ಪ್ರಸಿದ್ಧವಾದ ತಿನಿಸುಗಳು, ಪಾರಂಪರಿಕ ಬಟ್ಟೆಗಳು ಅಥವಾ ಪೆನ್ನುಗಳು, ಬಿಸ್ಕತ್ತುಗಳು, ಚಾಕೊಲೇಟ್, ಸ್ಥಳೀಯ ಪಾನೀಯಗಳು, ಜಪಾನಿನ ಅನಿಮೆ ಮತ್ತು ಮಂಗಾ ಸಂಸ್ಕೃತಿಯ ಪರಿಣಾಮದಿಂದ, ಮಕ್ಕಳಿಗೆ ಹಾಯ್ಕು, ಡೋರೇಮನ್ ಅಥವಾ ಪಿಕಾಚು, ವಿಶೇಷ ಉತ್ಪನ್ನಗಳು ಅಥವಾ ಹಸ್ತಕಲಾ ವಸ್ತುಗಳನ್ನು ತೆಗೆದುಕೊಂಡು ಹೋಗಬಹುದು.

ಜಪಾನಿನ ಪ್ರವಾಸೋದ್ಯಮದಲ್ಲಿ ಒಮಿಯಾಗೆ, ಆರ್ಥಿಕತೆಗೆ ಬಹುದೊಡ್ಡ ಕೊಡುಗೆಯನ್ನು ನೀಡಿರುವುದು ದಿಟ. ರೈಲು ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಪ್ರವಾಸಿ ಸ್ಥಳಗಳ ಹತ್ತಿರ ಒಮಿಯಾಗೆ ಶಾಪ್‌ಗಳು ಅತಿ ಸಾಮಾನ್ಯ. ಇವುಗಳಲ್ಲಿ ಸ್ಥಳೀಯ ಉತ್ಪನ್ನಗಳು ಧಾರಾಳವಾಗಿ ಸಿಗುತ್ತವೆ. ಒಮಿಯಾಗೆ ಮಾರಾಟದಿಂದ ಪ್ರವಾಸಿ ಸ್ಥಳಗಳಲ್ಲಿ ಭರ್ಜರಿ ಮಾರಾಟವನ್ನು ಕಾಣಬಹುದು. ಇದರಿಂದಾಗಿ ಈಗ ನಾನಾ ಸ್ಥಳಗಳಲ್ಲಿ 'ಒಮಿಯಾಗೆಗೆ ಮಾತ್ರ' ಎಂಬ ವಿಶೇಷ ಉತ್ಪನ್ನಗಳನ್ನು ಬಿಡುಗಡೆ ಮಾಡುವ ಪ್ರವೃತ್ತಿಯೂ ಪ್ರಚಲಿತವಾಗಿದೆ.

ಕಂಪನಿಗಳಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಯು ಪ್ರವಾಸದಿಂದ ಹಿಂದಿರುಗಿದ ಮೇಲೆ ತಮ್ಮ ಸಹೋದ್ಯೋಗಿಗಳಿಗೆ ಒಮಿಯಾಗೆ ತರುತ್ತಾರೆ. ಇದರಿಂದ ಅವರ ಬಾಂಧವ್ಯ ಬಲವಾಗುತ್ತದೆ. ಕೆಲವೊಮ್ಮೆ ತಾನೇ ಹೋದವರೊಂದಿಗೆ ಇತರರ ಸಹಕಾರವಿದ್ದರೂ, ಸಹಕರಿಸಿದವರಿಗೂ ಉಡುಗೊರೆ ಕೊಡುವುದು ಗೌರವ ಸೂಚಕವಾಗಿರುತ್ತದೆ. ಹಾಲಿ ದಿನಗಳಲ್ಲಿ ಹೆಚ್ಚು ಜನ ಉದ್ಯೋಗದಿಂದಾಗಿ ಅಥವಾ ಅಂತಾರಾಷ್ಟ್ರೀಯ ಪ್ರವಾಸಗಳಿಂದ ಹಿಂದಿರುಗುತ್ತಾರೆ. ಈ ಸಂದರ್ಭದಲ್ಲಿ ಒಮಿಯಾಗೆಯ ನಿರೀಕ್ಷೆಯು ಕೆಲವೊಮ್ಮೆ ಒತ್ತಡದ ಪ್ರಭಾವವನ್ನೂ ಉಂಟುಮಾಡಬಹುದು. ಕೆಲವರು ಈ ಸಂಸ್ಕೃತಿಯನ್ನು ಕಡ್ಡಾಯವಾದ ರೂಢಿ ಎಂದು ಕಿರಿಕಿರಿ ಪಡುತ್ತಾರೆ. ಆದರೆ ಇತರರು ಇದನ್ನು ಬಾಂಧವ್ಯವನ್ನು ಕಾಪಾಡಿಕೊಳ್ಳುವ ಒಳ್ಳೆಯ ಯತ್ನವೆಂದು ಗುರುತಿಸುತ್ತಾರೆ.

ಇದೇ ಕಾರಣದಿಂದ, ಇತ್ತೀಚಿನ ವರ್ಷಗಳಲ್ಲಿ 'ಒಮಿಯಾಗೆ ಸಬ್‌ಸ್ಕ್ರಿಪ್ಷನ್ ಬಾಕ್ಸ್' ಎಂಬ ಹೊಸ ಸಂಸ್ಕೃತಿ ಉದಯಿಸುತ್ತಿದೆ. ಬೇರೆ ಊರುಗಳಿಗೆ ಹೋದಾಗ ಆನ್‌ಲೈನ್‌ನಲ್ಲಿ ಆ ಪ್ರದೇಶದ ತಿನಿಸುಗಳನ್ನು ಆರ್ಡರ್ ಮಾಡಬಹುದಾಗಿದೆ.

ರಾಜಕಾರಣ ಮತ್ತು ರಾಜೀನಾಮೆ

ಜಪಾನಿಯರನ್ನು ಕೇಳಿ, ಅವರು ತಮ್ಮ ರಾಜಕಾರಣಿಗಳ ಬಗ್ಗೆ ಅಭಿಮಾನದಿಂದ ಮಾತಾಡುತ್ತಾರೆ. 'ನಮ್ಮ ರಾಜಕಾರಣಿಗಳು ಬೇರೆ ದೇಶಗಳ ರಾಜಕಾರಣಿಗಳಿಗಿಂತ ಭಿನ್ನ' ಅಂತಾರೆ. ಜಪಾನಿನ ರಾಜಕಾರಣಿಗಳಲ್ಲಿ ಶಿಸ್ತು ಹಾಗೂ ಜವಾಬ್ದಾರಿಯನ್ನು ನಿರೀಕ್ಷಿಸ ಬಹುದಂತೆ. ಅಲ್ಲಿನ ರಾಜಕೀಯ ನಾಯಕರು ಸಣ್ಣ ಎಡವಟ್ಟು ಮಾಡಿದರೂ, ತಕ್ಷಣ ರಾಜೀನಾಮೆ ನೀಡುವ ಪರಿಪಾಠವಿದೆ. ಸಾರ್ವಜನಿಕ ಜೀವನದಲ್ಲಿ ತಪ್ಪು ಮಾಡಿದಾಗ ರಾಜೀನಾಮೆ ಕೊಡುವ ರಾಜಕೀಯ ಸಂಸ್ಕೃತಿ ಇಂದಿಗೂ ಜೀವಂತವಾಗಿದೆ.

ಜಪಾನಿನ ರಾಜಕೀಯ ಮತ್ತು ಸಾರ್ವಜನಿಕ ಜೀವನವು ಶತಮಾನಗಳ ಹಿಂದಿನಿಂದ ಶಿಸ್ತಿನ ಮತ್ತು ಆತ್ಮಚಿಂತನೆಯ ಮೌಲ್ಯಗಳ ಮೇಲೆ ಆಧಾರಿತವಾಗಿದೆ. ಈ ಶಿಸ್ತಿನ ಚಿಂತನೆ ಬುಶಿಡೋ ಎಂಬ ಸಮುರೈ ಯೋಧರ ನೈತಿಕ ನೀತಿಯೊಂದಿಗೆ ಜೋಡಣೆಯಾಗಿದೆ. ಬೌದ್ಧ ಧರ್ಮ ಮತ್ತು ಶಿಂಟೋ ಧರ್ಮದ ಆಧಾರಗಳು, 'ಅಂತರಾತ್ಮದ ಪಾವಿತ್ರ್ಯ' ಮತ್ತು 'ಸಮಾಜದ ಪ್ರತಿಜ್ಞೆ' ಎಂಬ ನಂಬಿಕೆಗಳನ್ನು ಉತ್ತೇಜಿಸಿವೆ.

ಜಪಾನಿನಲ್ಲಿ ಎಡವಟ್ಟಾದ ರಾಜಕಾರಣಿಯು ರಾಜೀನಾಮೆ ನೀಡುವುದು ಕೇವಲ ನಿರ್ಬಂಧ ಅಥವಾ ಕಾನೂನು ಒತ್ತಾಯವಲ್ಲ, ಅದು ಆ ವ್ಯಕ್ತಿಯ ಜವಾಬ್ದಾರಿಯ ಭಾವನೆ, ಸಾಮಾಜಿಕ ಗೌರವ ಮತ್ತು ಶಿಸ್ತುಪಾಲನೆಯ ದ್ಯೋತಕ. ಜವಾಬ್ದಾರಿ ನಿರ್ವಹಣೆಯಲ್ಲಿ ಎಡವಟ್ಟಾದರೆ, 'ನಾನು ತಪ್ಪು ಮಾಡಿದ್ದೇನೆ, ಆದ್ದರಿಂದ ನನ್ನ ಸ್ಥಾನದಿಂದ ನಿರ್ಗಮಿಸುತ್ತೇನೆ' ಎಂಬ ಆತ್ಮವಿಮರ್ಶೆಯ ಸಂದೇಶವನ್ನು ಅವರು ನೀಡುತ್ತಾರೆ.

2011ರಲ್ಲಿ ಫುಕುಶಿಮಾ ಅಣುವಿದ್ಯುತ್ ಅವಘಡದ ನಂತರ, ತೀವ್ರ ಹಿಂಸೆಯ ವಿರುದ್ಧ ರಾಷ್ಟ್ರದ ಅಸಮರ್ಥತೆಯ ಕಾರಣದಿಂದಾಗಿ ಸರಕಾರದ ನಾಯಕರ ವಿರುದ್ಧ ಭಾರಿ ಒತ್ತಾಯವಾಯಿತು. ಕೆಲ ನಾಯಕರನ್ನು ನಿಯಮದ ಪ್ರಕಾರ ಉತ್ತರದ ಹೊಣೆ ಹೊತ್ತು ರಾಜೀನಾಮೆ ನೀಡುವಂತೆ ಮಾಡಲಾಯಿತು. ಪರಿಣಾಮ ಯುಕಿಯೋ ಎಡಾನೋ ರಾಜೀನಾಮೆ ನೀಡಿದರು.

2020ರಲ್ಲಿ ಅನಾರೋಗ್ಯದ ಕಾರಣದಿಂದಾಗಿ ಶಿಂಜೋ ಆಬೆ ಅವರು ಪ್ರಧಾನಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ತಮ್ಮ ಅನಾರೋಗ್ಯವು ರಾಷ್ಟ್ರದ ಸೇವೆಗೆ ತೊಡಕಾಗಬಹುದು ಎಂಬ ಆತಂಕದಿಂದ ಈ ನಿರ್ಧಾರ ತೆಗೆದುಕೊಂಡರು. ಇದನ್ನು ವ್ಯಕ್ತಿಗತ ಜವಾಬ್ದಾರಿಯ ಉದಾಹರಣೆಯಾಗಿ ನೋಡಲಾಗುತ್ತದೆ. 2017ರಲ್ಲಿ ರಕ್ಷಣಾ ಮಂತ್ರಿಯಾಗಿ, ಜಪಾನಿನ ಸ್ವಯಂಸೇವಾ ಪಡೆಯ ಚಟುವಟಿಕೆಗಳ ಮಾಹಿತಿಯನ್ನು ಮುಚ್ಚಿಟ್ಟದ್ದಕ್ಕೆ ಅವರು ತೀವ್ರ ಟೀಕೆಗೆ ಗುರಿಯಾದರು ಮತ್ತು ತಕ್ಷಣ ರಾಜೀನಾಮೆ ನೀಡಿದರು.

ಸಾರ್ವಜನಿಕ ನಂಬಿಕೆ (Public Trust)ಗೆ ಅವರು ಮಹತ್ವವನ್ನು ನೀಡುತ್ತಾರೆ. ಜನಸಾಮಾನ್ಯರಿಗೆ, ತಮ್ಮ ನಾಯಕರಿಂದ ಉತ್ಸಾಹವೂ ಬೇಕು ಮತ್ತು ನೈತಿಕ ಬದ್ಧತೆಯೂ ಬೇಕು. ರಾಜೀನಾಮೆ ನೀಡುವುದು ಒಂದು ರೀತಿಯ ಪ್ರಾಯಶ್ಚಿತ್ತ. ರಾಜಕೀಯ ಸ್ಥಾನವೆಂದರೆ 'ವ್ಯಕ್ತಿಗತ ಗೌರವ' ಅಥವಾ 'ತಾಕತ್ತಿನ ಪ್ರದರ್ಶನ' ಅಲ್ಲ. ಅದು ಒಂದು 'ಜವಾಬ್ದಾರಿಯ ಸ್ಥಾನ' ಎಂದು ಪರಿಗಣಿಸುವ ಸಂಸ್ಕೃತಿ ಅವರದು. ಕೆಲವೊಮ್ಮೆ ಮಾಧ್ಯಮ, ಸಾರ್ವಜನಿಕ ಅಭಿಪ್ರಾಯ ಮತ್ತು ಪಕ್ಷದ ಒತ್ತಡದಿಂದ ಕೂಡ ರಾಜೀನಾಮೆಗೆ ಒತ್ತಾಯಿಸಲಾಗುತ್ತದೆ. ಇದು ಶಕ್ತಿಯ ಮಾನದಂಡವಲ್ಲ, ನೈತಿಕ ದತ್ತಾಂಶ.

ರಾಜೀನಾಮೆಯ ನಂತರ ಕೂಡ, ಹಲವರು ಮತ್ತೆ ಮರಳಿದ ನಿದರ್ಶನಗಳಿವೆ. ಇದು ನೈತಿಕತೆಯ ಪ್ರಶ್ನೆಯಾಗಿ ಕಾಡುವುದುಂಟು. ಜಪಾನಿನ ರಾಜಕೀಯದಲ್ಲಿ ಕಂಡುಬರುವ ಈ ನೈತಿಕ ಜವಾಬ್ದಾರಿಯ ಸಂಸ್ಕೃತಿ ಬಹುತೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಪರೂಪವಾಗಿದೆ. ಆದರೆ ಜಪಾನಿನ ರಾಜಕೀಯ ಶಿಸ್ತಿನಿಂದ ನಾವು ಕಲಿಯಬಹುದಾದ ಪಾಠವೆಂದರೆ ಪದವಿಗೆ ತಕ್ಕ ನೈತಿಕ ಜವಾಬ್ದಾರಿ ಇರಬೇಕು ಎಂಬುದು. ರಾಜೀನಾಮೆ ಎಂಬುದು ಅಲ್ಲಿ ದೂರದೃಷ್ಟಿಯ ಶಕ್ತಿ, ಶ್ರದ್ಧೆಯ ಪ್ರತೀಕ ಮತ್ತು ಸಮುದಾಯದ ನೈತಿಕ ಚಿಂತನೆಯ ಪ್ರತಿಬಿಂಬ.

ಭವಿಷ್ಯದ ಸಂಪರ್ಕಕ್ರಾಂತಿ

ಇತ್ತೀಚೆಗೆ ಜಪಾನಿನ ರಾಷ್ಟ್ರೀಯ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಸಂಸ್ಥೆ (NICT) ಪ್ರತಿ ಸೆಕೆಂಡಿಗೆ 319 ಟೆರಾಬಿಟ್ (Tbps) ವೇಗವನ್ನು ಸಾಧಿಸುವ ಮೂಲಕ ವಿಶ್ವದ ಇತಿಹಾಸದಲ್ಲಿ ಹೊಸ ದಾಖಲೆ ನಿರ್ಮಿಸಿದೆ. ಈ ವೇಗದಲ್ಲಿ, ಸುಮಾರು 50,000 ಹೈ-ಡೆಫಿನಿಷನ್ (HD) ಚಿತ್ರಗಳನ್ನು ಕೇವಲ ಹತ್ತು ಸೆಕೆಂಡಿನಲ್ಲಿ ಡೌನ್‌ಲೋಡ್ ಮಾಡಬಹುದಾಗಿದೆ! ಈ ಮಹತ್ತರ ಸಾಧನೆಯು ಇಂಟರ್ನೆಟ್ ತಂತ್ರಜ್ಞಾನದಲ್ಲಿ ದೊಡ್ಡ ಹೆಜ್ಜೆಯಾಗಿದ್ದು, ಭವಿಷ್ಯದ ಸಂಪರ್ಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪರಿವರ್ತಿಸಲು ಸಾಧ್ಯವಿದೆ.

ಅತ್ಯಾಧುನಿಕ ಆಪ್ಟಿಕಲ್ ಫೈಬರ್ ತಂತ್ರಜ್ಞಾನದಿಂದ ಸಂಶೋಧಕರು ನಾಲ್ಕು ಕೋರ್‌ಗಳಿರುವ ಆಪ್ಟಿಕಲ್ ಫೈಬರ್ ಬಳಸಿ ಈ ವೇಗವನ್ನು ಸಾಧಿಸಿದ್ದಾರೆ. ಸಾಂಪ್ರದಾಯಿಕ ಫೈಬರ್‌ಗಳಲ್ಲಿ ಒಂದೇ ಕೋರ್ ಇರುತ್ತದೆ. ಆದರೆ ಈ ಹೊಸ ಫೈಬರ್‌ನಲ್ಲಿ ನಾಲ್ಕು ಕೋರ್‌ಗಳು, ಅಂದರೆ ನಾಲ್ಕು ಸ್ವತಂತ್ರ ಚಾನಲ್‌ಗಳಿವೆ. ಇದರಿಂದ ಒಂದು ಫೈಬರ್ ಕೇಬಲ್‌ನಲ್ಲಿಯೇ ಹೆಚ್ಚಿನ ಪ್ರಮಾಣದ ಡೇಟಾವನ್ನು ತ್ವರಿತವಾಗಿ ಪ್ರಸಾರ ಮಾಡಬಹುದು.

ಇದು 'ಅತ್ಯಾಧುನಿಕ ಡೇಟಾ ಮಲ್ಟಿಪ್ಲೆಕ್ಸಿಂಗ್' ತಂತ್ರಜ್ಞಾನದ ಫಲ. ಈ ಸಾಧನೆಯಲ್ಲಿ ವೇವ್‌ಲೆಂಥ್ ಡಿವಿಷನ್ ಮಲ್ಟಿಪ್ಲೆಕ್ಸಿಂಗ್ (WDM) ತಂತ್ರಜ್ಞಾನ ಬಳಸಲಾಗಿದೆ. ವಿಭಿನ್ನ ತರಂಗದ ಬೆಳಕಿನ 552 ಚಾನಲ್‌ಗಳನ್ನು ಬಳಸಿಕೊಂಡು, ಒಂದೇ ಫೈಬರ್ ಮೂಲಕ ಹೆಚ್ಚಿನ ಡೇಟಾವನ್ನು ಕಳಿಸಬಹುದಾಗಿದೆ.

ಈ ತಂತ್ರಜ್ಞಾನದಿಂದ, ದೀರ್ಘ ದೂರದ ಡೇಟಾ ಪ್ರಸರಣವೂ ಸಾಧ್ಯವಾಗಿದೆ. ಈ ಸಾಧನೆಯನ್ನು 3,001 ಕಿ.ಮೀ.ಗಳ ಅಂತರದಲ್ಲಿ ಪ್ರಯೋಗಾತ್ಮಕವಾಗಿ ಪರೀಕ್ಷಿಸಲಾಯಿತು. ಈ ಅಂತರದಲ್ಲಿ ಡೇಟಾ ಪ್ರಸರಣದ ವೇಗವನ್ನು ಕಾಪಾಡಲು ಆಪ್ಟಿಕಲ್ ಆಂಪ್ಲಿಫೈಯರ್‌ಗಳನ್ನು ಬಳಸಲಾಯಿತು. ಇದರಿಂದಾಗಿ, ಭವಿಷ್ಯದ ಸಂಪರ್ಕ ವ್ಯವಸ್ಥೆಗಳು, ಅಂತಾರಾಷ್ಟ್ರೀಯ ಡೇಟಾ ಕೇಬಲ್‌ಗಳು ಇನ್ನಷ್ಟು ವೇಗವಾಗಿ ಕಾರ್ಯನಿರ್ವಹಿಸಬಹುದು.

ಈ ಹೊಸ ತಂತ್ರಜ್ಞಾನವನ್ನು ಜಾಗತಿಕ ಇಂಟರ್ನೆಟ್ ಮೂಲಸೌಕರ್ಯದಲ್ಲಿ ಅಳವಡಿಸಿದರೆ, ಇಂಟರ್ನೆಟ್ ವೇಗ ಹಲವು ಪಟ್ಟು ಹೆಚ್ಚಾಗಬಹುದು. ಭವಿಷ್ಯದಲ್ಲಿ, ಅತ್ಯಂತ ವೇಗದ ಡೌನ್‌ಲೋಡ್, ಲೈವ್ ಸ್ಟ್ರೀಮಿಂಗ್, ಕ್ಲೌಡ್ ಕಂಪ್ಯೂಟಿಂಗ್ ಮತ್ತು ತ್ವರಿತ ಸಂಪರ್ಕದ ಅವಕಾಶ ಲಭ್ಯವಾಗಬಹುದು.

ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೂ ಈ ಹೊಸ ತಂತ್ರಜ್ಞಾನವು ತ್ವರಿತಗತಿಯಲ್ಲಿ ಬರಲು ಸಾಧ್ಯವಿದೆ. ಇದರಿಂದ ಗ್ರಾಮೀಣ ಭಾಗಗಳಿಗೂ ಹೆಚ್ಚಿನ ವೇಗದ ಇಂಟರ್ನೆಟ್ ಸಂಪರ್ಕ ದೊರಕಬಹುದು. ಇದು ಇಂಟರ್ನೆಟ್ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಸಾಧನೆಯಾಗಿದ್ದು, ಜಪಾನಿನ ಈ ಹೊಸ ಪ್ರಯೋಗವು ಭವಿಷ್ಯದ ಸಂಪರ್ಕ ವ್ಯವಸ್ಥೆಯನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸಲಿದೆ!

ಏಳನೇ ತರಗತಿ ಬೀಳ್ಕೊಡುಗೆಯ ಗ್ರೂಪ್ ಫೋಟೊ ತಂದ ಹಿಗ್ಗು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಮೃತ ಮಹೋತ್ಸವದ ಅರ್ಥಪೂರ್ಣ ಸಂಭ್ರಮದಲ್ಲಿದೆ ನನ್ನ ಹುಟ್ಟೂರಿನ ಗುರುಕುಲ ಹಿರಿಯ ಪ್ರಾಥಮಿಕ ಶಾಲೆ. 75 ಸಾರ್ಥಕ ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು ಪ್ರಪಂಚವನ್ನೆದುರಿಸಲಿಕ್ಕೆ ಬೇಕಾದ ಅರಿವು-ಆತ್ಮವಿಶ್ವಾಸಗಳ ಭದ್ರ ಅಡಿಪಾಯ ಹಾಕಿಕೊಟ್ಟು ತಿದ್ದಿ-ತೀಡಿ ತಯಾರುಗೊಳಿಸಿದ ಒಂದು ಆದರ್ಶ ಶಿಕ್ಷಣ ಸಂಸ್ಥೆಯಿದು. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಮಾಳ ಎಂಬ ಹಳ್ಳಿಯಲ್ಲಿ, ಪಶ್ಚಿಮ ಘಟ್ಟಗಳ ತಪ್ಪಲಿನ ಸುಂದರ ಪರಿಸರದಲ್ಲಿ ಕಂಗೊಳಿಸುತ್ತಿರುವ ಜ್ಞಾನದೇಗುಲ. ಗುರುಕುಲ ಎಂಬ ಇದರ ಹೆಸರೇ ವಿಶಿಷ್ಟ, ಅನನ್ಯ. ಏಕೆಂದರೆ ಪುರಾಣಗಳಲ್ಲಿ ಮತ್ತು ಚಂದಮಾಮ ಕಥೆಗಳಲ್ಲಷ್ಟೇ ಗುರುಕುಲಗಳು ಇರುತ್ತಿದ್ದದ್ದು. ಈಗಿನ ಕಾಲದ ಶಿಕ್ಷಣಪದ್ಧತಿಯನ್ನನುಸರಿಸುವ, ಕನ್ನಡಮಾಧ್ಯಮದ ಸಾಮಾನ್ಯ ಅನುದಾನಿತ ಶಾಲೆಯೊಂದರ ಹೆಸರೇ ಗುರುಕುಲ ಎಂದು ಇರುವುದು- ನನಗೆ ತಿಳಿದ ಮಟ್ಟಿಗಂತೂ- ಅಪರೂಪ. ಅಂಥದೊಂದು ಅಗ್ಗಳಿಕೆ ನಮ್ಮ ಶಾಲೆಯದು. ಅದಕ್ಕೆ ತಕ್ಕುದಾಗಿ ಒಬ್ಬರಲ್ಲ ಇಬ್ಬರು ಶಿಕ್ಷಕ/ಶಿಕ್ಷಕಿಯರಿಗೆ ರಾಷ್ಟ್ರಪ್ರಶಸ್ತಿಯ ಅತ್ಯುನ್ನತ ಗೌರವ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿದು ಸದಾ ಅಗ್ರೇಸರ. ಪ್ರತಿಭಾಕಾರಂಜಿ ಸ್ಪರ್ಧೆಗಳಲ್ಲಿ ಸಾಲುಸಾಲು ಪಾರಿತೋಷಕಗಳು. ನಾನು ಪ್ರಾಥಮಿಕ ವಿದ್ಯಾಭ್ಯಾಸದ 6ನೆಯ ಮತ್ತು 7ನೆಯ ತರಗತಿಗಳನ್ನು ಮಾತ್ರ ಈ ಶಾಲೆಯಲ್ಲಿ ಕಲಿತದ್ದು. ಕಾರಣ ಒಂದನೆಯಿಂದ ಐದನೆಯವರೆಗೆ ನಮಗೆ ಮನೆಯ ಹತ್ತಿರದಲ್ಲೇ ಸ.ಕಿ.ಪ್ರಾ ಶಾಲೆ ಇತ್ತು. ಅದು ಏಕೋಪಾಧ್ಯಾಯ ಏಕಕೊಠಡಿಯ ಶಾಲೆ. ಒಂದೊಂದು ತರಗತಿಯಲ್ಲೂ ಒಂದು ಕೈಯ ಬೆರಳುಗಳಿಗಿಂತಲೂ ಕಡಿಮೆ ಸಂಖ್ಯೆಯ ಮಕ್ಕಳು. ಈಗಂತೂ ಆ ಶಾಲೆ ಶಾಶ್ವತವಾಗಿ ಮುಚ್ಚಿಹೋಗಿದೆ, ಕಟ್ಟಡ ಪಾಳುಬಿದ್ದಿದೆ. ಹಾಗಾಗಿ, ನಮ್ಮ ಪ್ರಾಥಮಿಕ ಶಾಲೆ ಎಂಬ ಪ್ರೀತ್ಯಭಿಮಾನಕ್ಕೆ ಈಗ ಭಾಜನವಾಗುವುದು ಏನಿದ್ದರೂ ಈ ಗುರುಕುಲ ಶಾಲೆಯೇ.

ಅಮೃತ ಮಹೋತ್ಸವದ ಮುಖ್ಯ ಸಮಾರಂಭವಿರುವುದು ಈ ವರ್ಷದ ಡಿಸೆಂಬರ್ 26, 27, 28ರಂದು. ಕ್ರಿಸ್ಮಸ್ ಮತ್ತು ಕ್ಯಾಲೆಂಡರ್ ವರ್ಷಾಂತ್ಯದ ರಜಾದಿನಗಳಾದ್ದರಿಂದ ದೂರದೇಶಗಳಲ್ಲಿರುವ ಹಳೆವಿದ್ಯಾರ್ಥಿಗಳಿಗೂ ಬರಲಿಕ್ಕೆ ಅನುಕೂಲವಾಗುತ್ತದೆಂದು ಈ ಏರ್ಪಾಡು. ಏಳು ದಶಕಗಳ ಕಾಲಾವಧಿಯಲ್ಲಿ, ಈ ಶಾಲೆಯಿಂದ ಶಿಕ್ಷಣ ಪಡೆದವರು, ಈಗ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರು ಜಗದಗಲ ಹರಡಿದ್ದಾರೆ. ವೈದ್ಯರು, ಎಂಜಿನಿಯರ್‌ಗಳು, ವಿಜ್ಞಾನಿಗಳು, ಮಹಾಪ್ರಬಂಧಕರು, ಉದ್ಯಮಿಗಳು, ಕಲಾವಿದರು, ಶಿಕ್ಷಕರು, ವಿದ್ವಾಂಸರು, ಪುರೋಹಿತರು, 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂದು ಸಾಧಿಸಿದವರು, ಸಮಾಜಸೇವೆಯಲ್ಲಿ ಸಂತೃಪ್ತಿ ಕಂಡವರು, ಪ್ರಶಸ್ತಿಗಳಿಂದ ಪುರಸ್ಕೃತರಾದವರು... ಹೀಗೆ ವೃತ್ತಿವೈವಿಧ್ಯವಿದ್ದರೂ ''ನಾನು ಗುರುಕುಲ ಶಾಲೆಯಲ್ಲಿ ಕಲಿತವನು/ಳು'' ಎಂದು ಎದೆಯುಬ್ಬಿಸಿ ಹೇಳುವವರಿದ್ದಾರೆ. ಇವರೆಲ್ಲರೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಬೇಕು, ಶಾಲಾದಿನಗಳನ್ನು ನೆನೆದು ಪುಳಕಿತರಾಗಬೇಕು, ಉತ್ಸವಕ್ಕೆ ಕಳೆಯೇರಬೇಕು ಎಂಬ ಆಶಯ. ತಯಾರಿಗಳು ದೊಡ್ಡ ಮಟ್ಟದಲ್ಲೇ ಆರಂಭವಾಗಿವೆ. ವಿವಿಧ ಸಮಿತಿಗಳ ರಚನೆಯಾಗಿದೆ. ಈಹಿಂದೆ ಗುರುಕುಲದ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದ, ಈಗ ನಮ್ಮನ್ನಗಲಿರುವ ಮೂವರು ಗುರುವರೇಣ್ಯರ ಸ್ಮರಣಾರ್ಥ ಸುಸಜ್ಜಿತ ಸಭಾಭವನವೊಂದರ ನಿರ್ಮಾಣಕ್ಕೆ ಚಾಲನೆ ದೊರೆತಿದೆ; ಉತ್ಸವದ ವೇಳೆಗೆ ಅದು ಸಜ್ಜಾಗಲಿದೆ. ಬೇಸಗೆ ರಜೆಯ 'ಅಮೃತಶಿಬಿರ'ದಲ್ಲಿ ಮಕ್ಕಳಿಗೆ ವಿವಿಧ ಕರಕುಶಲ ಕಲೆ, ಪ್ರಾಣಾಯಾಮ, ಯೋಗಾಭ್ಯಾಸ, ಭಗವದ್ಗೀತೆ, ವೇದಗಣಿತ ಇತ್ಯಾದಿ ವಿವಿಧ ಕಲಿಕೆ ಚಟುವಟಿಕೆಗಳು ನಡೆದಿವೆ. ವರ್ಷದುದ್ದಕ್ಕೂ ಅಂತರಶಾಲಾ ಸ್ಪರ್ಧೆಗಳು, ಪ್ರತಿಭಾಪ್ರದರ್ಶನಗಳು ಆಯೋಜನೆಯಾಗಿವೆ. ಒಟ್ಟಿನಲ್ಲಿ ವಿಶೇಷವಾದೊಂದು ಹಬ್ಬದ ವಾತಾವರಣ ಹಬ್ಬತೊಡಗಿದೆ.

ಶಿಕ್ಷಣಸಂಸ್ಥೆಯೊಂದರ ಸುದೀರ್ಘ ಪಯಣದಲ್ಲಿ ಇಂಥದೊಂದು ಪ್ರಮುಖ ಮೈಲಿಗಲ್ಲೆಂದ ಮೇಲೆ ಒಂದು ಸ್ಮರಣ ಸಂಚಿಕೆಯೂ ಇರಲೇಬೇಕಲ್ಲವೇ! ಹೌದು, ಅದಕ್ಕೂ ಓನಾಮ ಬರೆದಾಗಿದೆ. ಗುರುಕುಲ ಶಾಲೆಯ ಬಗೆಗಿನ ಸವಿಸವಿ ನೆನಪು ಸಾವಿರ ನೆನಪುಗಳನ್ನು ಅಕ್ಷರರೂಪಕ್ಕಿಳಿಸಿ ಕಳುಹಿಸುವಂತೆ ಪ್ರಕಟಣೆ ಹೊರಟಿದೆ. ಜತೆಯಲ್ಲೇ ಸಂಪಾದಕೀಯ ಮಂಡಲಿಯಲ್ಲಿರುವವರಿಗೆ ಒಂದು ಭಲೇ ಐಡಿಯಾ ಹೊಳೆದಿದೆ. ಏನೆಂದರೆ, ಗುರುಕುಲ ಶಾಲೆಯಿಂದ ಏಳನೇ ತರಗತಿ ಉತ್ತೀರ್ಣರಾಗಿ ವಿದ್ಯಾರ್ಥಿಗಳು ಹೊರಬರಲಾರಂಭಿಸಿದ ವರ್ಷದಿಂದ ಆರಂಭಿಸಿ ಪ್ರತಿವರ್ಷದ ವಿದ್ಯಾರ್ಥಿಗಳ ಗ್ರೂಪ್‌ಫೋಟೊ ಸಂಗ್ರಹಿಸಿ ಸ್ಮರಣಸಂಚಿಕೆಯಲ್ಲಿ ಪ್ರಕಟಿಸುವುದು. ಅಷ್ಟೇಅಲ್ಲ, ಅವರೆಲ್ಲರ ಹೆಸರು, ಈಗ ಎಲ್ಲಿದ್ದಾರೆ ಏನು ಮಾಡಿಕೊಂಡು ಇದ್ದಾರೆ ಎಂಬಿತ್ಯಾದಿ ಲಭ್ಯವಾದಷ್ಟು ವಿವರಗಳನ್ನೂ ಸೇರಿಸುವುದು. ಇದು ಅಂದುಕೊಂಡಷ್ಟು ಸುಲಭದ ಕೆಲಸವಲ್ಲ. ಆರಂಭದ ವರ್ಷಗಳಲ್ಲಿ ಹಾಗೊಂದು ಗ್ರೂಪ್‌ಫೋಟೊ ಕ್ರಮವೇ ಇರಲಿಲ್ಲವೇನೊ. ಫೋಟೊ ಕ್ಲಿಕ್ಕಿಸುವುದೆಂದರೆ ಈಗಿನಂತೆ ಸಸಾರವಿರಲಿಲ್ಲವಲ್ಲ! ಕಾರ್ಕಳ ಪೇಟೆಯಲ್ಲಿದ್ದ ಸ್ಟುಡಿಯೋದವರನ್ನು ಕರೆಸಬೇಕು, ಅವರ ಮರ್ಜಿಯ ಮೇರೆಗೆ ಅವರು ಬರಬೇಕು, ಫೋಟೊ ಪ್ರತಿಗಳನ್ನು ಸಂಗ್ರಹಿಸಲಿಕ್ಕೆ ಅವರ ಹಿಂದೆ ಬೀಳಬೇಕು, ಮುಖ್ಯೋಪಾಧ್ಯಾಯರೇ ಆ ಕೆಲಸ ಮಾಡಬೇಕು. 'ಫೋಟೊ ಬೇಕಾಗಿಲ್ಲ, ಅದೊಂದು ಲಕ್ಷುರಿ ಯಾವುದಕ್ಕೆ?' ಎಂದು ನಿರಾಕರಿಸುತ್ತಿದ್ದ ಕೆಳಮಧ್ಯಮವರ್ಗದ ಪೋಷಕರು; ಉಚಿತವಾಗಿ ಕೊಡುತ್ತೇವೆಂದರೂ ಬೇಡವೆನ್ನುವವರು. ಫೋಟೊ ಬಗ್ಗೆ ಅನಾದರಕ್ಕೆ ಕಾರಣವೂ ಇಲ್ಲದಿಲ್ಲ. ನಮ್ಮೂರಿನ ಹವಾಗುಣ, ಮುಖ್ಯವಾಗಿ ಮಳೆಗಾಲದಲ್ಲಿನ ತೀವ್ರ ಥಂಡಿ. ಎಂಥ ಫ್ರೇಮ್ ಹಾಕಿಟ್ಟರೂ ಫೋಟೊ ಒಂದೆರಡು ವರ್ಷದೊಳಗೆ ಹಾಳಾಗಿ ಅದರಲ್ಲಿರುವವರು ಯಾರೆಂದು ಗೊತ್ತಾಗದಷ್ಟು ವಿರೂಪ. ಅಂಥ ಫೋಟೊ ಸಿಕ್ಕಿದರೂ ಪ್ರಯೋಜನವಿಲ್ಲ. ಆದರೂ ಸಂಪಾದಕೀಯ ಮಂಡಲಿಯ ಕೋರಿಕೆಗೆ ಒಳ್ಳೆಯ ಸ್ಪಂದನ ಸಿಕ್ಕಿತು. ಒಂದೊಂದು ವರ್ಷದ ಫೋಟೊ ಮತ್ತು ವಿದ್ಯಾರ್ಥಿಗಳ ಇಂದಿನ ವಿವರಗಳನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಒಬ್ಬೊಬ್ಬರು ವಹಿಸಿಕೊಂಡರು.

ಅದಕ್ಕೆಂದೇ ಪ್ರತ್ಯೇಕ ವಾಟ್ಸ್ಯಾಪ್ ಗ್ರೂಪ್ ಮಾಡಿಕೊಂಡರು. ಪಾತಾಳಗರಡಿ ಬಳಸಿ ಉತ್ಖನನ ಶುರುವಾಯಿತು.

ಇದಿಷ್ಟು ಹಿನ್ನೆಲೆ. ಈಗಿನ್ನು ನಮ್ಮ ಏಳನೆಯ ತರಗತಿ ಬ್ಯಾಚನ್ನಷ್ಟೇ ಕೇಂದ್ರೀಕರಿಸಿ ಮುಂದುವರಿಸುತ್ತೇನೆ. ಪ್ರಾತಿನಿಧಿಕವಾಗಿ ಎಂಬ ಕಾರಣಕ್ಕಷ್ಟೇ. ಏಕೆಂದರೆ ಬೇರೆ ಬ್ಯಾಚ್‌ಗಳದೂ ಹೆಚ್ಚೂಕಡಿಮೆ ಇದೇ ಥರದ ರೋಮಾಂಚನ. ಅಷ್ಟೇಕೆ, ಒಂದುವೇಳೆ ನಿಮ್ಮ ಬಾಲ್ಯಕಾಲದ, ಪ್ರಾಥಮಿಕ ಶಾಲೆಯ ಸಹಪಾಠಿಗಳು ಮತ್ತು ಶಿಕ್ಷಕವೃಂದ ಇರುವ ಗ್ರೂಪ್‌ಫೋಟೊ(ಅದೂ ಕಪ್ಪುಬಿಳುಪಿನದು) ಈಗೊಮ್ಮೆ ಹಠಾತ್ತನೆ ನೋಡಲಿಕ್ಕೆ ಸಿಕ್ಕಿದರೆ ನಿಮ್ಮ ರೋಮಾಂಚನ ಸಂಭ್ರಮಗಳೂ, ''ಓಹ್! ನಾನು ಹೀಗೆ ಕಾಣಿಸ್ತಿದ್ನಾ!'', ''ಇವಳು ನೋಡು ಹೇಗಿದ್ಲು ಆಗ!'', ''ಹೇಗಿದ್ದ ಹೇಗಾದ ಗೊತ್ತಾ ನಮ್ಮ ಚಿನ್ನಾರಿ ಮುತ್ತ!'' ರೀತಿಯ ಉದ್ಗಾರಗಳೂ, ''ಛೇ! ಅವಳು ಈಗ ಇಲ್ಲವಂತೆ ಎಳೆಪ್ರಾಯದಲ್ಲೇ ತೀರಿಹೋದ್ಳಂತೆ...'' ರೀತಿಯ ವಿಷಾದಗಳೂ, ''ಅಂದು ಈ ಮೇಷ್ಟ್ರ ಏಟು ತಿಂದಿದ್ದರಿಂದಲೇ ಇಂದು ನಾನು ಇಷ್ಟೊಳ್ಳೆಯ ಪ್ರಜೆಯಾಗಿದ್ದೇನೆ'' ರೀತಿಯ ಕೃತಜ್ಞತೆಗಳೂ ಇದೇ ತೆರನಾಗಿ ಇರುತ್ತವೆ. ಅಂಕಣಬರಹಕ್ಕೆ ಟಾಪಿಕ್ ಆಗಿ ನಾನಿದನ್ನು ಆಯ್ದುಕೊಂಡಿದ್ದಾದರೂ ಆ ಕಾರಣಕ್ಕೇ. ಅಂದಹಾಗೆ ಇಲ್ಲಿ ನನ್ನ ಸಹಪಾಠಿಗಳನ್ನು ಸಹಪಾಠಿಗಳೆಂಬ ಸಲುಗೆ ಮತ್ತು ಆತ್ಮೀಯತೆಯ ದೃಷ್ಟಿಯಿಂದ ಏಕವಚನದಲ್ಲಿ ಉಲ್ಲೇಖಿಸುವವನಿದ್ದೇನೆ (ಸಾಮಾನ್ಯವಾಗಿ ಬಹುವಚನ ಸಂಬೋಧನೆಯೇ ನನ್ನ ಪ್ರಾಶಸ್ತ್ಯವಾದರೂ).

1980-81ರ ಶೈಕ್ಷಣಿಕ ವರ್ಷದ ಬ್ಯಾಚ್ ನಮ್ಮದು. ವಿವರಸಂಗ್ರಹದ ಜವಾಬ್ದಾರಿ ಹೊತ್ತವನು ವಿಶ್ವನಾಥ ಗೋಖಲೆ. ಈತ ಮೂಲತಃ ನಮ್ಮೂರಿನವನಲ್ಲ, ಅಜ್ಜನಮನೆಯಲ್ಲಿದ್ದು 1ರಿಂದ 7ನೆಯವರೆಗೆ ಗುರುಕುಲ ಶಾಲೆಯಲ್ಲಿ ಓದಿದವನು. 7ನೇ ಆದಮೇಲೆ ನಾನೂ ಅವನೂ ಬೇರೆಬೇರೆ ಹೈಸ್ಕೂಲ್‌ಗಳಿಗೆ ಹೋದೆವಾದರೂ ಪಿಯುಸಿಯಲ್ಲಿ ಉಜಿರೆಯ ಧ.ಮಂ. ಕಾಲೇಜಿನಲ್ಲಿ ಮತ್ತೊಮ್ಮೆ ಸಹಪಾಠಿಗಳಾಗಿದ್ದೆವು. ಅದಾದಮೇಲೆ ನಾನು ದಾವಣಗೆರೆಯಲ್ಲಿ ಎಂಜಿನಿಯರಿಂಗ್ ಓದಿದರೆ ವಿಶ್ವನಾಥ ಮೈಸೂರಿನಲ್ಲಿ ಮೆಡಿಕಲ್ ಓದಿ ಡಾ. ವಿಶ್ವನಾಥ ಗೋಖಲೆ ಆದನು. ಹುಬ್ಬಳ್ಳಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ನೇತ್ರತಜ್ಞನಾದನು. ಸ್ವಲ್ಪಕಾಲ ಬೆಳ್ತಂಗಡಿಯಲ್ಲಿ ತನ್ನದೇ ಕ್ಲಿನಿಕ್ ನಡೆಸಿ ಮತ್ತೆ ಸ್ವಲ್ಪ ಕಾಲ ಮುಂಬಯಿಯ ನೇತ್ರವಿಜ್ಞಾನ ಸಂಸ್ಥೆಯಲ್ಲಿ ಕೆಲಸ ಮಾಡಿ 2008ರಿಂದ ಕೆನ್ಯಾ ದೇಶದ ಮೊಂಬಾಸಾದಲ್ಲಿ ಲಯನ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ನೇತ್ರತಜ್ಞನಾಗಿ ಸೇವೆಸಲ್ಲಿಸುತ್ತಿದ್ದಾನೆ. ಪತ್ನಿಯೂ ನೇತ್ರತಜ್ಞೆ, ಅದೇ ಆಸ್ಪತ್ರೆಯಲ್ಲಿ ಸೇವಾನಿರತೆ. ಕಗ್ಗತ್ತಲೆಯ ಖಂಡದ ಸಾವಿರಾರು ಬಡ ರೋಗಿಗಳಿಗೆ ಉಚಿತ ನೇತ್ರಚಿಕಿತ್ಸೆ ನಡೆಸಿ ಬೆಳಕುತೋರಿದ್ದಾರೆ ಈ ದಂಪತಿ. ಐದಾರು ವರ್ಷಗಳ ಹಿಂದೊಮ್ಮೆ ಒಬ್ಬ ಸಂಪೂರ್ಣ ಅಂಧ ಆಫ್ರಿಕನ್ ಹುಡುಗನಿಗೆ ಶಸ್ತ್ರಚಿಕಿತ್ಸೆಯ ಮೂಲಕ ದೃಷ್ಟಿ ಬಂದಾಗಿನ ಆತನ ರೋಮಾಂಚನ, ಡಾ.ವಿಶ್ವನಾಥ್ ಆ ಹುಡುಗನ ಗಲ್ಲವನ್ನು ಮಿದುವಾಗಿ ತಟ್ಟಿ ಅಭಿನಂದಿಸಿದ ಅದ್ಭುತ ಕ್ಷಣದ ವಿಡಿಯೊವನ್ನು ನನ್ನೊಡನೆ ಹಂಚಿಕೊಂಡಿದ್ದ. ಅಂಥ ವಿಶ್ವನಾಥ ನಮ್ಮ ಗ್ರೂಪ್ ಲೀಡರ್ ಆದದ್ದು ಖುಶಿಯಾಯ್ತು. ತರಗತಿಯಲ್ಲಿದ್ದವರ ಹೆಸರುಗಳು ನನಗೆ ನೆನಪಾದವಷ್ಟನ್ನು ಬರೆದು ಗ್ರೂಪಲ್ಲಿ ಹಾಕಿದೆ. ಒಂದೆರಡು ಹೆಸರುಗಳನ್ನು ವಿಶ್ವನಾಥನೇ ನೆನಪಿಸಿದ್ದರಿಂದ ಒಟ್ಟು 21 ವಿದ್ಯಾರ್ಥಿಗಳಿದ್ದೆವೆಂಬ ನೆನಪು ತಾಜಾ ಆಯ್ತು. ಆದರೆ ಗ್ರೂಪ್‌ಫೋಟೊ ನನ್ನಲ್ಲೂ ಇಲ್ಲ, ಅವನ ಬಳಿಯೂ ಇಲ್ಲ, ಯಾರಲ್ಲಿ ಸಿಗಬಹುದೆಂದು ಗೊತ್ತಿಲ್ಲ.

ಹೀಗಿರಲು ವಾಟ್ಸ್ಯಾಪ್ ಗ್ರೂಪಲ್ಲಿ ಒಂದುದಿನ ನಮ್ಮ ಬ್ಯಾಚ್‌ನ ಗ್ರೂಪ್‌ಫೋಟೊ ಧುತ್ತೆಂದು ಪ್ರತ್ಯಕ್ಷವಾಯಿತು! ಪೋಸ್ಟ್ ಮಾಡಿದವಳು ಲತಾ ಮರಾಠೆ. ಶಾಲೆಯಲ್ಲಿ ವಿದ್ಯಾರ್ಥಿಗಳ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿ ಆಗಿದ್ದವಳು. 1ನೆಯಿಂದ 10ನೆಯವರೆಗೂ ಅದದೇ ಶಾಲೆಗಳಲ್ಲಿ ಓದಿದ್ದರಿಂದ ನನ್ನ ದೀರ್ಘಕಾಲದ ಸಹಪಾಠಿ. ಆದರೆ ಹೈಸ್ಕೂಲ್ ಮುಗಿದಮೇಲೆ ಕಡಿದುಹೋಗಿದ್ದ ಸಂಪರ್ಕ ಮರುಸ್ಥಾಪನೆಯಾದದ್ದು ನಾಲ್ಕು ವರ್ಷಗಳ ಹಿಂದೆ ಗೀತಾಪರಿವಾರದಲ್ಲಿ ಆನ್‌ಲೈನ್‌ನಲ್ಲಿ ಭಗವದ್ಗೀತೆ ಕಲಿಕೆಯ ದೆಸೆಯಿಂದ. ಮದುವೆಯಾಗಿ ಸೋಂದಾ ವಾದಿರಾಜ ಮಠಕ್ಕೆ ಸಮೀಪದ ಪರಾಂಜಪೆ ಕುಟುಂಬವನ್ನು ಸೇರಿದ ಲತಾ ಮುಗ್ಧಮನಸ್ಸಿನ ಓರ್ವ ಸದ್ಗೃಹಿಣಿ; ಬೆಂಗಳೂರಲ್ಲಿರುವ ಮಗ-ಸೊಸೆ ಮುದ್ದಾದ ಮಗುವಿಗೆ ಜನ್ಮವಿತ್ತಿರುವುದರಿಂದ ಈಗ ಅಜ್ಜಿ! (ಸಹಪಾಠಿಗಳು ಹಾಗೆ ತಮಾಷೆ ಮಾಡಬಹುದು ಎಂದುಕೊಂಡಿದ್ದೇನೆ). ಗ್ರೂಪ್‌ಫೋಟೊ ಹೇಗೆ ಸಿಕ್ಕಿತೆಂಬ ವಿವರವನ್ನು ಲತಾ ನನಗೊಂದು ವಾಯ್ಸ್‌ಮೆಸೇಜಿನಲ್ಲಿ ತಿಳಿಸಿದಳು: ''ಇದನ್ನು ಜತನದಿಂದ ಕಾಯ್ದ ಶ್ರೇಯ ನನ್ನ ದಿವಂಗತ ತಂದೆಗೆ ಸಲ್ಲಬೇಕು. ಪ್ರತಿವರ್ಷ ಮಳೆಗಾಲಕ್ಕೆ ಮುನ್ನ ಫೋಟೊಗಳನ್ನೆಲ್ಲ ಗೋಡೆಯಿಂದ ತೆಗೆದು ಒರೆಸಿ ಬಟ್ಟೆ ಸುತ್ತಿ ಪೆಟ್ಟಿಗೆಯೊಳಗೆ ಇಡುತ್ತಿದ್ದರು. ಮಳೆಗಾಲ ಮುಗಿದಮೇಲೆ ಹೊರತೆಗೆದು ಗೋಡೆಗೇರಿಸುತ್ತಿದ್ದರು. ಸಾಯುವತನಕ ಇದನ್ನವರು ನಿಷ್ಠೆಯಿಂದ ಮಾಡಿದ್ದಾರೆ. ಈಗ ಊರಲ್ಲಿ ನಮ್ಮ ಮನೆಯಲ್ಲಿ ಅಪ್ಪನೂ ಇಲ್ಲ, ಅಮ್ಮ ಅವರಿಗಿಂತಲೂ ಮೊದಲೇ ನಿಧನರಾಗಿದ್ದಾರೆ. ಮನೆಗೆ ಬೀಗ. ಬೆಂಗಳೂರಲ್ಲಿರುವ ತಮ್ಮ ಆಗೊಮ್ಮೆ ಈಗೊಮ್ಮೆ ಆ ಮನೆಗೆ ಹೋಗಿಬರುತ್ತಾನೆ. ಬೀಗದಕೈ ಪಕ್ಕದ್ಮನೆಯವರತ್ರ ಇದೆ. ನಿನ್ನೆ ಆ ಮನೆಯ ಹುಡುಗನಿಗೆ ಫೋನ್ ಮಾಡಿ ಬೀಗ ತೆಗೆದು ಒಳಗೆ ಹೋಗಿ ಫೋಟೊ ಇಂಥ ಜಾಗದಲ್ಲಿ ಇರಬಹುದು, ಅದರಲ್ಲಿ 44 ವರ್ಷ ಹಿಂದಿನ ನನ್ನನ್ನು ನೀನು ಗುರುತಿಸಲೂಬಹುದು, ಸಿಕ್ಕಿದರೆ ಮೊಬೈಲ್‌ನಲ್ಲಿ ಅದರದೊಂದು ಫೋಟೊ ಕ್ಲಿಕ್ಕಿಸಿ ನನಗೆ ವಾಟ್ಸ್ಯಾಪ್ ಮಾಡು ಎಂದು ಹೇಳಿದೆ. ಶ್ರದ್ಧೆಯಿಂದ ಮಾಡಿಕೊಟ್ಟಿದ್ದಾನೆ'' ಎನ್ನುವಾಗ ಲತಾಳ ಧ್ವನಿ ಗದ್ಗದಿತವಾಗಿತ್ತು.

ಸರಿ, ಗ್ರೂಪ್‌ಫೋಟೊ ಕಾಣಿಸಿಕೊಂಡಾಗ ವಾಟ್ಸ್ಯಾಪ್ ಗ್ರೂಪಲ್ಲೂ ಸ್ವಲ್ಪ ಸಂಚಲನವಾಯ್ತು. ಒಬ್ಬರನ್ನೊಬ್ಬರು ಗುರುತಿಸುವುದು ನೆನಪಿಸಿಕೊಳ್ಳುವುದು ನಡೆಯಿತು. ''7ನೇ ಮುಗಿದ ಮೇಲೆ ಈಗಿನವರೆಗಿನ ನಿಮ್ಮ ಜೀವನದ ಪ್ರಮುಖಘಟ್ಟಗಳನ್ನು



ಸಂಕ್ಷಿಪ್ತವಾಗಿ ತಿಳಿಸುವಿರಾ?'' ಎಂಬ ನನ್ನ ಕೋರಿಕೆಗೆ ಕೆಲವರು ಸ್ಪಂದಿಸಿದರು. ''7ನೇ ಆದಮೇಲೆ ಶಿಕ್ಷಣ ಮುಂದುವರಿಸಲಿಲ್ಲ. ಹೋಟೆಲುಗಳಲ್ಲಿ ದುಡಿದೆ. ಆಫ್ರಿಕಾದ ಟ್ಯುನಿಸಿಯಾದಲ್ಲೂ 5 ವರ್ಷ ಕೆಲಸ ಮಾಡಿದೆ. ಈಗ ಮುಂಬೈಗೆ ಹತ್ತಿರದ ಒಂದು ಸ್ಥಳದಲ್ಲಿದ್ದೇನೆ. ಒಬ್ಬ ಮಗ ಎನಿಮೇಷನ್ ಫೀಲ್ಡಲ್ಲಿ ಕೆಲಸ ಮಾಡ್ತಿದ್ದಾನೆ, ಇನ್ನೊಬ್ಬನದು ಸ್ವಂತ ಕಾಫಿಶಾಪ್ ಇದೆ'' ಎಂದು ಶೇಖರ ಶೆಟ್ಟಿ ಬರೆದರೆ ''ಹೈಸ್ಕೂಲ್, ಪಿಯುಸಿ ಓದಿನ ಬಳಿಕ ಟೀಚರ್ಸ್ ಟ್ರೈನಿಂಗ್ ಮತ್ತು ಕೌನ್ಸೆಲಿಂಗ್‌ನ ಪದವಿಶಿಕ್ಷಣ ಪಡೆದೆ. ಮದುವೆಯಾಗದಿರಲು ನಿರ್ಧರಿಸಿ ಮನುಕುಲದ ಸೇವೆಯ ಮೂಲಕ ದೇವನ ಸೇವೆಗೆ ನನ್ನ ಬದುಕನ್ನು ಮುಡಿಪಾಗಿಟ್ಟಿದ್ದೇನೆ. ಕೇರಳ, ಆಂಧ್ರಪ್ರದೇಶ, ಪಶ್ಚಿಮ ಆಫ್ರಿಕಾದ ಮೌರಿಟೆನಿಯಾದಲ್ಲಿ ಸೇವೆ ಸಲ್ಲಿಸಿ ಈಗ ನಾನು ಪ್ಯಾರಿಸ್‌ನಲ್ಲಿ ನನ್ ಆಗಿದ್ದೇನೆ'' ಎಂದು ಡೈಸಿ ಮೇರಿಯಾ ಬರೆದಳು. ಹಾಗೆಯೇ, ''ಕಾರ್ಕಳದಲ್ಲಿ ಪಿಯುಸಿ ಮತ್ತು ಪದವಿಶಿಕ್ಷಣ ಮುಗಿಸಿ, ಕರ್ನಾಟಕ ವಿವಿಯಿಂದ ವಾಣಿಜ್ಯಶಾಸ್ತ್ರ ಮತ್ತು ಮನಃಶಾಸ್ತ್ರದಲ್ಲಿ, ಮೈಸೂರು ವಿವಿಯಿಂದ ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಪತಿಯ ಪ್ರೋತ್ಸಾಹದಿಂದಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ನೀಚಡಿ ಎಂಬ ಹಳ್ಳಿಯಲ್ಲಿ ಶ್ರೀವಾಗ್ದೇವಿ ಸಂಗೀತಶಾಲೆ ನಡೆಸುತ್ತಿದ್ದೇನೆ'' ಎಂಬ ಅಪ್ಡೇಟ್ ಬರೆದಳು ಮಂಗಲಾ ಡೋಂಗ್ರೆ. ಇನ್ನು, ವಿಶ್ವಾಸ್ ಜೋಶಿ ಕೋಲಾರದಲ್ಲಿ ದೊಡ್ಡದೊಡ್ಡ ಲಾಡ್ಜ್‌ಗಳ ಮಾಲೀಕನಾಗಿದ್ದಾನೆ, ಆಟೊಮೊಬೈಲ್ಸ್ ಡಿಪ್ಲೊಮಾ ಓದಿದ್ದ ಶ್ರೀನಿವಾಸ ಜೋಶಿ ಮಾರುತಿ ಉದ್ಯೋಗ್ ಲಿಮಿಟೆಡ್‌ನಲ್ಲೂ ತರಬೇತಿ ಪಡೆದು ಮಾರುತಿ ಕಾರುಗಳ ಯಾವುದೇ ಮಾಡೆಲ್ ಆದರೂ ಒಳ-ಹೊರ ಅರಿತಿರುವ ನುರಿತ ತಂತ್ರಜ್ಞನಾಗಿದ್ದಾನೆ, ರಘುಪತಿ ಊರಲ್ಲೇ ಇದ್ದು ಕೃಷಿಕಸುಬಿನ ಜತೆಗೇ ನೂರಾರು ಮನೆಗಳಿಗೆ ಅಸ್ತ್ರ-ಒಲೆ ಸ್ಥಾಪನೆ ಮತ್ತು ನಿರ್ವಹಣೆಯ ಸೇವೆ ಒದಗಿಸಿ ಇಂಧನ ಉಳಿತಾಯದ ದಾರಿತೋರಿಸಿದ್ದಾನೆ, ಪ್ರಭಾಕರ ಗೌಡ ಸಹ ಒಬ್ಬ ಅನುಭವಸ್ಥ ಕೃಷಿಕನಾಗಿದ್ದಾನೆ... ಎಂದು ಕೆಲವು ಸಹಪಾಠಿಗಳ ಬಗೆಗೆ ಅವರಿವರಿಂದ ಕೇಳಿ ಗೊತ್ತು. ಹೀಗೆ ಬದುಕಿನಲ್ಲಿ ಯಥಾಯೋಗ್ಯವಾಗಿ ಮುಂದೆ ಬಂದವರನ್ನು ಏಳನೇ ತರಗತಿಯ ಗ್ರೂಪ್‌ಫೋಟೊದಲ್ಲಿ ರೆಟ್ರೊಸ್ಪೆಕ್ಟಿವ್ ನೋಟದಲ್ಲಿ ನೋಡುವಾಗ, ವಿಶೇಷವಾಗಿ ಆಗಿನ ನಮ್ಮ ಚೇಷ್ಟೆಗಳನ್ನು ಮಕ್ಕಳಾಟಗಳನ್ನು ವಿವಿಧ ರಂಗುಗಳ ಪೋಕರಿ ತುಂಟತನಗಳನ್ನು ನೆನಪಿಸಿಕೊಂಡಾಗ ಆಗುವ ಅನುಭವ ವರ್ಣನಾತೀತ.

ಅದಕ್ಕಿಂತಲೂ ಬೆರಗುಂಟಾಗುವುದು ಕಲ್ಲುಬಂಡೆಗಳಿಂದ ಸುಂದರ ಶಿಲ್ಪಗಳನ್ನು, ಆವೆಮಣ್ಣಿನಿಂದ ಚಂದದ ಮಡಕೆಗಳನ್ನು ನಿರ್ಮಿಸಿ ವರ್ಷವರ್ಷವೂ ಪ್ರಪಂಚಕ್ಕೆ ಪೂರೈಸುವ ಗುರುವರೇಣ್ಯರನ್ನು ಇಂಥ ಹಳೆಯ ಫೋಟೊಗಳಲ್ಲಿ ನೋಡಿದಾಗ. ನಮಗಾಗಿ ಅವರ ಅವಿರತ ಶ್ರಮವನ್ನು ಈಗ ಅರ್ಥಮಾಡಿಕೊಂಡಾಗ. ನಮ್ಮ ಬ್ಯಾಚ್‌ನ ಫೋಟೊದಲ್ಲಿ ಅಂಥವರು ಏಳು ಮಂದಿ. ವಸಂತಿ ಟೀಚರ್ ನಮಗೆ ಆರನೆಯಲ್ಲಿ ಕನ್ನಡಕ್ಕಿದ್ದವರು. ''ಶ್ರೀವಾಗ್ದೇವಿಗೆ ಶಬ್ದದಿ ನಾನಾವಿಂದ್ರಿಯದ ವಿಷಯಮಂ...'' ಕೇಶಿರಾಜನ ಉಕ್ತಿಯಿಂದಲೇ ಪ್ರತಿದಿನದ ಕನ್ನಡ ತರಗತಿ ಆರಂಭಿಸುತ್ತಿದ್ದವರು. ಕನ್ನಡದ ಕಂಪನ್ನು ಕಿವಿಗಳಲ್ಲಿ ತುಂಬುತ್ತಿದ್ದವರು. ಮುಂದೆ ರಾಷ್ಟ್ರಪ್ರಶಸ್ತಿಯಿಂದ ಪುರಸ್ಕೃತರಾದವರು, ಅಕಾಲನಿಧನದಿಂದ ನಮ್ಮನ್ನಗಲಿದವರು. ನನ್ನ ಕನ್ನಡ ಬರವಣಿಗೆಯಲ್ಲಿ ಇಂದು ಅಷ್ಟಿಷ್ಟು ಸತ್ತ್ವವೇನಾದರೂ ಇದೆಯಾದರೆ ಅದರ ಎರಕ ವಸಂತಿ ಟೀಚರ್‌ರದು. ರೋಸಿ ಟೀಚರ್ ನಮಗೆ ಪಾಠಕ್ಕಿರಲಿಲ್ಲ ಆದರೆ ಶಾಲೆಯಲ್ಲಿ ಚಿಕ್ಕ ತರಗತಿಗಳನ್ನು ದಕ್ಷತೆಯಿಂದ ನಿರ್ವಹಿಸುವವರೆಂಬ ಖ್ಯಾತಿ ಅವರದು. ವಾಮನ ಸರ್ ನಮಗೆ ಏಳನೆಯಲ್ಲಿ ಕನ್ನಡ ಮತ್ತು ಗಣಿತ ಕಲಿಸಿದವರು. ಮಾಸ್ತರರೆಂದರೆ ಏನೂ ಹೆದರಿಕೆ ಬೇಡ ಎಂಬ ಭಾವನೆಯಿದ್ದದ್ದು ಅವರ ಬಗ್ಗೆ ಮಾತ್ರ. ತದ್ವಿರುದ್ಧವಾಗಿ ಡಬಲ್ ಹೆದರಿಕೆ ಅಗತ್ಯವಿದ್ದದ್ದು ಶಿಸ್ತಿನ ಮತ್ತು ಸಿಟ್ಟಿನ ಮೂರ್ತರೂಪವಾಗಿದ್ದ ಮೂರ್ತಿಮೇಷ್ಟ್ರ ಬಗ್ಗೆ. ಅವರು ಗುರುಕುಲದ ಮುಖ್ಯೋಪಾಧ್ಯಾಯರು, ಏಳನೆಯಲ್ಲಿ ನಮಗೆ ಸಮಾಜ ಪಾಠ ಮಾಡಿದ್ದರು. ನಾರಾಯಣ ಸರ್ ಆರನೆಯಲ್ಲೂ ಏಳನೆಯಲ್ಲೂ ಇಂಗ್ಲಿಷ್ ಕಲಿಸಿದವರು. ಅದಕ್ಕಿಂತ ಹೆಚ್ಚಾಗಿ ಜೀವನಮೌಲ್ಯಗಳನ್ನೂ ವ್ಯವಹಾರಜ್ಞಾನವನ್ನೂ ಬೋಧಿಸಿದವರು, ಈಗ ದಿವಂಗತರು. ಕೃಷ್ಣ ಸರ್ ಆರನೆಯಲ್ಲಿ ಗಣಿತ ಕಲಿಸಿದವರು. ನಾಗಭೂಷಣ ಸರ್ ವಿಜ್ಞಾನ ಮತ್ತು ಹಿಂದಿ ಕಲಿಸಿದವರು. ರಾಷ್ಟ್ರಪ್ರಶಸ್ತಿಯ ಕೀರ್ತಿಯನ್ನು ನಮ್ಮ ಶಾಲೆಗೆ ತಂದ ಮೊದಲಿಗರು. ಈಗ ಅಮೃತೋತ್ಸವದ ಬೃಹತ್ ಪರ್ವಕ್ಕೆ ಸರ್ವ ಅರ್ಹತೆಯಿಂದ ಗೌರವಾಧ್ಯಕ್ಷ ಆಗಿರುವವರು. 75 ವರ್ಷಗಳ ಹಿಂದೆ ನಮ್ಮೂರ ಹಿರಿಯರು ಆಧುನಿಕ ಶಿಕ್ಷಣಪದ್ಧತಿಯ ಶಾಲೆಯೊಂದರ ಅಗತ್ಯವನ್ನು ಕಂಡು, ಅಂಥದೊಂದು ಶಾಲೆಯನ್ನು ಸ್ಥಾಪಿಸಿ ಅದಕ್ಕೆ ಗುರುಕುಲ ಎಂದು ಹೆಸರಿಟ್ಟಾಗ ನಿಜವಾಗಿಯೂ ಇಂಥ ಗುರುರತ್ನಗಳು ಆ ಹೆಸರನ್ನು ಅನ್ವರ್ಥಗೊಳಿಸುತ್ತಾರೆಂಬ ಕಲ್ಪನೆ ಅವರಿಗಿತ್ತೋ ಇಲ್ಲವೋ. ಆದರೆ ಗುರುಕುಲದಲ್ಲಿ ಕಲಿತ ಪ್ರತಿಯೊಬ್ಬರ ಮನದಾಳದ ಮಾತು ಒಂದೇ: ''ನಮ್ಮ ಗುರುಕುಲ, ನಮ್ಮ ಗುರುಗಳು... ಇವು ಸಮುದ್ರಮಥನದಲ್ಲಿ ಸಿಕ್ಕವುಗಳಿಗಿಂತಲೂ ಮಿಗಿಲಾದ ರತ್ನಗಳು!''

ನೀತಿಯುತ ರಾಮಪಥ, ಇಂದಿಗೂ ಪ್ರಸ್ತುತ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಳಿಹೊಂಡ
vveditoped@gmail.com

'ರಾಮೋ ವಿಗ್ರಹವಾನ್ ಧರ್ಮಃ' ಎಂಬ ಪ್ರಸಿದ್ಧ ಮಾತೊಂದಿದೆ. 'ಧರ್ಮವು ವಿಗ್ರಹ ರೂಪವನ್ನು ತಾಳಿದರೆ ಅದು ಶ್ರೀರಾಮನಂತಿರುತ್ತಿತ್ತು' ಎನ್ನುವುದು ಇದರರ್ಥ. ಹಾಗಾದರೆ ಧರ್ಮವೆಂದರೇನು? ಎಂದು ಕೇಳಿದರೆ ವಿಸ್ತೃತ ವ್ಯಾಖ್ಯಾನವನ್ನೇ ಹೇಳಬೇಕಾಗುತ್ತದೆ. ಅದು ನಾವಂದುಕೊಂಡ ಹಿಂದೂ, ಇಸ್ಲಾಂ ಅಥವಾ ಕ್ರೈಸ್ತ ಧರ್ಮಗಳಲ್ಲ. ಸರಳವಾಗಿ ಹೇಳುವುದಾದರೆ, ತನಗಿರುವ ಉಪಾಧಿಯನ್ನು ಶಾಸ್ತ್ರಾನುಸಾರ ಪರಿಪಾಲಿಸುವುದೇ ಧರ್ಮ. ಆ 'ಧರ್ಮ'ವೆನ್ನುವಂಥದ್ದು ತಂದೆಗೆ, ಮಗನಿಗೆ, ಪತ್ನಿಗೆ, ಪತಿಗೆ, ತಾಯಿಗೆ, ರಾಜನಿಗೆ ಹೀಗೆ ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿರುತ್ತದೆ. ಹಾಗೆ ಈ ಎಲ್ಲಾ ಉಪಾಧಿಗಳನ್ನೂ ವಿಧಿನಿಷಿದ್ಧಕ್ಕೊಳಪಟ್ಟು ಸಕ್ಷಮವಾಗಿ ನಿರ್ವಹಿಸಿರುವುದು ಮನುಷ್ಯ ಶ್ರೇಷ್ಠನಾದ ಶ್ರೀರಾಮನ ಹೆಗ್ಗಳಿಕೆ. ಅದರಲ್ಲೂ ಅವನ ರಾಜಧರ್ಮದ ಪರಿಪಾಲನೆಯ ಪರಿಯು ಅಧಿಕಾರಸ್ಥರಿಗೆ ಇಂದಿಗೂ 'ಮಾರ್ಗದರ್ಶಕ ನಿರೂಪಣೆ'ಯಾಗಿದೆ.

'ಸಕೃದೇವ ಪ್ರಪನ್ನಾಯ ತವಾಸ್ಮೀತಿಚ ಯಾಚತೇ ಅಭಯಂ ಸರ್ವಭೂತೇಭ್ಯೋ ದದಾಮಿ ವಚನಂ ಮಮ'- ಇದು ರಾಮನ ವಾಗ್ದಾನ. ಒಂದು ಬಾರಿ ನನ್ನಲ್ಲಿ ಶರಣಾಗಿ, 'ನಾನು ನಿನ್ನವನು, ನನ್ನನ್ನು ರಕ್ಷಿಸು' ಎಂದು ಬೇಡಿಕೊಂಡವರನ್ನು, ಅದು ಮನುಷ್ಯನಾಗಿರಲಿ, ಪ್ರಾಣಿ-ಪಕ್ಷಿಗಳಾಗಿರಲಿ ರಕ್ಷಿಸುವುದೇ ನನ್ನ ವ್ರತ ಎಂಬುದು ಇದರ ಸಾರಾಂಶ. ರಾಮ ತನ್ನ ಜೀವಿತಾವಧಿಯಲ್ಲಿ ಈ ಮಾತನ್ನು ಸರ್ವಥಾ ಪಾಲಿಸಿಕೊಂಡು ಬಂದಿರುವುದು ಅವನ ಚರಿತ್ರೆಯಿಂದ ನಮಗೆ ಅರಿವಾಗುತ್ತದೆ ಮತ್ತು ಆ ಕಾರಣಕ್ಕೇ ಜನ ಅವನನ್ನು ಆರಾಧಿಸುತ್ತಾರೆ.

'ಅಪಿ ಸ್ವರ್ಣಮಯೀ ಲಂಕಾ ನಮೇ ರೋಚತೆ ಲಕ್ಷ್ಮಣ, ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಅಂದರೆ, 'ಲಂಕೆಯು ಸ್ವರ್ಣಮಯವಾಗಿದ್ದರೂ ನನ್ನ ಜನ್ಮಭೂಮಿಯ ಮುಂದೆ ಇದು ನನ್ನನ್ನು ಆಕರ್ಷಿತವಾಗುವಂತೆ ಮಾಡುವುದಿಲ್ಲ; ವಿಭೀಷಣನೇ ಇಲ್ಲಿಯ ರಾಜ್ಯಭಾರ ಮಾಡಲಿ, ನಮಗಿದು ಬೇಡ' ಎಂದು ಯುದ್ಧಾಂತ್ಯದಲ್ಲಿ ರಾಮನು ಲಕ್ಷ್ಮಣನಿಗೆ ಹೇಳುವ ಮೂಲಕ ಅನ್ಯದೇಶಗಳ ಮೇಲೆ ಅತಿಕ್ರಮಣ ಮಾಡದ ಸಂಪ್ರದಾಯಕ್ಕೆ ನಾಂದಿಹಾಡಿದ್ದ. ಇಂದಿನ ನಮ್ಮ ವಿದೇಶಾಂಗ ನೀತಿಯೂ ಹೀಗೆಯೇ- ನಾವು ಯಾರ ತಂಟೆಗೂ ಹೋಗುವುದಿಲ್ಲ; ಆದರೆ, ನಮ್ಮ ಸಾರ್ವಭೌಮತೆಗೆ ಧಕ್ಕೆಯಾದರೆ ನಮ್ಮನ್ನು ಸಮರ್ಥವಾಗಿ ರಕ್ಷಿಸಿಕೊಳ್ಳುತ್ತೇವೆ. ಈ ಪರಿಪಾಠವನ್ನು ಶ್ರೀರಾಮನೇ ಹಾಕಿಕೊಟ್ಟಿದ್ದಿರಬೇಕು.

ಹೀಗೆ, ಸತ್ಯ, ಸದಾಚಾರ, ನಿಸ್ವಾರ್ಥತೆ, ಧರ್ಮಪರತೆ, ಪತಿತ ಪಾವನತ್ವ, ಸಮಾಜದ ಒಳಿತಿಗಾಗಿ ಸ್ವಸುಖ ತ್ಯಾಗ ಮುಂತಾದ ಗುಣಗಳಿಗೆ ಶ್ರೀರಾಮ ಮೂರ್ತರೂಪನಾಗಿದ್ದರೂ, ಲೋಕದಲ್ಲಿ ಅವನ ವ್ಯಕ್ತಿತ್ವವನ್ನು ಪ್ರಶ್ನಿಸಿದಷ್ಟು ಇನ್ನಾವ ಪೌರಾಣಿಕ ವ್ಯಕ್ತಿತ್ವವನ್ನೂ ಪರೀಕ್ಷೆಗೆ ಒಳಪಡಿಸಿರಲಿಕ್ಕಿಲ್ಲ. ವಾಲಿ-ಶಂಭೂಕರ ವಧೆ, ಸೀತಾ ಪರಿತ್ಯಾಗ ಮತ್ತು ಅಗ್ನಿಪರೀಕ್ಷೆ ಮುಂತಾದ ರಾಮನ ಕಾರ್ಯಗಳು ಅನಾದಿಯಿಂದ ಪ್ರಶ್ನೆಗೊಳಪಟ್ಟಿವೆ ಮತ್ತು ಅವಕ್ಕೆ ಸಮರ್ಥ ಸಮಾಧಾನವನ್ನೂ ಸಾತ್ವಿಕರು ಕಂಡುಕೊಂಡಿದ್ದಾಗಿದೆ. ಡಿವಿಜಿಯವರು 'ಶ್ರೀರಾಮ ಪರೀಕ್ಷಣಂ' ಎಂಬ ತಮ್ಮ ಕಿರುಹೊತ್ತಿಗೆಯಲ್ಲಿ, ಶ್ರೀರಾಮನ ಚಾರಿತ್ರ್ಯದ ಕುರಿತಾದ ಬಹುತೇಕ ಸಂದೇಹಗಳಿಗೆ ಸಮಾಧಾನವನ್ನು ಸಮರ್ಥವಾಗಿ ಪ್ರತಿಪಾದಿಸಿರುವುದನ್ನು ಗಮನಿಸಬಹುದು. ರಾಮಾಯಣ ಕಾಲಘಟ್ಟದಿಂದ ಮೊದಲ್ಗೊಂಡು ಇಂದಿನವರೆಗೂ ಜನರು ರಾಮನ ಗುಣಗಳನ್ನು ವಿಮರ್ಶಿಸುತ್ತಿದ್ದಾರೆ. ತಂದೆಯಾಗಿ, ಅಣ್ಣನಾಗಿ, ಸ್ವಾಮಿಯಾಗಿ, ವಿಶೇಷವಾಗಿ ರಾಜನಾಗಿ ಅವನು ಮೈಗೂಡಿಸಿಕೊಂಡಿದ್ದ ಆದರ್ಶಗಳನ್ನು ರೂಢಿಸಿಕೊಳ್ಳಲು ನಾವು ಯತ್ನಿಸದಿದ್ದರೂ, ಅವನ ಗುಣವನ್ನು ಮಾತ್ರ ವಿಮರ್ಶಿಸುತ್ತಿದ್ದೇವೆ. ಈ ಎಲ್ಲ ವಿಮರ್ಶೆಗಳನ್ನು ಮೀರಿ ನಿಂತಿದ್ದರಿಂದಲೇ ಆತ ಜಗನ್ಮಾನ್ಯನಾಗಿ, ಭಾರತೀಯರ ಅಸ್ಮಿತೆಯಾಗಿ ಇನ್ನೂ ನಿಂತಿರುವುದು ಇರಬೇಕು. ಇತಿಹಾಸದುದ್ದಕ್ಕೂ ನಾವು ಬಹಳ ರಾಜರುಗಳ ಉತ್ತಮ ಆಡಳಿತವನ್ನು ನೋಡಿದ್ದೇವಾದರೂ, 'ರಾಮರಾಜ್ಯ' ಎಂಬ ಪರಿಕಲ್ಪನೆಯು ಇಂದಿಗೂ ಸಂತೃಪ್ತ, ಪರಿಪೂರ್ಣ ಸಮಾಜಕ್ಕೆ ಸಮಾನಾರ್ಥಕವಾಗಿ ಬಳಕೆಯಲ್ಲಿದೆ.

ಶ್ರೀರಾಮನ ದೈವತ್ವ ಅಥವಾ ಅವತಾರವನ್ನು ಗಣಿಸಿದರೂ, ಬೇರೆಲ್ಲ ದೇವತೆಗಳು/ಅವತಾರಿಗಳಿಗೆ ಹೋಲಿಸಿದರೆ ರಾಮನಷ್ಟು ಜನಾಕರ್ಷಣೆಯನ್ನು, ಜಾತಿ-ಧರ್ಮ ಮೀರಿದ ಜನಮನ್ನಣೆಯನ್ನು ಹೊಂದಿರುವ ದೇವತೆಗಳು ಯಾರೂ ಇಲ್ಲವೆಂದು ನನ್ನ ಭಾವನೆ. ಬಹುತೇಕ ಎಲ್ಲಾ ಹಿಂದೂ ಸಮುದಾಯಗಳೂ ತಮ್ಮ ನಡುವಿನ ಮತ-ವೈರುಧ್ಯಗಳನ್ನು ಮೀರಿ ನಿಂತು ಪೂಜಿಸುವ ದೇವರಾಗಿದ್ದಾನೆ ಶ್ರೀರಾಮ. ಹಾಗಾಗಿ, ಒಟ್ಟಾರೆಯಾದ ಆದರ್ಶ ಹಿಂದೂ ಸಮಾಜವನ್ನು ಆತ ಪ್ರತಿನಿಧಿಸುತ್ತಾನೆ ಎನ್ನಬಹುದು. ಪ್ರಾಚೀನ ಸಂಪ್ರದಾಯಗಳು ಮತ್ತು ಆಧ್ಯಾತ್ಮಿಕ ಜ್ಞಾನದಲ್ಲಿ ಮುಳುಗಿರುವ ಭಾರತವು, ಕಾಲಾತೀತ ಮಹಾಕಾವ್ಯವಾದ ರಾಮಾಯಣದಲ್ಲಿ ತನ್ನ ಸಾಂಸ್ಕೃತಿಕ ಕೇಂದ್ರಬಿಂದುವನ್ನು ಇಂದಿಗೂ ಕಂಡುಕೊಳ್ಳುತ್ತದೆ. ಈ ಐತಿಹಾಸಿಕ ನಿರೂಪಣೆಯ ಹೃದಯಭಾಗದಲ್ಲಿ ಸದ್ಗುಣ, ನೀತಿ ಮತ್ತು ಧರ್ಮದ ಮೂಲತತ್ವದ ಸಾಕಾರ ರೂಪವಾದ ಶ್ರೀರಾಮ ನಿಲ್ಲುತ್ತಾನೆ. ಈ ವ್ಯಾಪಕ ಅನ್ವೇಷಣೆಯಲ್ಲಿ ನಾವು ಆತನ ವ್ಯಕ್ತಿತ್ವದ ಬಹುಮುಖಿ ಅಂಶಗಳನ್ನು ಕಾಣುತ್ತೇವೆ. ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಸಾಮಾಜಿಕ ನೀತಿಗಳ ಮೇಲಿನ ಆತನ ಪ್ರಭಾವವನ್ನು ನಿತ್ಯವೂ ಅನುಭವಿಸುತ್ತೇವೆ.

ರಾಮನು ಅಯೋಧ್ಯೆಯಲ್ಲಿ ಜನಿಸಿದಾಗಿನಿಂದ ಮೊದಲ್ಗೊಂಡು, ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಮರಳುವವರೆಗಿನ ನೈತಿಕ ಸಂದಿಗ್ಧತೆಗಳು, ಕೌಟುಂಬಿಕ ಬಂಧಗಳು ಮತ್ತು ದೈವಿಕ ಮಧ್ಯಸ್ಥಿಕೆಗಳೊಂದಿಗೆ ಬೆಸೆದುಕೊಂಡಿರುವ ಈ ಮಹಾಕಾವ್ಯವು ಲಕ್ಷಾಂತರ ಹಿಂದೂಗಳ ಜೀವನಕ್ಕೆ ಮಾರ್ಗದರ್ಶಿ ಸೂತ್ರವನ್ನು ಒದಗಿಸುವ ಗ್ರಂಥವಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ನೀತಿ ಮತ್ತು ಕರ್ತವ್ಯವನ್ನು ಒಳಗೊಂಡ ಧರ್ಮದ ಪರಿಕಲ್ಪನೆಯು ರಾಮನ ಜೀವನದಲ್ಲಿ ತನ್ನ ಅತ್ಯುನ್ನತ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತದೆ. ಆತ ವೈಯಕ್ತಿಕ ಸುಖಗಳನ್ನು ತ್ಯಾಗಮಾಡುತ್ತಾ ಕರ್ತವ್ಯಕ್ಕೆ ಬದ್ಧನಾಗಿರುವುದು ಕಾಲಾಬಾಧಿತವಾಗಿ ಅಳಿಸಲಾಗದ ಉದಾಹರಣೆಯಾಗಿ ನಮ್ಮ ಮುಂದೆ ನಿಲ್ಲುತ್ತದೆ. ರಾಮನು ಮಗನಾಗಿ, ಗಂಡನಾಗಿ, ಅಣ್ಣನಾಗಿ ಮತ್ತು ರಾಜನಾಗಿ ತನ್ನ ಪಾತ್ರಗಳನ್ನು ನಿಷ್ಕಳಂಕ ಸಮಗ್ರತೆಯೊಂದಿಗೆ ಸಮತೋಲನಗೊಳಿಸಿದ್ದಕ್ಕಾಗಿಯೇ 'ಮರ್ಯಾದಾ ಪುರುಷೋತ್ತಮ' ಎಂದು ಕರೆಸಿಕೊಳ್ಳುತ್ತಾನೆ. ನ್ಯಾಯ, ಸಮಾನತೆ ಮತ್ತು ಸಹಾನುಭೂತಿಯ ತತ್ವಗಳು ಅವನ ಆಳ್ವಿಕೆಗೆ ಆಧಾರವಾಗಿದ್ದರಿಂದ ಅದನ್ನು 'ಆದರ್ಶ ಆಡಳಿತ'ವೆಂದು ಸಾರಲಾಗಿದೆ. ಗಾಂಧೀಜಿ ಕೂಡ ಸದಾ ಹಂಬಲಿಸುತ್ತಿದ್ದ 'ರಾಮರಾಜ್ಯ'ದ ಪರಿಕಲ್ಪನೆಯನ್ನು ಅನುಕರಿಸಲು ಯತ್ನಿಸುವ ಮೂಲಕ ಅನೇಕ ಆಡಳಿತಗಾರರು ರಾಮನ ನಾಯಕತ್ವ ಶೈಲಿಯಿಂದ ಸ್ಫೂರ್ತಿ ಪಡೆದಿದ್ದಾರೆ. ಭಾರತೀಯ ಸಂಸ್ಕೃತಿಯ ಮೇಲಿನ ರಾಮನ ಛಾಪು, ಅವನಿಗೆ ಸಮರ್ಪಿತವಾದ ಹಬ್ಬ-ಸಂಪ್ರದಾಯ-ಆಚರಣೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ರಾವಣನನ್ನು ಸೋಲಿಸಿದ ನಂತರ ರಾಮನು ಅಯೋಧ್ಯೆಗೆ ಮರಳಿದ ನೆನಪನ್ನು ದೀಪಾವಳಿ ಹಬ್ಬವು ನೀಡಿದರೆ, ಶ್ರೀರಾಮನವಮಿಯು ಅವನ ಹುಟ್ಟನ್ನು ಸಂಭ್ರಮಿಸುವ ಹಬ್ಬವಾಗಿದೆ.

ಲೌಕಿಕತೆಯನ್ನೂ ಮೀರಿದ ಆಳವಾದ ಆಧ್ಯಾತ್ಮಿಕ ಮಹತ್ವವನ್ನೂ ಹೊಂದಿರುವ ರಾಮನನ್ನು ಭಾರತದಲ್ಲಿ ಐತಿಹಾಸಿಕವಾಗಿ ಮಾತ್ರವಲ್ಲದೆ ದೈವಿಕತೆಯ ಸಾಕಾರರೂಪವಾಗಿಯೂ ಗ್ರಹಿಸಲಾಗುತ್ತದೆ. 'ಶ್ರೀರಾಮ ಜಯರಾಮ ಜಯಜಯರಾಮ' ಎಂಬ ತ್ರಯೋದಶಾಕ್ಷರೀ ಮಂತ್ರದ ಪಠಣ/ಜಪವನ್ನು ಪ್ರಬಲ ಆಧ್ಯಾತ್ಮಿಕ ಅಭ್ಯಾಸವೆಂದು ಪರಿಗಣಿಸಲಾಗುತ್ತದೆ ಮತ್ತು ಇದನ್ನು 13 ಕೋಟಿ ಬಾರಿ ಜಪಿಸಿದರೆ ಶ್ರೀರಾಮನ ಸಾಕ್ಷಾತ್ಕಾರವಾಗುತ್ತದೆ ಎಂದೂ ನಂಬಲಾಗುತ್ತದೆ. ಅಯೋಧ್ಯೆ ಸೇರಿದಂತೆ ರಾಮನಿಗೆ ಸಮರ್ಪಿತವಾದ ಹಲವಾರು ದೇಗುಲಗಳು ಭಾರತದಾದ್ಯಂತ ಇದ್ದು, ಲಕ್ಷಾಂತರ ಜನರ ಪಾಲಿಗೆ ಅವು ಆಧ್ಯಾತ್ಮಿಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತವೆ. ಆಳವಾದ ತಾತ್ವಿಕ ಪರಿಣಾಮಗಳನ್ನು ಹೊಂದಿರುವ ರಾಮನ ಜೀವನ ಬೋಧನೆಗಳು ಭಾರತೀಯ ತತ್ವಶಾಸ್ತ್ರದ ಶ್ರೀಮಂತಿಕೆಗೆ ಮಹತ್ವದ ಕೊಡುಗೆ ನೀಡಿವೆ.

ರಾಮಾಯಣವು ನೈತಿಕ ಮತ್ತು ತಾತ್ವಿಕ ಪ್ರತಿಬಿಂಬಗಳ ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಈ ಕುರಿತು ತತ್ವಜ್ಞಾನಿಗಳು, ವಿದ್ವಾಂಸರು ಅನಾದಿಯಿಂದಲೂ ವ್ಯಾಪಕ ಸಂವಾದಗಳಲ್ಲಿ ತೊಡಗಿಸಿಕೊಂಡಿದ್ದಿದೆ. ರಾಮಾಯಣ, ಅಂದರೆ ರಾಮ ಸವೆಸಿದ ಹಾದಿಯನ್ನು ಸತ್ಯ ಮತ್ತು ಸದುದ್ದೇಶದ ಮಾನವ ಅನ್ವೇಷಣೆಯ ರೂಪಕವೆಂದು ವ್ಯಾಖ್ಯಾನಿಸಿದ್ದಾರೆ. ರಾಮನ ಪ್ರಭಾವವು ಧಾರ್ಮಿಕ ಮತ್ತು ತಾತ್ವಿಕ ಕ್ಷೇತ್ರಗಳನ್ನೂ ಮೀರಿ ಕಲೆ-ಸಾಹಿತ್ಯಗಳಿಗೂ ವಿಸ್ತರಿಸಿದೆ. ರಾಮನ ಕಥೆಯನ್ನು ವಾಲ್ಮೀಕಿಯ ಮಹಾಕಾವ್ಯದಿಂದ ಹಿಡಿದು ತುಳಸೀದಾಸರ 'ರಾಮಚರಿತಮಾನಸ'ದವರೆಗಿನ ಅಸಂಖ್ಯಾತ ಶೈಲಿಗಳು ಮತ್ತು ಭಾಷೆಗಳಲ್ಲಿ ಪುನರಾವರ್ತಿಸಲಾಗಿದೆ. ರಾಮನ ಪಾತ್ರದ ಕಾಲಾತೀತ ಆಕರ್ಷಣೆಯು ತಲೆಮಾರುಗಳಿಂದ ಕವಿಗಳು, ಬರಹಗಾರರು, ಕಲಾವಿದರಿಗೆ ಸ್ಫೂರ್ತಿ ನೀಡಿದೆ. ಸಾಹಿತ್ಯ, ಯಕ್ಷಗಾನ, ನಾಟಕದಂಥ ವೈವಿಧ್ಯಮಯ ನಿರೂಪಣಾ ಮಾಧ್ಯಮಗಳಲ್ಲಿ ರಾಮಾಯಣವು ಶಾಶ್ವತ ಪರಂಪರೆಯನ್ನು ಸೃಷ್ಟಿಸಿದೆ, ರಾಮನ ಕುರಿತು ಪೂಜ್ಯಭಾವನೆಯನ್ನು ಮೂಡಿಸಿದೆ. ಹಾಗಂತ ಅದು ವಿವಾದಗಳು ಮತ್ತು ಚರ್ಚೆಗಳಿಂದ ಮುಕ್ತವಾಗಿಲ್ಲ. ಸೀತೆಯ ವನವಾಸ ಮತ್ತು ಅಗ್ನಿಪರೀಕ್ಷೆಯಂಥ ಪ್ರಸಂಗಗಳ ವ್ಯಾಖ್ಯಾನಗಳು ಲಿಂಗ, ನೈತಿಕತೆ ಮತ್ತು ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿದ್ದಿದೆ. ಈ ಕುರಿತು ಸಮಕಾಲೀನ ವಿದ್ವಾಂಸರು ವಿಮರ್ಶಾತ್ಮಕ ವಿಶ್ಲೇಷಣೆಗಳಲ್ಲಿ ತೊಡಗುತ್ತಾರೆ, ಪ್ರಾಚೀನ ನಿರೂಪಣೆಯನ್ನು ಆಧುನಿಕ ದೃಷ್ಟಿಕೋನಗಳೊಂದಿಗೆ ಸಮನ್ವಯಗೊಳಿಸಲು ಯತ್ನಿಸುತ್ತಾರೆ.

ರಾಮನ ಪ್ರಭಾವವು ಭೌಗೋಳಿಕ ಎಲ್ಲೆಯನ್ನೂ ಮೀರಿ ವಿಶ್ವಾದ್ಯಂತದ ಜನರೊಂದಿಗೆ ಅನುರಣಿಸುತ್ತದೆ. ರಾಮಾಯಣದಲ್ಲಿ ಹುದುಗಿರುವ ಪ್ರೀತಿ, ಕರ್ತವ್ಯ, ಕೆಟ್ಟದ್ದರ ಮೇಲೆ ಒಳ್ಳೆಯದರ ವಿಜಯ ಮುಂತಾದ ಸಂಗತಿಗಳು, ರಾಮನು ಕೇವಲ ಹಿಂದೂ ದೇವರು ಎನ್ನುವುದಕ್ಕಿಂತ ಒಬ್ಬ ಮಹಾಮಾನವ ಎಂಬುದಾಗಿ ಬಿಂಬಿಸುತ್ತವೆ. ರಾಮನನ್ನು 'ಪರಿಪೂರ್ಣ ನೈತಿಕ ಮತ್ತು ಸಾಮಾಜಿಕ ನಡವಳಿಕೆಯನ್ನು ಪ್ರದರ್ಶಿಸುವ ವ್ಯಕ್ತಿ' ಎಂದು ಸರಳವಾಗಿ ವಿವರಿಸಬಹುದು. ''ರಾಮನು ಸತ್ಯ ಮತ್ತು ನೈತಿಕತೆಯ ಪ್ರತಿರೂಪ, ಆದರ್ಶ ಪುತ್ರ, ಆದರ್ಶ ಪತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಆದರ್ಶ ರಾಜನ ಸಾಕಾರರೂಪ'' ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ಅವನ ಪೌರುಷವು ದುಷ್ಟರ ಮೇಲಿನ ವಿಜಯದ ಸಂಕೇತವಾಗಿದ್ದರೆ, ಮನುಷ್ಯನೊಬ್ಬ ತನ್ನ ನೈತಿಕ ಬದ್ಧತೆಗಳನ್ನು ಹೇಗೆ ಪೂರೈಸಬೇಕು, ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ತನ್ನ ಮಿತಿಗಳನ್ನು ಹೇಗೆ ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂಬುದನ್ನು ಅವನ ಜೀವನಶೈಲಿಯು ನಿರೂಪಿಸುತ್ತದೆ. ಹಾಗಾಗಿ ಸಾಮಾನ್ಯರು ಅನುಸರಿಸಲೂ ಅದು ಯೋಗ್ಯವಾಗಿದೆ ಎಂದು ಪರಿಗಣಿಸಲಾಗಿದೆ.

ರಾಮನನ್ನು ಸುತ್ತುವರಿದಿರುವ ಮೌಲ್ಯ ವ್ಯವಸ್ಥೆಯನ್ನು ನಮ್ಮ ಸಮಾಜವು ಸ್ವಲ್ಪ ಮಟ್ಟಿಗೆ ಅರಿತಿದೆ ಎನ್ನಬಹುದು. ನಮ್ಮ ಸಮಾಜದಲ್ಲಿಂದು ನೈತಿಕ ಬಿಕ್ಕಟ್ಟು ತಲೆದೋರಿದ್ದು, ಭ್ರಷ್ಟಾಚಾರ, ಅಪ್ರಾಮಾಣಿಕತೆ, ಹಿಂಸೆ, ಮೋಸಗಳ ಪಿಡುಗು ಹಾಸುಹೊಕ್ಕಾಗಿಬಿಟ್ಟಿದೆ. ಅತ್ಯಾಚಾರದ ಘಟನೆಗಳು ಹೆಚ್ಚುತ್ತಿವೆ, ಭ್ರಷ್ಟಾಚಾರವು ಎಲ್ಲಾ ಹಂತಗಳಲ್ಲೂ ಬೇರೂರಿದೆ, ಹಿಂಸಾಚಾರವು ಸ್ವೀಕಾರಾರ್ಹವಾಗುತ್ತಿದೆ. ಹೀಗಾಗಿ ನಾವಿಂದು ರಾಮನ ದೈವತ್ವದ ಪಾತ್ರಕ್ಕಿಂತ ಅವನ ಮಾನವೀಯ ಗುಣಗಳು ಮತ್ತು ಧರ್ಮಪರಿಪಾಲನೆಯ ಕುರಿತಾಗಿ ಚರ್ಚಿಸಬೇಕಾಗಿದೆ. ಹೋರಾಟಗಳಿಗೆ ತತ್ವದ ನೆಲೆಗಟ್ಟು ನೀಡಬೇಕಿದೆ; ಅಸ್ಮಿತೆಗಾಗಿ ಹೋರಾಡುವ ಬದಲು, ಸತ್ಯಸಂಧತೆ, ಸಮಗ್ರತೆ, ಪ್ರಾಮಾಣಿಕತೆಗಳನ್ನು ಸಮಾಜದಲ್ಲಿ ಪುನರುಜ್ಜೀವನಗೊಳಿಸುವುದಕ್ಕಾಗಿ ಹೋರಾಡಬೇಕಿದೆ.

ಅನೈತಿಕತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳು ಹಿಂದೂ ಮೌಲ್ಯಗಳಲ್ಲ. ಹಾಗಾದರೆ ನಾವು ಇಷ್ಟು ದೊಡ್ಡ ಮಟ್ಟದಲ್ಲಿ ಅವನ್ನು ಹೇಗೆ ಸಹಿಸಲಾದೀತು? ಅವುಗಳ ಕುರಿತಾದ ಚರ್ಚೆಗೆ ನಾವು ರಾಮನನ್ನೇಕೆ ಕರೆತರುತ್ತಿಲ್ಲ? ನಿಸ್ವಾರ್ಥಿ ರಾಜನಾಗಿದ್ದ ರಾಮನು ತನಗಿಂತ ತನ್ನ ಜನರ ಬಗ್ಗೆ ಮೊದಲು ಯೋಚಿಸುತ್ತಿದ್ದ ಎಂಬುದನ್ನು ನಾವು ಮರೆತಿದ್ದೇಕೆ? ಜನರಿಂದು ರಾಮನ ಹೆಸರನ್ನಷ್ಟೇ ಅನುಸಂಧಾನ ಮಾಡುತ್ತಾ ಅವನ 'ಧರ್ಮ'ವನ್ನು ಮರೆತುಬಿಟ್ಟಿದ್ದಾರೆ. ಆತ ಸ್ಥಾಪಿಸಿದ 'ಮರ್ಯಾದೆ'ಯನ್ನು ನಿಯತವಾಗಿ ಉಲ್ಲಂಘಿಸಲಾಗುತ್ತಿದೆ. ಹಾಗಾಗಬಾರದಲ್ಲವೇ?

ಭಾರತೀಯ ಸಂಸ್ಕೃತಿಯ ವಿಶಾಲ ವಿಸ್ತಾರದಲ್ಲಿ ಇಂದಿಗೂ ದಾರಿದೀಪವಾಗಿ ನಿಂತಿರುವ ರಾಮನು, ನೀತಿ ಮತ್ತು ಸದ್ಗುಣಗಳ ಮಾರ್ಗವನ್ನು ಬೆಳಗಿಸುತ್ತಿದ್ದಾನೆ. ಧರ್ಮಗ್ರಂಥಗಳು, ಹಬ್ಬಗಳು, ಸಂಪ್ರದಾಯಗಳು ಮತ್ತು ಕಲಾತ್ಮಕ ಅಭಿವ್ಯಕ್ತಿಗಳಲ್ಲಿನ ಅವನ ಪರಂಪರೆಯು ಆಧ್ಯಾತ್ಮಿಕತೆ ಮತ್ತು ನೈತಿಕತೆಯಲ್ಲಿ ಆಳವಾಗಿ ಬೇರೂರಿರುವ ರಾಷ್ಟ್ರದ ನೀತಿಗಳನ್ನು ರೂಪಿಸುತ್ತಲೇ ಇವೆ. ಭಾರತವು ವಿಕಸನಗೊಳ್ಳುತ್ತಿದ್ದಂತೆ ರಾಮನ ಕಾಲಾತೀತ ಆದರ್ಶಗಳು ಸ್ಫೂರ್ತಿಯ ಮೂಲವಾಗಿ ಪ್ರಸ್ತುತತೆಯನ್ನು ಉಳಿಸಿಕೊಂಡಿವೆ. ಅವನ್ನು ಮುಂದುವರಿಸಿಕೊಂಡು ಹೋಗಲು ಕಠಿಣವಾಗಿ ಹೋರಾಡಬೇಕಿದೆ. ಶ್ರೀರಾಮನ ಮೌಲ್ಯಗಳನ್ನು ಅಳವಡಿಸಿಕೊಂಡಲ್ಲಿ ನಮ್ಮ ಇಂದಿನ ಅನೇಕ ಸಂಕೀರ್ಣ ಸಮಸ್ಯೆಗಳು ದೂರವಾಗುವುದರಲ್ಲಿ ಸಂಶಯವಿಲ್ಲ. ಹಾಗೆ ನಾವು ರಾಮನ ಆದರ್ಶಗಳನ್ನು ಕಿಂಚಿತ್ತಾದರೂ ಅಳವಡಿಸಿಕೊಂಡರೆ ಮಾತ್ರವೇ ಶ್ರೀರಾಮನವಮಿಯ ಆಚರಣೆಯು ಅರ್ಥಪೂರ್ಣವಾಗುತ್ತದೆ.

ಕರ್ಮಯೋಗಿಯೊಂದಿಗೆ ಕಥೆಗಾರನ ಕಥಾಕಾಲಕ್ಷೇಪ..!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಕಥೆಗಾರ ಅಂದು ಅದೇಕೋ ತುಂಬಾ ಒದ್ದಾಡುತ್ತಿದ್ದ. ಕಾರಣ, ''ಯುಗಾದಿ ವಿಶೇಷಾಂಕಕ್ಕೆ ಏನಾದರೂ ಹೊಸದು ಬರೆದುಕೊಡಿ'' ಅಂತ ಪತ್ರಿಕೆಯೊಂದರ ಸಂಪಾದಕರಿಂದ ಬಂದಿದ್ದ ಪ್ರೀತಿಪೂರ್ವಕ ಆಗ್ರಹ. ಅದಕ್ಕೆ ಕಥೆಗಾರ, ''ಹೊಸದು ಅಂತ ಏನಿದೆ ಸರ್? 'ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ' ಎಂಬ ಮಾತು ಕೇಳಿಲ್ಲವೇ? ಈಗ ಕಥೆಗಾರರು ಅಂತ ಹೇಳಿಕೊಳ್ಳೋ ನಾವೆಲ್ಲರೂ ಬರೀತಾ ಇರೋದು ಆ ವ್ಯಾಸರು ಉಂಡುಬಿಟ್ಟ ಎಂಜಲನ್ನೇ..! ಹೊಸದನ್ನು ಎಲ್ಲಿಂದ ಹೊಸೆಯಲಿ ಸಂಪಾದಕರೇ?'' ಎಂದು ನುಣುಚಿಕೊಳ್ಳಲು ಯತ್ನಿಸಿದ. ಆದರೆ ಆ ಸಂಪಾದಕರೋ 'ಕಟಕ' ರಾಶಿಯವರು, ಒಮ್ಮೆ ಹಿಡಿದುಕೊಂಡರೆ ಪಟ್ಟು ಬಿಡದ ಆಸಾಮಿ! ಗಾಳದಿಂದ ಮೀನು ನುಣುಚಿಕೊಳ್ಳುವುದಕ್ಕೆ ಬಿಡದೆ, ''ಹೊಸದೇನೂ ಹೊಸೆಯಬೇಡಿ ಕಥೆಗಾರರೇ, ಇರೋದನ್ನೇ ಹಾಗೆ-ಹೀಗೆ ಮಗುಚಿ ಹಾಕಿ ಕಳಿಸಿಬಿಡಿ ಅಷ್ಟೇ! 'ಇದು ನಿನ್ನೆ ರಾತ್ರಿ ಉಳಿದಿದ್ದ ಅನ್ನಕ್ಕೆ ಇಂದು ಬೆಳಗ್ಗೆ ಒಗ್ಗರಣೆ ಹಾಕಿ ಮಾಡಿರುವ ಚಿತ್ರಾನ್ನ' ಅಂತ ಓದುಗರಿಗೆ ಗೊತ್ತಾಗದಿದ್ರೆ ಆಯ್ತು'' ಎಂದು ಫೋನಿನ ಅತ್ತ ಕಡೆಯಿಂದ ಹೇಳುತ್ತಾ, ತಾಂಬೂಲ ತುಂಬಿಕೊಂಡಿದ್ದ ಬಾಯಲ್ಲೊಮ್ಮೆ ಗಹಗಹಿಸಿ ನಕ್ಕರು. ಕಥೆಗಾರನಿಗೆ ಆ ತಾಂಬೂಲರಸ ತನ್ನ ಮೇಲೇ ಸಿಂಪಡಣೆ ಆದಂತಾಗಿ ಫೋನಿನ ಇತ್ತ ಕಡೆಯಲ್ಲಿ ಮುಖ ಒರೆಸಿಕೊಂಡ...

ಬರೆಯೋಣ ಅಂತ ಮೇಜಿನ ಮುಂದೆ ಕೂತರೆ ತಲೆಯೂ ಓಡುತ್ತಿಲ್ಲ. ಮುಂಚೆಯಾಗಿದ್ರೆ, ''ಲೇ, ಒಂದ್ಲೋಟ ಬಿಸಿಬಿಸಿ ಕಾಫಿ ಮಾಡ್ಕೊಂಡು ಬಾರೇ'' ಎಂದು ಹೆಂಡತಿಗೆ ಫರ್ಮಾನು ಹೊರಡಿಸಿ, ಕಾಫಿ ಹೀರಿ 'ಕಿಕ್' ತಗೊಂಡು, ಹಾಳೆ ತುಂಬಿಸುತ್ತಿದ್ದ. ಆದರೀಗ ಆಕೆ ತವರಿಗೆ ತೆರಳಿದ್ದರು. ಹೀಗಾಗಿ, ಗೂಡಂಗಡಿಯ ಕಾಫಿಯೇ ಗತಿ ಅಂದ್ಕೊಂಡು ಹೊರನಡೆದ. ಕಾಫಿ ಹೀರಿ ಹೊರಡುವಾಗ, ಪಕ್ಕದ ಅಂಗಡಿಯ ನಾಮಫಲಕಕ್ಕೆ ಹೂವಿಂದ ಸಿಂಗರಿಸಲಾಗಿತ್ತು. ಹಿಂದಿನ ದಿನ ಅದು ಕಂಡಿರಲಿಲ್ಲ. ''ಪ್ರಾಯಶಃ ಇಂದು ಪ್ರಾರಂಭೋತ್ಸವ ಇರಬೇಕು, ಅದಕ್ಕೇ ಈ ಸಿಂಗಾರವೆಲ್ಲಾ...'' ಎಂದು ಮನಸ್ಸಿನಲ್ಲೇ ಹೇಳಿಕೊಂಡ ಕಥೆಗಾರ ಒಮ್ಮೆ ಅಪ್ರಯತ್ನವಾಗಿ ಅದರ ಫಲಕದ ಮೇಲೆ ಕಣ್ಣುಹಾಯಿಸಿದಾಗ, 'ಅಂಗರಾಜ ಮರ್ದನ ಕೇಂದ್ರ' ಎಂಬ ಅಕ್ಷರಗಳು ಹುಬ್ಬುಕುಣಿಸುತ್ತಿದ್ದವು! ''ಏನ್ ವಿಚಿತ್ರವಾದ ಹೆಸರೆಲ್ಲಾ ಇಡ್ತಾರಪ್ಪಾ..'' ಎಂದು ಗೊಣಗಿಕೊಂಡ ಆತ ಇನ್ನೇನು ಮನೆಕಡೆಗೆ ಹೆಜ್ಜೆಹಾಕಬೇಕೆಂದಿದ್ದವನು, ಫಕ್ಕನೆ ಒಮ್ಮೆ ತಿರುಗಿ, ''ತಲೆಯೊಳಗೆ ಹುಳು ಹೊಕ್ಕಿ ಆಗಿದೆ, ಆ ಅಂಗಡಿಯನ್ನೊಮ್ಮೆ ಹೊಕ್ಕು ಅದೇನೆಂದು ಕೇಳಿಯೇ ಬಿಡೋಣ'' ಅಂದುಕೊಂಡು ಪ್ರವೇಶಿಸಿದ...

ಅಲ್ಲೇನಿತ್ತು? ಕಾಲು ಚಾಚಿ ಮಲಗಬಹುದಾದ ದಿವಾನದಂಥ ಒಂದು ಪೀಠೋಪಕರಣ. ಪಕ್ಕದಲ್ಲಿ ವಿವಿಧ ಗಾತ್ರದ ಹಿತ್ತಾಳೆ ಬೋಗುಣಿಗಳು, ಕಪಾಟಿನಲ್ಲಿ ತರಹೇವಾರಿ ತೈಲಗಳನ್ನು ತುಂಬಿಕೊಂಡಿದ್ದ ಗಾಜಿನ ಹೂಜಿಗಳು...

''ಓಹೋ, ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದಂಗೆ ಆಯ್ತು.... ಬರಬೇಕು ಸರ್'' ಎಂಬ ದನಿ ಬೆನ್ನ ಹಿಂದಿನಿಂದ ಅಲೆ ಅಲೆಯಾಗಿ ತೇಲಿಬಂತು. ತಿರುಗಿನೋಡಿದ ಕಥೆಗಾರನಿಗೆ ಕಂಡಿದ್ದು ಸುಮಾರು 35ರ ಹರೆಯದ ಹಸನ್ಮುಖಿ ಶ್ರಮಜೀವಿ.

''ಅಲ್ರೀ, ಏನೋ ಬಹಳ ದಿನಗಳಿಂದ ಪರಿಚಯ ಇರೋ ಹಾಗೆ, 'ಬರಬೇಕು ಸರ್, ಬರಬೇಕು' ಅಂತೀರಲ್ಲಾ, ನಾನೇನು ನಿಮ್ಮ ನೆಂಟನಾ, ಮಿತ್ರನಾ? ಇದೆಲ್ಲಾ ನಿಮ್ಮ ಬ್ಯುಸಿನೆಸ್ ತಂತ್ರವಾ?'' ಎಂದು ಕಾಲೆಳೆದ ಕಥೆಗಾರ.

ಈ ಮಾತು ಕೇಳಿ ಅವನಿದ್ದಲ್ಲಿಗೆ ಧಾವಿಸಿ ಬಂದ ಆ ಶ್ರಮಜೀವಿ, ''ಏನ್ ಸರ್ ಹೀಗಂದುಬಿಟ್ರಿ? ನೀವು ನನಗೆ ಅಪರಿಚಿತರಾ? ನನಗೆ ಮತ್ತೆ ಬದುಕು ಕೊಟ್ಟಿದ್ದೇ ನೀವು ಬರೆದ 'ದುಡುಕಬೇಡ ಜೀವವೇ..' ಎಂಬ ಕಥೆ ಸರ್; ಬದುಕಿನಲ್ಲಿ ಹತಾಶನಾಗಿ ಆತ್ಮಹತ್ಯೆಗೆ ಮುಂದಾಗಿದ್ದ ನನಗೆ ದಾರಿ ತೋರಿ, ಬದುಕು ಕಟ್ಟಿಕೊಳ್ಳಲು ಸ್ಫೂರ್ತಿಯಿತ್ತ ಕಥೆ ಸರ್ ಅದು. ನಿಮ್ಮಂಥ ಸಾಹಿತಿಗಳು ಯಾವತ್ತಿಗೂ ಸಮಾಜಕ್ಕೆ ಅಪರಿಚಿತರಲ್ಲ, ಬಂಧುಗಳೇ ಮಿತ್ರರೇ'' ಎಂದ.

ಇಲ್ಲೇನೋ ಕಥೆಯ ಎಳೆ ಸಿಗಬಹುದು ಎನ್ನಿಸಿತು ಕಥೆಗಾರನಿಗೆ. ಹಾಗಂತ ''ಏನು ನಿಮ್ ಕಥೆ?'' ಅಂತ ಕೇಳಿದ್ರೆ ಈ ಶ್ರಮಜೀವಿ, ''ಏನ್ ಸರ್, ನೀವೂ ನೇರವಾಗಿ ವ್ಯವಹಾರಕ್ಕೇ ಇಳಿದುಬಿಟ್ರಲ್ಲಾ?!'' ಎಂದು ಕಾಲೆಳೆಯಬಹುದು ಎಂದು ಮುನ್ನಂದಾಜಿಸಿ, ''ಅಂದ್ಹಾಗೆ, ಏನಿದು 'ಅಂಗರಾಜ ಮರ್ದನ ಕೇಂದ್ರ?' ನಿಮ್ಮ ಕಸುಬು ಏನು? ಅಲ್ಲಾ, ಲಿಂಗರಾಜ, ಭೃಂಗರಾಜ ಅಂತೆಲ್ಲಾ ಕೇಳಿರುವೆ. ಇದೇನು 'ಅಂಗರಾಜ' ಅನ್ನೋ ಹೆಸರು?'' ಎಂದು ವಿಷಯಪ್ರವೇಶ ಮಾಡಿದ ಕಥೆಗಾರ.

ಅದಕ್ಕೆ ಆ ಶ್ರಮಜೀವಿ, ''ಸಿಂಪಲ್ಲು ಸರ್. ಅಂಗರಾಜ ಮರ್ದನ ಕೇಂದ್ರ ಅಂದ್ರೆ ಅಂಗಗಳಿಗೆ ಮಾಲೀಶು ಮಾಡೊ ಪಾರ್ಲರ್ ಅಂತ ಸರ್. ನನ್ ಜೀವ ಉಳಿಯಲು ಕಾರಣರಾದೋರು ನೀವು. ಅಪರೂಪಕ್ಕೆಂಬಂತೆ, ನನಗೇ ಅಚ್ಚರಿಯಾಗುವಂತೆ ನಮ್ ಅಂಗಡಿಗೇ ಬಂದಿದ್ದಕ್ಕೆ ನಿಮ್ಮನ್ನು ಭಾಗ್ಯಲಕ್ಷ್ಮಿಗೆ ಹೋಲಿಸಿದ್ದು. ಬನ್ನಿ ಸರ್, ಒಮ್ಮೆ ಮಾಲೀಶು ಮಾಡಿಸ್ಕೊಂಡು ಮನೆಗೆ ಹೋಗಿ ಬಿಸಿಬಿಸಿ ನೀರಲ್ಲಿ ಸ್ನಾನ ಮಾಡಿಬಿಡಿ ಸರ್. ಮೈ-ಮನಗಳು ಫ್ರೆಶ್ ಆಗಿ, ತಾಜಾ ಆಲೋಚನೆಯೂ ಹೊಮ್ಮುತ್ತೆ'' ಎಂದು ಆಗ್ರಹಿಸಿದ ಪ್ರೀತಿಯಿಂದ.

ಅದಕ್ಕೆ ಗೋಣುಹಾಕಿದ ಕಥೆಗಾರ, ''ಒಪ್ಪಿದೆ, ಆದರೆ ಒಂದು ಷರತ್ತು. ಈ ಮಾಲೀಶಿಗೆ ನೀವು ದುಡ್ಡು ತಗೋಬೇಕು ಹಾಗೂ ನಿಮ್ಮ ಅಭ್ಯಂತರವೇನೂ ಇಲ್ಲದಿದ್ರೆ ನಿಮ್ಮ ವೃತ್ತಾಂತ ಹೇಳಬೇಕು. ನಾನು ಬರೆದ ಕಥೆ ಯಾವ ನೆಲೆಯಲ್ಲಿ ನಿಮ್ಮ ಬದುಕನ್ನು ಉಳಿಸಿತು ಅಂತ ತಿಳಿದುಕೊಳ್ಳೋ ಕುತೂಹಲ ನನಗೆ'' ಅಂದ. ಅದಕ್ಕೆ ಆ ಶ್ರಮಜೀವಿ ಖುಷಿಯಿಂದ ಒಪ್ಪಿ, ''ಹೀಗೆ ಬನ್ನಿ ಸರ್, ಜುಬ್ಬಾ-ಪೈಜಾಮಾ ಕಳಚಿ, ಈ ದಿವಾನದ ಮೇಲೆ ಕೈಕಾಲು ಚಾಚಿ ನಿರಾಳರಾಗಿ ಮಲಗಿಕೊಳ್ಳಿ'' ಎಂದ. ಕಥೆಗಾರ ಹಾಗೇ ಮಾಡಿದ. ನಂತರ, ಕಪಾಟಿನಲ್ಲಿದ್ದ ಹೂಜಿಯನ್ನು ಕೈಗೆತ್ತಿಕೊಂಡ ಶ್ರಮಜೀವಿ ಅದರಲ್ಲಿದ್ದ ಕಂದುಬಣ್ಣದ ಎಣ್ಣೆಯನ್ನು ಕೈಗೆ ಸುರಿದುಕೊಂಡು ಕಥೆಗಾರನ ಮೈ-ಕೈಗಳಿಗೆ ಲೇಪಿಸಿ ನೀವುತ್ತಾ, ತನ್ನ ಬಾಳಬುತ್ತಿಯನ್ನು ಬಿಚ್ಚಿ ಕಥೆಗಾರನಿಗೆ ಉಣಿಸಲು ಮುಂದಾದ....

''ಸರ್, ನಾನೊಬ್ಬ ಅನಾಥ. ಜನ್ಮ ಕೊಟ್ಟ ಅಪ್ಪ-ಅಮ್ಮ ಯಾರು ಅಂತ ಗೊತ್ತಿಲ್ಲ. ಆದರೆ ಕೊಂಚ ಬುದ್ಧಿ ಬಂದ ನಂತರ ನನ್ನ ಸಾಕುತಾಯಿಯಿಂದ ತಿಳಿದುಬಂದಿದ್ದೇನೆಂದರೆ, ಆಗಷ್ಟೇ ಹುಟ್ಟಿದ್ದ ನನ್ನನ್ನು ಒಂದು ಉದ್ಯಾನದಲ್ಲಿ ಮಲಗಿಸಿ ಹೋಗಿದ್ದರಂತೆ. ಸಾಕಷ್ಟು ಹೊತ್ತು ಕಾದರೂ ಯಾರೂ ಬರದಿದ್ದಾಗ 'ಇದು ದೇವರ ಪ್ರಸಾದ'ವೆಂದೇ ಗ್ರಹಿಸಿದ ಆ ಸಾಕುತಾಯಿ ನನ್ನನ್ನೆತ್ತಿಕೊಂಡು ಮನೆಗೆ ಬಂದಳಂತೆ. ಅವರದ್ದು ಮೀನುಗಾರರ ವಂಶ. ದಿನಗಳೆದಂತೆ ನನ್ನನ್ನೂ ಕಸುಬಿಗೆ ಸೇರಿಸಿಕೊಂಡರು. ನಾನು ಕೂಡ ಅದನ್ನು ಕೀಳು ಎಂದು ಭಾವಿಸಲಿಲ್ಲ. 'ಮೈಮುರಿದು ಮಾಡುವ, ಮರ್ಯಾದೆಯಿಂದ ಜೀವನ ಸಾಗಿಸುವುದಕ್ಕೆ ಅನುವು ಮಾಡಿಕೊಡುವ ಯಾವುದೇ ನ್ಯಾಯಯುತ ಕೆಲಸವೂ ಶ್ರೇಷ್ಠವೇ' ಎಂದು ದೇಗುಲದ ಗೋಡೆಯೊಂದರ ಮೇಲೆ ಬರೆದಿದ್ದನ್ನು ನೋಡಿ, ಮೀನುಗಾರಿಕೆಯ ಕಸುಬಿಗೆ ಒಗ್ಗಿಸಿಕೊಂಡೆ. ಆದರೆ, ಅದೇಕೋ ಗೊತ್ತಿಲ್ಲ, 'ನನ್ನದು ಇದನ್ನೂ ಮೀರಿದ ಗುರಿಯೊಂದಿದೆ, ಆ ನಿಟ್ಟಿನಲ್ಲಿ ನಾನು ಸಾಧನೆ ಮಾಡಬೇಕು' ಎಂದು ಒಳಮನಸ್ಸು ಹೇಳತೊಡಗಿತು. ಆದರೆ ನನ್ನ ಪ್ರತಿಭೆ ಥಾಳಾಗಿರುವುದು ಯಾವ ಕ್ಷೇತ್ರದಲ್ಲಿ ಎಂಬುದನ್ನು ಕಂಡುಕೊಳ್ಳುವಷ್ಟು ಪ್ರಬುದ್ಧತೆ ನನಗಿರಲಿಲ್ಲ. ಆದರೆ 'ಏನಾದರೂ ಸಾಧಿಸಬೇಕು' ಅನ್ನೋ ತುಡಿತವಂತೂ ಇತ್ತು.....



''ಒಮ್ಮೆ, ಮೀನು ಹಿಡಿವ ಕೆಲಸ ಮುಗಿಸಿ ಮನೆಗೆ ಬರುವಾಗ, ಹಾದಿಬದಿಯಲ್ಲಿನ ಮರದಲ್ಲಿ ಗಿಣಿಮೂತಿ ಮಾವಿನ ಕಾಯಿಗಳು ಗೊಂಚಲು ಗೊಂಚಲಾಗಿ ತೂಗಾಡುತ್ತಿದ್ದುದು ಕಾಣಿಸಿತು. ಅದನ್ನು ಕಲ್ಲಿನಿಂದ ಹೊಡೆದು ಕೆಡವಲು ಒಂದಿಷ್ಟು ಪುಟ್ಟಮಕ್ಕಳು ಹರಸಾಹಸ ಪಡುತ್ತಿದ್ದರು. ಅವರು ತೂರುತ್ತಿದ್ದ ಕಲ್ಲು ಮರದ ಕಾಂಡಕ್ಕಷ್ಟೇ ಬಡಿಯುತ್ತಿತ್ತೇ ವಿನಾ, ಕಾಯಿಗೊಂಚಲಿಗೆ ತಾಗುತ್ತಿರಲಿಲ್ಲ. ಆ ಮಕ್ಕಳ ಕಣ್ಣಲ್ಲಿ ಆಸೆ ತುಳುಕುತ್ತಿದ್ದುದನ್ನು ಕಂಡ ನಾನು, ಬೆಣಚುಕಲ್ಲೊಂದನ್ನು ಎತ್ತಿಕೊಂಡು ಬೀಸಿಯೇಬಿಟ್ಟೆ. ಅದು ನಿಖರವಾಗಿ ಗುರಿ ತಲುಪಿ, ಒಂದಿಡೀ ಗೊಂಚಲು ಕೆಳಗೆ ಬಿತ್ತು. ಅಷ್ಟನ್ನೂ ಎತ್ತಿ ಕೊಟ್ಟಾಗ ಆ ಮಕ್ಕಳ ಕಂಗಳು ನಕ್ಷತ್ರಗಳಾಗಿಬಿಟ್ಟವು! 'ಥ್ಯಾಂಕ್ಯೂ ಅಂಕಲ್' ಎಂದು ಹೇಳಿ ಮಾವಿನಕಾಯಿ ಚಪ್ಪರಿಸತೊಡಗಿದ ಮಕ್ಕಳು, ಕೆಲಕ್ಷಣದಲ್ಲೇ ಅಲ್ಲಿಂದ ಓಡತೊಡಗಿದವು. ನನಗೆ ಮೊದಲು ಗೊತ್ತಾಗಲಿಲ್ಲ, ಪಕ್ಕಕ್ಕೆ ತಿರುಗಿ ನೋಡಿದರೆ ಹುರಿಮೀಸೆಯ ಆಸಾಮಿಯೊಬ್ಬ ಕೋಲು ಹಿಡಿದು ಓಡಿಬರುತ್ತಿದ್ದರು. ಆತ ಆ ಮಾವಿನಮರವಿದ್ದ ತೋಟದ ಮನೆಯ ಮಾಲೀಕನಿರಬೇಕು ಎನಿಸಿತು. ಹಾಗಂತ ಅಲ್ಲಿಂದ ಓಡಿಹೋಗಲು ನನಗೆ ಮನಸ್ಸಾಗಲಿಲ್ಲ, ಏಕೆಂದರೆ ತಪ್ಪು ಮಾಡಿದ್ದೆ. ಹೀಗಾಗಿ ಸುಮ್ಮನೆ ನಿಂತುಬಿಟ್ಟೆ. ಆ ಮೀಸೆಮಾವ ನನ್ನ ಬಳಿ ಬಂದಾಗ, ನನ್ನ ಕೈ ಮುಂದೊಡ್ಡಿ 'ತಪ್ಪಾಯ್ತು ಸರ್' ಎಂದೆ. ತಮ್ಮ ಕೋಲಿನಿಂದ ಅವರು ಬಾರಿಸಿ ಶಿಕ್ಷೆ ನೀಡಲಿ ಎಂಬುದು ನನ್ನ ಆಶಯವಾಗಿತ್ತು. ಆದರೆ ಅವರು ಬಾರಿಸದೆ ನನ್ನ ಕಂಗಳನ್ನೇ ದಿಟ್ಟಿಸಿ ನೋಡುತ್ತಾ, ''ಬಡ್ಡಿ ಮಗನೇ, 30 ಅಡಿ ಎತ್ತರದಲ್ಲಿರುವ ಕೊಂಬೆಗೆ ನೆಲದ ಮೇಲಿಂದ ಕಲ್ಲು ತೂರಿ, ಕಾಯಿಗೆ ಒಂಚೂರೂ ಏಟಾಗದಂತೆ ಮಾವಿನ ಗೊಂಚಲು ಬೀಳಿಸಿದ್ದೀಯಾ ಅಂದ್ರೆ ನೀನು ಸಾಮಾನ್ಯದೋನಲ್ಲ; ನಿನ್ನ ಗುರಿಗೆ ಮೆಚ್ಚಿದೆ. ಬಾ ನನ್ನ ಜತೆ'' ಎನ್ನುತ್ತಾ ಅಕ್ಷರಶಃ ನನ್ನನ್ನು ಕಂಕುಳಲ್ಲಿ ಅವುಚಿಕೊಂಡು ತೋಟದ ಮನೆಗೊಯ್ದರು. ಎಳನೀರು ಕೊಟ್ಟು ಕುಡಿಯಲು ಹೇಳಿ, 'ನಾವು ಇಟ್ಟುಕೊಂಡ ಗುರಿ ಎಷ್ಟು ಮುಖ್ಯವೋ, ಸಾಗುವ ದಾರಿಯೂ ಅಷ್ಟೇ ಮುಖ್ಯ. ಒಬ್ಬ ಗುರಿಕಾರನಿಗೆ ಇರಬೇಕಾದ ದೃಷ್ಟಿತೀಕ್ಷ್ಣತೆ-ಏಕಾಗ್ರತೆ-ತಾಳ್ಮೆ-ಶ್ರದ್ಧೆ ನಿನ್ನಲ್ಲಿ ಕೆನೆಗಟ್ಟಿವೆ. ಆದರೆ ನೀನು ಆಯ್ದುಕೊಂಡಿರುವ ಮಾರ್ಗ ಸ್ವಲ್ಪ ಎಡವಟ್ಟಿನದು. ಬಾ, ಇನ್ನು ಮುಂದೆ ಸರಿದಾರಿಯಲ್ಲೇ ಗುರಿ ಇಡುವಿಯಂತೆ' ಎನ್ನುತ್ತಾ ಮತ್ತೊಂದೆಡೆಗೆ ಕರೆದೊಯ್ದರು. ಕತ್ತೆತ್ತಿ ನೋಡಿದರೆ, 'Dhananjaya Archery Training Centre' ಎಂಬ ನಾಮಫಲಕ ಕಂಗೊಳಿಸುತ್ತಿತ್ತು. ನನಗೆ ಅವೆಲ್ಲಾ ಹೊಸದು. ಅದು ಬಿಲ್ಲು ವಿದ್ಯೆಯನ್ನು ಹೇಳಿಕೊಡುವ ಶಾಲೆ ಎಂದು ನಂತರ ಗೊತ್ತಾಯಿತು. ಆದರೆ, ಅಲ್ಲಿದ್ದವರೆಲ್ಲಾ ದೊಡ್ಡ ಮನುಷ್ಯರ ಮಕ್ಕಳು, ಎಲ್ಲರೂ ಕಾರಲ್ಲಿ ಬಂದು ಇಳಿಯುತ್ತಿದ್ದರು. ನನ್ನ ಗೊಂದಲವನ್ನು ಗ್ರಹಿಸಿದ ಆ ಮೀಸೆಮಾವ, 'ಚಿಂತೆ ಮಾಡಬೇಡ, ನೀನು ಇದಕ್ಕೆ ದುಡ್ಡು ಕೊಡುವ ಅಗತ್ಯವಿಲ್ಲ; ನೀನು ಸರ್ವಶ್ರೇಷ್ಠ ಗುರಿಕಾರನಾಗಿ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ರಾಜ್ಯಕ್ಕೆ ಹೆಸರು ತಂದರೆ ಸಾಕು' ಎಂದರು. ಸುಮ್ಮನೆ ತಲೆಯಾಡಿಸಿದೆ. ನಂತರ ನನ್ನೊಂದಿಗೆ ನಮ್ಮ ಮನೆಗೆ ಬಂದ ಮೀಸೆಮಾವ, 'ಈ ಹುಡುಗನನ್ನು ನನ್ನೊಂದಿಗೆ ಕಳಿಸಿಕೊಡಿ, ಇನ್ನು ಮುಂದೆ ಇವನು ನನ್ನ ಮಗ' ಎಂದರು. ಸಾಕುತಾಯಿ, 'ಹಾಗೇ ಆಗ್ಲಿ ಬುದ್ಧೀ...' ಎಂದಷ್ಟೇ ಹೇಳಿದಳು. ನನ್ನಲ್ಲಿ ಅದಾಗಲೇ ಸುಪ್ತವಾಗಿದ್ದ 'ಗುರಿಕೌಶಲ'ಕ್ಕೆ ಆ ತರಬೇತಿ ಕೇಂದ್ರದಲ್ಲಿ ಶಾಸ್ತ್ರದ ಲೇಪ ಸಿಗತೊಡಗಿತು, ಬಿಲ್ಲು ವಿದ್ಯೆಯನ್ನು ಚುರುಕಾಗಿ ಕಲಿಯತೊಡಗಿದೆ. ದಿನಗಳೆದಂತೆ, ಅಲ್ಲಿಗೆ ಬರುತ್ತಿದ್ದ ಶ್ರೀಮಂತರ ಮನೆಯ ಮಕ್ಕಳನ್ನೆಲ್ಲಾ ಮೀರಿಸಿಬಿಟ್ಟೆ. ಅಂಥ ಸಹಪಾಠಿಗಳಲ್ಲಿ 'ಕಿರೀಟಿ' ಕೂಡ ಒಬ್ಬ!...

• • •

(ಪ್ರಿಯ ಓದುಗ ದೊರೆಯೇ... ಯಾರು ಈ ಕಿರೀಟಿ? ಮೀಸೆಮಾವನ ಹಕೀಕತ್ ಏನು? ಇವರ 'ಅಡ್ಡಾ' ಸೇರಿಕೊಂಡ 'ಬಾಲ ಶ್ರಮಜೀವಿ' ಆತ್ಮಹತ್ಯೆಗೆ ಮುಂದಾಗಿದ್ದಾದರೂ ಏಕೆ? ಈ ಪ್ರಶ್ನೆಗಳಿಗೆಲ್ಲಾ ಉತ್ತರ ಕಂಡುಕೊಳ್ಳಲು ಇನ್ನೊಂದು ವಾರ ಕಾಯಲೇಬೇಕು, ಪ್ಲೀಸ್..!)

(ಮುಂದುವರಿಯುವುದು)

ನಾವೇನ್ 'ಗ್ಯಾರಂಟಿ' ಕೊಟ್ಟಿದ್ವಾ ಬೆಲೆ ಏರಿಕೆ ಮಾಡಲ್ಲ ಅಂತ?

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಫೇಸ್‌ಬುಕ್‌ನಲ್ಲಿ ಯಾರೋ ಪೋಸ್ಟ್ ಹಾಕಿದ್ರು, ಅವರು ಪ್ರತಿದಿನ ಮಾಲ್‌ಗೆ ಸಿನಿಮಾ ನೋಡೋಕೆ ಹೋಗೋದ್ ನೋಡಿ, ಅಲ್ಲಿನ ಸೆಕ್ಯುರಿಟಿ, ''ಸರ್, ನೀವು ಇಲ್ಲೇ ಕೆಲಸ ಮಾಡೋದಾ?'' ಅಂತ ಕೇಳಿದ್ನಂತೆ. ಕೇಳೋಕೆ ತಮಾಷೆಯಾಗಿದ್ದರೂ ಇದು ವಾಸ್ತವ. ಸಿನಿಮಾ ಪ್ರಿಯರ ಬಳಿ ಈಗ ನೋಡ್ಬೇಕು ಅಂತಿರೋ ಸಿನಿಮಾಗಳ ಪಟ್ಟಿಗಿಂತ, ನೋಡಿರುವ ಸಿನಿಮಾಗಳ ಪಟ್ಟಿಗಿಂತ, ನೋಡಬೇಕಾಗಿತ್ತು ಆದ್ರೆ ಆಗ್ಲಿಲ್ಲ ಅನ್ನೋ ಸಿನಿಮಾಗಳ ಪಟ್ಟಿಯೇ ದೊಡ್ಡದಾಗಿದೆ. ಪ್ರತಿವಾರ ಏಳೆಂಟು ಚಿತ್ರಗಳ ಬಿಡುಗಡೆ. ಅದರಲ್ಲಿ ನೋಡುವಂಥವು ಕಮ್ಮಿ ಇದ್ದರೂ, ಹಲವು ಚಿತ್ರಗಳು ಇನ್ನೂ ನೋಡಬೇಕು ಅಂತ ಅಂದುಕೊಳ್ಳುತ್ತಿರುವಾಗಲೇ ಚಿತ್ರಮಂದಿರಗಳಿಂದ ಮಾಯವಾಗುತ್ತಿವೆ. ಹೋಗ್ಲಿ, ಒಟಿಟಿಯಲ್ಲಿ ನೋಡೋಣ ಅಂದ್ರೆ ಅರಳಿದ ಎಲ್ಲ ಹೂವೂ ಭಗವಂತನ ಪಾದ ಸೇರೋಲ್ಲ, ಬಿಡುಗಡೆ ಆದ ಎಲ್ಲ ಚಿತ್ರಗಳೂ ಒಟಿಟಿಗೆ ಬರಲ್ಲ. ಹಾಗಾಗಿ ಅಪ್ಪಟ ಚಿತ್ರಪ್ರೇಮಿಗಳು, ''ಅಯ್ಯೋ, ಆ ಸಿನಿಮಾ ನೋಡೋಕಾಗ್ಲಿಲ್ಲ, ಈ ಸಿನಿಮಾ ನೋಡೋಕಾಗ್ಲಿಲ್ಲ'' ಅಂತ ಕೊರಗೋದು ತಪ್ಪುತ್ತಿಲ್ಲ. ಬರೀ ಸಿನಿಮಾ ಪ್ರೇಮಿಗಳು ಯಾಕೆ, ಸ್ವತಃ ಸಿನಿಮಾ ಪತ್ರಕರ್ತರು ಮತ್ತು ವಿಮರ್ಶಕರಿಗೇ ಎಲ್ಲ ಸಿನಿಮಾಗಳನ್ನು ನೋಡೋಕೆ ಆಗ್ತಿಲ್ಲ. ಹಾಗೊಂದು ವೇಳೆ ಹಠಕ್ಕೆ ಬಿದ್ದು ದಿನಕ್ಕೆರಡು ಸಿನಿಮಾ ನೋಡಿದರೂ ಕೊನೆಯ ಸಿನಿಮಾ ವಿಮರ್ಶೆ ಮಾಡುವ ಹೊತ್ತಿಗೆ ಮುಂದಿನ ವಾರದ ಸಿನಿಮಾಗಳು ಬಿಡುಗಡೆ ಆಗಿರುತ್ತವೆ. ಒಟ್ಟಿನಲ್ಲಿ ಕೆಲವು ಸಿನಿಮಾಗಳು ತಮ್ಮ ಕಳಪೆ ಕ್ವಾಲಿಟಿಯಿಂದ ಜನರನ್ನು ತಲುಪಲು ವಿಫಲವಾಗುತ್ತಿದ್ದರೆ, ಹಲವು ಸಿನಿಮಾಗಳು ಎಲ್ಲಾ ಇದ್ದರೂ ಓವರ್ ಕಾಂಪಿಟೇಶನ್‌ನಿಂದ ಜನರಿಗೆ ತಲುಪುತ್ತಿಲ್ಲ ಅನ್ನೋದಂತೂ ನಿಜ.

ಲೂಸ್ ಟಾಕ್ ▸▸ ಸಿದ್ದರಾಮಯ್ಯ

- **ಏನ್ ಮುಖ್ಯಮಂತ್ರಿಗಳೇ, ರಾಜ್ಯದಲ್ಲಿ ಸಿಕ್ಕಾಪಟ್ಟೆ ಬೆಲೆ ಏರಿಕೆ ಆಗ್ತಾ ಇದೆ, ಏನ್ ಸಮಾಚಾರ?**

– ಅಯ್ಯೋ, ನಾವೇನ್ ಚುನಾವಣೆಗೆ ಮುಂಚೆ ಗ್ಯಾರಂಟಿ ಕೊಟ್ಟಿದ್ವಾ ಬೆಲೆ ಏರಿಕೆ ಮಾಡಲ್ಲ ಅಂತ? ನಾವು ಕೊಟ್ಟಿರೋ ಗ್ಯಾರಂಟಿಗಳಿಗೆ ಮಾತ್ರ ಜವಾಬ್ದಾರರು.

- **ಸರಿಯಾಗಿ ಹೇಳಿದ್ರಿ ಬಿಡಿ, ಆದ್ರೂ ಬಿಜೆಪಿಯವರು ಬೆಲೆ ಏರಿಕೆ ಮಾಡಿದ್ರೆ ಕೂಗಾಡ್ತೀರಿ, ಈಗ ನೀವು ಮಾಡಿರೋದೇನು?**

– ಮತ್ತಿನ್ನೇನು? ಬಿಜೆಪಿಯವರು ಏನೇ ಮಾಡಿದ್ರೂ, ದೇಶದಲ್ಲಿ ಜನ ಅವರಿಗೇ ವೋಟ್ ಹಾಕ್ತಿದ್ದಾರೆ. ಹಂಗಾಗಿ ನಾವೂ ಅವರ ಥರ ಬೆಲೆ ಏರಿಕೆ ಮಾಡಿ ಅವರನ್ನ ಫಾಲೋ ಮಾಡೋಣ ಅಂತ.

- **ನಮ್ಮ ಜನ ಅವರನ್ನ ಇಳಿಸಿ ನಿಮ್ಮನ್ನ ಅಧಿಕಾರಕ್ಕೆ ಏರಿಸಿದ್ದು ಮರೆತುಬಿಟ್ರಾ?**

– ಇಲ್ಲಪ್ಪಾ.. ಅವರನ್ನ ಇಳಿಸಿ ನಮ್ಮನ್ನ ಏರಿಸಿದ್ದಕ್ಕೇ ನಾವೂ ಬೆಲೆ ಏರಿಸಿ ಋಣ ತೀರಿಸ್ತಾ ಇದ್ದೀವಿ.

- **ಸರಿಹೋಯ್ತು. ಆದ್ರೂ, ಈ ಬೆಲೆ ಏರಿಕೆ ನೀತಿ ಸರಿನಾ?**

– ಯಾಕ್ ಸರಿ ಇಲ್ಲ. ನಮ್ದು ಎಲ್ಲರಿಗೂ ಒಂದೇ ನೀತಿ. ರೇಟ್ ಜಾಸ್ತಿ ಮಾಡಿದ್ರೂ, ಒಬ್ಬರಿಗೊಂದು ಇನ್ನೊಬ್ಬರಿಗೊಂದು ಮಾಡಲ್ಲ, ನಿಂಗೂ ರೇಟ್ ಜಾಸ್ತಿ, ಅವನಿಗೂ ರೇಟ್ ಜಾಸ್ತಿ, ನನ್ ಹೆಂಡ್ತಿಗೂ ರೇಟ್ ಜಾಸ್ತಿ.

- **ಪಾಪ, ಹಿಂಗೆ ರೇಟ್ ಜಾಸ್ತಿ ಮಾಡಿದ್ರೆ ಜನಸಾಮಾನ್ಯರಿಗೆ ತೊಂದ್ರೆ ಆಗಲ್ವಾ?**

– ಆಗ್ದೇ ಇರುತ್ತಾ.. ಆದ್ರೆ ಏನ್ ಮಾಡೋಕಾಗುತ್ತೆ. ದೇಶದ ಒಳ್ಳೇದಕ್ಕಾಗಿ ಎಷ್ಟೇ 'ರೇಟ್' ಜಾಸ್ತಿ ಮಾಡಿದ್ರೂ, ಸರಕಾರದ ಜತೆ ಜನ ಕೋಆಪ'ರೇಟ್' ಮಾಡ್ಬೇಕಪ್ಪ..

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಇಬ್ಬರೂ ವಿಮಾನದಲ್ಲಿ ಕೂತಿದ್ದರು. ವಿಮಾನ ಮುಂಬೈ ಇಂದ ದೆಹಲಿಗೆ ಹೋಗ್ತಾ ಇತ್ತು. ಸ್ವಲ್ಪ ಹೊತ್ತಿನ ಪ್ರಯಾಣದ ನಂತರ ಮಧ್ಯದಲ್ಲಿ ಏನೋ ತೊಂದರೆ ಆಗಿದೆ ಅಂತ ಗಗನಸಖಿ ಕಡೆಯಿಂದ ಅನೌನ್ಸ್‌ಮೆಂಟ್ ಬಂತು. ಈ ಪ್ಲೇನ್ ಮುಂದೆ ಹೋಗಲ್ಲ ಅಂತ ಹೇಳಿ ಜೈಪುರದಲ್ಲಿ ಅದನ್ನು ಎಮರ್ಜೆನ್ಸಿ ಲ್ಯಾಂಡಿಂಗ್ ಮಾಡಲಾಯಿತು. ''ನಿಮ್ಮನ್ನು ಇನ್ನೊಂದು ಪ್ಲೇನ್‌ಗೆ ಶಿಫ್ಟ್ ಮಾಡಲಾಗುತ್ತದೆ, ಅಲ್ಲಿಯವರೆಗೂ ಕೆಳಗಿಳಿದು ಬಂದು ನಿಂತ್ಕೊಳ್ಳಿ'' ಅಂತ ಎಲ್ಲ ಪ್ರಯಾಣಿಕರಿಗೂ ಹೇಳಲಾಯಿತು. ಎಲ್ಲರೂ ಕೆಳಗಿಳಿದು ಬಂದು ನಿಂತರು. ಆದರೆ ಒಬ್ಬ ಅಜ್ಜಿ ಮಾತ್ರ ಅಲ್ಲೇ ಕೂತಿದ್ದಳು. ಆಕೆ ಕುರುಡಿ. ತನಗೆ ದಾರಿ ತೋರಿಸಲಿಕ್ಕೆ ಅಂತ ಅಜ್ಜಿ ಯಾವಾಗಲೂ ಒಂದು ನಾಯಿಯನ್ನು ಕರೆದುಕೊಂಡು ಓಡಾಡುತ್ತಿದ್ದಳು. ಅದು ಆಕೆಯ ಕೆಳಗೆ ಕೂತಿತ್ತು. ಅಜ್ಜಿಯನ್ನು ನೋಡಿದ ಪೈಲಟ್, ''ಯಾಕೆ ಕೂತಿದ್ದೀರಿ? ನೀವು ಕೆಳಗೆ ಇಳಿದು ಸ್ವಲ್ಪ ರಿಲ್ಯಾಕ್ಸ್ ಮಾಡಬಹುದಲ್ವಾ?'' ಅಂತ ಕೇಳಿದ. ಅದಕ್ಕೆ ಅಜ್ಜಿ ''ಇಲ್ಲಪ್ಪ, ನಂಗೆ ಕಣ್ಣು ಕಾಣಿಸೋಲ್ಲ. ಮುಂದಿನ ಪ್ರಯಾಣಕ್ಕೆ ಅರೇಂಜ್‌ಮೆಂಟ್ ಆಗೋವರೆಗೂ ನಾನು ಇಲ್ಲೇ ಕೂತಿರ್ತೀನಿ. ನನ್ನ ನಾಯಿಯನ್ನ ಸ್ವಲ್ಪ ಓಡಾಡಿಸಿಕೊಂಡು ಬರ್ತೀಯಾ?'' ಅಂತ ಕೇಳಿತು. ''ಖಂಡಿತಾ'' ಅಂತ ಹೇಳಿದ ಪೈಲಟ್ ದಾರಿ ತೋರಿಸುವ ಆ ನಾಯಿಯನ್ನು ಕರೆದುಕೊಂಡು ಪ್ಲೇನ್‌ನಿಂದ ಇಳಿಯುತ್ತಿದ್ದ. ಅವನು ಕಣ್ಣಿಗೆ ಕಪ್ಪು ಕನ್ನಡಕ ಬೇರೆ ಹಾಕಿದ್ದ. ಅವನು ಇಳಿದು ಬರುತ್ತಿದ್ದುದನ್ನು ನೋಡಿ ಕೆಳಗೆ ನಿಂತಿದ್ದ ಖೇಮು ಒಮ್ಮೆಲೇ ಗಾಬರಿಯಾಗಿ ಕೂಗಿದ, ''ಅಯ್ಯೋ, ಅಲ್ ನೋಡೇ, ಬರೀ ಪ್ಲೇನ್ ಅಲ್ಲ, ಈ ಏರ್‌ಲೈನ್ಸ್‌ನೇ ಚೇಂಜ್ ಮಾಡ್ಬೇಕು. ಬಡ್ಡಿಮಕ್ಳು, ಕುರುಡರನ್ನೆಲ್ಲಾ ಪೈಲಟ್ ಮಾಡವ್ರೆ''.

ಲೈನ್ ಮ್ಯಾನ್

- **ತಮ್ಮ ಸಿಡಿ ಬಿಡುಗಡೆ ಮಾಡಿದವರ ಮೇಲಿನ ಕೋಪ**
– ಅ'ಸಿಡಿ'ಟಿ
- **ಹಳೇ ಕಾಲದ ಹಳ್ಳಿ ಶೈಲಿಯಲ್ಲಿ ಊಟ ಮಾಡೋ ಪದ್ಧತಿ**
– 'ತಾಟ್' ಪ್ರೊಸೆಸ್
- **ದುಂಬಿ ಜೇನಿಗೆ ಹೇಳಿದ್ದೇನು?**
– ನಾನು ನಿನ್ನ ಮನ'ದುಂಬಿ' ಪ್ರೀತಿಸ್ತೀನಿ
- **ಎಲ್ಲವನ್ನೂ ಪ್ರಶ್ನೆ ಮಾಡುವವರ ಗುಂಪು**
– 'ಆಸ್ಕ್' ಫೋರ್ಸ್
- **ಧ್ರುವ ಸರ್ಜಾ ಓದುಗರ ಪ್ರಶ್ನೆಗೆ ಉತ್ತರಿಸುವ ಕಾಲಂ ಶುರು ಮಾಡಿದ್ರೆ, ಅದರ ಹೆಸರು**
– ಉತ್ತರ ಧ್ರುವ
- **ಡೇಂಜರಸ್ ಆಗಿ ಡ್ರೈವ್ ಮಾಡೋ ಆ್ಯಂಬುಲೆನ್ಸ್ ಡ್ರೈವರ್‌ಗೆ ಏನಂತ ಬಯ್ಬೇಕು?**
– ಯಾಕೋ ಮಗನೇ, ಇವತ್ ಯಾರೂ ಗಿರಾಕಿ ಸಿಗಲಿಲ್ವಾ?
- **ಪೂರಿಗೆ ಬರೀ ಚಟ್ನಿ ಕೊಟ್ಟಾಗ ಆಗೋ ಬೇಸರದಲ್ಲಿ ಮೂಡುವ ಹಾಡು**
– ಏನಾಗಲಿ ಮುಂದೆ 'ಸಾಗು' ನೀ..
- **ಕುರಿ ಮಾಂಸ ತಿಂದು ಹೊಟ್ಟೆ ಬರಿಸಿಕೊಂಡವನು**
– ಲ್ಯಾಂಬೋದರ
- **ಮನುಷ್ಯನ ದೇಹದಲ್ಲಿ ಕೋಪ ಹುಟ್ಟಿಸುವ ಅಂಗ**
– 'ಪಿತ್ತ' ಜನಕಾಂಗ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue: 82

ಸಮಾಚಾರ ಸಣ್ಣದಲ್ಲ

ಉಕ್ರೇನ್ ಮೇಲೆ ಮತ್ತೆ ರಷ್ಯಾ ದಾಳಿ: 18 ಸಾವು

ಕ್ವಿವ್: ಉಕ್ರೇನ್‌ನ ಕ್ರಿವಿ ರಿಹ್ ನಗರದ ಮೇಲೆ ರಷ್ಯಾ ಕ್ಷಿಪಣಿ ದಾಳಿ ಪರಿಣಾಮ, 9 ಮಕ್ಕಳು ಸೇರಿ 18 ಮಂದಿ ಸಾವಿಗೀಡಾಗಿದ್ದಾರೆ. 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದು ಕ್ರಿವಿರಿಹ್‌ನ ರಕ್ಷಣಾ ಮಂಡಳಿ ಮುಖ್ಯಸ್ಥ ಅಲೆಕ್ಸಾಂಡರ್ ವಿಲ್ಕುಲ್ ಹೇಳಿದ್ದಾರೆ. ಕ್ರಿಮಿರಿಹ್ ನಗರ ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಅವರ ಹುಟ್ಟೂರು. ವಸತಿ ಪ್ರದೇಶಕ್ಕೆ ಕ್ಷಿಪಣಿ ಅಪ್ಪಳಿಸಿದ್ದು, ಸಮೀಪದಲ್ಲೇ ಆಟದ ಮೈದಾನದಲ್ಲಿದ್ದವರಲ್ಲಿ 9 ಮಕ್ಕಳು ಬಲಿಯಾಗಿವೆ. ಪಾಶ್ಚಿಮಾತ್ಯ ಬೋಧಕರು ಸಭೆ ಸೇರುತ್ತಿದ್ದ ರೆಸ್ಟೋರೆಂಟ್ ಮೇಲೆಯೂ ಕ್ಷಿಪಣಿ ದಾಳಿ ನಡೆದಿದ್ದು, 9 ಜನರು ಮಡಿದಿದ್ದಾರೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆದಿದೆ.

ಗಡಿಯಲ್ಲಿ ಗುಂಡು: ನುಸುಳುಕೋರ ಸಾವು

ಜಮ್ಮು: ಅಂತಾರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನ್ ಕಡೆಯಿಂದ ಒಳನುಸುಳುತ್ತಿದ್ದವನನ್ನು ಸೇನಾಪಡೆ ಗುಂಡಿಕ್ಕಿ ಕೊಂದಿದೆ. ಆರ್‌ಎಸ್ ಪುರ ಸೆಕ್ಟಾರ್‌ನ ಅಬ್ದುಲಿಯನ್ ಗಡಿ ಔಟ್ ಪೋಸ್ಟ್‌ನಲ್ಲಿ ಒಳನುಸುಳುವ ಯತ್ನವನ್ನು ವಿಫಲಗೊಳಿಸಿ ನುಸುಳುಕೋರನಿಗೆ ಗುಂಡಿಕ್ಕಲಾಗಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ. ಈ ಸಂಬಂಧ ಪಾಕ್‌ಗೆ ತಿಳಿಸಿ ಎಚ್ಚರಿಕೆ ನೀಡಲಾಗಿದೆ ಎಂದು ಬಿಎಸ್‌ಎಫ್ ತಿಳಿಸಿದೆ.

ಪಾಕ್ ವೈದ್ಯ ಪದವಿ ಭಾರತದಲ್ಲಿ ಅಮಾನ್ಯ

ದೆಹಲಿ: ಭಾರತೀಯರು ಪಾಕಿಸ್ತಾನದ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದರೆ ಭಾರತದಲ್ಲಿ ಅವರಿಗೆ ವಿದೇಶಿ ವೈದ್ಯಕೀಯ ಪದವಿ ಪರೀಕ್ಷೆ ಬರೆಯಲು ಅಥವಾ ಭಾರತದಲ್ಲಿ ಉದ್ಯೋಗ ಪಡೆಯಲು ಅವಕಾಶವಿಲ್ಲ ಎಂದು ಕೇಂದ್ರ ಸರಕಾರ ಹೇಳಿದೆ. ಪಾಕ್‌ನಲ್ಲಿ ವೈದ್ಯಕೀಯ ಪದವಿ ಅಥವಾ ಉನ್ನತ ಶಿಕ್ಷಣ ಪಡೆದ ಭಾರತದ ಪೌರತ್ವ ಹೊಂದಿದವರು, ಅವರ ಮಕ್ಕಳು ಗೃಹ ಇಲಾಖೆಯಿಂದ ಭದ್ರತಾ ಅನುಮತಿ ಪಡೆದಿದ್ದರೆ ಮಾತ್ರವೇ ಈ ಪರೀಕ್ಷೆಗೆ ಹಾಜರಾಗಲು, ಭಾರತದಲ್ಲಿ ಉದ್ಯೋಗ ಪಡೆಯಲು ಅರ್ಹರು ಎಂದು ಆರೋಗ್ಯ-ಕುಟುಂಬ ಕಲ್ಯಾಣ ಖಾತೆ ಸಹಾಯಕ ಸಚಿವೆ ಅನುಪ್ರಿಯಾ ಪಟೇಲ್ ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.

ಜಾಗ್ವಾರ್ ಪತನ, ಪೈಲಟ್ ನಿಧನ

ಪುಣೆ: ಗುಜರಾತ್‌ನ ಜಾಮ್ ನಗರ ಜಿಲ್ಲೆಯಲ್ಲಿ ಏ.2ರಂದು ಭಾರತೀಯ ವಾಯುಪಡೆಯ 2 ಆಸನದ ಜಾಗ್ವಾರ್ ಯುದ್ಧ ವಿಮಾನ ಪತನವಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಫ್ಲೈಟ್ ಲೆಫ್ಟಿನೆಂಟ್ ಸಿದ್ದಾರ್ಥ್ ಯಾದವ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಶುಕ್ರವಾರ ಹರಿಯಾಣದ ರೇವಾರಿ ಜಿಲ್ಲೆಯ ಅವರ ಹುಟ್ಟೂರು ಮಜ್ರಾ ಭಾಲ್ಕಿ ಗ್ರಾಮದಲ್ಲಿ ಸೇನಾಗೌರವ ಗಳೊಂದಿಗೆ ಅಂತ್ಯಕ್ರಿಯೆ ನಡೆಸಲಾಗಿದೆ. ಮತ್ತೊಬ್ಬ ಪೈಲಟ್ ಪುಣೆಯ ಸ್ಕ್ವಾಡ್ರನ್ ಗ್ರೂಪ್ ಕ್ಯಾಪ್ಟನ್ ಮನೀಶ್ ಕುಮಾರ್ ಸಿಂಗ್ (43) ಅವರಿಗೆ ಸುಟ್ಟ ಗಾಯಗಳಾಗಿವೆ. ಅವರನ್ನು ಕಿರ್ಕಿಯಲ್ಲಿನ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ದೇಹಸ್ಥಿತಿ ಸ್ಥಿರವಾಗಿದೆ ಎಂದು ಸೇನಾ ವೈದ್ಯಕೀಯ ದಳದ ಮೂಲಗಳು ತಿಳಿಸಿವೆ. ಜಾಮ್‌ನಗರ ವಾಯುನೆಲೆಯಿಂದ ಹಾರಾಟ ಆರಂಭಿಸಿದ ಜಾಗ್ವಾರ್ ವಿಮಾನ ರಾತ್ರಿ ಕಾರ್ಯಾಚರಣೆಯಲ್ಲಿದ್ದಾಗ ಅಪಘಾತಕ್ಕೀಡಾಯಿತು.

ಭಾರತೀಯ ಪ್ರಜೆ ಕೆನಡಾದಲ್ಲಿ ಹತ್ಯೆ

ಒಟ್ಟಾವಾ: ಕೆನಡಾದ ಒಟ್ಟಾವಾ ನಗರದ ಬಳಿ ಭಾರತ ಮೂಲದ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ. ಕೊಲೆ ಆರೋಪಿಯನ್ನು ಪೊಲೀಸರು ಬಂಧಿಸಿ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಒಟ್ಟಾವಾದಲ್ಲಿನ ರಾಕ್‌ಲ್ಯಾಂಡ್‌ನ ಲಾಲೋಂಡೆ ಸ್ಟ್ರೀಟ್ ಬಳಿ ಶುಕ್ರವಾರ ಮಧ್ಯಾಹ್ನ 3ರ ವೇಳೆ ಚೂರಿಯಿಂದ ಇರಿದು ಕೊಲ್ಲಲಾಗಿದೆ. ಮೃತನ ಗುರುತು ಪತ್ತೆಯಾಗಿಲ್ಲ. ಮೃತನ ಗುರುತು ಪತ್ತೆ ಮತ್ತು ಕುಟುಂಬವನ್ನು ಸಂಪರ್ಕಿಸಲು ಕೆನಡಾದಲ್ಲಿನ ಭಾರತೀಯ ಸಮುದಾಯ ಮತ್ತು ಭಾರತೀಯರ ಸಂಘಗಳ ನಿಕಟ ಸಂಪರ್ಕದಲ್ಲಿದ್ದೇವೆ ಎಂದು ಕೆನಡಾದಲ್ಲಿನ ಭಾರತೀಯ ಹೈಕಮಿಷನ್ ತಿಳಿಸಿದೆ. ಕಸ್ಟಡಿಯಲ್ಲಿರುವ ಆರೋಪಿ ವಿಚಾರಣೆ ನಡೆಸುತ್ತಿರುವ ಪೊಲೀಸರು, ತನಿಖೆಯ ವಿಚಾರವನ್ನು ಶನಿವಾರ ಬೆಳಗ್ಗೆವರೆಗೂ ಬಹಿರಂಗಪಡಿಸಿರಲಿಲ್ಲ.

{ ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

ವಕ್ಫ್ ವಿಧೇಯಕ ಸದ್ಯ ಮುಸ್ಲಿಮರ ಮೇಲಿನ ದಾಳಿಯಂತೆ ಕಾಣುತ್ತಿದೆ. ಭವಿಷ್ಯದಲ್ಲಿ ಇತರೆ ಧರ್ಮಗಳು, ಸಮುದಾಯಗಳ ಮೇಲಿನ ದಾಳಿಗಳಿಗೆ ಮುನ್ಸೂಚನೆಯಾಗಿದೆ. ಆರ್‌ಎಸ್‌ಎಸ್ ಈಗ ಕ್ಯಾಥೋಲಿಕ್ ಚರ್ಚ್‌ಗಳ ಆಸ್ತಿ ಮೇಲೆ ಗಮನ ಕೇಂದ್ರೀಕರಿಸುತ್ತಿದೆ. ಎಲ್ಲರನ್ನೂ ಸಂವಿಧಾನ ರಕ್ಷಿಸುತ್ತದೆ, ಸಂವಿಧಾನವನ್ನು ನಾವು ಕಾಪಾಡಿಕೊಳ್ಳಬೇಕಿದೆ.

ವಕ್ಫ್ ವಿಧೇಯಕ ವಿರುದ್ಧ ಕೈ, ಎಎಪಿ, ಒವೈಸಿ ಸುಪ್ರೀಂಗೆ

ಸಂಸತ್ತಿನ ಉಭಯ ಸದನಗಳ ಅಂಗೀಕಾರ ಪಡೆದ ವಿಧೇಯಕಕ್ಕೆ ರಾಷ್ಟ್ರಪತಿ ಸಹಿಯಷ್ಟೇ ಬಾಕಿ

ದೆಹಲಿ: ವಕ್ಫ್ (ತಿದ್ದುಪಡಿ) ವಿಧೇಯಕ-2025 ಸಂಸತ್ತಿನ ಎರಡೂ ಸದನಗಳಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಂಗೀಕಾರಗೊಂಡಿದೆ. ವಕ್ಫ್ ತಿದ್ದುಪಡಿ ವಿಧೇಯಕ ಕಾಯಿದೆಯಾಗಿ ಜಾರಿಗೆ ಬರಲು ಇನ್ನೊಂದೇ ಹೆಜ್ಜೆ ಬಾಕಿ ಇದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಸಹಿ ಒಂದೇ ಬಾಕಿ ಇದೆ. ಅದು ನೆರವೇರಿದರೆ ದೇಶಾದ್ಯಂತ ವಕ್ಫ್ (ತಿದ್ದುಪಡಿ) ವಿಧೇಯಕ-2025 ಜಾರಿಗೆ ಬರಲಿದೆ.

ಆದರೆ ಪ್ರತಿಪಕ್ಷಗಳಿಂದ ಅದಕ್ಕೆ ವಿರೋಧ ಮುಂದುವರಿದೇ ಇದೆ. ಕಾಂಗ್ರೆಸ್, ಆಮ್ ಆದ್ಮಿ ಪಕ್ಷ(ಎಎಪಿ) ಮತ್ತು ಆಲ್ ಇಂಡಿಯ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್(ಎಐಎಂಐಎಂ) ಪಕ್ಷಗಳು ವಕ್ಫ್ ತಿದ್ದುಪಡಿ ವಿಧೇಯಕ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ.

ಮೂರೂ ಪಕ್ಷಗಳು ಶನಿವಾರ ಪ್ರತ್ಯೇಕವಾಗಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ಅರ್ಜಿಯಲ್ಲಿ ವಕ್ಫ್ ತಿದ್ದುಪಡಿ ವಿಧೇಯಕದ ಸಿಂಧುತ್ವವನ್ನು ಪ್ರಶ್ನಿಸಿವೆ. ವಿಧೇಯಕ ಸಾಂವಿಧಾನಿಕ ನಿಬಂಧನೆಗಳನ್ನು ಉಲ್ಲಂಘಿಸಿದೆ ಎಂದು ವಾದಿಸಿವೆ.

ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಕಾಂಗ್ರೆಸ್ ಸಂಸದ(ಜಂಟಿ ಸಂಸದೀಯ ಸಮಿತಿ ಸದಸ್ಯ) ಮೊಹಮ್ಮದ್ ಜಾವೇದ್, ವಕ್ಫ್ ಆಸ್ತಿ, ನಿರ್ವಹಣೆ ಮೇಲೆ ಹೊಸ ವಿಧೇಯಕ ನಿರ್ಬಂಧಗಳನ್ನು ವಿಧಿಸುತ್ತದೆ. ಅದು ಮುಸ್ಲಿಮರ ಧಾರ್ಮಿಕ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುತ್ತದೆ. ಮುಸ್ಲಿಮರ ವಿರುದ್ಧ ತಾರತಮ್ಯ ಮಾಡುತ್ತದೆ ಎಂದು ವಾದಿಸಿದ್ದಾರೆ.

ಆಮ್ ಆದ್ಮಿ ಪಕ್ಷದ(ಎಎಪಿ) ಶಾಸಕ ಅಮಾನತುಲ್ಲಾ ಖಾನ್ ವಕ್ಫ್ ತಿದ್ದುಪಡಿ ವಿಧೇಯಕದ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಶನಿವಾರ ಅರ್ಜಿ ಸಲ್ಲಿಸಿದ್ದಾರೆ. ತಿದ್ದುಪಡಿಗಳು ಅಸಂವಿಧಾನಿಕ. ವಿಧೇಯಕ ಸಂವಿಧಾನದ 14, 15, 21, 25, 26, 29, 30 ಮತ್ತು 300ಎ ವಿಧಿಗಳ ಉಲ್ಲಂಘನೆ. ಹಾಗಾಗಿ ಅದನ್ನು ರದ್ದುಗೊಳಿಸಬೇಕು ಎಂದು ಕೋರಿದ್ದಾರೆ.

ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ, ವಕ್ಫ್ ಮಂಡಳಿಗೆ ಈ ಹಿಂದೆ ನೀಡಲಾಗಿರುವ ರಕ್ಷಣೆಗಳನ್ನು ತಿದ್ದುಪಡಿ ವಿಧೇಯಕ ತೆಗೆದುಹಾಕುತ್ತದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಸಂವಿಧಾನದ 14 ಮತ್ತು 15ನೇ ವಿಧಿಗಳ ಉಲ್ಲಂಘನೆಯಾಗಿದೆ ಎಂದು ವಾದಿಸಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರೂ ತಮ್ಮ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷವೂ ವಕ್ಫ್ ವಿಧೇಯಕ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿದೆ ಎಂದು ಗುರುವಾರವೇ ವಿಧಾನಸಭೆಯಲ್ಲಿ ಘೋಷಿಸಿದ್ದಾರೆ.

ಕೋಲ್ಕತ್ತದಲ್ಲಿ ಮುಸ್ಲಿಂ ಸಂಘಟನೆಗಳು ಶನಿವಾರ ವಕ್ಫ್ ವಿಧೇಯಕ-2025 ವಿರುದ್ಧ ಪ್ರತಿಭಟನೆ ನಡೆಸಿದವು.

ವಿವಿಧೆಡೆ ಪ್ರತಿಭಟನೆ: ಪೊಲೀಸರ ಧ್ವಜ ಮೆರವಣಿಗೆ

ವಕ್ಫ್ ವಿಧೇಯಕ ಸಂಸತ್ತಿನಲ್ಲಿ ಅಂಗೀಕಾರಗೊಂಡಿದೆ. ಅದರ ಬೆನ್ನಲ್ಲೇ ದೇಶದ ವಿವಿಧೆಡೆ ಪ್ರತಿಭಟನೆಗಳು ನಡೆಯಲಾರಂಭಿಸಿವೆ. ದೆಹಲಿ, ಕೋಲ್ಕತ್ತ ಮತ್ತು ಹೈದರಾಬಾದ್ ಸೇರಿದಂತೆ ದೇಶದ ವಿವಿಧ ನಗರಗಳಲ್ಲಿ ಮುಸ್ಲಿಂ ಸಮುದಾಯ ಶನಿವಾರವೂ ಪ್ರತಿಭಟನೆ ನಡೆಸಿದೆ. ದೆಹಲಿಯ ಜಾಮಿಯಾದಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ವಿಧೇಯಕ ವಿರುದ್ಧ ಮಾತನಾಡಿದರು. ಸರಕಾರ ಅಲ್ಪಸಂಖ್ಯಾತ ಸಮುದಾಯ ಮತ್ತು ವಕ್ಫ್ ಆಸ್ತಿಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಸಿದರು. ವಿಧೇಯಕದ ಪ್ರತಿಗಳನ್ನು ಸುಟ್ಟುಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಕಾನೂನು-ಸುವ್ಯವಸ್ಥೆ ಕಾಯ್ದುಕೊಳ್ಳುವ ಸಲುವಾಗಿ ದೆಹಲಿ ಪೊಲೀಸರು ಅರೆಸೇನಾ ಪಡೆಗಳೊಂದಿಗೆ ದೆಹಲಿಯ ಜಾಮಿಯಾ ನಗರ ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ ಸೇರಿದಂತೆ ನಗರದ ವಿವಿಧೆಡೆ ಸೂಕ್ಷ್ಮ ಪ್ರದೇಶಗಳಲ್ಲಿ ಶನಿವಾರ ಧ್ವಜ ಮೆರವಣಿಗೆ ನಡೆಸಿದರು.

ರಾಷ್ಟ್ರಪತಿಗೆ ಮನವಿ

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ(ಎಐಎಂಪಿಎಲ್‌ಬಿ), ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭೇಟಿಗೆ ಸಮಯ ಕೇಳಿದ್ದು, ವಕ್ಫ್ ಮಸೂದೆಗೆ ಒಪ್ಪಿಗೆ ನೀಡುವ ಮೊದಲು ತಮ್ಮ ಮನವಿ ಆಲಿಸುವಂತೆ ಕೋರಿದೆ.

ಅಣ್ಣಾಮಲೈ ಪದತ್ಯಾಗ: ಜಾಲತಾಣದಲ್ಲಿ ಚರ್ಚೆ

ಪ್ರಾಮಾಣಿಕ ಕಾರ್ಯಕರ್ತರಿಗೆ ಬಿಜೆಪಿಯಿಂದ ಅನ್ಯಾಯ? ತಾಂತ್ರಿಕವಾಗಿ ಬಿಜೆಪಿ ಜಾಣನಡೆ-'ಅಣ್ಣಾ'ಗೆ ಉತ್ತಮ ಭವಿಷ್ಯ

ಚೆನ್ನೈ: ಭಾರತೀಯ ಜನತಾ ಪಕ್ಷದ ತಮಿಳುನಾಡು ಘಟಕದ ಅಧ್ಯಕ್ಷ ಸ್ಥಾನಕ್ಕೆ ಯುವ ನೇತಾರ, ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ರಾಜೀನಾಮೆ ಸಲ್ಲಿಸಿದ ಬಳಿಕ ಜಾಲತಾಣದಲ್ಲಿ ಭಾರೀ ಚರ್ಚೆ ಶುರುವಾಗಿದೆ. 'ಎಕ್ಸ್' ಬಳಕೆದಾ ರರಲ್ಲಿ ಕೆಲವರು, 'ಅಣ್ಣಾಮಲೈ ಪದತ್ಯಾಗ ಮಾಡುವಂತಾಗಿರುವುದು ಭಾರೀ ಅನ್ಯಾಯ, ಬಿಜೆಪಿ ದೊಡ್ಡ ತಪ್ಪು ಮಾಡಿದೆ' ಎಂದೇ ಕಟುವಾಗಿ ಟೀಕಿಸಿದ್ದಾರೆ.

ಬಿಜೆಪಿ ಪರ 'ಎಕ್ಸ್' ಬಳಕೆದಾರರು, 'ತಾಂತ್ರಿಕವಾಗಿ ಬಿಜೆಪಿಯದು ಜಾಣ ನಡೆ. ಅಣ್ಣಾಮಲೈಗೆ ಉತ್ತಮ ಭವಿಷ್ಯ ಕಾದಿದೆ' ಎಂದೇ ಅಭಿಪ್ರಾಯಪಟ್ಟಿದ್ದಾರೆ. ಜತೆಗೆ ಮಹಾರಾಷ್ಟ್ರ ರಾಜಕಾರಣದಲ್ಲಿ ಏಕನಾಥ ಶಿಂದೆ ಅವರಿಗೆ ಸಿಎಂ ಸ್ಥಾನ ಬಿಟ್ಟುಕೊಟ್ಟ ದೇವೇಂದ್ರ ಫಡ್ನವಿಸ್, ನಂತರ ಪೂರ್ಣಾವಧಿಗೆ ಸಿಎಂ ಆಗಿರುವುದರ ಉದಾಹರಣೆ ನೀಡಿದ್ದಾರೆ.

'ಹಠಯೋಗಿ' ಎಂಬ ಗುಪ್ತನಾಮದ 'ಎಕ್ಸ್' ಬಳಕೆದಾರ ಮೊದಲಿಗೆ ಅಭಿಪ್ರಾಯ ಹಂಚಿಕೊಂಡಿದ್ದು, ಯುವ ನಾಯಕತ್ವ, ಮತಗಳಿಕೆ, ಧ್ರುವೀಕರಣ ಅಂಶಗಳನ್ನು ಇಟ್ಟುಕೊಂಡು ತಮಿಳುನಾಡು ರಾಜಕಾರಣವನ್ನು ವಿಶ್ಲೇಷಿಸಿದ್ದಾರೆ. ಅದರ ವಿವರ ಇಲ್ಲಿದೆ...

2019ರಲ್ಲಿ ಲೋಕಸಭೆ ಚುನಾವಣೆಯಲ್ಲಿ ತಮಿಳುನಾಡಿನಲ್ಲಿ ಬಿಜೆಪಿ ಗಳಿಸಿದ್ದು ಕೇವಲ ಶೇ.3.64 ಮತ. ಆಗ ಎಐಎಡಿಎಂಕೆ ಪಕ್ಷ, ಬಿಜೆಪಿ ನೇತೃತ್ವದ ಎನ್‌ಡಿಎ ಭಾಗವಾಗಿತ್ತು. ಆಗ ಕರ್ನಾಟಕದಲ್ಲಿ ಜನಮೆಚ್ಚುಗೆಯ ಪೊಲೀಸ್ ಅಧಿಕಾರಿಯಾಗಿದ್ದ ಯುವಕ ಅಣ್ಣಾಮಲೈ 2019ರಲ್ಲಿ ಐಪಿಸಿ ಹುದ್ದೆಗೆ ರಾಜೀನಾಮೆ ನೀಡಿದರು. ಕೆಲಕಾಲ ಕೃಷಿಕರಾಗಿದ್ದು, 2020ರ ಆಗಸ್ಟ್‌ನಲ್ಲಿ ಬಿಜೆಪಿ ಸೇರಿದರು. 2021ರ ಚುನಾವಣೆಯಲ್ಲಿ 'ಎಐಎಡಿಎಂಕೆ ಮೈತ್ರಿ ಬೇಡ. ಬಿಜೆಪಿ ಏಕಾಂಗಿಯಾಗಿ ಸ್ಪರ್ಧೆ ಮಾಡಲಿ' ಎಂದೇ ಅಣ್ಣಾಮಲೈ ಬಯಸಿದರು. ನಂತರದ ದಿನಗಳಲ್ಲಿ ಅಣ್ಣಾಮಲೈ ಪಕ್ಷ ಸಂಘಟನೆಗೆ ಒತ್ತು ನೀಡಿ ರಾಜ್ಯದಲ್ಲಿ ಪಾದಯಾತ್ರೆ ನಡೆಸಿ ಪಕ್ಷದೆಡೆಗೆ ಜನರ ಗಮನ ಹರಿಯುವಂತೆ ಮಾಡಿದರು. ಪರಿಣಾಮವಾಗಿ 2021ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ ಗಳಿಕೆ ಶೇ.11.24ಕ್ಕೇರಿತು. ಮತ ಗಳಿಕೆಯಲ್ಲಿ ಭಾರಿ ಹೆಚ್ಚಳವಾದರೂ ಬಿಜೆಪಿ ಒಂದು ಕ್ಷೇತ್ರವನ್ನೂ ಗೆಲ್ಲಲಾಗಲಿಲ್ಲ. ಕಾರಣ ಮತ ಹಂಚಿಹೋಗಿದ್ದು. 'ಎಐಎಡಿಎಂಕೆ' ಆ ಚುನಾವಣೆಯಲ್ಲಿ ಶೇ.20.24ರಷ್ಟು ಮತ ಗಳಿಸಿತು. ಹಾಗೆಂದು, ಅಣ್ಣಾಮಲೈ ಅವರ 'ಏಕಾಂಗಿ ಸ್ಪರ್ಧೆ'

ದೊಡ್ಡಮಟ್ಟದಲ್ಲಿ ವಾಪಸ್?

2026ರ ಚುನಾವಣೆಗಾಗಿ ಎಐಎಡಿಎಂಕೆ-ಬಿಜೆಪಿ ಮೈತ್ರಿ ಸಾಧ್ಯವಾಗಲೆಂದೇ ಅಣ್ಣಾಮಲೈ ಪದತ್ಯಾಗ ಮಾಡುವಂತಾಗಿದೆ. ಆ ಮೂಲಕ ಎಐಎಡಿಎಂಕೆ ಒಂದಂಶದ ಬೇಡಿಕೆ ಈಡೇರಿದೆ. ಹಾಗೆಂದು ಅಣ್ಣಾಮಲೈಗೆ ಹಿನ್ನಡೆ ಆಗಿದೆ ಎನ್ನುವಂತಿಲ್ಲ. ಅವರಿಗೆ ಪಕ್ಷದಲ್ಲಿ, ಅದೂ ದಕ್ಷಿಣ ಭಾರತದಲ್ಲಿ ದೊಡ್ಡ ಜವಾಬ್ದಾರಿ ಸಿಗುವ ಸಾಧ್ಯತೆಯಿದೆ (ಫಡ್ನವೀಸ್ ಅವರಂತೆ). ಹಾಗಾಗಿ, ಅಣ್ಣಾಮಲೈ ಇನ್ನಷ್ಟು ದೊಡ್ಡಮಟ್ಟದಲ್ಲಿ ವಾಪಸಾಗಲಿದ್ದಾರೆ ಎಂದು ನಿರೀಕ್ಷಿಸಬಹುದಾಗಿದೆ.

ವಿಜಯ್ ಪ್ರವೇಶ

ಈ ಮಧ್ಯೆ, ತಮಿಳುನಾಡು ರಾಜಕಾರಣಕ್ಕೆ ಕಡು ಎಡಪಂಥದ ನಾಯಕನಾಗಿ ಚಿತ್ರನಟ ವಿಜಯ್ ಜೋಸೆಫ್ ಪ್ರವೇಶವಾಗಿದೆ. ಆ ನಂತರದಲ್ಲಿ ಬಿಜೆಪಿ ಕಾರ್ಯತಂತ್ರ ಪೂರ್ಣ ಬದಲಿಸಿಕೊಳ್ಳ ಬೇಕಾಗಿ ಬಂದಿದೆ. ಹಿಂದುತ್ವದ ಕಡು ವಿರೋಧಿಯಾದ ವಿಜಯ್ ಎದುರಾಗಿ ಬಲಿಷ್ಠ ಹಿಂದೂ ಪರ ಪಕ್ಷವಾಗಿ ಗುರುತಿಸಿಕೊಳ್ಳಲು ಬಿಜೆಪಿ ನಿರ್ಧರಿಸಿದೆ. ಇನ್ನೊಂದೆಡೆ, ವಿಜಯ್ ತಮ್ಮ ಮತ ಬ್ಯಾಂಕ್ ಒಡೆಯದಂತೆ ಮಾಡಲೆಂದೇ ಬಿಜೆಪಿ-ಎಐಎಡಿಎಂಕೆ ನಿರ್ಧರಿಸಿ ಒಟ್ಟುಗೂಡಿವೆ. ಹೇಗಾದರೂ ಸರಿ, 2026ರಲ್ಲಿ ತಮಿಳುನಾಡು ವಿಧಾನಸಭೆ ಚುನಾವಣೆ ಗೆಲ್ಲುವುದೇ ಎರಡೂ ಪಕ್ಷಗಳ ಗುರಿಯಾಗಿದೆ.

ಅಲಹಾಬಾದ್ ಹೈಕೋರ್ಟ್ ನ್ಯಾ. ವರ್ಮಾ ಪ್ರಮಾಣ

ದೆಹಲಿ: ದೆಹಲಿಯಲ್ಲಿನ ಹೈಕೋರ್ಟ್ ನ್ಯಾಯಮೂರ್ತಿಗಳ ಅಧಿಕೃತ ನಿವಾಸದಲ್ಲಿ ಅಪಾರ ಪ್ರಮಾಣದ(15 ಕೋಟಿ ರು.) ನಗದು ಪತ್ತೆಯಾದ ನಂತರ ಸುಪ್ರೀಂ ಕೋರ್ಟ್ ಮೇಲುಸ್ತುವಾರಿಯಲ್ಲಿ ಆಂತರಿಕ ಸಮಿತಿ ತನಿಖೆ ಎದುರಿಸುತ್ತಿರುವ ನ್ಯಾ.ಯಶವಂತ್ ವರ್ಮಾ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು.

ನ್ಯಾಯಮೂರ್ತಿಗಳಿಗೆ ವಾಡಿಕೆಯಂತೆ ಸಾರ್ವಜನಿಕ ಪ್ರಮಾಣ ವಚನ ಸಮಾರಂಭ ನಡೆಯುತ್ತವೆ. ಆದರೆ, ನ್ಯಾ.ವರ್ಮಾ ಖಾಸಗಿ ಕೊಠಡಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನ್ಯಾ.ವರ್ಮಾ ವಿರುದ್ಧದ ಆಂತರಿಕ ಸಮಿತಿ ತನಿಖೆ ಪೂರ್ಣಗೊಳ್ಳುವವರೆಗೂ ಅವರಿಗೆ ಯಾವುದೇ ನ್ಯಾಯಾಂಗದ ಕೆಲಸ ನಿಯೋಜಿಸಲಾಗುವುದಿಲ್ಲ. ಅಲಹಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನಂತರದ ಹಿರಿತನದ ಸಾಲಿನಲ್ಲಿ ನ್ಯಾ.ವರ್ಮಾ ಸದ್ಯ 6ನೇ ಸ್ಥಾನದಲ್ಲಿದ್ದಾರೆ. ನ್ಯಾ.ವರ್ಮಾರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಿರುವುದನ್ನು ವಿರೋಧಿಸಿ ಬಾರ್ ಅಸೋಸಿಯೇಷನ್ ಪ್ರತಿಭಟನೆ ನಡೆಸಿದೆ. ಆದರೆ, ಕೊಲಿಜಿಯಂನ ಶಿಫಾರಸಿನ ಮೇರೆಗೆ ಸುಪ್ರೀಂ ಕೋರ್ಟ್ ವರ್ಗಾವಣೆ ಅಧಿಸೂಚನೆ ಹೊರಡಿಸಿದೆ.

ಸಂಸತ್ ಬಜೆಟ್ ಅಧಿವೇಶನ ಅಂತ್ಯ

16 ಪ್ರಮುಖ ವಿಧೇಯಕ ಅಂಗೀಕಾರ | ರಾಜ್ಯಸಭೆ, ಲೋಕಸಭೆ ದೀರ್ಘ ಕಲಾಪ

ದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನ ಜ.31ರಂದು ಪ್ರಾರಂಭವಾಗಿದ್ದು, ಏ.4ರ ಶುಕ್ರವಾರ ಸಮಾಪನಗೊಂಡಿದೆ. ಲೋಕಸಭೆ, ರಾಜ್ಯಸಭೆಯ ಸದನಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಮತ್ತೆ ಸಂಸತ್ ಅಧಿವೇಶನ ಮಳೆಗಾಲದಲ್ಲಿ ಸೇರಲಿದೆ.

ವಕ್ಫ್(ತಿದ್ದುಪಡಿ) ವಿಧೇಯಕ-2024, ಹಣಕಾಸು ಮಸೂದೆ-2025, ವಲಸೆ ಮತ್ತು ವಿದೇಶಿಯರ ಮಸೂದೆ ಸೇರಿದಂತೆ 16ಪ್ರಮುಖ ವಿಧೇಯಕಗಳನ್ನು ಅಧಿವೇಶನದಲ್ಲಿ ಅಂಗೀಕರಿಸಲಾಗಿದೆ. ವಕ್ಫ್ (ತಿದ್ದುಪಡಿ) ವಿಧೇಯಕ-2024 ಎರಡೂ ಸದನಗಳಲ್ಲಿ ಸಾಕಷ್ಟು ಚರ್ಚೆ, ವಾಗ್ಯುದ್ಧಕ್ಕೆ ಕಾರಣವಾಗಿತ್ತು.

ಸ್ಪೀಕರ್ ಓಂ ಬಿರ್ಲಾ ಅವರ ಉಪಕ್ರಮದಂತೆ ಲೋಕಸಭೆಯಲ್ಲಿ ಶೂನ್ಯವೇಳೆಯ ಅವಧಿಯನ್ನು 5 ಗಂಟೆಗಳ ಕಾಲ ವಿಸ್ತರಿಸಲಾಯಿತು. ಏ.3ರಂದು ಲೋಕಸಭೆ ಕಲಾಪದಲ್ಲಿ ಶೂನ್ಯವೇಳೆ 202 ಸಂಸದರು ಸಾರ್ವಜನಿಕ ಮಹತ್ವದ ವಿಷಯಗಳ ಪ್ರಸ್ತಾವ-ಚರ್ಚೆಗೆ ಅವಕಾಶ ಮಾಡಿಕೊಡುವ ಮೂಲಕ ಸಂಸತ್ತಿನ ಕೆಳಮನೆ ಹೊಸ ದಾಖಲೆ ನಿರ್ಮಿಸಿದೆ. ಈ ಹಿಂದೆ, 2019ರ ಜು.18ರಂದು ಲೋಕಸಭೆಯತ ವಿಸ್ತೃತ ಶೂನ್ಯ ವೇಳೆ 161 ಸಂಸದರು ಚರ್ಚೆ ನಡೆಸಿದ್ದೇ ಈವರೆಗಿನ ದಾಖಲೆ.

ಮಣಿಪುರ ಹಿಂಸಾಚಾರ ಕುರಿತ ಚರ್ಚೆಗಳೂ ತಡರಾತ್ರಿವರೆಗೂ ನಡೆದಿವೆ. ಪ್ರತಿಪಕ್ಷಗಳ ಪ್ರತಿಭಟನೆಯ ಹೊರತಾಗಿಯೂ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಘೋಷಣೆ ಕುರಿತ ನಿರ್ಣಯದ ಶಾಸನಬದ್ಧತೆಯನ್ನು ಕುರಿತು ಚರ್ಚೆ ಗುರುವಾರ ನಸುಕಿನ 2 ಗಂಟೆವರೆಗೂ ನಡೆಯಿತು. ರಾಜ್ಯಸಭೆಯಲ್ಲಿ ಏ.4ರ ನಸುಕಿನ 2.37ರವರೆಗೂ ವಕ್ಫ್ ತಿದ್ದುಪಡಿ ವಿಧೇಯಕ ಕುರಿತ ಚರ್ಚೆ ನಡೆಸಲಾಗಿದೆ. ರಾಜ್ಯಸಭೆ ಅಧ್ಯಕ್ಷರೂ ಆದ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು, ಸದನ 159 ಗಂಟೆಗಳ ಕಾಲ ಕಾರ್ಯನಿರ್ವಹಿಸಿದೆ. ಶೇ.119ರಷ್ಟು ಫಲಪ್ರದ ಚರ್ಚೆ ನಡೆದಿವೆ ಎಂದು ಸಮಾರೋಪ ಭಾಷಣದಲ್ಲಿ ಹೇಳಿದ್ದಾರೆ.

ನಕ್ಸಲರು ಸತ್ತರೆ ಯಾರೂ ಸಂತೋಷ ಪಡುವುದಿಲ್ಲ

ದಾಂತೇವಾಡ: ನಕ್ಸಲರು ಹತಾರಾಗುವುದನ್ನು ಯಾರೂ ಇಷ್ಟಪಡುವುದಿಲ್ಲ. ಅವರ ಸಾವಿಗೆ ಯಾರೂ ಸಂತೋಷ ಪಡುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ, ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗಬೇಕು ಎಂದು ಮನವಿ ಮಾಡಿದರು. ಛತ್ತೀಸ್‌ಗಢ ರಾಜ್ಯ ಸರಕಾರ ಶನಿವಾರ ಬಸ್ತಾರ್ ಪ್ರದೇಶದಲ್ಲಿ ಆಯೋಜಿಸಿದ್ದ 'ಬಸ್ತಾರ್ ಪಾಂಡಮ್' ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅಮಿತ್ ಶಾ, ಬಸ್ತಾರ್‌ನಲ್ಲಿ ಗುಂಡು ಹಾರಿಸಿ, ಬಾಂಬ್‌ಗಳನ್ನು ಸ್ಫೋಟಿಸುತ್ತಿದ್ದ ದಿನಗಳು ಮುಗಿದಿವೆ. ನಕ್ಸಲ್ ಸೋದರರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮುಖ್ಯವಾಹಿನಿಗೆ ಸೇರಬೇಕು ಎಂದು ನಾನು ಒತ್ತಾಯಿಸುತ್ತೇನೆ. ನೀವು ನಮ್ಮವರು. ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗಿ, ಮುಖ್ಯವಾಹಿನಿಗೆ ಬನ್ನಿ ಎಂದು ಕರೆ ನೀಡಿದರು.

2026ರ ಮಾರ್ಚ್‌ಗೆ ಮುನ್ನ ದೇಶದಿಂದ ನಕ್ಸಲ್ ಹಾವಳಿಯನ್ನು ತೊಡೆದುಹಾಕಲು ಕೇಂದ್ರ ಸರಕಾರ ಬದ್ಧವಾಗಿದೆ. ಶರಣಾಗುವವರು ಮುಖ್ಯವಾಹಿನಿಯ ಭಾಗವಾಗುತ್ತಾರೆ, ಶರಣಾಗದಿದ್ದವರನ್ನು ಭದ್ರತಾ ಪಡೆಗಳು ನೋಡಿಕೊಳ್ಳುತ್ತವೆ ಎಂದು ಕಡೆಯ ಎಚ್ಚರಿಕೆ ಎಂಬಂತೆ ಹೇಳಿದರು.

ಪಂಬನ್‌ನಲ್ಲಿ ಸಮುದ್ರದಲ್ಲಿ ನಿರ್ಮಿಸಲಾಗಿರುವ ಸೇತುವೆ ದೇಶದ (ಏಷ್ಯಾ ಖಂಡದ) ಮೊಟ್ಟ ಮೊದಲ ವರ್ಟಿಕಲ್ ಲಿಫ್ಟ್ (ಲಂಬಕೋನ ತೆರವು) ಸೇತುವೆ ಎನಿಸಿಕೊಂಡಿದೆ. ಭಾರತದ ಪ್ರಧಾನ ಭೂಮಿಯನ್ನು ದೂರದ ದ್ವೀಪದ ಜತೆಗೆ ಸಂಪರ್ಕಗೊಳಿಸುವ ಭಾರತದಲ್ಲಿನ 2ನೇ ಅತಿ ಉದ್ದದ ಸಮುದ್ರ ಸೇತುವೆ ಇದಾಗಿದೆ. ಈ ಸೇತುವೆ ತಮಿಳುನಾಡಿನ ಮಂಟಪಂ ನಗರವನ್ನು ಪಂಬನ್ ದ್ವೀಪದಲ್ಲಿನ ರಾಮೇಶ್ವರಂಗೆ ಸಂಪರ್ಕಗೊಳಿಸುತ್ತದೆ. ಮೂಲತಂ ಇದೊಂದು ರೈಲ್ವೆ ಮಾರ್ಗದಲ್ಲಿನ ಸೇತುವೆಯಾಗಿದೆ. ಹಡಗುಗಳ ಸಂಚಾರ ವೇಳೆ ಈ ಸೇತುವೆ ಮೇಲ್ಮುಖವಾಗಿ (ಲಂಡನ್ ಬ್ರಿಡ್ಜ್ ಮಾದರಿ) ಲಂಬಕೋನದಲ್ಲಿ ತೆರೆದುಕೊಳ್ಳುತ್ತದೆ. ಹಡಗು ಮುಂದೆ ಸಾಗಿದ ಬಳಿಕ ಮತ್ತೆ ಸಮತಲಕ್ಕೆ ಬಂದು ಮರು ಜೋಡಣೆಗೊಳ್ಳುತ್ತದೆ.

ಪಂಬನ್ ಸೇತುವೆ ವೈಶಿಷ್ಟ್ಯ						
550	2.08	99	72.5	17	3	12.5
ಕೋಟಿ ರು. ಸೇತುವೆ ನಿರ್ಮಾಣ ವೆಚ್ಚ	ಕಿ.ಮೀ. ಸೇತುವೆಯ ಒಟ್ಟು ಉದ್ದ	ಸೇತುವೆ (ಸ್ಪ್ಯಾನ್) ಕಂಬಗಳ ನಡುವೆ ಜೋಡಣೆ	ಮೀ. ಉದ್ದ ಲಂಬವಾಗಿ ತೆರೆದುಕೊಳ್ಳುವ ಲಿಫ್ಟ್	ಮೀ. ಸೇತುವೆ ತೆರವು ವೇಳೆ ಎತ್ತರಕ್ಕೆ ಏರಿಕೆ	ಹಳೆಯ ಪಂಬನ್ ಸೇತುವೆಗಿಂತ ಮೀ. ಎತ್ತರ	ಮೀ. ಎತ್ತರ ಸಮುದ್ರ ಮಟ್ಟದಿಂದ

ಸಾಂಸ್ಕೃತಿಕ-ತಾಂತ್ರಿಕ ಮಹತ್ವ

ರಾಮಾಯಣದಲ್ಲಿ ಉಲ್ಲೇಖಿಸಿರುವಂತೆ ಶ್ರೀಲಂಕೆಗೆ ವಾನರ ಸೇನೆಯನ್ನು ಕರೆದೊಯ್ಯಲು ಶ್ರೀರಾಮಚಂದ್ರ ಭಗವಾನರ ನೇತೃತ್ವದಲ್ಲಿ ಧನಷ್ಕೋಟಿಯಿಂದ ಶ್ರೀಲಂಕಾ ದ್ವೀಪವನ್ನು ಸಂಪರ್ಕಿಸುವುದಕ್ಕಾಗಿ ಶ್ರೀ ರಾಮಸೇತು ನಿರ್ಮಾಣ ಮಾಡಲಾಯಿತು. ಶ್ರೀರಾಮ ಸೇತುವೆ ರಾಮೇಶ್ವರಂ ಬಳಿಯ ಧನುಷ್ಕೋಟಿಯಿಂದ ಆರಂಭವಾದ ಕಾರಣ, ಈಗ ನಿರ್ಮಿಸಿರುವ ವರ್ಟಿಕಲ್ ಲಿಫ್ಟ್ ಸೇತುವೆಯೂ ಸಾಂಸ್ಕೃತಿಕವಾಗಿ ಬಹಳ ಮಹತ್ವದ್ದಾಗಿದೆ. ರಾಮೇಶ್ವರಂ ಪ್ರದೇಶವನ್ನು ದೇಶದ ಮುಖ್ಯ ಭೂಭಾಗಕ್ಕೆ ಸಂಪರ್ಕಗೊಳಿಸುವ ಪಂಬನ್ ವರ್ಟಿಕಲ್ ಲಿಫ್ಟ್ ಸೇತುವೆ ಜಾಗತಿಕ ಮಟ್ಟದಲ್ಲಿ ಭಾರತದ ಇಂಜಿನಿಯರಿಂಗ್‌ಗೆ ಉತ್ತಮ ಉದಾಹರಣೆಯಾಗಲಿದೆ.



ನಿರ್ಮಾಣ ವೈಖರಿ

- ಸ್ಟೇನ್‌ಲೆಸ್ ಸ್ಟೀಲ್ ಬಳಕೆ
- ಸೇತುವೆ ಬಲವರ್ಧನೆಗೆ ತುಕ್ಕಾಗದ ಉಕ್ಕು ಬಳಕೆ
- ಉನ್ನತ ಶ್ರೇಣಿಯ ರಕ್ಷಣಾತ್ಮಕ ಬಣ್ಣ ಬಳಕೆ
- ನಟ್-ಬೋಲ್ಟ್ ಬದಲಾಗಿ ಸಂಪೂರ್ಣ ಬೆಸುಗೆ ಹಾಕಿದ ಕೀಲು
- ಸವೆತ ತಪ್ಪಿಸಲು ವಿಶೇಷ ಪಾಲಿಸಿಲೋಕ್ಸೇನ್ ಲೇಪನ

- ಅಧಿಕ ಉಪ್ಪಿನಂಶ-ಗಡಸು ನೀರಿನಲ್ಲೂ ಸುದೀರ್ಘ ಬಾಳಿಕೆ ಖಚಿತ
- ಇಂಜಿನಿಯರಿಂಗ್ ಶ್ರೇಷ್ಠತೆ ಕಾರಣ ಅತಿ ಕಡಿಮೆ ನಿರ್ವಹಣೆ ಅಗತ್ಯ

ಪ್ರಯೋಜನ

- ಹಡಗು ಬಂದಾಗ ತೆರೆದುಕೊಳ್ಳುವ ಸೇತುವ-ನೌಕೆಯ ಸುಗಮ ಸಂಚಾರ
- ರಾಮೇಶ್ವರಂ-ಮಂಟಪಂ ನಡುವೆ ತಡೆಯಿಲ್ಲದೆ ರೈಲು ಸಂಚಾರಕ್ಕೆ ಅವಕಾಶ
- ದಕ್ಷಿಣ ರೈಲ್ವೆಯಿಂದ ಈಗಾಗಲೇ ಪ್ರಯೋಗಾರ್ಥ ಸಂಚಾರ ಯಶಸ್ವಿ
- ಪಂಬನ್‌ನ ರಾಮೇಶ್ವರಂ-ತ.ನಾಡಿನ ಮಂಟಪಂ ನಗರಗಳ ಸಂಪರ್ಕದ ಕೊಂಡಿ
- ಹಳೆ ಪಂಬನ್ ಸೇತುವೆಯಲ್ಲಿನ 30 ನಿಮಿಷದ ಪಯಣಕ್ಕೆ ಈಗ 5 ನಿಮಿಷ ಸಾಕು
- ಹೊಸ ಸೇತುವೆಯಲ್ಲಿ ಗಂಟೆಗೆ 75-80 ಕಿಮೀ ವೇಗದಲ್ಲಿ ರೈಲು ಸಂಚಾರ ಸಾಧ್ಯ
- ವರ್ಟಿಕಲ್ ಲಿಫ್ಟ್ ಸೇತುವೆ ಇರುವೆಡೆ ಸಂಚಾರ ವೇಗಕ್ಕೆ ಗಂಟೆಗೆ 50 ಕಿಮೀ ಮಿತಿ
- ಹಳೆ ಪಂಬನ್ ಸೇತುವೆ 1914ರಲ್ಲಿ ನಿರ್ಮಾಣ-ಸವಕಳಿ ಕಾರಣ 2022ರಲ್ಲಿ ಬಳಕೆ ಸ್ಥಗಿತ

ರಾಮನವಮಿ ದಿನವೇ ಪಂಬನ್ ಸೇತುವೆಗೆ ಮೋದಿ ಚಾಲನೆ

ದೇಶದ ಮೊದಲ ವರ್ಟಿಕಲ್ ಲಿಫ್ಟ್ ಸಮುದ್ರ ಸೇತುವೆ

ದೆಹಲಿ: ಶ್ರೀ ರಾಮ ನವಮಿ ದಿನದಂದೇ ತಮಿಳುನಾಡಿನ ಪಂಬನ್‌ನಲ್ಲಿ ನಿರ್ಮಿಸಿರುವ ದೇಶದ ಮೊದಲ 'ವರ್ಟಿಕಲ್ ಲಿಫ್ಟ್'(ಲಂಬಕೋನ ತೆರವು) ಸಮುದ್ರ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಏ.6ರ ಭಾನುವಾರ ಪ್ರಧಾನಿ ಮೋದಿ ಅವರು ತಮಿಳುನಾಡಿಗೆ ಭೇಟಿ ನೀಡುತ್ತಿದ್ದು, ಮಧ್ಯಾಹ್ನ 12 ಗಂಟೆಗೆ ಪಂಬನ್ ಮತ್ತು ರಾಮೇಶ್ವರಂ ನಡುವಿನ ದೇಶದ ಮೊದಲ ವರ್ಟಿಕಲ್ ಲಿಫ್ಟ್ ಸಮುದ್ರ ಸೇತುವೆಯನ್ನು ಉದ್ಘಾಟಿಸಲಿದ್ದಾರೆ. ಬಳಿಕ ರಸ್ತೆ ಸೇತುವೆಯಿಂದ ರೈಲು ಮತ್ತು ಹಡಗು ಸಂಚಾರಕ್ಕೆ ಹಸಿರು ನಿಶಾನೆ ತೋರಲಿದ್ದಾರೆ. ನಂತರ ಕೆಲ ಕಾಲ ಸೇತುವೆಯ ಕಾರ್ಯಾಚರಣೆಯನ್ನು ವೀಕ್ಷಿಸಲಿದ್ದಾರೆ ಎಂದು ಪ್ರಧಾನಿ ಕಚೇರಿ ಅಧಿಕೃತ ಪ್ರಕಟಣೆ ಶನಿವಾರ ತಿಳಿಸಿದೆ.

ಮಧ್ಯಾಹ್ನ 12.45ರ ವೇಳೆಗೆ ಪ್ರಧಾನಿ ಮೋದಿ ಅವರು ರಾಮೇಶ್ವರದ ರಾಮನಾಥಸ್ವಾಮಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಬಳಿಕ ಪ್ರಧಾನಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

8,300 ಕೋಟಿ ರು. ಅಭಿವೃದ್ಧಿ ಕಾಮಗಾರಿ

ತಮಿಳುನಾಡಿನ ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು, 8,300 ಕೋಟಿ ರು.ಗೂ ಅಧಿಕ ಮೊತ್ತದ ವಿವಿಧ ರೈಲು ಯೋಜನೆಗಳಿಗೆ ಮತ್ತು ರಸ್ತೆ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವರು. ಪೂರ್ಣಗೊಂಡ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸುವರು ಎಂದು 'ಪಿಎಂಒ' ಪ್ರಕಟಣೆ ತಿಳಿಸಿದೆ.

ಮಧ್ಯಾಹ್ನ 1.30ಕ್ಕೆ ರಾಮೇಶ್ವರಂನಲ್ಲಿ 8,300 ಕೋಟಿ ರು.ಗಳಿಗೂ ಹೆಚ್ಚು ಮೌಲ್ಯದ ವಿವಿಧ ರೈಲು ಮತ್ತು ರಸ್ತೆ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ರಾಷ್ಟ್ರಕ್ಕೆ ಸಮರ್ಪಣೆ ಕಾರ್ಯ ನಡೆಸಲಿದ್ದಾರೆ. ರಾಮೇಶ್ವರಂನಿಂದ ತಾಂಬರಂ(ಚೆನ್ನೈ)ವರೆಗಿನ ಹೊಸ ರೈಲು ಸಂಚಾರ ಸೇವೆಗೆ ಚಾಲನೆ ನೀಡುವರು. ರಾಷ್ಟ್ರೀಯ ಹೆದ್ದಾರಿ-40ರಲ್ಲಿ 28 ಕಿಮೀ ಉದ್ದದ ವಾಲಜಪೇಟೆ-ರಾಣಿಪೇಟೆ ವಿಭಾಗದ ಚತುಸ್ಪಥ ಮತ್ತು ಎನ್‌ಎಚ್-332ರಲ್ಲಿ 29 ಕಿಮೀ ಉದ್ದದ ವಿಲುಪ್ಪುರಂ-ಪುದುಚೇರಿ ವಿಭಾಗದ ಚತುಷ್ಪಥ, ಎನ್‌ಎಚ್-32ರಲ್ಲಿ 57 ಕಿಮೀ ಉದ್ದದ ಪೂಂಡಿಯಂಕುಪ್ಪಂ-ಸತ್ತನಾಥಪುರಂ ವಿಭಾಗ ಮತ್ತು ಎನ್‌ಎಚ್-36ರಲ್ಲಿ 48 ಕಿಮೀ ಉದ್ದದ ಚೋಳಪುರಂ-ತಂಜಾವೂರು ವಿಭಾಗದ ಚತುಷ್ಪಥಗಳಿಗೆ ಶಂಕುಸ್ಥಾಪನೆ ಮಾಡಲಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಸೀದಿ, ಖಬರಸ್ತಾನ್ ಮುಟ್ಟಲ್ಲ: ರವಿಶಂಕರ್

ದೆಹಲಿ: ವಕ್ಫ್ ತಿದ್ದುಪಡಿ ವಿಧೇಯಕಕ್ಕೆ ಮುಸ್ಲಿಂ ಸಮುದಾಯದಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಜತೆಗೆ ಪ್ರತಿಪಕ್ಷಗಳೂ ವಿರೋಧ ವ್ಯಕ್ತಪಡಿಸಿ ಕೋರ್ಟ್ ಮೆಟ್ಟಿಲೇರುತ್ತಿವೆ. ಈ ಸಂದರ್ಭ ವಕ್ಫ್ ವಿಧೇಯಕವನ್ನು ಸಮರ್ಥನೆ ಮಾಡಿಕೊಂಡಿರುವ ಬಿಜೆಪಿಯ ಹಿರಿಯ ಸಂಸದ ರವಿಶಂಕರ್ ಪ್ರಸಾದ್, ವಕ್ಫ್ ವಿಧೇಯಕ ಯಾವುದೇ ಮಸೀದಿ, ಪೂಜಾ ಸ್ಥಳ ಅಥವಾ ಕಬರಸ್ತಾನವನ್ನು ಮುಟ್ಟುವುದಿಲ್ಲ ಎಂದು ಶನಿವಾರ ಸ್ಪಷ್ಟಪಡಿಸಿದ್ದಾರೆ.ವಾಸ್ತವದಲ್ಲಿ ವಕ್ಫ್ (ತಿದ್ದುಪಡಿ) ವಿಧೇಯಕ ಮುಸ್ಲಿಂ ಸಮುದಾಯದಲ್ಲಿ ಬಡವರಿಗೆ, ಮಹಿಳೆಯರಿಗೆ ಹೆಚ್ಚಿನ ಪ್ರಯೋಜನ ಮಾಡಿ ಕೊಡುತ್ತದೆ. ಆಸ್ತಿಗಳ ಬಳಕೆ, ವರ್ಗಾವಣೆ ವಿಚಾರದಲ್ಲಿ ಪಾರದ ರ್ಶಕತೆ ಖಚಿತಪಡಿಸುತ್ತದೆ ಎಂದು ರವಿಶಂಕರ್ ಪ್ರಸಾದ್ ಹೇಳಿದ್ದಾರೆ. ನನ್ನ ಹುಟ್ಟೂರು ಪಟನಾದ ಡಾಕ್ ಬಂಗಲೋ ಬಳಿಯ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿಯೇ ವಕ್ಫ್ ಭೂಮಿ ಇದೆ. ಆದರೆ ಅಲ್ಲಿ ಪಂಚತಾರಾ ಹೋಟೆಲ್‌ಗಳು ಮತ್ತು ಶೋ ರೂಂಗಳು ತಲೆ ಎತ್ತಿವೆ. ವಿಶ್ವದಲ್ಲೇ ಅತಿ ಹೆಚ್ಚು ವಕ್ಫ್ ಆಸ್ತಿ ಇರುವುದು ಭಾರತದಲ್ಲೇ. ಆದರೆ, ಈ ವಕ್ಫ್ ಆಸ್ತಿಗಳಲ್ಲಿ ಎಷ್ಟು ಆಸ್ಪತ್ರೆ, ವಿಶ್ವವಿದ್ಯಾಲಯ ಮತ್ತು ನಿರುದ್ಯೋಗಿ ಯುವಜನರಿಗೆ ತರಬೇತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ? ಈ ಬಗ್ಗೆ ವಕ್ಫ್ ಮಂಡಳಿ ಸ್ಪಷ್ಟಪಡಿಸಲಿ ಎಂದು ಬಿಜೆಪಿಯ ಹಿರಿಯ ನಾಯಕ ಹೇಳಿದ್ದಾರೆ.

ನ್ಯಾಯಬೆಲೆ ಅಂಗಡಿ ಮಾರ್ಗಸೂಚಿಗೆ ಆದೇಶ

ಬೆಂಗಳೂರು: ಮಹಾನಗರ ಪಾಲಿಕೆ, ಪುರಸಭೆ, ಪಟ್ಟಣ ಪ್ರದೇಶ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ನ್ಯಾಯಬೆಲೆ ಅಂಗಡಿಗೆ ಅನುಮತಿಸುವ ಪ್ರಕ್ರಿಯೆಯಲ್ಲಿ ಮಳಿಗೆ ಪ್ರಾರಂಭಕ್ಕೆ ಸಂಬಂಧ ಸೂಕ್ತವಾದ ಸ್ಥಳ ನಿಗದಿಪಡಿಸುವ ಕುರಿತಂತೆ ಅಗತ್ಯ ಮಾರ್ಗಸೂಚಿ ರಚನೆ ಮಾಡುವಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಆಹಾರ ಇಲಾಖೆ ಕ್ರಮ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ: ತನಗೆ ಮಂಜೂರಾಗಿದ್ದ ನ್ಯಾಯಬೆಲೆ ಅಂಗಡಿ ರದ್ದುಗೊಳಿಸಿದ್ದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕ್ರಮ ಪ್ರಶ್ನಿಸಿ ಮೈಸೂರು ತಾಲೂಕಿನ ರಾಮನಹಳ್ಳಿ ಗ್ರಾಮದ ಮಂಜುನಾಥ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಮುಂದಿನ 30 ದಿನಗಳಲ್ಲಿ ನಿಯಮಗಳ ಪ್ರಕಾರವಾಗಿ ಪರಿಗಣಿಸಿ ಸೂಕ್ತ ಆದೇಶ ಹೊರಡಿಸಬೇಕು ಆಹಾರ ಇಲಾಖೆಗೆ ನ್ಯಾಯಪೀಠ ಆದೇಶಿಸಿದೆ.

1808 ಪುಟಗಳ 2ನೇ ಮಧ್ಯಂತರ ವರದಿ ಸಲ್ಲಿಸಿದ ನಿವೃತ್ತ ನ್ಯಾ.ಜಾನ್ ಮೈಕಲ್ ಡಿ ಕುನ್ಹಾ

ಕೋವಿಡ್ ಹಗರಣ: ಮಧ್ಯಂತರ ವರದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ಸರಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಕೋವಿಡ್ ಕಾಲದ ಹಗರಣ ಆರೋಪ ಪ್ರಕರಣದ ಮಧ್ಯಂತರ ವರದಿಯನ್ನು ನ್ಯಾಯಮೂರ್ತಿ ಮೈಕಲ್ ಡಿ ಕುನ್ಹಾ ಆಯೋಗ ರಾಜ್ಯ ಸರಕಾರಕ್ಕೆ ಸಲ್ಲಿಕೆ ಮಾಡಿದೆ.

ಕೋವಿಡ್ 19 ಸಂದರ್ಭದ ಖರೀದಿಯಲ್ಲಿ ನಡೆದಿರುವ ಅವ್ಯವಹಾರ ಮತ್ತು ಹಗರಣಗಳ ತನಿಖೆಗೆ ನೇಮಿಸಲಾಗಿದ್ದ ತನಿಖಾ ಆಯೋಗದ ಆಯುಕ್ತರಾದ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೇಲ್ ಡಿ ಕುನ್ಹಾ ಅವರು 1808 ಪುಟಗಳ ಎರಡನೇ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿಗಳಿಗೆ ಶನಿವಾರ ಸಲ್ಲಿಸಿದರು. ಒಟ್ಟು ಏಳು ಸಂಪುಟಗಳ ಮಧ್ಯಂತರ ವರದಿ ಇದಾಗಿದ್ದು, ಇದರಲ್ಲಿ ನಾಲ್ಕು ಸಂಪುಟಗಳು ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದ ಹಗರಣ ಮತ್ತು ಅವ್ಯವಹಾರಗಳದ್ದಾಗಿವೆ. ಬಿಬಿಎಂಪಿಯ ಬೊಮ್ಮನಹಳ್ಳಿ ವಲಯ, ದಕ್ಷಿಣ ವಲಯ, ಪಶ್ಚಿಮ ವಲಯ, ಯಲಹಂಕ ವಲಯಗಳ ಹಗರಣಗಳಿಗೆ ಸಂಬಂಧಪಟ್ಟ ವಿವರಗಳು ಪ್ರತ್ಯೇಕ ಪ್ರತ್ಯೇಕ ಸಂಪುಟಗಳಲ್ಲಿವೆ. ಉಳಿದ ಮೂರು ಸಂಪುಟಗಳು ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆ ಮತ್ತು ಗದಗ ಹಾಗೂ ಕೊಪ್ಪಳ ಜಿಲ್ಲೆಗಳ ಹಗರಣಗಳದ್ದಾಗಿವೆ. ತನಿಖೆಯ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಪ್ಪಿಸಿದರು.

ಬಿಜೆಪಿ ಸರಕಾರದ ಅವಧಿಯಲ್ಲಿ 2,000 ಕೋಟಿ ರು. ಗಿಂತಲೂ ಅಧಿಕ ಅಕ್ರಮ ನಡೆದಿದೆ ಅಂತ ಆರೋಪ ಕೇಳಿ ಬಂದಿತ್ತು. ಹಗರಣದ ಬಗ್ಗೆ ವರದಿ ಸಲ್ಲಿಸಲು ಕಾಂಗ್ರೆಸ್ ಸರಕಾರ 2023 ಆಗಸ್ಟ್ ನಲ್ಲಿ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಮೈಕಲ್ ಡಿ ಕುನ್ಹಾ ನೇತೃತ್ವದ ಆಯೋಗ ರಚನೆ ಮಾಡಿತ್ತು. ಈ ಸಂಬಂಧ ಸುದೀರ್ಘ ತನಿಖೆ ನಡೆಸಿದ್ದ ಮೈಕೇಲ್ ಡಿ ಕುನ್ಹಾ ನೇತೃತ್ವದ ತನಿಖಾ ಆಯೋಗ ಸಿಎಂ ನಿವಾಸ ಕಾವೇರಿ ಯಲ್ಲಿ ಸಿದ್ದರಾಮಯ್ಯಗೆ ಮಧ್ಯಂತರ ವರದಿ ಸಲ್ಲಿಕೆ ಮಾಡಿದೆ. ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನ್ಯಾಯಮೂರ್ತಿ ಮೈಕಲ್ ಡಿ ಕುನ್ಹಾ ಅವರು ತನಿಖೆಯ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಪ್ಪಿಸಿದರು.

ಮೊದಲ ವರದಿಯಲ್ಲಿ ವರದಿಯಲ್ಲಿ ಏನಿತ್ತು?

330 ರಿಂದ 750ರ ದರದಲ್ಲಿ ಪಿಪಿಇ ಕಿಟ್‌ಗನ್ನು ಪೂರೈಸಲು ದೇಶೀಯ ಕಂಪನಿಗಳು ಸಿದ್ಧವಿದ್ದವು. ಈ ಕಂಪನಿಗಳಿಂದಲೇ ಕಿಟ್ ಖರೀದಿಸಬೇಕು ಎಂದು ಅಧಿಕಾರಿಗಳು ಶಿಫಾರಸು ಮಾಡಿದ್ದರೂ, ಅದನ್ನು ಬದಿಗೊತ್ತಲಾಗಿದೆ. 2,049ರಿಂದ 2,117 ದರದಲ್ಲಿ 3 ಲಕ್ಷ ಕಿಟ್‌ಗಳನ್ನು ಚೀನಾದ ಕಂಪನಿಗಳಿಂದ ಖರೀದಿಸುವ ಒಪ್ಪಂದಕ್ಕೆ ಸ್ವತಃ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವ ಸಹಿ ಹಾಕಿದ್ದಾರೆ. ಮೂಲ ಖರೀದಿ ನಿಯಮಗಳು ಮತ್ತು ಕಾರ್ಯವಿಧಾನ ಅನುಸರಿಸದೆ, ಟೆಂಡರ್ ಕರೆಯದೆ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಮೂಲಕ ರಾಜ್ಯದ ಬೊಕ್ಕಸಕ್ಕೆ ಅಪಾರವಾದ ನಷ್ಟ ಉಂಟು ಮಾಡಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. 2020ರ ಏಪ್ರಿಲ್‌ನಲ್ಲಿ ಚೀನಾದ ಡಿಎಚ್‌ಬಿ ಗ್ಲೋಬಲ್ ಹಾಂಗ್‌ಕಾಂಗ್ ಮತ್ತು ಬಿಗ್ ಫಾರ್ಮಾಸ್ಯುಟಿಕಲ್ಸ್ ಕಂಪನಿಗಳ ಜತೆ 62.71 ಕೋಟಿಗೆ ಮಾಡಿಕೊಂಡ ಒಪ್ಪಂದದಲ್ಲಿ ಎಲ್ಲ ಸ್ವರೂಪದ ಸಾಗಣೆ ವೆಚ್ಚವೂ ಸೇರಿತ್ತು. ಹೀಗಿದ್ದೂ, ಈ ಎರಡೂ ಕಂಪನಿಗಳಿಗೆ ಹೆಚ್ಚುವರಿಯಾಗಿ ಒಟ್ಟು 14.21 ಕೋಟಿ ಸಾಗಣೆ ವೆಚ್ಚ ನೀಡಲಾಗಿದೆ.

ಇವೆಲ್ಲವೂ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರ ಕಣ್ಗಾವಲಿನಲ್ಲೇ ನಡೆದಿದೆ ಎಂದು ವರದಿಯಲ್ಲಿ ಹೇಳಲಾಗಿತ್ತು. ಕೋವಿಡ್ ವೇಳೆ ಬಿ.ಎಸ್ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಈ ಅವಧಿಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ ನೀಡಿತ್ತು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ, ಕೋವಿಡ್ ಅಕ್ರಮದ ತನಿಖೆಗೆ ಆಯೋಗ ರಚಿಸಿತ್ತು.

ನನ್ನನ್ನು ಕೆಣಕಬೇಡಿ: ಡಿಕೆಶಿಗೆ ನೇರ ಎಚ್ಚರಿಕೆ ಕೊಟ್ಟ ಎಚ್ಡಿಕೆ

ಕಾಂಗ್ರೆಸ್ ವಿರುದ್ಧ ಯುದ್ಧ ಆರಂಭಿಸಿದ್ದೇನೆ: ಎಚ್ಡಿಕೆ

ಬೆಂಗಳೂರು: ನನ್ನ ಹತ್ರ ಟನ್‌ಗಟ್ಟಲೆ ದಾಖಲೆಗಳಿವೆ. ಸುಖಾಸುಮ್ಮನೆ ನನ್ನನ್ನು ಕೆಣಕಬೇಡಿ ನನ್ನನ್ನು ಎಂದು ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಸವಾಲು ಹಾಕಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾನು ಕನಕಪುರದಲ್ಲಿ ಮಾತ್ರ ಬಂಡೆ ಒಡೆದಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಬಳ್ಳಾರಿಗೆ ನನಗೂ ಏನು ಸಂಬಂಧ ಎಂದು ಹೇಳಿಕೊಂಡಿದ್ದಾರೆ. ನನ್ನ ಬಳಿ ಟನ್ ಗಟ್ಟಲೆ ದಾಖಲೆಗಳು ಇವೆ. ಗಾಳಿಯಲ್ಲಿ ಗುಂಡು ಹೊಡೆಯುತ್ತಿಲ್ಲ ನಾನು, ಇರುವ ಸತ್ಯ ಹೇಳುತ್ತಿದ್ದೇನೆ ಎಂದರು. ಈ ಸರಕಾರಕ್ಕೆ ನಾನು ನೇರವಾಗಿ ಹೇಳುತ್ತಿದ್ದೇನೆ. ನನ್ನ ಮೇಲಷ್ಟೇ ರಾಜಕೀಯ ಹಗೆತನ ಸಾಧಿಸುತ್ತಿರುವುದು ಅಷ್ಟೇ ಅಲ್ಲ, ರಾಜ್ಯದ ಜನರನ್ನು ಕಿತ್ತು ತಿನ್ನುತ್ತಿರುವ ಈ ಸರಕಾರಕ್ಕೆ ನೇರ ಎಚ್ಚರಿಕೆ ನೀಡುತ್ತಿದ್ದೇನೆ. ಸವಾಲು ಹಾಕಲು ಇಲ್ಲಿಗೆ ಬಂದಿದ್ದೇನೆ. ಇಂದಿನಿಂದ ಈ ಜನ ವಿರೋಧಿ ಸರಕಾರದ ವಿರುದ್ಧ ನೇರ ಯುದ್ಧ ಆರಂಭ ಮಾಡುತ್ತಿದ್ದೇನೆ ಎಂದರು.

ಸುದ್ದಿಗಾರರೊಂದಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿದರು.

2003– 2004ರಲ್ಲಿ ಅವರು ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದರು. ಅದಿರಿನ ಮಣ್ಣಿನ ನೆಪದಲ್ಲಿ ಸಾವಿರಾರು ಟನ್ ಕಬ್ಬಿಣದ ಅದಿರನ್ನು ಬಳ್ಳಾರಿಯಲ್ಲಿ ಕದ್ದು ಸಾಗಿಸಿದರು. ಆ ಅದಿರು ಎಲ್ಲಿಗೆ ಹೋಯಿತು? ಏನು ಮಾಡಿದರು. ಅವರು ಯಾರಿಗೆಲ್ಲ ಪತ್ರ ಬರೆದು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ಉಪ ಮುಖ್ಯಮಂತ್ರಿ ನನ್ನನ್ನು ಕೆಣಕುತ್ತಿದ್ದಾರೆ ಎಂದರು.

ಸರಕಾರದಲ್ಲಿ ಘಜ್ನಿ, ಘೋರಿ ಮಹಮ್ಮದ್ ಇದ್ದಾರೆ

ರಾಜ್ಯದಲ್ಲಿ ನಡೆಯುತ್ತಿರುವ ಈ ಸರಕಾರದ ಅಕ್ರಮಗಳು, ದರೋಡೆಗಳು ಮಿತಿಮೀ ರಿವೆ. ವಿಧಾನ ಸೌಧದ 3ನೇ ಮಹಡಿಯಲ್ಲಿ ಘಜ್ನಿ ಮಹಮ್ಮದ್, ಘೋರಿ ಮಹಮ್ಮದ್ ಹಾಗೂ ಮಲ್ಲಿಕ್ ಖಫೂರ ಇದ್ದಾರೆ. ಅವರನ್ನು ನಾಚುವ ರೀತಿಯಲ್ಲಿ ಕೊಳ್ಳೆ ಹೊಡೆಯುತ್ತಿದ್ದಾರೆ. ಹನಿಟ್ರ್ಯಾಪ್, ಸುಪಾರಿ ಕೊಲೆ ಬಗ್ಗೆ ಚರ್ಚೆ ಆಗುತ್ತಿದೆ. ಎಂತಹ ಪರಿಸ್ಥಿತಿಗೆ ಬಂದಿದ್ದಾರೆ ಇವರು ಎಂದು ಬೇಸರ ವ್ಯಕ್ತಪಡಿಸಿದರು.

ಜಯನಗರ ವಿಧಾನಸಭಾ ಕ್ಷೇತ್ರದ ಸಾರ್ವಜನಿಕರ ಅನುಕೂಲಕ್ಕಾಗಿ ಜಯನಗರ 4ನೇ ಟಿ ಬ್ಲಾಕ್ ಚಾಮುಂಡೇಶ್ವರಿ ಕಬ್ಬಡಿ ಆಟದ ಮೈದಾನ ಹಾಗೂ ಜೆಪಿ ನಗರ 2ನೇ ಹಂತದ ಧನ್ವಂತರಿ ಉದ್ಯಾನವನ ಸ್ಥಳದಲ್ಲಿ ಬಿಬಿಎಂಪಿ ಸಹಕಾರದೊಂದಿಗೆ ಆಯೋಜಿಸಿದ್ದ ಇ-ಖಾತಾ ಮೇಳವನ್ನು ಶಾಸಕ ಸಿ.ಕೆ. ರಾಮಮೂರ್ತಿ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಬಿಬಿಎಂಪಿಯ ವಲಯ ಆಯುಕ್ತ, ದಿಗ್ವಿಜಯ್ ಬೋಡಕೆ ಮತ್ತು ಜಂಟಿ ಆಯುಕ್ತೆ ಮಧು ಪಾಟೀಲ್ ಹಾಗೂ ಬಿಬಿಎಂಪಿಯ ಮಾಜಿ ಸದಸ್ಯರುಗಳು ಮತ್ತು ಬಿಬಿಎಂಪಿಯ ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಏ.14ರಿಂದ ಅನಿರ್ದಿಷ್ಟಾವಧಿ ಲಾರಿ ಮುಷ್ಕರಕ್ಕೆ ಕರೆ

ಬೆಂಗಳೂರು: ರಾಜ್ಯ ಸರಕಾರ ಅಗತ್ಯ ವಸ್ತುಗಳು, ವಿದ್ಯುತ್ ಡೀಸೆಲ್ ದರ ಏರಿಕೆ ಖಂಡಿಸಿ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಏ.14 ರಿಂದ ಲಾರಿ ಮಾಲೀಕರ ಸಂಘವು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದೆ.

ಅಗತ್ಯ ವಸ್ತುಗಳ ದರ ಏರಿಕೆ ಬೆನ್ನಲ್ಲೇ ರಾಜ್ಯ ಸರಕಾರ ಡೀಸೆಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಿಸಿದ್ದು ಲಾರಿ ಮಾಲೀಕರ ಆಕ್ರೋಶಕ್ಕೆ ಕಾರಣವಾಗಿದೆ. ಹೀಗಾಗಿ ಮುಷ್ಕರಕ್ಕೆ ಕರೆ ನೀಡಿದ್ದು 5 ಲಕ್ಷ ಲಾರಿಗಳು ಸಂಚಾರ ನಿಲ್ಲಿಸಲಿವೆ. ರಾಜ್ಯ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಜಿ.ಆರ್.ಷಣ್ಮುಗಪ್ಪ ಮಾತನಾಡಿ, ಸಿದ್ದರಾಮಯ್ಯ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಎರಡನೇ ಬಾರಿ ಡೀಸೆಲ್ ದರ ಹೆಚ್ಚಿಸಿದೆ. ಕಳೆದ ವರ್ಷ ಜೂನ್ 15ರಂದು ಮೂರು ರುಪಾಯಿ, ಈ ವರ್ಷ ಏಪ್ರಿಲ್1ರಂದು ಎರಡು ರುಪಾಯಿ ಹೆಚ್ಚಿಸಿದ್ದಾರೆ. ಇದರಿಂದ ಲಾರಿ ಮಾಲೀಕರು ವಿಷ ಕುಡಿಯುವ ಪರಿಸ್ಥಿತಿ ಬಂದಿದೆ. ರಾಜ್ಯದಲ್ಲಿ 6 ಲಕ್ಷ ಲಾರಿಗಳಿವೆ. ಎಲ್ಲ ಲಾರಿಗಳನ್ನು ಟೋಲ್ ಮತ್ತು ಹೈವೇಗಳಲ್ಲಿ ಬಿಟ್ಟು ಮುಷ್ಕರ ಮಾಡುತ್ತೇವೆ. ನಮ್ಮ ಮುಷ್ಕರದಲ್ಲಿ ಪೆಟ್ರೋಲ್, ಡೀಸೆಲ್ ಬಂಕ್‌ಗಳು ಬಂದ್ ಆಗಲಿದೆ. ಡೀಸೆಲ್ ಬೆಲೆ ಇಳಿಕೆ ಮಾಡಲು ಈಗಾಗಲೇ ಗಡುವು ನೀಡಿದ್ದೆವು. ಆದರೆ ಸರಕಾರ ಡೀಸೆಲ್ ದರ ಕಡಿಮೆ ಮಾಡಲು ಮುಂದಾಗಿಲ್ಲ. ಹೀಗಾಗಿ ಏಪ್ರಿಲ್ 14 ರಂದು ರಾಜ್ಯಾದ್ಯಂತ ಮುಷ್ಕರ ಮಾಡುತ್ತೇವೆ ಎಂದು ಹೇಳಿದರು. ರಾಜ್ಯ ಸರಕಾರ ಈಗಾಗಲೇ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಎರಡು ರುಪಾಯಿ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಇದರಿಂದ ಕೆರಳಿ ಕೆಂಡವಾಗಿರುವ ಲಾರಿ ಮಾಲೀಕರು, ಕೇಂದ್ರ ಸರಕಾರ ಟೋಲ್ ದರ ಹೆಚ್ಚಳ ಮಾಡಿದೆ. ಇದರಿಂದ ಪ್ರತಿ ತಿಂಗಳು ಸಾವಿರಾರು ರುಪಾಯಿ ಹೊರೆ ಆಗಲಿದೆ. ಇಂತಹ ಸಂದರ್ಭದಲ್ಲೇ ಮತ್ತೆ ರಾಜ್ಯ ಸರಕಾರ ಡೀಸೆಲ್ ದರ ಹೆಚ್ಚಳ ಮಾಡಿದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ. ಲಾರಿ ಮುಷ್ಕರಕ್ಕೆ ಏರ್ ಪೋರ್ಟ್ ಟ್ಯಾಕ್ಸಿಗಳು ಸಹ ಬೆಂಬಲ ನೀಡಿದ್ದು, ಡೀಸೆಲ್ ಏರಿಕೆ ಖಂಡಿಸಿ ಸರಕಾರದ ವಿರುದ್ಧ ಲಾರಿ ಮಾಲೀಕರ ಸಂಘ ಆಕ್ರೋಶ ಹೊರಹಾಕಿದೆ.

> ಮುಷ್ಕರದ ದಿನ ಬೇರೆ ರಾಜ್ಯಗಳ ಲಾರಿಗಳು ರಾಜ್ಯಕ್ಕೆ ಪ್ರವೇಶವಿಲ್ಲ. ಏರ್‌ಪೋರ್ಟ್ ಟ್ಯಾಕ್ಸಿಗಳು ಕೂಡ ಬಂದ್ ಮಾಡಲಿದ್ದು, 6 ಲಕ್ಷ ಲಾರಿಗಳ ಸಂಚಾರ ಅಂದು ಬಂದ್ ಇರಲಿವೆ. ಜಲ್ಲಿಕಲ್ಲು, ಮರಳು ಸಾಗಾಟ ಮಾಡುವ ಲಾರಿಗಳು ಕೂಡ ಬಂದ್. ಗೂಡ್ಸ್ ವಾಹನಗಳು, ಅಕ್ಕಿ ಸಾಗಿಸುವ ಲಾರಿಗಳು, ಅಲ್ಲದೆ ಪೆಟ್ರೋಲ್ ಡೀಸೆಲ್ ಸಾಗಿಸುವ ಲಾರಿಗಳು ಬಂದಿರಲಿವೆ.
> - ಜಿ.ಆರ್.ಷಣ್ಮುಗಪ್ಪ, ಲಾರಿ ಮಾಲೀಕರ ಸಂಘದ ರಾಜ್ಯಾಧ್ಯಕ್ಷ

ಮನಗೆದ್ದ ಜಾಂಟಿ ಹಾಡು

ವಿಟಾಕೀಸ್

ಜಾಂಟಿ ಸನ್ ಆಫ್ ಜಯ ರಾಜ್ ಶೀರ್ಷಿಕೆಯಲ್ಲಿಯೇ ಗಮನಸೆಳೆದಿದೆ. ಆನಂದ್ ರಾಜ್ ಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದ ಹಾಡು ಬಿಡುಗಡೆಯಾಗಿದೆ. ಬ್ರಹ್ಮನಂತೆ, ಪ್ರೀತಿಯ ಮೂಲ ಅಮ್ಮನಂತೆ, ಅಮ್ಮ ಕ್ಷಮಿಸು.. ಎಂಬ ಹಾಡು ಇದಾಗಿದ್ದು, ನಿರ್ದೇಶಕ ಯೋಗರಾಜ ಭಟ್ ಮತ್ತು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಆನಂದ್ ರಾಜ್ ಸಾಹಿತ್ಯದ ಈ ಹಾಡಿಗೆ ವಿಜೇತ ಮಂಜೇಶ್ ಸಂಗೀತ ಸಂಯೋಜಿಸಿದ್ದು, ಜೋಗಿ ಪ್ರೇಮ್ ದನಿಯಾಗಿದ್ದಾರೆ. ಅಜಿತ್ ಜಯರಾಜ್ ನಾಯಕನಾಗಿ ನಟಿಸಿದ್ದು, ನಿವಿಷ್ಕಾ ಪಾಟೀಲ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಾಜವರ್ಧನ್, ಶರತ್ ಲೋಹಿತಾಶ್ವ, ಕಿಶನ್, ಸೋನು ಪಾಟೀಲ್, ಸಚ್ಚಿನ್ ಪುರೋಹಿತ್, ಮೈಕೋ ನಾಗರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ.

ನಾವು ತಪ್ಪು ಮಾಡಿದಾಗ ತಕ್ಷಣವೇ ಸಾರಿ ಕೇಳುತ್ತೇವೆ. ಆದರೆ ಹೆತ್ತು, ಹೊತ್ತು ಬೆಳೆಸಿದ ಅಮ್ಮನ ಬಳಿ ಕ್ಷಮಿಸು ಅಂತ ಕೇಳೋದಿಲ್ಲ. ನಮ್ಮ ಸಿನಿಮಾ ಮೂಲಕ ಎಲ್ಲಾ ತಾಯಂದರಿಗೂ ಸಾರಿ ಅಂತ ಕೇಳುತ್ತೇವೆ. ಇದು ಸಿನಿಮಾದ ಕ್ಲೈಮಾಕ್ಸ್‌ನಲ್ಲಿ ಬರುತ್ತದೆ. ಆತ ತಾಯಿ ಆಸೆಪಟ್ಟಂತೆ ಸಮಾಜದಲ್ಲಿ ಬದುಕದೆ, ತನ್ನದೆ ಹಾದಿಯಲ್ಲಿ ಸಾಗುತ್ತಾನೆ. ಅದು ಸ್ವಾರ್ಥ, ಹುಡುಗಿ ಇರಬಹುದು. ಕೊನೆಗೆ ಅಮ್ಮನೇ ಸರ್ವಸ್ವ ಎಂದು ತಿಳಿ ದಾಗ ಹಿನ್ನಲೆಯಲ್ಲಿ ಹಾಡು ಬರುತ್ತದೆ ಎಂದು ನಿರ್ದೇಶಕ ಆನಂದ್ ರಾಜ್ ಹೇಳಿದರು. ಸುಗೂರು ಕುಮಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಛಾಯಾಗ್ರಹಣ ಅರ್ಜುನ್ ಆಕೋಟ್ ಅವರದಾಗಿದೆ.

ವೀರ ಚಂದ್ರಹಾಸ ಮೆಚ್ಚಿದ ಸಿದ್ದರಾಮಯ್ಯ

ಮ್ಯೂಸಿಕ್‌ನಲ್ಲೇ ಮೋಡಿ ಮಾಡಿದ ಸಿನಿಪ್ರಿಯರ ಮನ ಗೆದ್ದ ಸಂಗೀತ ನಿರ್ದೇಶಕ ರವಿಬಸ್ರೂರು ನಿರ್ದೇಶಕ ರಾಗಿಯೂ ಗುರುತಿಸಿಕೊಂಡಿದ್ದಾರೆ. ಸದ್ಯ ಯಕ್ಷಗಾನ ಕಲೆ ಆಧಾರಿತ ವೀರ ಚಂದ್ರಹಾಸ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ವೀರ ಚಂದ್ರ ಹಾಸ ಸಿನಿಮಾದ ಟ್ರೇಲರ್ ಅನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಈ ಸಿನಿಮಾ ಯಶಸ್ವಿ ಯಾಗಲಿ ಸರಕಾರದಿಂದ ಅಗತ್ಯ ಇರುವ ಸಹಕಾರ ನೀಡ ಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು. ವೀರ ಚಂದ್ರಹಾಸ ಪೋಸ್ಟರ್‌ನಲ್ಲಿ ಮನಗೆದ್ದಿದೆ. ಈ ಚಿತ್ರದ ಮೂಲಕ ಚಲನಚಿತ್ರ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕರಾವಳಿ ಕರ್ನಾಟಕದ ಸಮೃದ್ಧ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾದ ಯಕ್ಷಗಾನ ವನ್ನು ಬೆಳ್ಳಿಪರದೆಯ ಮೇಲೆ ಪರಿಚಯಿಸಲಾ ಗುತ್ತಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ವಿಶೇಷ ಪಾತ್ರದಲ್ಲಿ ಅಭಿನಯಿಸಿ ದ್ದಾರೆ. ಉಳಿದಂತೆ ಸ್ಥಳೀಯ ಪ್ರತಿಭೆಗಳು ಚಿತ್ರದಲ್ಲಿ ನಟಿಸಿದ್ದಾರೆ. ಎಸ್.ಎಸ್. ರಾಜಕುಮಾರ್ ನಿರ್ಮಾಣ ಮಾಡಿದ್ದಾರೆ.

ಜೈಸ್ವಾಲ್ ಭರ್ಜರಿ ಆಟ: ರಾಜಸ್ಥಾನ್‌ಗೆ 50 ರನ್‌ಗಳ ಸೋಲು

ಪಂಜಾಬ್ ಹ್ಯಾಟ್ರಿಕ್ ಕನಸು ಭಗ್ನ

ಚಂಡೀಗಢ: ಭರವಸೆಯ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಸಂಘಟಿತ ದಾಳಿಯ ನೆರವಿನಿಂದ 18ನೇ ಆವೃತ್ತಿಯ 18ನೇ ಪಂದ್ಯದಲಿ ರಾಜಸ್ಥಾನ ರಾಯಲ್ಸ್, ಪಂಜಾಬ್ ಕಿಂಗ್ಸ್ ತಂಡವನ್ನು ಮಣಿಸಿದೆ. ಈ ಮೂಲಕ ಆತಿಥೇಯ ಪಂಜಾಬ್ ಕಿಂಗ್ಸ್ ತಂಡದ ಹ್ಯಾಟ್ರಿಕ್ ಗೆಲುವಿನ ಕನಸು ನುಚ್ಚುನೂರಾಗಿದೆ. ತವರಿನ ಅಭಿಮಾನಿಗಳ ಸಮ್ಮುಖದಲ್ಲಿ ಅಬ್ಬರದ ಪ್ರದರ್ಶನ ನೀಡಿ ಅಭಿಮಾನಿಗಳನ್ನು ರಂಜಿಸುವ ಶ್ರೇಯಸ್ ಅಯ್ಯರ್ ಅವರ ಯೋಜನೆ ಕೈಗೂಡಲಿಲ್ಲ.

ಟೂರ್ನಿಯಲ್ಲಿ ಎರಡನೇ ಗೆಲುವು ದಾಖಲಿಸಿ ರಾಜಸ್ಥಾನ ತನ್ನ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ. ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಟಾಸ್ ಸೋತರೂ ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 205 ರನ್ ಸೇರಿಸಿತು. ಸವಾಲಿನ ಮೊತ್ತವನ್ನು ಹಿಂಬಾಲಿಸಿದ ಪಂಜಾಬ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 155 ರನ್ ಕಲೆ ಹಾಕಿ ಸೋಲು ಕಂಡಿದೆ. ಈ ಸೋಲಿನಿಂದ ಪಂಜಾಬ್ ಅಂಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಕಳಪೆ ಆರಂಭ ಸವಾಲಿನ ಮೊತ್ತವನ್ನು ಹಿಂಬಾಲಿಸಿದ ಪಂಜಾಬ್ ತಂಡದ ಆರಂಭ ಕಳಪೆಯಾಗಿತ್ತು. ಆರಂಭಿಕ ಪ್ರಿಯಾಂಶ್ ಆರ್ಯ ಆಡಿದ ಮೊದಲ ಎಸೆತದಲ್ಲಿಯೇ ಔಟಾದರು. ಇನ್ನೊಬ್ಬ ಆರಂಭಿಕ ಆಟಗಾರ ಪ್ರಭ್‌ಸಿಮ್ರನ್ ಸಿಂಗ್ 16 ಎಸೆತಗಳಲ್ಲಿ 17 ರನ್ ದಾಖಲಿಸಿ ಪೆವಿಲಿಯನ್ ಸೇರಿದರು. ಈ ಹಿಂದಿನ ಎರಡು ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿದ ನಾಯಕ ಶ್ರೇಯಸ್ ಅಯ್ಯರ್ (10) ಈ ಪಂದ್ಯದಲ್ಲಿ ಮಿಂಚಲಿಲ್ಲ. ಆಲ್‌ರೌಂಡರ್ ಮಾರ್ಕಸ್ ಸ್ಟೋಯಿನಿಸ್ ಏಳು ಎಸೆತ ಎದುರಿಸಿ ಕೇವಲ 1 ರನ್ ಗಳಿಸಿ ಹೊರ ನಡೆದರು. 43 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ನೆಹಾಲ್ ವಡೇರಾ, ಗ್ಲೆನ್ ಮ್ಯಾಕ್ಸ್‌ವೆಲ್ ಜೊತೆಯಾಟ ಚೇತರಿಕೆ ನೀಡಿತು. ಈ ಜೋಡಿ ವಿಕೆಟ್ ಬೀಳದಂತೆ ಕಾಯ್ದುಕೊಂಡು 52 ಎಸೆತಗಳಲ್ಲಿ 88 ರನ್ ಸೇರಿಸಿ ಅಬ್ಬರಿಸಿತು. ಈ ವೇಳೆ ಪಂಜಾಬ್ ಗೆಲುವಿನ ಕನಸು ಇನ್ನೂ ಜೀವಂತವಾಗಿತ್ತು. ಗ್ಲೆನ್ ಮ್ಯಾಕ್ಸ್ ವೆಲ್ 30 ರನ್ ಬಾರಿಸಿದ್ದಾಗ ಮಹೇಶ ತೀಕ್ಷಣ ಬಲೆಗೆ ಬಿದ್ದು ವಿಕೆಟ್ ಒಪ್ಪಿಸಿದರು. ಗ್ಲೆನ್ 21 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಿಡಿಸಿದ್ದರು, ನೆಹಾಲ್ ವಡೇರಾ 4 ಬೌಂಡರಿ, 3 ಸಿಕ್ಸರ್ ಸಹಾಯದಿಂದ 62 ಬಾರಿಸಿ ಹಸರಾಂಗ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಮುಂದಾಗಿ ಔಟ್ ಆದರು. ಶಶಾಂಕ್ ಸಿಂಗ್ 13 ಎಸೆತಗಳಲ್ಲಿ 10 ರನ್ ಬಾರಿಸಿ ಅಜೇಯರಾಗಿ ಉಳಿದರೆ ಉಳಿದ ಬ್ಯಾಟರ್‌ಗಳು ರನ್ ಒಂದಂಕಿ ದಾಟಲಿಲ್ಲ.

ರಾಯಲ್ಸ್ ರಾಯಲ್ ಪ್ರದರ್ಶನ: ಟಾಸ್ ಸೋತರು ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ ರಾಯಲ್ಸ್ ಉತ್ತಮ ಆರಂಭವನ್ನು ಪಡೆಯಿತು. ಆರಂಭಿಕರಾದ ಯಶಸ್ವಿ ಜೈಸ್ವಾಲ್ ಹಾಗೂ ಸಂಜು ಸ್ಯಾಮ್ಸನ್ ಜೋಡಿ ಮೊದಲ ವಿಕೆಟ್‌ಗೆ 89 ರನ್‌ಗಳ ಜೊತೆಯಾಟವನ್ನು ನೀಡಿತು. ಈ ಜೋಡಿಯನ್ನು ಕಟ್ಟಿ ಹಾಕಲು ಪಂಜಾಬ್ ಬೌಲರ್‌ಗಳು ವಿಫಲರಾದರು. ಸಂಜು ಸ್ಯಾಮ್ಸನ್ 38 ರನ್‌ಗಳಿಗೆ ಆಟ ಮುಗಿಸಿದರು. ಆರಂಭಿಕ ಯಶಸ್ವಿ ಜೈಸ್ವಾಲ್ ಕಳೆದ ಹಿಂದಿನ ಪಂದ್ಯಗಳ ತಪ್ಪನ್ನು ಮೆಟ್ಟಿನಿಂತು ಬ್ಯಾಟ್ ಮಾಡಿದರು. 45 ಎಸೆತಗಳಲ್ಲಿ 3 ಬೌಂಡರಿ, 5 ಸಿಕ್ಸರ್ ಸಹಾಯದಿಂದ 67 ರನ್ ಸಿಡಿಸಿದ ಜೈಸ್ವಾಲ್, ಲಾಕಿ ಫರ್ಗ್ಯುಶನ್ ಎಸೆತಕ್ಕೆ ಬೌಲ್ಡ್ ಆದರು. ನಿತೀಶ್ ರಾಣಾ 12 ರನ್‌ಗಳಿಗೆ ಸೀಮಿತವಾದರೆ ಮಧ್ಯಮ ಕ್ರಮಾಂಕದಲ್ಲಿ ಶಿಮ್ರೋನ್ ಹೆಟ್ಮೆಯರ್ (20) ರಿಯಾನ್ ಪರಾಗ್ ಜೋಡಿ 4ನೇ ವಿಕೆಟ್‌ಗೆ 25 ಎಸೆತಗಳಲ್ಲಿ 47 ರನ್ ಸಿಡಿಸಿತು. ಭರವಸೆಯ ಆಟಗಾರ ರಿಯಾನ್ ಪರಾಗ್ 3 ಬೌಂಡರಿ, 3 ಸಿಕ್ಸರ್ ಸಹಾಯದಿಂದ ಅಜೇಯ 43 ರನ್ ಬಾರಿಸಿದರು. ಧ್ರುವ್ ಜುರೇಲ್ 1 ಬೌಂಡರಿ, 1 ಸಿಕ್ಸರ್ ಸಹಾಯದಿಂದ ಅಜೇಯ 13 ರನ್ ಬಾರಿಸಿದರು. ಪಂಜಾಬ್ ಪರ ಲಾಕಿ ಫರ್ಗ್ಯುಸನ್ 2 ವಿಕೆಟ್, ಅರ್ಷದೀಪ್ ಸಿಂಗ್ ಹಾಗೂ ಮಾರ್ಕೊ ಜಾನ್ಸನ್ ತಲಾ ಒಂದು ವಿಕೆಟ್ ಪಡೆದರು.

ಗೆಲುವಿನ ಸಂಭ್ರಮ, ದಂಡದ ಬರೆ

ಲಖನೌ: ಮುಂಬೈ ವಿರುದ್ಧದ ಪಂದ್ಯದಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನ ತೋರಿಸಿ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದ ದಿಗ್ವೇಶ್ ರಥಿ ಐಪಿಎಲ್ ನೀತಿ ಸಂಹಿತೆ ಉಲ್ಲಂಘನೆಗಾಗಿ ಎರಡನೇ ಬಾರಿಗೆ ಪಂದ್ಯ ಶುಲ್ಕದ ಶೇ.50 ರಷ್ಟು ಮೊತ್ತದಷ್ಟು ದಂಡ ತೆತ್ತಿದ್ದಾರೆ.

ಇದೇ ವೇಳೆ ನಿಧಾನ ಗತಿಯ ಬೌಲಿಂಗ್‌ಗಾಗಿ ಲಖನೌ ಸೂಪರ್ ಜೈಂಟ್ಸ್ ನಾಯಕ ರಿಷಭ್ ಪಂತ್ ಗೆ 12 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ. ಲಕ್ನೋ ತಂಡ ನಿಗದಿತ 90 ನಿಮಿಷಕ್ಕಿಂತ ಒಂದು ಓವರ್ ತಡವಾಗಿ ಬೌಲಿಂಗ್ ನಡೆಸಿದೆ. ಇದರಿಂದ ಅವರು ಅಂತಿಮ ಓವರ್‌ನಲ್ಲಿ ಒಬ್ಬ ಫೀಲ್ಡರ್ ಅನ್ನು 30 ಗಜಗಳಷ್ಟು ಕಡಿಮೆ ದೂರದಲ್ಲಿ ಇಡಬೇಕಾಯಿತು. 18 ಆವೃತ್ತಿಯ ಐಪಿಎಲ್‌ನಲ್ಲಿ ನಿಧಾನಗತಿಯ ಓವರ್ ದರಕ್ಕೆ ಸಂಬಂಧಿಸಿ ರಿಷಭ್ ಪಂತ್ ತಂಡವು ಮೊದಲ ಬಾರಿ ಶಿಕ್ಷೆಗೆ ಗುರಿಯಾಗಿದೆ. ಮುಂಬೈ ಬ್ಯಾಟ್ಸ್‌ಮನ್ ನಮನ್ ಧಿರ್ ಅವರನ್ನು ಔಟ್ ಮಾಡಿದ ನಂತರ ಮತ್ತೊಮ್ಮೆ ನೋಟ್‌ಬುಕ್ ಬರೆಯುವ ಶೈಲಿಯಲ್ಲಿ ಸಂಭ್ರಮ ಆಚರಿಸಿದ ದಿಗ್ವೇಶ್ ರಥಿಗೆ ಎರಡನೇ ಬಾರಿಗೆ ದಂಡ ವಿಧಿಸಲಾಗಿದೆ. ಪಂಜಾಬ್ ವಿರುದ್ಧದ ಪಂದ್ಯ ದಲ್ಲಿ ಆರ್ಯ ಅವರನ್ನು ಔಟ್ ಮಾಡಿ ದಾಗಲೂ ಅವರು ಇದೇ ರೀತಿ ಸಂಭ್ರಮ ಆಚರಿಸಿದ್ದರು.

ಸ್ಕೋರ್ ಬೋರ್ಡ್

ರಾಜಸ್ಥಾನ ರಾಯಲ್ಸ್ 205/4 (20 ಓವರ್)

ರಾಜಸ್ಥಾನ ರಾಯಲ್ಸ್		ರನ್	ಎಸೆತ
ಯಶಸ್ವಿ ಜೈಸ್ವಾಲ್	ಕಾಟ್ ಆ್ಯಂಡ್‌ಬೌಲ್ಡ್ ›› ಫರ್ಗ್ಯುಸನ್	67	45
ಸ್ಯಾಮ್ಸನ್	ಬೌಲರ್ ›› ಫರ್ಗ್ಯುಸನ್, ಕ್ಯಾಚ್ ›› ಶ್ರೇಯಸ್	38	26
ರಿಯಾನ್ ಪರಾಗ್	›› ನಾಟೌಟ್*	43	25
ನಿತೀಶ್ ರಾಣಾ	›› ಬೌಲರ್ ›› ಜೆನ್ಸೆನ್, ಕ್ಯಾಚ್ ›› ಮ್ಯಾಕ್ಸ್‌ವೆಲ್	12	07
ಹೆಟ್ಮೆಯರ್	ಬೌಲರ್ ›› ಅರ್ಷ್‌ದೀಪ್ ಸಿಂಗ್ ›› ಮ್ಯಾಕ್ಸ್‌ವೆಲ್	20	12
ಧ್ರುವ್ ಜುರೆಲ್	›› ನಾಟೌಟ್*	13	5
ಇತರೆ		12	

ಪಂಜಾಬ್

ಬೌಲರ್	ಓವರ್	ರನ್	ವಿಕೆಟ್
ಅರ್ಷ್‌ದೀಪ್	4	35	1
ಮಾರ್ಕೊ ಜೆನ್ಸೆನ್	4	45	1
ಫರ್ಗ್ಯುಸನ್	4	37	2
ಮ್ಯಾಕ್ಸ್‌ವೆಲ್	1	6	0
ಚಹಾಲ್	3	32	0
ಸ್ಟೊಯಿನಿಸ್	4	48	0

ರಾಜಸ್ಥಾನ

ಬೌಲರ್	ಓವರ್	ರನ್	ವಿಕೆಟ್
ಜೋಫ್ರಾ ಆರ್ಚರ್	4	25	3
ಯುದವೀರ್ ಸಿಂಗ್	2	20	0
ಸಂದೀಪ್ ಶರ್ಮಾ	4	21	2
ತೀಕ್ಷನ	2	26	2
ಕಾರ್ತಿಕೇಯ	2	21	1
ಹಸರಂಗ	4	36	1

ಪಂಜಾಬ್ ಕಿಂಗ್ಸ್ 155/9 (20 ಓವರ್)

ಪಂಜಾಬ್ ಕಿಂಗ್ಸ್		ರನ್	ಎಸೆತ
ಪ್ರಿಯಾಂಶ್	ಬೌಲರ್ ›› ಜೋಫ್ರಾ ಆರ್ಚರ್	0	1
ಪ್ರಭ್‌ಸಿಮ್ರಾನ್	ಬೌಲರ್ ›› ಕಾರ್ತಿಕೇಯ, ಕ್ಯಾಚ್ ›› ಹಸರಂಗ	17	16
ಶ್ರೇಯಸ್	ಬೌಲರ್ ›› ಜೋಫ್ರಾ ಆರ್ಚರ್	10	05
ಸ್ಟೊಯಿನಿಸ್	ಕಾಟ್ ಆ್ಯಂಡ್‌ಬೌಲ್ಡ್ ›› ಸಂದೀಪ್ ಶರ್ಮಾ	1	7
ನೇಹಲ್	ಬೌಲರ್ ›› ಹಸರಂಗ ›› ಕ್ಯಾಚ್: ಧ್ರುವ್	62	41
ಮ್ಯಾಕ್ಸ್‌ವೆಲ್	ಬೌಲರ್ ›› ತಿಕ್ಷಿನಾ ›› ಕ್ಯಾಚ್: ಜೈಸ್ವಾಲ್	30	21
ಶಶಾಂಕ್ ಸಿಂಗ್	›› ನಾಟೌಟ್*	10	13
ಸೂರ್ಯಾಂಶ್ ಶೆಡ್ಜ್	ಬೌಲರ್ ›› ಸಂದೀಪ್ ಕ್ಯಾಚ್ ›› ಹೆಟ್ಮೆಯರ್	02	04
ಮಾರ್ಕೊ ಜೆನ್ಸೆನ್	ಬೌಲರ್ ›› ತೀಕ್ಷನ ›› ಕ್ಯಾಚ್: ಹೆಟ್ಮೆಯರ್	03	06
ಅರ್ಷ್‌ದೀಪ್ ಸಿಂಗ್	ಬೌಲರ್ ›› ಜೋಫ್ರಾ, ಕ್ಯಾಚ್: ಹಸರಂಗ	01	05
ಫರ್ಗ್ಯುಸನ್	›› ನಾಟೌಟ್*	04	01
ಇತರೆ		15	

ಠುಸ್ ಪಟಾಕಿ

ಪಂತ್: ₹27 ಕೋಟಿಗೆ 19 ರನ್

ಲಖನೌ: ಕಳೆದ ಐಪಿಎಲ್ ಹರಾಜಿನಲ್ಲಿ ಬರೋಬ್ಬರಿ ₹27 ಕೋಟಿಗೆ ಲಖನೌ ಸೂಪರ್ ಜೈಂಟ್ಸ್ ಪಾಲಾಗಿದ್ದ ರಿಷಭ್ ಪಂತ್, ತಮ್ಮ ಕಳಪೆ ಪ್ರದರ್ಶನ ಮುಂದುವರಿಸಿದ್ದಾರೆ. ಅವರು ಸತತ 4ನೇ ಪಂದ್ಯದಲ್ಲೂ ವಿಫಲರಾಗಿದ್ದು, ಲಯಕ್ಕೆ ಮರಳಲು ಪರದಾಡುತ್ತಿದ್ದಾರೆ. ಶುಕ್ರವಾರ ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯದಲ್ಲಿ ಲಖನೌ ನಾಯಕ ರಿಷಭ್ ಕೇವಲ 2 ರನ್‌ಗೆ ಔಟಾದರು. 6 ಎಸೆತಗಳನ್ನು ಎದುರಿಸಿದ ಅವರು, ಹಾರ್ದಿಕ್ ಪಾಂಡ್ಯ ಎಸೆತದಲ್ಲಿ ರಿಟರ್ನ್ ಕ್ಯಾಚ್ ನೀಡಿ ನಿರ್ಗಮಿಸಿದರು. ಇದು ಟೂರ್ನಿಯ 4 ಪಂದ್ಯಗಳಲ್ಲಿ ಅವರ ಒಂದಂಕಿ ಮೊತ್ತ. ಆರಂಭಿಕ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಶೂನ್ಯಕ್ಕೆ ಔಟಾಗಿದ್ದ ರಿಷಭ್, ಸನ್‌ರೈಸರ್ಸ್ ವಿರುದ್ಧ 15 ರನ್ ಗಳಿಸಿದ್ದರು. ಬಳಿಕ ಪಂಜಾಬ್ ವಿರುದ್ಧವೂ ವಿಫಲರಾಗಿದ್ದ ಅವರು, ಕೇವಲ 2 ರನ್ ಬಾರಿಸಿದ್ದರು. ಅಂದರೆ ಟೂರ್ನಿಯಲ್ಲಿ ಅವರ ಒಟ್ಟು ಸ್ಕೋರ್ 19 ರನ್. ಲಖನೌ ತಂಡ ಏ.8ರಂದು ಕೋಲ್ಕತಾ ವಿರುದ್ಧ ಆಡಲಿದ್ದು, ಆ ಪಂದ್ಯದಲ್ಲಾದರೂ ರಿಷಭ್ ದೊಡ್ಡ ಮೊತ್ತ ಕಲೆಹಾಕುವ ವಿಶ್ವಾಸದಲ್ಲಿದ್ದಾರೆ. ಆದರೆ ದುಬಾರಿ ಖರೀದಿ ಮೊತ್ತವೇ ಅವರ ಪಾಲಿಗೆ ಭಾರವಾಗಿ ಪರಿಣಮಿಸಿದೆ.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಡೆಲ್ಲಿ	03	03	00	06
ಬೆಂಗಳೂರು	03	02	01	04
ಗುಜರಾತ್	03	02	01	04
ಪಂಜಾಬ್	03	02	01	04
ಕೋಲ್ಕತ್ತಾ	04	02	02	04
ಲಖನೌ	04	02	02	04
ರಾಜಸ್ಥಾನ್	04	02	02	04
ಮುಂಬೈ	04	01	03	02
ಚೆನ್ನೈ	04	01	03	02
ಹೈದ್ರಾಬಾದ್	04	01	03	02

ಸ್ಕೋರ್ ಬೋರ್ಡ್

158/5 (20 ಓವರ್)

ಚೆನ್ನೈ ಸೂಪರ್ ಕಿಂಗ್ಸ್			
ರಚಿನ್	ಬೌಲರ್ » ಮುಖೇಶ್ » ಬೌಲ್ಡ್	3	6
ಕಾನ್ವೆ	ಬೌಲರ್ » ವಿಪ್ರಜ್, ಕ್ಯಾಚ್ » ಅಕ್ಷರ್ ಪಟೇಲ್	13	14
ಗಾಯಕ್ವಾಡ್	ಬೌಲರ್ » ಸ್ಟಾರ್ಕ್ » ಮೆಕ್‌ಗುರ್ಕ್	5	4
ವಿಜಯ್ ಶಂಕರ್	» ನಾಟೌಟ್*	69	54
ಶಿವಂ ದುಬೆ	ಬೌಲರ್ » ವಿಪ್ರಜ್, ಕ್ಯಾಚ್ » ಟ್ರಿಸ್ಟಾನ್ ಸ್ಟಬ್ಸ್	18	15
ಜಡೇಜಾ	ಬೌಲರ್ » ಕುಲ್‌ದೀಪ್, » ಎಲ್‌ಬಿಡಬ್ಲ್ಯು	2	3
ಧೋನಿ	» ನಾಟೌಟ್*	30	26
ಇತರೆ		18	

ಡೆಲ್ಲಿ	ಓವರ್	ರನ್	ವಿಕೆಟ್
ಸ್ಟಾರ್ಕ್	4	27	1
ಮುಖೇಶ್	4	36	1
ಮೋಹಿತ್	3	27	0
ವಿಪ್ರಜ್	4	27	2
ಕುಲ್‌ದೀಪ್	4	30	1
ಅಕ್ಷರ್ ಪಟೇಲ್	1	05	1

ಚೆನ್ನೈ	ಓವರ್	ರನ್	ವಿಕೆಟ್
ಖಲೀಲ್ ಅಹ್ಮದ್	4	25	2
ಮುಖೇಶ್ ಚೌಧರಿ	4	50	0
ರವಿಚಂದ್ರನ್ ಅಶ್ವಿನ್	3	21	0
ರವೀಂದ್ರ ಜಡೇಜಾ	2	19	1
ನೂರ್ ಅಹ್ಮದ್	3	36	1
ಮತಿಶಾ ಪತಿರಣ	4	31	1

183/6 (20 ಓವರ್)

ಡೆಲ್ಲಿ ಕ್ಯಾಪಿಟಲ್ಸ್			
ಫ್ರೆಸರ್	ಬೌಲರ್ » ಖಲೀಲ್, ಕ್ಯಾಚ್ » ಅಶ್ವಿನ್	0	5
ಕೆ.ಎಲ್ ರಾಹುಲ್	ಬೌಲರ್ » ಪತಿರಣ, ಕ್ಯಾಚ್ » ಧೋನಿ	77	51
ಅಭಿಷೇಕ್ ಪೊರೆಲ್	ಬೌಲರ್ » ಜಡೇಜಾ » ಕ್ಯಾಚ್: ಪತಿರಣ	33	20
ಅಕ್ಷರ್ ಪಟೇಲ್	ಬೌಲರ್ » ನೂರ್ ಅಹ್ಮದ್ » ಬೌಲ್ಡ್	21	14
ಸಮೀರ್ ರಿಜ್ವಿ	ಬೌಲರ್ » ಖಲೀಲ್, » ಕ್ಯಾಚ್: ಜಡೇಜಾ	20	15
ಟ್ರಿಸ್ಟಾನ್ ಸ್ಟಬ್ಸ್	» ನಾಟೌಟ್*	24	12
ಅಶುತೋಷ್ ಶರ್ಮಾ	» ರನೌಟ್ » ರವೀಂದ್ರ ಜಡೇಜಾ	01	01
ವಿಪ್ರಜ್ ನಿಗಮ್	» ನಾಟೌಟ್*	01	02
ಇತರೆ		6	

ಧೋನಿ ಪೋಷಕರ ಪಂದ್ಯ ವೀಕ್ಷಣೆ

ಚೆನ್ನೈ: ದಿಗ್ಗಜ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಅವರ ಕ್ರಿಕೆಟ್ ಬದುಕಿನಲ್ಲಿ ಇದೇ ಮೊದಲ ಬಾರಿಗೆ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯಕ್ಕೆ ಪೋಷಕರು ಸೇರಿದಂತೆ ಧೋನಿ ಕುಟುಂಬಸ್ಥರು ಹಾಜರಾಗಿದ್ದಾರೆ. ಇದು ಧೋನಿ ಅವರ ಐಪಿಎಲ್ ನಿವೃತ್ತಿ ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ. 2008ರಲ್ಲಿ ಐಪಿಎಲ್ ಆರಂಭಗೊಂಡ ಬಳಿಕ ಈ ತನಕ ಧೋನಿ ಪೋಷಕರು ಐಪಿಎಲ್ ಪಂದ್ಯ ವೀಕ್ಷಿಸಲು ಎಂದೂ ಆಗಮಿಸಿಲ್ಲ. ಚೆನ್ನೈನಲ್ಲಿ ನಡೆದ ಸಿಎಸ್‌ಕೆ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯಕ್ಕೆ ಧೋನಿ ಅವರ ಪೋಷಕರ ಜತೆ ಪತ್ನಿ ಸಾಕ್ಷಿ ಧೋನಿ ಹಾಗೂ ಪುತ್ರಿ ಜೀವಾ ಧೋನಿ ಕೂಡ ಹಾಜರಿದ್ದರು.

ಧೋನಿ ನಿವೃತ್ತಿ ಶೈಲಿ ಭಿನ್ನ: ಧೋನಿ ವಯಸ್ಸು, ಫಿಟ್ನೆಸ್ ಹಾಗೂ ಫಾರ್ಮ್ ಕಾರಣದಿಂದ ಐಪಿಎಲ್‌ನಿಂದಲೂ ನಿವೃತ್ತಿಯಾಗುತ್ತಿದ್ದಾರೆ ಅನ್ನೋ ಮಾತುಗಳು ಬಲವಾಗಿ ಕೇಳಿಬರುತ್ತಿದೆ. ಆದರೆ ಧೋನಿ ತನ್ನ ಕ್ರಿಕೆಟ್ ಕೆರಿಯರ್‌ನಲ್ಲಿ ಯಾವ ಮಾದರಿಗೂ ಮೊದಲೇ ಸೂಚನೆ ಕೊಟ್ಟು ನಿವೃತ್ತಿಯಾಗಿಲ್ಲ.

ಇಂದಿನ ಪಂದ್ಯ

7.30 PM

ಹೈದರಾಬಾದ್ Vs ಗುಜರಾತ್

ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣ ಹೈದ್ರಾಬಾದ್

ಏಪ್ರಿಲ್ 13ರಿಂದ ಬುಮ್ರಾ ಕಣಕ್ಕೆ

ಮುಂಬೈ: ಬೆನ್ನು ನೋವಿನಿಂದ ಬಳಲುತ್ತಿರುವ ಅನುಭವಿ ಬೌಲರ್ ಜಸ್ಪ್ರಿತ್ ಬುಮ್ರಾ ಸಂಪೂರ್ಣವಾಗಿ ಚೇತರಿಸಿ ಕೊಂಡಿದ್ದು, ಏಪ್ರಿಲ್ 13 ರಿಂದ ಮುಂಬೈ ತಂಡವನ್ನು ಸೇರಿಕೊಳ್ಳಲು ಸಜ್ಜಾಗಿದ್ದಾರೆ. ಬುಮ್ರಾ ಈಗಾಗಲೇ ಮೈದಾನಕ್ಕೆ ಎಂಟ್ರಿ ಕೊಟ್ಟಿದ್ದು, ಕಠಿಣ ಬೌಲಿಂಗ್ ಅಭ್ಯಾಸ ಮಾಡುತ್ತಿದ್ದಾರೆ. ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಸೋತು ಪಾಯಿಂಟ್ ಟೇಬಲ್‌ನಲ್ಲಿ ಕೊನೆಯ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ತಂಡಕ್ಕೆ ಈ ಸುದ್ದಿ ಸಂತಸದ ತಂದಿದೆ. ಆದರೆ ಏಪ್ರಿಲ್ 7ರಂದು ಮುಂಬೈನಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಬುಮ್ರಾ ಅವರು ಆಡುವ ಸಾಧ್ಯತೆ ಇಲ್ಲ ಎನ್ನಲಾಗಿದೆ.



ಚೆಪಾಕ್‌ನಲ್ಲಿ ಮಿಂಚಿದ ರಾಹುಲ್, ಡೆಲ್ಲಿ ತಂಡಕ್ಕೆ 25 ರನ್‌ಗಳ ಗೆಲುವು

ಡೆಲ್ಲಿ ಹ್ಯಾಟ್ರಿಕ್ ವಿನ್ ಸಿಎಸ್‌ಕೆಗೆ ಮುಖಭಂಗ

ಚೆನ್ನೈ: ತವರು ನೆಲದ ಪ್ರೇಕ್ಷಕರ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ಮತ್ತೊಮ್ಮೆ ಹೀನಾಯ ಸೋಲನ್ನು ಅನುಭವಿಸಿದೆ. ಚೆಪಾಕ್‌ನ ಎಂಎ ಚಿದಂಬರಂ ಸ್ಟೇಡಿಯಂನಲ್ಲಿ ನಡೆದ ಐಪಿಎಲ್ 2025 ರ 17ನೇ ಪಂದ್ಯದಲ್ಲಿ ಅಕ್ಷರ್ ಪಟೇಲ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಹ್ಯಾಟ್ರಿಕ್ ಗೆಲುವು ಸಾಧಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಡೆಲ್ಲಿ ಕ್ಯಾಪಿಟಲ್ಸ್ ತಂಡವು ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 183 ರನ್ ಗಳಿಸುವ ಮೂಲಕ ಉತ್ತಮ ಪ್ರದರ್ಶನ ನೀಡಿತು. ಕನ್ನಡಿಗ ಕೆ.ಎಲ್ ರಾಹುಲ್ 51 ಎಸೆತಗಳಲ್ಲಿ 6 ಬೌಂಡರಿ ಮತ್ತು 3 ಅಮೋಘ ಸಿಕ್ಸರ್‌ಗಳೊಂದಿಗೆ 77 ರನ್ ಗಳಿಸಿ ಡೆಲ್ಲಿ ತಂಡದ ಗೆಲುವಿನ ರೂವಾರಿಯಾದರು. ಡೆಲ್ಲಿ ನೀಡಿದ 184 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಚೆನ್ನೈ ಸೂಪರ್ ಕಿಂಗ್ಸ್ ಮತ್ತೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಪರಿಣಾಮ ಚೆನ್ನೈ 5 ವಿಕೆಟ್ ನಷ್ಟಕ್ಕೆ 158 ರನ್‌ಗಳನ್ನು ಗಳಿಸಲಷ್ಟೇ ಶಕ್ತವಾಯಿತು. ಈ ಮೂಲಕ ಡೆಲ್ಲಿ ಕ್ಯಾಟಪಿಲ್ಸ್ 25 ರನ್‌ಗಳ ಗೆಲುವು ಸಾಧಿಸಿತು.

ಡೆಲ್ಲಿ ಕ್ಯಾಪಿಟಲ್ಸ್ ಕೂಡಾ ಆರಂಭಿಕ ಆಘಾತ ಎದುರಿಸಿತು. ಕೆ.ಎಲ್. ರಾಹುಲ್ ಇನ್ನಿಂಗ್ಸ್ ಆರಂಭಿಸಿದ ಜೇಕ್ ಫ್ರೇಸರ್ ಮೆಕ್‌ಗುರ್ಕ್ ರನ್ ಖಾತೆ ತೆರೆಯುವ ಮುನ್ನವೇ ಔಟಾದರು. ಚೆನ್ನೈ ಪರ ವೇಗಿ ಖಲೀಲ್ ಅಹ್ಮದ್ ಎಸೆದ ಮೊದಲ ಓವರ್‌ನ ಐದನೇ ಎಸತಕ್ಕೆ ಮೆಕ್‌ಗುರ್ಕ್ ಕ್ಯಾಚ್ ನೀಡಿ ನಿರ್ಗಮಿಸಿದರು.

ಇದಾದ ಬಳಿಕ ರಾಹುಲ್ ಅವರನ್ನು ಸೇರಿಕೊಂಡ ಯುವ ಆಟಗಾರ ಅಭಿಷೇಕ್ ಪೊರೆಲ್ ಸಮಯೋಚಿತ ಬ್ಯಾಟಿಂಗ್ ನಡೆಸಿದರು. ಈ ಜೋಡಿ ಎರಡನೇ ವಿಕೆಟ್‌ಗೆ 54 ರನ್‌ಗಳ ಜೊತೆಯಾಟದ ಕಾಣಿಕೆ ನೀಡಿತು. ಅಭಿಷೇಕ್ 33 ರನ್ ಸಿಡಿಸಿ ಜಡೇಜಾ ಬೌಲಿಂಗ್‌ನಲ್ಲಿ ಔಟ್ ಆದರು. ಇದಾದ ಬಳಿಕ ರಾಹುಲ್ ಜತೆಗೂಡಿದ ಅಕ್ಷರ್ ಪಟೇಲ್ 14 ಎಸೆತಗಳಲ್ಲಿ 21 ರನ್ ಬಾರಿಸಿ ತಂಡದ ಮೊತ್ತ ಹಿಗ್ಗಿಸಿದರು.

ರಾಹುಲ್ ಅರ್ಧಶತಕ: ಈ ಐಪಿಎಲ್ ಆವೃತ್ತಿಯ ಎರಡನೇ ಪಂದ್ಯವನ್ನಾಡಿದ ಸ್ಟಾರ್ ಬ್ಯಾಟರ್ ಕೆ.ಎಲ್. ರಾಹುಲ್ ತಮ್ಮ ಕ್ಲಾಸಿಕ್ ಬ್ಯಾಟಿಂಗ್ ಪ್ರದರ್ಶನ ಮುಂದುವರಿಸಿದರು. 33 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ರಾಹುಲ್ ಬಳಿಕ ಇನ್ನಷ್ಟು ಅಬ್ಬರಿಸಿ ಅಂತಿಮವಾಗಿ 51 ಎಸೆತಗಳಲ್ಲಿ 6 ಬೌಂಡರಿ 3 ಸಿಕ್ಸರ್ ಸಹಾಯದಿಂದ 77 ರನ್ ಸಿಡಿಸಿ ಔಟ್ ಆದರು. ಸಮೀರ್ ರಿಜ್ವಿ 20 ರನ್ ಬಾರಿಸಿದರೆ ಟ್ರಿಸ್ಟಾನ್ ಸ್ಟಬ್ಸ್ 24 ರನ ಗಳಿಸಿ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು.

ಚೆನ್ನೈಗೆ ಆರಂಭಿಕ ಆಘಾತ

ಚೆನ್ನೈ ತಂಡದ ಪರ ನ್ಯೂಜಿಲೆಂಡ್ ಜೋಡಿ ರಚಿನ್ ರವೀಂದ್ರ ಮತ್ತು ಡೆವೊನ್ ಕಾನ್ವೇ ಇನ್ನಿಂಗ್ಸ್ ತೆರೆದರು. ಆದರೆ ಈ ಜೋಡಿ ಉತ್ತಮ ಆರಂಭ ನೀಡುವಲ್ಲಿ ವಿಫಲವಾಯಿತು. ರಚಿನ್ ರವೀಂದ್ರ (3) ಅವರನ್ನು ಮುಖೇಶ್ ಕುಮಾರ್ ಔಟ್ ಮಾಡಿದರೆ, ಮಿಚೆಲ್ ಸ್ಟಾರ್ಕ್ ನಾಯಕ ರುತುರಾಜ್ ಗಾಯಕ್ವಾಡ್ (5) ಅವರನ್ನು ಮರಳಿ ಪೆವಿಲಿಯನ್‌ಗೆ ಕಳುಹಿಸಿದರು. ನಂತರ ಡೆವೊನ್ ಕಾನ್ವೇ (13) ಅವರನ್ನು ಲೆಗ್ ಸ್ಪಿನ್ನರ್ ವಿಪ್ರಜ್ ನಿಗಮ್ ಪವರ್‌ಪ್ಲೇನಲ್ಲಿ ಔಟ್ ಮಾಡಿದರು. ಚೆನ್ನೈ ಸೂಪರ್ ಕಿಂಗ್ಸ್ 74 ರನ್ ಗಳಿಸುವಷ್ಟರಲ್ಲಿ 5 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟ ಸಿಲುಕಿತು. ಸ್ಫೋಟಕ ಬ್ಯಾಟರ್ ಶಿವಂ ದುಬೆ 18 ರನ್ ಗಳಿಸಿದರೆ, ರವೀಂದ್ರ ಜಡೇಜಾ 2 ರನ್‌ಗಳಿಗೆ ಔಟಾದರು. ತಂಡದ ಸಂಕಷ್ಟದ ಸಮಯದಲ್ಲಿ ವಿಜಯ್ ಶಂಕರ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡುವ ಮೂಲಕ ಗಮನ ಸೆಳೆದರು. ವಿಜಯ್ ಶಂಕರ್ 54 ಎಸೆತಗಳಲ್ಲಿ 5 ಬೌಂಡರಿ ಮತ್ತು 1 ಸಿಕ್ಸರ್ ನೆರವಿನಿಂದ ಅಜೇಯ 69 ರನ್ ಬಾರಿಸಿದರೂ ಗೆಲುವಿನ ಸನಿಹಕ್ಕೆ ತಲುಪಲು ಸಾಧ್ಯವಾಗಲಿಲ್ಲ. ಮತ್ತೊಂದೆಡೆ ಮಾಜಿ ನಾಯಕ ಎಂಎಸ್ ಧೋನಿ 26 ಎಸೆತಗಳಲ್ಲಿ 30 ರನ್ ಗಳಿಸಿ ಅಜೇಯರಾಗುಳಿದರು. ಡೆಲ್ಲಿ ಕ್ಯಾಪಿಟಲ್ಸ್ ಪರ ವಿಪ್ರಜ್ ನಿಗಮ್ 2 ವಿಕೆಟ್ ಕಬಳಿಸಿದರೆ, ಮಿಚೆಲ್ ಸ್ಟಾರ್ಕ್, ಮುಖೇಶ್ ಕುಮಾರ್ ಮತ್ತು ಕುಲದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

ಕೊಹ್ಲಿ ದಾಖಲೆ ಸರಿಗಟ್ಟಿದ ಕೆ.ಎಲ್.ರಾಹುಲ್

ಚೆಪಾಕ್‌ನಲ್ಲಿ ಸಿಎಸ್‌ಕೆ ಬೌಲರ್‌ಗಳ ಬೆಂಡೆತ್ತಿದ ಕೆಎಲ್ ರಾಹುಲ್ ಆರಂಭಿಕನಾಗಿ ಐಪಿಎಲ್‌ನಲ್ಲಿ 40ನೇ ಬಾರಿ 50ಕ್ಕೂ ಹೆಚ್ಚು ರನ್ ಬಾರಿಸಿದ ಹಿರಿಮೆಯನ್ನು ತಮ್ಮದಾಗಿಸಿ ಕೊಂಡರು. ಈ ಮೂಲಕ ವಿರಾಟ್ ಕೊಹ್ಲಿ ಅವರ ದಾಖಲೆ ಸರಿಗಟ್ಟಿದರು. ಐಪಿಎಲ್‌ನಲ್ಲಿ ಆರಂಭಿಕನಾಗಿ 60 ಬಾರಿ 50 ಪ್ಲಸ್ ರನ್ ಬಾರಿಸಿದ ಆಟಗಾರರ ಪಟ್ಟಿಯಲ್ಲಿ ಡೇವಿಡ್ ವಾರ್ನರ್‌ಗೆ ಅಗ್ರಸ್ಥಾನದಲ್ಲಿದ್ದಾರೆ. 49 ಅರ್ಧ ಶತಕ ದಾಖಲಿಸಿರುವ ಶಿಖರ್ ಧವನ್ 2ನೇ ಸ್ಥಾನದಲ್ಲಿದ್ದಾರೆ. ಇದೀಗ ಕೊಹ್ಲಿ, ಕೆಎಲ್ ರಾಹುಲ್ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಎಸ್‌ಆರ್‌ಎಚ್‌ಗೆ ಪುಟಿದೇಳುವ ತವಕ

ಹೈದರಾಬಾದ್: ಐಪಿಎಲ್‌ನಲ್ಲಿ ಈ ವಾರಾಂತ್ಯದ ಭಾನುವಾರ ಒಂದು ಪಂದ್ಯ ಮಾತ್ರವೇ ನಡೆಯುತ್ತಿದೆ. ಶನಿವಾರದ ಡಬಲ್ ಹೆಡರ್ ನಂತರ ಇಂದು ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಗುಜರಾತ್ ಟೈಟನ್ಸ್ ತಂಡಗಳು ಮುಖಾಮುಖಿಯಾಗುತ್ತಿವೆ.

ಸನ್‌ರೈಸರ್ಸ್ ಹೈದರಾಬಾದ್ ತವರು ಮೈದಾನ ಹೈದರಾಬಾದ್‌ನ ರಾಜೀವ್ ಗಾಂಧಿ ಸ್ಟೇಡಿಯಂನಲ್ಲಿ ನಡೆಯುವ ಪಂದ್ಯ ಅಂಕ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಬಲಿಷ್ಠ ಸನ್ ರೈಸರ್ಸ್ ಹೈದರಾಬಾದ್‌ಗೆ ಗೆಲುವಿನ ಹಾದಿಗೆ ಮರಳಲು ಅತ್ಯಂತ ಮಹತ್ವದ್ದಾಗಿದೆ. ಗುಜರಾತ್ ತಂಡವು ಮೊದಲ ಸೋಲಿನ ನಂತರ ಟೂರ್ನಿಯಲ್ಲಿ





ಸತತ ಎರಡು ಗೆಲುವು ಸಾಧಿಸಿದ್ದು ಈ ಪಂದ್ಯ ಗೆದ್ದು ಹ್ಯಾಟ್ರಿಕ್ ಸಾಧಿಸುವ ಹಂಬಲದಲ್ಲಿದೆ.

ಎನ್‌ಆರ್‌ಎಚ್ ತಂಡವು, ಭರ್ಜರಿ ಆರಂಭದ ನಂತರ ಹ್ಯಾಟ್ರಿಕ್ ಸೋಲಿನ ಸಂಕಷ್ಟದಲ್ಲಿದೆ. ಐಪಿಎಲ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ತಂಡ ಹಿರಿಮೆ ಹೊಂದಿರುವ ತಂಡವು ಈ ಬಾರಿ ಬ್ಯಾಟಿಂಗ್‌ನಲ್ಲಿ ಮಂಕಾಗಿದೆ. ಸತತ ಮೂರು ಪಂದ್ಯಗಳಲ್ಲಿ ಸೋತಿರುವ ತಂಡದ ನೈಜ ಸಾಮರ್ಥ್ಯ ಹೊರ ಬರುತ್ತಿಲ್ಲ. ಅತ್ತ ಗುಜರಾತ್ ತಂಡವು ಮೊದಲ ಪಂದ್ಯದಲ್ಲಿ ಸೋತರೂ, ಆ ಬಳಿಕ ಸತತ ಎರಡು ಪಂದ್ಯಗಳಲ್ಲಿ ಗೆದ್ದು ಬೀಗುತ್ತಿದೆ. ತಂಡಕ್ಕೆ ಸಾಯಿ ಸುದರ್ಶನ್ ಮತ್ತು ಜೋಸ್ ಬಟ್ಲರ್ ಅವರ ಸ್ಥಿರ ಕೊಡುಗೆ ಸಿಗುತ್ತಿದ್ದು, ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಸದ್ಯ ಅಂಕಪಟ್ಟಿಯಲ್ಲಿ 3ನೇ ಸ್ಥಾನದಲ್ಲಿರುವ ತಂಡ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವವರೆಸಲು ಎದುರು ನೋಡುತ್ತಿದೆ.

ಜಿಟಿ ತಂಡದ ಕಗಿಸೊ ರಬಾಡ, ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಆಡಿರಲಿಲ್ಲ, ವೈಯಕ್ತಿಕ ಕಾರಣಗಳಿಂದಾಗಿ ಅವರು ತವರಿಗೆ ಹೋಗಿದ್ದರು. ಹೀಗಾಗಿ ಗ್ಲೆನ್ ಫಿಲಿಫ್ಸ್ ಚೊಚ್ಚಲ ಪಂದ್ಯ ಆಡುವ ಸಾಧ್ಯತೆ ಇದೆ. ಕೊನೆಯ ಪಂದ್ಯದಲ್ಲಿ ಗುಜರಾತ್ ಕೇವಲ ಮೂವರು ವಿದೇಶಿ ಆಟಗಾರರನ್ನು ಮಾತ್ರ ಆಡಿಸಿದ್ದು ವಿಶೇಷ. ಅದು ಈಗ ಮುಂದುವರೆದರೂ ಅಚ್ಚರಿಯಿಲ್ಲ. ಎನ್‌ಆರ್‌ಎಚ್ ಹಾಗೂ ಜಿಟಿ ತಂಡಗಳು ಈವರೆಗೆ 5 ಪಂದ್ಯಗಳಲ್ಲಿ ಪರಸ್ಪರ ಮುಖಾಮುಖಿಯಾಗಿವೆ. ಅದರಲ್ಲಿ ಸನ್‌ರೈಸರ್ಸ್ 1 ಪಂದ್ಯದಲ್ಲಿ ಗೆದ್ದರೆ, ಗುಜರಾತ್ 3ರಲ್ಲಿ ಗೆದ್ದು ಮೇಲುಗೈ ಸಾಧಿಸಿದೆ. ಉಭಯ ತಂಡಗಳ ಮುಖಾಮುಖಿಯಲ್ಲಿ ನಾಯಕ ಶುಭ್ ಮನ್ ಗಿಲ್ ಅತಿ ಹೆಚ್ಚು ರನ್ ಗಳಿಸಿದ್ದು ಎನ್‌ಆರ್‌ಎಚ್ ವಿರುದ್ಧ ಒಂದು ಶತಕವನ್ನೂ ಸಿಡಿಸಿದ್ದಾರೆ. ಗುಜರಾತ್ ಪರ ಮೊಹಮ್ಮದ್ ಸಿರಾಜ್ ಇನ್ನೆರಡು ವಿಕೆಟ್ ಕಬಳಿಸಿದರೆ, ಐಪಿಎಲ್‌ನಲ್ಲಿ 100 ವಿಕೆಟ್ ಸಾಧನೆ ಮಾಡಲಿದ್ದಾರೆ. ಇದೇ ವೇಳೆ ಉನದ್ಕತ್ ಗೆ ಒಂದು ವಿಕೆಟ್ ಅಗತ್ಯವಿದೆ.

ಪಿಚ್ ರಿಪೋರ್ಟ್

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣವು ಸಮತಟ್ಟಾದ ಟ್ರ್ಯಾಕ್‌ಗಳಿಗೆ ಹೆಸರುವಾಸಿ. 205 ಮತ್ತು 216 ಸರಾಸರಿ ಸ್ಕೋರ್‌ಗಳೊಂದಿಗೆ ಇಲ್ಲಿ ಬ್ಯಾಟರ್‌ಗಳು ಇಲ್ಲಿ ಮೇಲುಗೈ ಸಾಧಿಸುವುದು ಸಾಮಾನ್ಯ. ಪಂದ್ಯ ಮುಂದುವರಿದಂತೆ ಸ್ಪಿನ್ನರ್‌ಗಳು ತುಸು ನೆರವು ಪಡೆಯಬಹುದು.

ಕ್ರಿಕೆಟ್‌ನ ನಿಯಮಗಳನ್ನು ಮೇರಿಲೆಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ರೂಪಿಸುತ್ತದೆ. ಇವುಗಳನ್ನು ಐಸಿಸಿ ಜಾರಿಗೆ ತರುತ್ತದೆ. ಒಬ್ಬ ಬ್ಯಾಟರ್ ಔಟ್ ಆಗಲು 11 ಸಾಧ್ಯತೆಗಳಿವೆ. ಅವು ಇಲ್ಲಿವೆ.

ರಿಟೈರ್ಡ್ ಹರ್ಟ್, ರಿಟೈರ್ಡ್ ಔಟ್ ವ್ಯತ್ಯಾಸ ಏನು ಗೊತ್ತೇ?

ಬೆಂಗಳೂರು: ಮುಂಬೈ ಇಂಡಿಯನ್ಸ್‌ನ ಸ್ಫೋಟಕ ಬ್ಯಾಟ್ಸ್‌ಮನ್ ತಿಲಕ್ ವರ್ಮಾ ಶುಕ್ರವಾರ ಲಖನೌ ಸೂಪರ್ ಜೈಂಟ್ಸ್ (ಎಲ್‌ಎಸ್‌ಜಿ) ವಿರುದ್ಧದ ಐಪಿಎಲ್ ಪಂದ್ಯದಲ್ಲಿ ರಿಟೈರ್ಡ್ ಔಟ್ ಆಗಿದ್ದಾರೆ. ಮುಂಬೈ ಇಂಡಿಯನ್ಸ್‌ನ ಮುಖ್ಯ ಕೋಚ್ ಮಹೇಲ ಜಯವರ್ಧನೆ ಅವರ ಪ್ರಕಾರ, ತಿಲಕ್ ವರ್ಮಾ ಅವರನ್ನು ರಿಟೈರ್ಡ್ ಔಟ್ ಮಾಡುವ ನಿರ್ಧಾರ ಅವರದೇ ಆಗಿತ್ತು. ಇದರೊಂದಿಗೆ ತಿಲಕ್ ವರ್ಮಾ ಐಪಿಎಲ್ ಇತಿಹಾಸದಲ್ಲಿ ರಿಟೈರ್ಡ್ ಔಟ್ ಆದ ನಾಲ್ಕನೇ ಬ್ಯಾಟ್ಸ್‌ಮನ್ ಎನಿಸಿದ್ದಾರೆ. ಇವರಿಗಿಂತ ಮೊದಲು ರವಿಚಂದ್ರನ್ ಅಶ್ವಿನ್, ಸಾಯಿ ಸುದರ್ಶನ್ ಮತ್ತು ಅಥರ್ವ ತಾಯ್ಡೆ ರಿಟೈರ್ಡ್ ಔಟ್ ಆಗಿದ್ದರು.

ಆದರೆ ತುಂಬಾ ಮಂದಿಗೆ ರಿಟೈರ್ಡ್ ಹರ್ಟ್ ಹಾಗೂ ರಿಟೈರ್ಡ್ ಔಟ್‌ಗೂ ಇರುವ ವ್ಯತ್ಯಾಸದ ಬಗ್ಗೆ ತುಂಬಾ ಗೊಂದಲವಿದೆ. ಆಟಗಾರ ಔಟ್ ಆಗದೇ ಸ್ವಯಂ ಇಚ್ಛೆಯಿಂದ ಅಥವಾ ಕ್ಯಾಪ್ಟನ್ ನಿರ್ದೇಶನದ ಮೇರೆಗೆ ಮೈದಾನ ತೊರೆದರೆ ಅದನ್ನು ರಿಟೈರ್ಡ್ ಔಟ್ ಎಂದು ಕರೆಯಲಾಗುತ್ತದೆ. ಹೀಗಾದಲ್ಲಿ ಆಟಗಾರ ಆ ಇನ್ನಿಂಗ್ಸ್‌ನಲ್ಲಿ ಮತ್ತೊಮ್ಮೆ ಬ್ಯಾಟಿಂಗ್ ಮಾಡಲು ಸಾಧ್ಯವಿಲ್ಲ. ಸ್ಕೋರ್ ಬೋರ್ಡ್‌ನಲ್ಲಿ ಆ ಆಟಗಾರನನ್ನು ಔಟ್ ಎಂದೇ ಬಿಂಬಿಸಲಾಗುತ್ತದೆ. ಆದರೆ ರಿಟೈರ್ಡ್ ಹರ್ಟ್ ಆದ ಆಟಗಾರ ಡ್ರೆಸ್ಸಿಂಗ್ ರೂಂಗೆ ಹೋದ ಬಳಿಕವೂ ಅನಿವಾರ್ಯವಿದ್ದರೇ ಮತ್ತೆ ಆ ಇನ್ನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡಲು ಇಳಿಯಬಹುದು.

1 ಟೈಮ್ ಔಟ್
ಒಬ್ಬ ಬ್ಯಾಟರ್ ಔಟ್ ಆದ ನಂತರ ಹೊಸ ಬ್ಯಾಟ್ಸ್‌ಮನ್ ನಿಗದಿತ ಸಮಯದಲ್ಲಿ ಕ್ರೀಸ್‌ಗೆ ಬ್ಯಾಟಿಂಗ್‌ಗೆ ಬಾರದಿದ್ದರೆ ಅವನನ್ನು ಟೈಮ್ ಔಟ್ ಎಂದು ಘೋಷಿಸಲಾಗುತ್ತದೆ. ಹೊಸ ಬ್ಯಾಟ್ಸ್‌ಮನ್ ಮೂರು ನಿಮಿಷಗಳ ಒಳಗೆ ಮೈದಾನಕ್ಕೆ ಬರಬೇಕು.

2 ರಿಟೈರ್ಡ್ ಔಟ್
ಬ್ಯಾಟರ್ ಅಂಪೈರ್ ಮತ್ತು ವಿರೋಧಿ ತಂಡದ ನಾಯಕನ ಅನುಮತಿ ಇಲ್ಲದೆ ಮೈದಾನವನ್ನು ತೊರೆದು ಹೊರಗೆ ಹೋದರೆ ಅವನನ್ನು ರಿಟೈರ್ಡ್ ಔಟ್ ಎಂದು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಆ ಬ್ಯಾಟರ್ ಮತ್ತೆ ಬ್ಯಾಟಿಂಗ್‌ಗೆ ಮರಳಲು ಸಾಧ್ಯವಿಲ್ಲ.

3 ಡಬಲ್ ಟಚ್
ಬ್ಯಾಟರ್ ಚೆಂಡನ್ನು ಉದ್ದೇಶಪೂರ್ವಕವಾಗಿ ಎರಡು ಬಾರಿ ಬ್ಯಾಟ್‌ನಿಂದ ಹೊಡೆದರೆ ಅವನನ್ನು ಔಟ್ ಎಂದು ಘೋಷಿಸಲಾಗುತ್ತದೆ. ಇದುವರೆಗೆ ಕೇವಲ 0.01% ಬ್ಯಾಟ್ಸ್‌ಮನ್‌ಗಳು ಈ ರೀತಿಯಲ್ಲಿ ಔಟ್ ಆಗಿದ್ದಾರೆ. ಇದು ಅತ್ಯಂತ ವಿರಳ ಸನ್ನಿವೇಶದಲ್ಲಿ ನಡೆಯುತ್ತದೆ.

4 ಫೀಲ್ಡಿಂಗ್‌ಗೆ ಅಡ್ಡಿ
ಬ್ಯಾಟರ್ ಫೀಲ್ಡಿಂಗ್ ಮಾಡುತ್ತಿರುವ ತಂಡಕ್ಕೆ ಉದ್ದೇಶಪೂರ್ವಕವಾಗಿ ತೊಂದರೆ ಉಂಟುಮಾಡಿದರೆ ಔಟ್ ಆಗುತ್ತಾನೆ. ಉದಾಹರಣೆಗೆ, ರನ್ ಔಟ್‌ಗಾಗಿ ಫೀಲ್ಡರ್ ಗೆಂಡನ್ನು ಸ್ಟಂಪ್‌ಗೆ ಎಸೆದಾಗ ಬ್ಯಾಟರ್ ಉದ್ದೇಶಪೂರ್ವಕವಾಗಿ ಚೆಂಡನ್ನು ತಡೆದರೆ ಔಟ್ ಎನಿಸುತ್ತಾನೆ.

5 ಹಿಟ್ ವಿಕೆಟ್
ಕ್ರೀಸ್‌ನಲ್ಲಿ ಬ್ಯಾಟಿಂಗ್ ಮಾಡುವಾಗ ಬ್ಯಾಟ್ಸ್‌ಮನ್‌ನ ಬ್ಯಾಟ್ ಅಥವಾ ದೇಹದ ಯಾವುದೇ ಭಾಗ ಸ್ಟಂಪ್‌ಗೆ ತಾಗಿದರೆ ಅವನನ್ನು ಹಿಟ್ ವಿಕೆಟ್ ಔಟ್ ಎಂದು ಘೋಷಿಸಲಾಗುತ್ತದೆ. ಫುಟ್‌ಬಾಲ್‌ನಲ್ಲಿ ಸೆಲ್ಫ್ ಗೋಲ್ ಇದ್ದಂತೆ, ಕ್ರಿಕೆಟ್‌ನಲ್ಲಿ ಈ ರೀತಿ ಔಟಾಗುವುದು ಸಾಮಾನ್ಯ.

6 ಸ್ಟಂಪಿಂಗ್
ಬ್ಯಾಟರ್ ಕ್ರೀಸ್‌ನಿಂದ ಹೊರಗೆ ಬಂದು ಶಾಟ್ ಆಡಲು ಪ್ರಯತ್ನಿಸಿದಾಗ ಚೆಂಡು ಬ್ಯಾಟ್‌ಗೆ ತಾಗದಿದ್ದರೆ, ವಿಕೆಟ್ ಕೀಪರ್ ಚೆಂಡನ್ನು ಹಿಡಿದು ಸ್ಟಂಪ್‌ನ ಬೇಲ್‌ಗಳನ್ನು ಬೀಳಿಸಿದರೆ ಬ್ಯಾಟರ್ ಸ್ಟಂಪ್ ಔಟ್ ಆಗುತ್ತಾನೆ. ಧೋನಿಯಂಥ ಕೀಪರ್ ಮುಂದೆ ಜಾಗರೂಕನಾಗಿ ಇರಬೇಕು.

7 ರನ್ ಔಟ್
ಬ್ಯಾಟರ್ ಚೆಂಡನ್ನು ಆಡಿದ ನಂತರ ರನ್ ಗಳಿಸಲು ವಿಕೆಟ್‌ಗಳ ನಡುವೆ ಓಡುವಾಗ, ಕ್ರೀಸ್ ತಲುಪುವ ಮೊದಲೇ ಫೀಲ್ಡರ್ ಚೆಂಡನ್ನು ಸ್ಟಂಪ್‌ಗೆ ಎಸೆದು ಬೇಲ್‌ಗಳನ್ನು ಬೀಳಿಸಿದರೆ ರನ್ ಔಟ್ ಆಗುತ್ತಾನೆ. ಐಪಿಎಲ್‌ನ ಹೆಚ್ಚಿನ ಪಂದ್ಯಗಳಲ್ಲಿ ರನ್ ಔಟ್ ಆಗುವ ಸಾಧ್ಯತೆ ಹೆಚ್ಚು ಇರುತ್ತದೆ.

8 ಎಲ್‌ಬಿಡಬ್ಲ್ಯು
ಚೆಂಡು ಬ್ಯಾಟ್‌ಗೆ ತಾಗದೆ ಸ್ಟಂಪ್‌ನ ಲೈನ್‌ನಲ್ಲಿ ಬ್ಯಾಟರ್ ಪ್ಯಾಡ್‌ಗೆ ತಾಗಿದರೆ ಅವನನ್ನು ಲೆಗ್ ಬಿಫೋರ್ ವಿಕೆಟ್ ಔಟ್ ಎಂದು ಘೋಷಿಸಲಾಗುತ್ತದೆ. ಐಪಿಎಲ್ ಪಂದ್ಯದಲ್ಲಿ ಈ ತೀರ್ಪನ್ನು ಹೆಚ್ಚಿನ ಸಂದರ್ಭ ಗಳಲ್ಲಿ ಟಿವಿ ಅಂಪಾಯರ್ ಮೂಲಕ ತೀರ್ಮಾನಿಸಲಾಗುತ್ತದೆ.

9 ಕ್ಯಾಚ್ ಔಟ್
ಚೆಂಡು ಬ್ಯಾಟರ್ ಬ್ಯಾಟ್‌ಗೆ ತಾಗಿ ಮೈದಾನದಲ್ಲಿ ಬೀಳುವ ಮೊದಲೇ ಫೀಲ್ಡರ್ ಅದನ್ನು ಹಿಡಿದರೆ ಬ್ಯಾಟರ್ ಕ್ಯಾಚ್ ಔಟ್ ಆಗುತ್ತಾನೆ. ಐಪಿಎಲ್ ಪಂದ್ಯಗಳಲ್ಲಿ ಆಟಗಾರರು ಅತಿ ಹೆಚ್ಚಿನ ಸಂದರ್ಭಗಳಲ್ಲಿ ದೊಡ್ಡ ಹೊಡೆತಕ್ಕೆ ಮುಂದಾಗಿ ಕ್ಯಾಚ್ ನೀಡಿ ಔಟಾಗುವುದು ಸರ್ವೇ ಸಾಮಾನ್ಯ ವಾಗಿದೆ.

10 ಬೌಲ್ಡ್
ಬ್ಯಾಟ್ಸ್‌ಮನ್ ಬ್ಯಾಟಿಂಗ್ ಮಾಡುತ್ತಿರುವಾಗ ಬೌಲರ್‌ನ ಕಾನೂನುಬದ್ಧ ಚೆಂಡು ಸ್ಟಂಪ್‌ನ್ನು ಉಡಾಯಿಸಿದರೆ ಅವನನ್ನು ಬೌಲ್ಡ್ ಔಟ್ ಎಂದು ಕರೆಯಲಾಗುತ್ತದೆ. ಇದು ಯಾವುದೇ ಬೌಲರ್‌ಗೆ ಹೆಚ್ಚು ಗೌರವ ತರುವ ಸಂಗತಿಯಾಗಿದೆ. ಬ್ಯಾಟರ್ ಪಾಲಿಗೆ ಇದು ನಿರಾಶೆಯ ಸಂಗತಿಯಾಗಿದೆ.

11 ಹ್ಯಾಂಡಲ್ಡ್ ದಿ ಬಾಲ್
ಬ್ಯಾಟ್ಸ್‌ಮನ್ ಚೆಂಡನ್ನು ಆಡಿದ ನಂತರ ಅದು ಸ್ಟಂಪ್‌ಗೆ ತಾಗುವುದನ್ನು ತಪ್ಪಿಸಲು ಉದ್ದೇಶಪೂರ್ವಕವಾಗಿ ಕೈಯಿಂದ ತಡೆದರೆ, 'ಹ್ಯಾಂಡಲ್ಡ್ ದಿ ಬಾಲ್' ಅಡಿಯಲ್ಲಿ ಔಟ್ ಎನಿಸುತ್ತಾನೆ. ರನ್ ಔಟ್‌ನಂತೆ ಈ ವಿಕೆಟ್ ಬೌಲರ್ ಖಾತೆಗೆ ಸೇರುವುದಿಲ್ಲ.

ತಿಲಕ್ ವರ್ಮಾ ಅವರ ರಿಟೈರ್ಡ್ ಔಟ್ ಮುಂಬೈ ತಂಡದಲ್ಲಿ ತೀವ್ರ ಸಂಚಲನಕ್ಕೆ ಕಾರಣವಾಗಿದೆ. ಸಾಮಾಜಿಕ ಜಾಲ ತಾಣದಲ್ಲೂ ಈ ಬಗ್ಗೆ ವ್ಯಾಪಕ ಚರ್ಚೆ ನಡೆದಿದೆ.

» ದು.ಗು.ಲಕ್ಷ್ಮಣ

ಗಗನಯಾನಿ, ಸಾಹಸಿ ಸುನೀತಾ ಅವರು, ಸ್ನಾತಕೋತ್ತರ ವಿಜ್ಞಾನ ಪದವಿ ಪಡೆದ ಬಳಿಕ ನಾಸಾ ಸಂಸ್ಥೆಗೆ ಆಯ್ಕೆಯಾಗಿ ಕೈತುಂಬ ವೇತನ ಪಡೆದು ಹೇಗೋ ಸುಖವಾಗಿರಬಹುದಿತ್ತಲ್ಲವೆ? ಆದರೆ ಮೊದಲಿನಿಂದಲೂ ಸಾಹಸಪ್ರವೃತ್ತಿಯವರಾದ ಅವರು ಬಾಹ್ಯಾಕಾಶಕ್ಕೆ ಗಗನಯಾತ್ರಿಯಾಗಿ ತೆರಳಲು ಹಿಂದೆಮುಂದೆ ಯೋಚಿಸದೆ ನಿರ್ಧಾರ ಕೈಗೊಂಡಾಗ, ನಾಸಾದ ಇತರ ವಿಜ್ಞಾನಿಗಳಿಗೇ ಆಶ್ಚರ್ಯವಾಗಿದ್ದಿರಬಹುದು. ಅವರ ಅಚಲ ಧೈರ್ಯ, ಸಾಹಸ, ಸ್ಥಿತಪ್ರಜ್ಞತೆ, ಪ್ರಸಂಗಾವಧಾನತೆ ಯಾವ ಗಂಡಸಿಗೂ ಕಮ್ಮಿ ಇಲ್ಲ; ಮಹಿಳಾ ಶಕ್ತಿಗೆ ಸುನೀತಾ ಅವರೊಂದು ರೂಪಕ. ಧೈರ್ಯ ಹೊಂದಿರುವ ಇಂತಹ ಕೆಲವರಿಂದಲೇ ನಾವಿವತ್ತು ಅತ್ಯಂತ ಆಧುನಿಕ ವೈಜ್ಞಾನಿಕ ಯುಗದಲ್ಲಿ ವಾಸಿಸುತ್ತಾ, ತಂತ್ರಜ್ಞಾನದ ಸವಲತ್ತುಗಳ ಫಲಗಳನ್ನು ಅನುಭವಿಸುತ್ತಿದ್ದೇವೆ.

ಮನುಕುಲದ ಮಾದರಿ ಹೆಣ್ಣು ಸುನೀತಾ!

ಪ್ರೀತಿಯ ಸೋದರಿ ಸುನೀತಾ, ಕೊನೆಗೂ ಭೂಮಿಗೆ ಇಳಿದು ಬಂದ್ಯಾ ತಾಯಿ ಸುನೀತಾ? ಇಳಿದು ಬಾ ತಾಯಿ ಇಳಿದು ಬಾ. ಹೇಗಾದರೂ ಬಾಹ್ಯಾಕಾಶ ನಿಲ್ದಾಣದಿಂದ ಇಳಿದಿಳಿದು ಬಾ ಎಂದು ನಾವೆಲ್ಲ ಭಾರತೀಯರು, ಅಷ್ಟೇಕೆ ಇಡೀ ಜಗತ್ತು ಮನದಾಳದಿಂದ ಹಗಲು ರಾತ್ರಿ ಜಪಿಸಿದ್ದು, ಭಜಿಸಿದ್ದು ಕೊನೆಗೂ ನಿಜವಾಯಿತಲ್ಲ, ಕನಸು ನನಸಾಯಿತಲ್ಲ, ಇದಕ್ಕಿಂತ ಖುಷಿಯ ವಿಚಾರ ಸದ್ಯಕ್ಕೆ ನಮಗೆ ಯಾವುದೂ ಇಲ್ಲ.

ನೀನು ಬರುತ್ತೀಯೋ ಇಲ್ಲವೋ, ಬಾಹ್ಯಾಕಾಶ ನಿಲ್ದಾಣದಲ್ಲೇ ಕೊರಗಿ ಕರಗಿ ಹೋಗುತ್ತೀಯೇನೋ ಎಂಬ ಆತಂಕ ನಮ್ಮೆಲ್ಲರಲ್ಲೂ ಮನೆಮಾಡಿದ್ದು ದೇವರಾಣೆಗೂ ನಿಜ. ಅಮೆರಿಕದ ನಾಸಾ ಬಳಿ ನಿನ್ನನ್ನು ಮರಳಿ ಕರೆತರುವಷ್ಟು ವೈಜ್ಞಾನಿಕ ಸಾಮರ್ಥ್ಯ, ಸಾಹಸವಿದ್ದರೂ ಇದಕ್ಕಾಗಿ ಹಣವಿರಲಿಲ್ಲ ಮತ್ತು ಬೈಡನ್ ಸರ್ಕಾರ ಅಷ್ಟೊಂದು ಹಣ ಖರ್ಚು ಮಾಡಲು ತಯಾರಿರಲಿಲ್ಲ.

ಆದರೆ ಟ್ರಂಪ್ ಅಧ್ಯಕ್ಷರಾಗುತ್ತಿದ್ದಂತೆ ನೀನು ಧರೆಗೆ ಮರಳಿ



ಬರುವ ಕನಸಿಗೆ ರೆಕ್ಕೆಪುಕ್ಕ ಮೂಡತೊಡಗಿತು. ಬೈಡನ್ ಆವಾಗಲೇ ಎಲಾನ್ ಮಸ್ಕ್ ಜೊತೆ ಹೊಂದಿಕೊಂಡಿದ್ದರೆ ನೀನು ಯಾವಾಗಲೋ ಮರಳಿ ಧರೆಗಿಳಿದು ಬರುತ್ತಿದ್ದೆ. ಆದರೆ ಅವರಿಬ್ಬರೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿದ್ದರು. ಹಾಗಾಗಿ ಬಾಹ್ಯಾಕಾಶದಲ್ಲಿ ಸಿಕ್ಕಿಬಿದ್ದ ಗಗನಯಾತ್ರಿಗಳನ್ನು ಕರೆತರಲು ಬೈಡನ್ ಕ್ರಮ ಕೈಗೊಂಡಿರಲಿಲ್ಲ. ಜೊತೆಗೆ ನಾಸಾದ ಬಳಿ ಯಾವುದೇ ಸೂಕ್ತ ನೌಕೆ ಇಲ್ಲದ ಕಾರಣ ಅದು ಪೂರ್ಣವಾಗಿ ಸ್ಪೇಸ್-ಎಕ್ಸ್ ಅನ್ನೇ (ಮಸ್ಕ್ ಒಡೆತನದ ಸಂಸ್ಥೆ) ಅವಲಂಬಿಸಬೇಕಾಗಿತ್ತು.

ಟ್ರಂಪ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ನಿನ್ನ ಅದೃಷ್ಟ ಖುಲಾಯಿಸಿತು. ನಿನ್ನನ್ನು ಹಾಗೂ ನಿನ್ನ ಜೊತೆಗಿದ್ದ ಬುಚ್ ವಿಲ್ಮೋರ್‌ರನ್ನು ತ್ವರಿತವಾಗಿ ಭೂಮಿಗೆ ತರಲು ಎಲಾನ್ ಮಸ್ಕ್‌ಗೆ ಟ್ರಂಪ್ ಮನವಿ ಮಾಡಿದ್ದರು. ಸ್ನೇಹಕ್ಕೆ ಸ್ನೇಹ, ಪ್ರಾಣಕ್ಕೆ ಪ್ರಾಣ ಕೊಡುವ ಆತ್ಮೀಯ ಗೆಳೆಯರಾದ ಟ್ರಂಪ್ - ಮಸ್ಕ್ ಜೊತೆಗೂಡಿದ ಮೇಲೆ ಕೇಳಬೇಕೆ? ಟ್ರಂಪ್ ಮನವಿಯೆಂದರೆ ಮಸ್ಕ್‌ಗೆ ವೇದವಾಕ್ಯವಿದ್ದಂತೆ. ಕೂಡಲೇ ಅಗತ್ಯ ಸಿದ್ಧತೆ ನಡೆಸಿ ನೀನು ಮತ್ತು ಬಾಹ್ಯಾಕಾಶ ಸಂಗಾತಿ ಬುಚ್ ಮರಳಿ ಭೂಮಿಗೆ ಬರುವಂತೆ ಮಾಡಿದ್ದಾರೆ. ಅವರಿಬ್ಬರಿಗೆ ನಾವೆಲ್ಲ ಥ್ಯಾಂಕ್ಸ್ ಹೇಳಲೇಬೇಕಾಗಿದೆ.

'ಭರವಸೆ ನೀಡಿದ್ದೆವು. ಭರವಸೆ ಈಡೇರಿಸಿದ್ದೇವೆ' ಎಂದು ಟ್ರಂಪ್ ಸರ್ಕಾರ ಶ್ವೇತಭವನದಿಂದ ಪ್ರಕಟಣೆ ಹೊರಡಿಸಿದಾಗ ಅಮೆರಿಕದ ಜನತೆಗೆಲ್ಲ ಉಂಟಾದ ಖುಷಿ ಅಷ್ಟಿಷ್ಟಲ್ಲ. ಬೈಡನ್‌ಗೆ ಮಾತ್ರ ಹೇಳತೀರದ ಹೊಟ್ಟೆಯುರಿ. ಎಲ್ಲ ಕ್ರೆಡಿಟ್ ಟ್ರಂಪ್ ಪಾಲಾಯ್ತಲ್ಲ. ನಾನೇ ಈ ಕ್ರೆಡಿಟ್ ಪಡೆಯಬಹುದಿತ್ತು ಎಂದು ಉರಿದುಕೊಂಡದ್ದೇ ಬಂತು. ಬಾಹ್ಯಾಕಾಶದಲ್ಲಿ ಗೊತ್ತುಗುರಿಯಿಲ್ಲದೆ ಅಲೆದಾಡುತ್ತಿದ್ದ, ಅನಿಶ್ಚಿತತೆಯ ತೊಟ್ಟಿಲಲ್ಲಿ ತೂಗಾಡುತ್ತಿದ್ದ ಜೀವಿಗಳಿಬ್ಬರಿಗೆ ಮರುಜನ್ಮ ನೀಡುವ ಸಾಹಸಕಾಯವು, ಬಾಯಿಮಾತಿನಲ್ಲಿ ಹೇಳಿದಷ್ಟು ಸುಲಭವೇನೂ ಆಗಿರಲಿಲ್ಲ.

ಈ ಯೋಜನೆಯಲ್ಲಿ ಸಣ್ಣದೊಂದು ವ್ಯತ್ಯಾಸ ಉಂಟಾಗಿದ್ದರೂ ಇಬ್ಬರು ಗಗನಯಾತ್ರಿಗಳ ಜೀವವೇ ಹೋಗುತ್ತಿತ್ತು. ಹೀಗೆ ಹೇಳಿದಾಗ, ಎಲ್ಲರಿಗೂ ಇದೇ ರೀತಿ ಬಾಹ್ಯಾಕಾಶದಿಂದ 2003ರ ಫೆಬ್ರವರಿ 1ರಂದು ಭೂಮಿಗೆ ಇಳಿದು ಬರುತ್ತಿದ್ದ ಇನ್ನೋರ್ವ ಭಾರತೀಯ ಸಂಜಾತೆ, ಬಾಹ್ಯಾಕಾಶ ವಿಜ್ಞಾನಿ ಕಲ್ಪನಾ ಚಾವ್ಲಾ ಧರೆಗಿಳಿಯುವ ಮುನ್ನವೇ ಆಕೆಯಿದ್ದ ನೌಕೆ ಹೊತ್ತಿ ಉರಿದು ಸ್ಫೋಟವಾಗಿದ್ದ ಸಂಗತಿ ನೆನಪಾಗಿದ್ದಿರಲು ಸಾಕು. ಪಾಪ, ಕಲ್ಪನಾ ಎಂಬ ಪ್ರತಿಭಾವಂತ ವಿಜ್ಞಾನಿಗೆ ಮರಳಿ ನೆಲಕ್ಕೆ ಕಾಲೂರುವ ಅದೃಷ್ಟವೇ ಇರಲಿಲ್ಲ.

ಮೊನ್ನೆ ಮಾ.20ರ ಬೆಳಗ್ಗೆ ಇನ್ನೇನು ಸಮುದ್ರಕ್ಕೆ ಡ್ರ್ಯಾಗನ್ ನೌಕೆ ಅಪ್ಪಳಿಸಲಿದೆ ಎನ್ನುವಾಗ ನಾಸಾದ ವಿಜ್ಞಾನಿಗಳು ಕೂಡ ಉಸಿರು ಬಿಗಿಹಿಡಿದು ನೋಡುತ್ತಿದ್ದರು. ಆದರೆ ನೀವೆಲ್ಲ ಯಾವುದೇ ತೊಂದರೆ ಇಲ್ಲದಂತೆ ಬಂದಿಳಿದಾಗ ವಿಜ್ಞಾನಿಗಳು ಸೇರಿದಂತೆ ವಿಶ್ವಾದ್ಯಂತ ಕೋಟ್ಯಂತರ ಜನರು ನಿಟ್ಟುಸಿರು ಬಿಟ್ಟಿದ್ದರು. ಆನಂದಬಾಷ್ಪ ಕಣ್ಣೀರಧಾರೆಯಾಗಿ ಹರಿದಿತ್ತು. ಟಿವಿ ಮೂಲಕ ಧರೆಗಿಳಿಯುತ್ತಿದ್ದ ದೃಶ್ಯ ನೋಡಿ ಅಜ್ಜ ಅಜ್ಜಿಯರೂ ಖುಷಿಯಿಂದ ಚಪ್ಪಾಳೆ ಹೊಡೆದಿದ್ದರು. ನೀನು ನಿಜಕ್ಕೂ ಅದೃಷ್ಟವಂತೆ ಸುನೀತಾ.

ಎಂಟು ದಿನದ ಕೆಲಸಕ್ಕೆಂದು ಬಾಹ್ಯಾಕಾಶಕ್ಕೆ ಹೋದವಳು ನೀನು. ಆದರೆ ತಾಂತ್ರಿಕ ತೊಂದರೆಗೆ ಸಿಲುಕಿ 9 ತಿಂಗಳು ಬಾಹ್ಯಾಕಾಶ ಕೇಂದ್ರದಲ್ಲೇ ಕಾಲ ಕಳೆಯಬೇಕಾಯಿತಲ್ಲ. ನಿನ್ನ ಧೈರ್ಯ, ಸಾಹಸ, ಸ್ಥಿತಪ್ರಜ್ಞತೆ, ಅಪಾರ ತಾಳ್ಮೆಯನ್ನು ಯಾರಾದರೂ ಕೊಂಡಾಡಲೇಬೇಕು. ಊರಿನಿಂದ ಹೊರಟು ದೂರದ ಬೆಂಗಳೂರಿಗೋ, ದಿಲ್ಲಿಗೋ ಅಥವಾ ಕುಂಭಮೇಳಕ್ಕೋ ಒಂದೆರಡು ದಿನಗಳ ಮಟ್ಟಿಗೆಂದು ಹೋದವರು ನಿಗದಿತ ದಿನ ಬರದಿದ್ದರೆ ಮನೆಮಂದಿಗೆಲ್ಲ ಅದೆಷ್ಟು ಆತಂಕ ಆಗುತ್ತದಲ್ಲವೆ? ಬಂಧುಬಳಗಕ್ಕೆಲ್ಲ ಫೋನ್ ಹಚ್ಚಿ, ಕೊನೆಗೆ ಪೊಲೀಸ್ ಠಾಣೆಗೂ ದೂರು ನೀಡಿ ಹೇಗೋ ಮರಳಿ ಬಂದರೆ ಸಾಕೆಂದು ಹಾರೈಸುವವರನ್ನು ಪ್ರತಿದಿನವೆಂಬಂತೆ ನೋಡುತ್ತಲೇ ಇರುತ್ತೇವೆ. ಹಾಗಿರುವಾಗ ಕಾಣದ, ಕೇಳದ, ಬಹುದೂರದ, ಜನಸಂಚಾರವೇ ಇರದ, ಬಾಹ್ಯಾಕಾಶ ಕೇಂದ್ರದಿಂದ ಮರಳಿ ನೀನು ಧರೆಗಿಳಿದು ಬರದಿದ್ದರೆ ನಮಗೆಲ್ಲ ಅದೆಷ್ಟು ಆತಂಕವಾಗಬಹುದೆಂದು ವರ್ಣಿಸಲು ಸಾಧ್ಯವೆ? ಟಿವಿ ಮಾಧ್ಯಮಗಳು ಒಂದೆರಡು ತಿಂಗಳ ಹಿಂದೆ ಇನ್ನು ಸುನೀತಾ ಭೂಮಿಗೆ ಬರಲಾರಳು ಎಂಬರ್ಥ ಬರುವಂತೆ ಸ್ಟೋರಿ ಪ್ರಸಾರ ಮಾಡುತ್ತಿದ್ದರೆ ನನಗೂ ಗಾಬರಿ, ಆತಂಕವಾಗಿದ್ದು ನಿಜ. 'ಧರೆಗಿಳಿದು ಬರಲಾರೆಯಾ ಸುನೀತಾ?' ಎಂಬ ಅಂಕಣ ಲೇಖನ ಬರೆಯಲು ಆಗಲೇ ಸಿದ್ಧತೆಯಲ್ಲಿ ತೊಡಗಿದ್ದೆ. ಆದರೆ ಕೆಲವು ದಿನಗಳ ನಂತರ ನೀನು ಧರೆಗೆ ಮರಳಿ ಬರುವ ಸಾಧ್ಯತೆ ಇದೆಯೆಂದು ಸುದ್ದಿ ಗೊತ್ತಾದಾಗ ಅದೆಷ್ಟು ಸಂತೋಷಪಟ್ಟಿದ್ದೆ, ಗೊತ್ತಾ?

ನೀನು ಮತ್ತು ಬುಚ್ ಬರೋಬ್ಬರಿ 286 ದಿನಗಳು ಬಾಹ್ಯಾಕಾಶ ಕೇಂದ್ರದಲ್ಲೇ ಅನಿವಾರ್ಯವಾಗಿ ಕಳೆಯಬೇಕಾಗಿ ಬಂದರೂ, ಭೂಮಿಗೆ 5476 ಬಾರಿ ಸುತ್ತು ಬಂದಿದ್ದಲ್ಲದೆ, 121 ದಶಲಕ್ಷ ಮೈಲಿ (195 ದಶಲಕ್ಷ ಕಿ.ಮೀ.) ಪ್ರಯಾಣ ಮಾಡಿದಿರಲ್ಲ! 62 ಗಂಟೆ ಕಾಲ ಬಾಹ್ಯಾಕಾಶ ನಡಿಗೆಯನ್ನೂ ಮಾಡಿದರಲ್ಲ. ಅತಿಹೆಚ್ಚು ಕಾಲ ಬಾಹ್ಯಾಕಾಶ ನಡಿಗೆ ಮಾಡಿದ ಮಹಿಳಾ ಗಗನಯಾತ್ರಿ ಎಂಬ ದಾಖಲೆ ಈಗ ನಿನ್ನ ಹೆಸರಿಗೆ ಸೇರಿದೆ. ಬಾಹ್ಯಾಕಾಶದಲ್ಲಿ ಇದೆಲ್ಲ ಸಾಹಸ ಮಾಡುವುದು ಹೇಳಿದಷ್ಟು ಸುಲಭವಲ್ಲ. ಆಕಾಶದಲ್ಲಿ ಗುರುತ್ವಾಕರ್ಷಣ ಬಲ ಅತ್ಯಂತ ಕಡಿಮೆ ಇರುವ ಜಾಗದಲ್ಲಿ ಹೀಗೆಲ್ಲ ಪ್ರಯೋಗ ಮಾಡುವುದು, ನಡೆಯುವುದು ಇತ್ಯಾದಿ ಮಾಡಲು ಗಟ್ಟಿ ಗುಂಡಿಗೆ ಮತ್ತು ಕಠಿಣ ತರಬೇತಿ ಬೇಕಾಗುತ್ತದೆ.

ಭೂಮಿಯಿಂದ ಸರಿಸುಮಾರು 400 ಕಿ.ಮೀ.ದೂರದಲ್ಲಿ ತೇಲಿಬಿಡಲಾಗಿರುವ ಅಂತಾರಾಷ್ಟ್ರೀಯ ವ್ಯೋಮ ನಿಲ್ದಾಣ (ಐಎಸ್‌ಎಸ್) ದಿನಕ್ಕೆ 15ಕ್ಕೂ ಹೆಚ್ಚು ಬಾರಿ ಭೂಮಿಯನ್ನು ಸುತ್ತುಹಾಕುತ್ತದೆ. ಗುರುತ್ವಾಕರ್ಷಣೆ ಇಲ್ಲದ ಆ ಪ್ರದೇಶದಲ್ಲಿ ಅದರಲ್ಲಿರುವವರು ತೂಕವಿಲ್ಲದ ಸ್ಥಿತಿಯನ್ನು ಅನುಭವಿಸುತ್ತಾರೆ. ನಾವು ಕಾರಿನಲ್ಲಿ 140 ಕಿ.ಮೀ. ವೇಗದಲ್ಲಿ ಚಲಿಸಿದರೆ 'ಅಯ್ಯೋ' ಎಂದು ಕಿರುಚಿಕೊಳ್ಳುತ್ತೇವೆ. ಈ ಐಎಸ್‌ಎಸ್ ಗಂಟೆಗೆ 28 ಸಾವಿರ ಕಿ.ಮೀ.ವೇಗದಲ್ಲಿ ಚಲಿಸಿದಾಗ ಒಳಗಿದ್ದ ನೀನು ಮತ್ತು ಬುಚ್ ಹೇಗಿದ್ದಿರಬಹುದು? ಹೇಗೆ ಬ್ಯಾಲೆನ್ಸ್ ಮಾಡ್ತಿದ್ರಿ? ತೇಲಾಡುತ್ತಾ ಹೇಗೆ ಪ್ರಯೋಗ ಮಾಡ್ತಿದ್ರಿ? ನಿಮ್ಮ ಊಟ, ತಿಂಡಿ, ನಿದ್ರೆ ಕಥೆ? ನಿಜಕ್ಕೂ ಆ ಸ್ಥಿತಿ ಒಂದು ರೀತಿಯಲ್ಲಿ ತ್ರಿಶಂಕು ಸ್ಥಿತಿ ಅಲ್ಲವೆ?

ನೀನು ಬಾಹ್ಯಾಕಾಶಕ್ಕೆ ಹೋಗಿದ್ದಾದರೂ ಏಕೆ? ಸ್ನಾತಕೋತ್ತರ ವಿಜ್ಞಾನ ಪದವಿ ಪಡೆದ ಬಳಿಕ ನಾಸಾ ಸಂಸ್ಥೆಗೆ ಆಯ್ಕೆಯಾಗಿ ಕೈತುಂಬ ವೇತನ ಪಡೆದು ಹೇಗೋ ಸುಖವಾಗಿರಬಹುದಿತ್ತಲ್ಲವೆ?

» ಮೂರನೇ ಪುಟಕ್ಕೆ

ವಾಲ್ಮೀಕಿಗಿರಿಯಿಂದ ಹುಟ್ಟಿದ ರಾಮಾಯಣ ಮಹಾನದಿ

» ನಾರಾಯಣ ಯಾಜಿ

**ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್.
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ||ಬಾ.4||**

ರಾಮನ ಕಲ್ಯಾಣಗುಣಗಳನ್ನು ಪ್ರತಿಪಾದಿಸುವ, ಸೀತೆಯ ಸಚ್ಚರಿತ್ರರೂಪವಾದ, ಪೌಲಸ್ತ್ಯ (ರಾವಣ)ವಧೆಯನ್ನು ನಿರೂಪಿಸುವ ರಾಮಾಯಣವೆನುವ ಮಹಾಕಾವ್ಯವನ್ನು ಚರಿತವ್ರತರು(ವಾಲ್ಮೀಕಿ) ರಚಿಸಿದರು.

ರಾಮಾಯಣ ಪ್ರಾರಂಭವಾಗುವುದೇ ಪ್ರಪಂಚದಲ್ಲಿ ಆದರ್ಶ ಪುರುಷ ಅಥವಾ ಪರಿಪೂರ್ಣಗುಣಗಳುಳ್ಳ ವ್ಯಕ್ತಿ ನಿಜವಾಗಿಯೂ ಇದ್ದಾನೆಯೋ ಎನ್ನುವ ವಾಲ್ಮೀಕಿ ಮುನಿಗೆ ಸಂಶಯ ಹುಟ್ಟುವಲ್ಲಿಂದ. ರತ್ನಾಕರ, ಪ್ರಾಚೇತಸ, ಋಕ್ಷ ಹೀಗೆ ಹಲವು ಹೆಸರುಳ್ಳ, ಒಂದು ಕಾಲದಲ್ಲಿ ಹಿಂಸಾರತಿಯಲ್ಲಿ ಮನವಿಟ್ಟವನಿಗೆ ತನ್ನ ಹಳೆಯ ಬದುಕೆಲ್ಲ ಹುತ್ತದಲ್ಲಿ ಮಣ್ಣಾಗಿದೆ. ಜೀವಿಸುವುದು ಎಂದರೆ ಇನ್ನೊಬ್ಬರನ್ನು ಕೊಲ್ಲಬೇಕು, ದೋಚಬೇಕು, ಅನುಭವಿಸಬೇಕು ಎನ್ನುವದಷ್ಟೇ ತಿಳಿದಿದ್ದ ಋಕ್ಷನಿಗೆ ಮೊದಲ ಆಘಾತವಾದದ್ದು 'ಯಾರ ಸಲುವಾಗಿ ಈ ಹಿಂಸೆಯನ್ನು ಮಾಡುತ್ತಿರುವೆ?' ಎನ್ನುವ ಸಪ್ತರ್ಷಿಗಳ ಪ್ರಶ್ನೆ. ತನ್ನ ಪತ್ನಿ, ತನ್ನ ಮಕ್ಕಳು, ತನ್ನವರು ಎನ್ನುವವರಿಗಾಗಿ ಎನ್ನುವ ಉತ್ತರ.

'ಹಿಂಸೆ ಪಾಪವಲ್ಲವೇ?' ಎನ್ನುವ ಮರು ಪ್ರಶ್ನೆಗೆ ಇದ್ಯಾವ ಹೊಸತು ಎನ್ನುವ ಕುತೂಹಲ! ಕಡಿ, ಕೊಲ್ಲು, ತಿನ್ನು ಹೀಗೆ ಬದುಕಿದವನಿಗೆ ಪಾಪ, ಪುಣ್ಯದ ಕಲ್ಪನೆಯ ಅರಿವಿಲ್ಲ. ಕಾಡಿನಲ್ಲಿ ಕ್ರೂರ ಪ್ರಾಣಿಗಳು ತನಗಿಂತ ಬಲಹೀನವಾದುದನ್ನು ಕೊಂದು ಜೀವಿಸುವುದನ್ನು ಕಂಡವನಿಗೆ ದೋಚುವಿಕೆ ಸಹಜ ಕ್ರಿಯೆಯಾಗಿತ್ತು. ರತ್ನಾಕರನೆನ್ನುವ ಬೇಡ ಹೆಂಡತಿ ಮಕ್ಕಳನ್ನು ಸುಖವಾಗಿರಿಸಲು ಹಿಂಸಾವೃತ್ತಿಯನ್ನೇ ಮೈಗೂಡಿಸಿಕೊಂಡು ಬದುಕಿದವ. ಲೌಕಿಕದ ಸುಖವನ್ನು ಹಂಚಿಕೊಳ್ಳಲು ಬಯಸುವ ಅವನ ಕುಟುಂಬದವರು ಅದರಿಂದ ಉಂಟಾಗಬಹುದಾದಂತಹ ಪಾಪಕ್ಕೆ ಹೊಣೆಗಾರರಾಗಲು ಸಿದ್ಧರಿಲ್ಲದಾಗ ಆಘಾತಗೊಂಡ! ಲೋಕದಲ್ಲಿ ನನ್ನವರು, ನನ್ನದು ಎಲ್ಲವನ್ನೂ ಮೀರಿ ಆದರ್ಶಕ್ಕಾಗಿ ಬದುಕಿದವರಿದ್ದಾರೆಯೇ ಎನ್ನುವ ಸಂಶಯ ಆತನಿಗೆ ಬಂತು. ಅದನ್ನು ಧ್ಯಾನಿಸುವ ಕ್ರಿಯೆಯೇ ತಪಸ್ಸು. ತಪಸ್ಸು ಎಂದರೆ ಮನಸ್ಸಿನಲ್ಲಿ ನಡೆಯುವ ಮಂಥನ, ಹುಡುಕಾಟ.

ಹುತ್ತಗಟ್ಟುವ ಕ್ರಿಯೆ

ಸಾತ್ವಿಕ ತೇಜಸ್ಸಿನ ಮುಂದೆ ತಾಮಸಿಕತೆ ನಿಲ್ಲಲಾರದು. ಬೇಡನಿಗೆ ತಾನು ತನ್ನದು ಎಂದುಕೊಂಡ ಸಂಸಾರವೆಲ್ಲವೂ ಭ್ರಮೆ, ಮಿಥ್ಯೆ ಎಂದು ತಿಳಿದಾಗ 'ನಾನು' ಎನ್ನುವುದೂ ಭ್ರಮೆ ಎನ್ನುವ ಅರಿವಾಯಿತು. ಹಾಗಾದರೆ ಈ ಮಿಥ್ಯವನ್ನು ಮೀರಿ ಲೋಕದಲ್ಲಿ ಆದರ್ಶವ್ಯಕ್ತಿ ಎನ್ನುವವ ಇದ್ದಿರಬಹುದೇ ಎನ್ನುವುದನ್ನು ತಿಳಿಯಲು, ತನ್ನ ಸುತ್ತಲೂ ಕಟ್ಟಿಕೊಳ್ಳುವ ಆವರಣವೇ ಹುತ್ತ. ರೇಷ್ಮೆ ಹುಳ ಪತಂಗವಾಗಬೇಕೆಂದು ತನ್ನ ಸುತ್ತಲೂ ತಾನೇ ಕಟ್ಟಿಕೊಳ್ಳುವ ಬಲೆಯ ಬಂಧನವೂ ಹುತ್ತಗಟ್ಟುವ ಕ್ರಿಯೆಯೇ. ನಾನು ಎನ್ನುವುದನ್ನು ಮೀರಿಯೂ ಎಲ್ಲರೊಡನೆ ಬಾಳಿದ ಮನುಷ್ಯನೋರ್ವ ಇದ್ದಾನೆಯೋ, ಇದ್ದರೆ ಹೇಗಿರಬಹುದೆನ್ನುವದನ್ನು ತಿಳಿಯಬೇಕೆಂದು ಎನ್ನುವುದಕ್ಕಿಂತಲೂ ತಾನು ಹಾಗೆ ಇರುವದಾದರೆ ಹೇಗಿರಬೇಕು ಎನ್ನುವುದನ್ನು ಅರಿಯುವ ಕ್ರಿಯೆಯೇ ತಪಸ್ಸು; ತನ್ನೊಳಗೇ ಲೀನವಾಗುವಿಕೆ, ಕರಗಿಹೋಗುವಿಕೆ. ಕಾವ್ಯ ಹುಟ್ಟುವ ಹೊತ್ತು ಇದು. ರಸಸಿದ್ಧಿ ಪಡೆಯಲು ಈ ಸ್ಥಿತಿ ಅಗತ್ಯ. ಮೊದಲು ಕವಿ ರಸಭಾವದಲ್ಲಿ ಲೀನವಾಗುತ್ತಾನೆ. ತುರೀಯಾವಸ್ಥೆಗೆ ತಲುಪುವಾಗ ಭಾವದ ಆವರಣದೊಳಗೆ ಸಿಕ್ಕಿಬೀಳುತ್ತಾನೆ. ಇದೇ ಹುತ್ತಗಟ್ಟುವ ಕ್ರಿಯೆ. 'ಬದುಕೆನ್ನುವುದು ಆದರ್ಶವನ್ನು ಹುಡುಕುವುದಕ್ಕಾಗಿಯಲ್ಲ; ಆದರ್ಶವೇ ಬದುಕಾಗಬೇಕೆಂದು' ಅನಿಸಿದ ಘಳಿಗೆಯದು.

ತಾನು ಎನ್ನುವ ಭಾವವನ್ನು ದಾಟಿ ಲೋಕಕ್ಕಾಗಿ ಬದುಕಿದವ ಜಗತ್ತಿನಲ್ಲಿ ಇರಬಹುದೇ ಎನ್ನುವ ಸಂಶಯದ ಹುತ್ತ ಕಾಡಿದಾಗ ಹುಡುಕಾಟ ಪ್ರಾರಂಭವಾಯಿತು. ಒಂದು ವೇಳೆ ಇಲ್ಲದೇ ಹೋದರೆ? ಎನ್ನುವ ಚಿಂತೆ ಕಾಡಿತು. ಮುನಿಪುಂಗವ ಆ ಕುರಿತೇ ತಪ್ಪಸ್ಸು ಮಾಡುತ್ತಿದ್ದ; ಈ ವಿಷಯದ ಕುರಿತು ಸ್ಪಷ್ಟ ನಿದರ್ಶನವನ್ನು ಬಯಸುತ್ತಿದ್ದ. ಅದರ ಫಲವೇ ವೇದೋಪನಿಷತ್ತುಗಳಲ್ಲಿ ಅವಿತಿರುವ ಅಮೂರ್ತ ಜ್ಞಾನಭಂಡಾರಗಳ ದರ್ಶನ. ದರ್ಶನ ಆದರ್ಶವಾಗಬೇಕಾದರೆ ಅದಕ್ಕೊಂದು ಮೂರ್ತರೂಪ ಬೇಕು. ಅದೆಲ್ಲಿ ಎಂದು ಮತ್ತೆ ಮತ್ತೆ ಹಂಬಲಿಸುತ್ತಾ ಎಚ್ಚರವಾಗಿಯೂ ಎಚ್ಚರಗೊಳ್ಳದ ಸ್ಥಿತಿಯಲ್ಲಿ ಇದ್ದ. ಅಕ್ಷರವೆನ್ನುವುದು ಅವಿನಾಶಿ. ಅದು ಒಂದೂ ಅಲ್ಲದ ಬಹುತ್ವವೂ ಅಲ್ಲದ ವ್ಯಾಪಕತ್ವ. ಅದಕ್ಕೆ ಮತ್ತೊಂದು ಅಕ್ಷರ ಸೇರಿದಾಗ ಅದಕ್ಕೊಂದು ಮೂರ್ತರೂಪ ಬರುತ್ತದೆ. ಅದುವೇ ರಾಮ ಎನ್ನುವುದನ್ನು ಸಪ್ತರ್ಷಿಗಳೇ ಹೇಳಿದಾಗ ಮನಸ್ಸಿನೊಳಗೆ ಪಡಿಮೂಡಿತು ಒಂದು ಆಕೃತಿ. ಅದುವೇ ಸಪ್ತರ್ಷಿಗಳು ಹೇಳಿದ ಎರಡಕ್ಷರ 'ರಾಮ.'

ಸಪ್ತರ್ಷಿಗಳೇನೋ ಮಹಾಮಹಿಮನ ವಿಷಯಗಳನ್ನು ವಿವರಿಸಿ 'ರಾಮ' ಎನ್ನುವ ಹೆಸರನ್ನು ಹೇಳಿದ್ದಾರೆ. ಲೋಕದಲ್ಲಿ ಸಂಭಾವಿತನಾಗಿ ಬದುಕುವದೆನ್ನುವದು ಒಂದು ಆದರ್ಶ ಸ್ಥಿತಿ. ಆದರ್ಶವೆನ್ನುವುದು ವಾಸ್ತವವೂ ಆಗಬಹುದೇ ಎನ್ನುವ ಚಿಂತೆ ನಿರಂತರವಾಗಿ ಕಾಡುತ್ತಿರುವಾಗಲೇ, ಇದಕ್ಕೆ ಉತ್ತರಿಸಬಲ್ಲವರು ಅಧ್ಯಯನ ಅಧ್ಯಾಪನಗಳಲ್ಲಿ ನಿರತರಾದ ತಪಸ್ವಿಗಳಾಗಿರಬೇಕು; ಏಕಾಗ್ರತೆಯನ್ನು ವಾಲ್ಮೀಕಿಗಿಂತಲೂ ಚೆನ್ನಾಗಿ ಸಾಧಿಸಿದವರಾಗಿರಬೇಕು. ಮಾತು ಬಲ್ಲವರಲ್ಲಿ ಶ್ರೇಷ್ಠರಾಗಿರಬೇಕು. ಅಂಥವರು ಯಾರಿದ್ದಾರೆ ಎನ್ನುವ ಪ್ರಶ್ನೆ ನಿರಂತರವಾಗಿ ವಾಲ್ಮೀಕಿಯನ್ನು ಕಾಡುತ್ತಿತ್ತು.

ನಾರದ ನೀಡಿದ ಸೂಚನೆ

ಹೀಗಿರುವಾಗ ಅವರಲ್ಲಿಗೆ ನಾರದ ಬರುತ್ತಾನೆ. ಮಹರ್ಷಿಯ ಪ್ರಶ್ನೆಗೆ ಉತ್ತರಿಸಲು ಇವರಿಗಿಂತಲೂ ಬೇರೆ ಯಾರು ಸಮರ್ಥರಿಲ್ಲ ಎಂದುಕೊಳ್ಳುತ್ತಾನೆ. (ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್). ನೇರವಾಗಿ ಅವರಲ್ಲಿಯೇ ತನ್ನನ್ನು ಕಾಡುತ್ತಿರುವ ಚಿಂತೆಯನ್ನು ಹೇಳುತ್ತಾ 'ಲೋಕದಲ್ಲಿ ಯಾವ ದೋಷವೂ ಇಲ್ಲದ ವ್ಯಕ್ತಿ ಎಂದರೆ ಆತನಲ್ಲಿ ಈ ಕೆಳಗಿನ ಹದಿನಾರು ಗುಣಗಳಿರಬೇಕು. (ಅವು ಕಲ್ಯಾಣವಂತ, ವೀರ್ಯವಂತ, ದರ್ಮಜ್ಞ, ಕೃತಜ್ಞ, ಸತ್ಯಭಾಷಿ, ದೃಢವ್ರತನಿಷ್ಠ, ಕುಲಾಚಾರಗಳನ್ನು ತಪ್ಪದೇ ನಡೆಸುಕೊಂಡು ಬರುವಾತ, ಭೂತದಯೆ, ಚತುರ್ದಶವಿದ್ಯೆಗಳಲ್ಲಿಯೂ ಪಾರಂಗತ, ಸರ್ವಕಾರ್ಯ ದುರಂಧರ, ಮೋಹಕ ರೂಪಿನವ, ಧೈರ್ಯವಂತ, ಕೋಪವನ್ನು ಗೆದ್ದವ, ಎಣೆಯಿಲ್ಲದ ಕಾಂತಿಯುಳ್ಳವ, ಅನಸೂಯ, ದೇವತೆಗಳಿಗೂ ಅಂಜದ ಪರಾಕ್ರಮಿ) 'ಇಂಥಹ ಮಾನವನು 'ಕೋನ್ವಸ್ಮಿನ್ ಸಾಂಪ್ರತಂ ಲೋಕೇ- ಈ ಕಾಲದಲ್ಲಿ' ಇದ್ದಾನೆಯೇ; ಇದ್ದರೆ ಆತನ ಕುರಿತು ವಿವರಿಸಿ' ಎಂದು ಕೇಳಿಕೊಳ್ಳುತ್ತಾರೆ. ಆಗ ನಾರದರು ಇಕ್ಷಾಕುವಂಶದಲ್ಲಿ ಜನಿಸಿದ 'ರಾಮ ರಾಮ' ಎಂದು ಜನಗಳು ಕರೆಯುವ ನರಪುಂಗವನಿದ್ದಾನೆ ಎಂದು ರಾಮನ ಚರಿತ್ರೆಯನ್ನು ವಿವರಿಸುತ್ತಾರೆ. ವಾಲ್ಮೀಕಿಯ ಮನದಲ್ಲಿ ರಾಮನೆನ್ನುವ ಮೂರ್ತಿ ಅಚ್ಚೊತ್ತುದೆ.

ಇಬ್ಬರೂ ಸಮಕಾಲೀನರು

ಗಮನಿಸ ಬೇಕಾದ ಸಂಗತಿ ಎಂದರೆ ವಾಲ್ಮೀಕಿ ಮತ್ತು ರಾಮ ಇಬ್ಬರೂ ಒಂದೇ ಕಾಲದಲ್ಲಿದ್ದವರು. ರಾಮ ರಾವಣನನ್ನು ಕೊಂದಿರುವ ಕಾರಣ ಆತನ ಕೀರ್ತಿ ಮೂರುಲೋಕದಲ್ಲಿಯೂ ಹಬ್ಬಿದೆ. ಬದುಕಿದ್ದಾಗಲೇ ಗಾಥೆಗಳಾಗುವುದು ರಾಮ, ಕೃಷ್ಣ, ಬುದ್ಧರಂತವರಿಗೆ ಸಾಧ್ಯ. ರಾವಣ ವಿಜಯ ಜನಪದರಲ್ಲಿ ಲಾವಣಿಯಾಗಿ ಮೂರುಲೋಕದಲ್ಲಿಯೂ (ಸರ್ವತ್ರವೂ ಎಂದರ್ಥ) ಹಾಡಲ್ಪಡುತ್ತಿತ್ತು. ಬ್ರಹ್ಮ ಪ್ರತ್ಯಕ್ಷನಾಗಿ 'ರಾಮಾಯಣವನ್ನು ರಚಿಸು' ಎಂದು ಹೇಳಿದ ಅಂದರೆ, 'ಲಾವಣಿಯ ರೂಪದಲ್ಲಿ ಜನಪದರು ಹಾಡುವ ಕಂಠಕ್ಕೆ ಅನುಷ್ಟುಪ್ ಛಂದಸ್ಸಿನ ಕಾವ್ಯವನ್ನು ಕೊಡು' ಎನ್ನುವ ಆದೇಶ.

ವಾಲ್ಮೀಕಿಗೆ ಪ್ರಾಚೇತಸ ಎನ್ನುವ ಹೆಸರೂ ಇದೆ. ವರುಣನ ಹೆಸರು ಪ್ರಚೇತಸ, ವರುಣ ಮಳೆಸುರಿಸಿ ಹುತ್ತದಿಂದ ಎಬ್ಬಿಸಿದವನಾದದ್ದರಿಂದ ಇವ ಪ್ರಾಚೇತಸ. ಭೂಮಿಗೆ ಮಳೆಸುರಿದರೆ ಅಲ್ಲೆಲ್ಲೋ ಅವಿತಿದ್ದ ಬೀಜಕ್ಕೆ ಜೀವ ಬಂದು ಚಿಗಿಯುತ್ತದೆ. ರಾಮಾಯಣ ಚಿಗಿತಿದ್ದು ಭಿತ್ತಿಗಟ್ಟಿದ ಹುತ್ತದಿಂದ. ನಾಯಕಿ ಭೂಮಿಪುತ್ರಿ.

» ಮೂರನೇ ಪುಟಕ್ಕೆ

ನಾರದ ಮತ್ತು ಬ್ರಹ್ಮ ಇಬ್ಬರೂ 'ರಾಮನಲ್ಲಿರುವ ಕಲ್ಯಾಣ ಗುಣ, ಸೀತೆಯ ಸಚ್ಚರಿತ್ರರೂಪ, ಪೌಲಸ್ತ್ಯ (ರಾವಣ) ವಧೆ', ಇವುಗಳನ್ನು ವಿವರಿಸುವ ಮಹಾಕಾವ್ಯವನ್ನು ರಚಿಸು ಎಂದು ವಾಲ್ಮೀಕಿಗೆ ಸೂಚಿಸುತ್ತಾರೆ. ನಂತರ ವಾಲ್ಮೀಕಿಯು ರಾಮಾಯಣ ರಚಿಸಿದ. ತನ್ನ ಕಾವ್ಯದ ಕುರಿತು ಆತ ಹೇಳಿಕೊಳ್ಳುವದು ಹೀಗೆ. 'ಈ ಕಾವ್ಯದಲ್ಲಿ ಅಧ್ಯಯನ ಮಾಧುರ್ಯವೂ ಇದೆ, ಗಾನ ಮಾಧುರ್ಯವೂ ಇದೆ. ದ್ರುತ- ಮಧ್ಯಮ- ವಿಲಂಬಿತಗಳಲ್ಲಿ ಸುಲಲಿತವಾಗಿ ಹಾಡಬಹುದು, ಹಾಗೇ ಇದರಲ್ಲಿ ಗಾನ-ಧ್ವನಿ-ಪರಿಚ್ಛೇದಗಳಿಗೆ ಅನುಕೂಲವಾಗಿದೆ. ನವರಸಗಳುಳ್ಳ ಇದನ್ನು ಸಪ್ತಸ್ವರಗಳಲ್ಲಿ ವೀಣಾ ವಾದ್ಯದೊಡನೆಯೂ, ತಾಳ-ಮೃದಂಗಾದಿಗಳ ಮೇಳಗಳಲ್ಲಿ ಹಾಡಬಹುದು'. ರಾಮನವಮಿಯ ಸಪ್ತಾಹದಲ್ಲಿ ರಾಮಾಯಣದ ಕಥೆಯನ್ನು ಕೇಳಬೇಕು ಎಂಬ ಪರಂಪರಾಗತ ನಂಬಿಕೆ ಇದೆ.

ಹೃದಯದ ಕಣ್ಣು ತೆರೆದಾಗ!

ಎಲ್ಲಿ ಹೃದಯದ ಕಣ್ಣು ತೆರೆಯುತ್ತದೆಯೋ ಅಲ್ಲಿಕಾವ್ಯದ ರಸಸೃಷ್ಟಿಯಾಗುತ್ತದೆ. ಲೋಕದಲ್ಲಿ ಸಾಮಾನ್ಯವಾಗಿ ಕಂಡ ಸಂಗತಿಗಳು ಕವಿಗೆ ವಿಶೇಷ ರೂಪವಾಗಿ ಗೋಚರವಾಗುವುದು. 'ತನ್ನೊಳಗೆ ತುಂಬಿರುವ ರಸಕ್ಕೆ ಅನುಗುಣವಾದ ಶಬ್ದಾರ್ಥಗಳನ್ನು ಕುರಿತು ಚಿಂತನೆಯಲ್ಲಿ ಕವಿಯ ಚೇತಸ್ಸು ನಿಶ್ಚಲವಾಗಿರುವಾಗ, ವಸ್ತುವಿನ ನಿಜಸ್ವರೂಪವನ್ನು ಮುಟ್ಟಿದ ಪ್ರಜ್ಞೆ ಅವನಲ್ಲಿ ಥಟ್ಟನೆ ಹೊಮ್ಮುತ್ತದೆ. ಇದೇ ಕವಿಯ ಪ್ರತಿಭೆ, ಪರಮೇಶ್ವರನ ಮೂರನೆಯ ಕಣ್ಣೆಂದೇ ಕೀರ್ತಿಸುತ್ತಾರೆ. ಇದರ ಮೂಲಕ ತ್ರಿಕಾಲದಲ್ಲಿ ನಡೆಯುವ ಸಂಗತಿಗಳನ್ನು ಸಾಕ್ಷಾತ್ತಾಗಿ ಕಾಣಬಲ್ಲನು(ತೀ. ನ. ಶ್ರೀ. ಅವರ ಭಾ. ಕಾ. ಮೀ-10)'. ವಾಲ್ಮೀಕಿ ಕುಳಿತಲ್ಲಿಯೇ ರಾಮಾಯಣದ ಎಲ್ಲಾ ವಿವರಗಳನ್ನು ಕಾಣುವದು ಈ ವಿಶೇಷ ದೃಷ್ಟಿಯಿಂದಲೇ. ಅದನ್ನೇ ಬ್ರಹ್ಮ ಆತನಿಗೆ ಕೊಟ್ಟ ವರವೆಂದು ಅಲಂಕಾರಿಕವಾಗಿ ಹೇಳಲಾಗಿದೆ.

» ಡಾ.ಜ್ಯೋತಿ ಎಸ್, ತುಮಕೂರು

ಮಹಿಳೆಯರ ಪರ ಅನನ್ಯ ಕಾಳಜಿ

ಮಾನವೀಯ ಅಂತಃಕರಣದಿಂದ ಬರೆದ ಇಲ್ಲಿನ ಬರಹಗಳಲ್ಲಿ, ವರ್ತಮಾನದ ಕಾಲದ ಮಹಿಳೆಯೊಬ್ಬಳು ಹೇಗೆ ಚಿಂತಿಸಬಹುದು, ಜೀವನದ ಏಳು-ಬೀಳುಗಳಿಗೆ ಸ್ಪಂದಿಸಬಹುದು ಮತ್ತು ದಿಟ್ಟತನದಿಂದ ಬದುಕನ್ನು ಪರಿಪೂರ್ಣತೆಯತ್ತ ಕೊಂಡೊಯ್ಯಬಹುದು ಎನ್ನುವ ಅಂಶಗಳನ್ನು ಗುರುತಿಸಬಹುದು.

ಸಮಕಾಲೀನ ಪ್ರಪಂಚದ ಆಗುಹೋಗುಗಳನ್ನು ತಮ್ಮ ಲೇಖನಗಳಲ್ಲಿ, ಸೂಕ್ಷ್ಮವಾಗಿ ಮತ್ತು ಮಾನವೀಯತೆಯ ಸ್ಪರ್ಶದಿಂದ ವಿಶ್ಲೇಷಿಸುವ, ಸ್ತ್ರೀಸಂವೇದನೆಯ ಅಂಕಣಕಾರರಾದ ಅಂಜಲಿ ರಾಮಣ್ಣ ಅವರ 'ಗುಲಾಬಿ ಮತ್ತು ಗ್ಯಾಂಗ್' ಪುಸ್ತಕದ ವಿಶೇಷತೆ ಏನೆಂದರೆ, ಮನುಷ್ಯ ಜೀವನದ ವಿವಿಧ ಘಟ್ಟಗಳ ವಿಶ್ಲೇಷಣೆಯನ್ನು ವಿಭಿನ್ನ ಆಯಾಮಗಳಲ್ಲಿ ಚಿತ್ರಿಸಿದ ಪರಿ. ವೃತ್ತಿಯಲ್ಲಿ, ಮಹಿಳೆ ಮತ್ತು ಮಕ್ಕಳ ವಕೀಲೆಯಾದ ಅವರ ಕಾನೂನು ಪರಿಣಿತಿಯನ್ನು ಸಹಜವಾಗಿ ಗುರುತಿಸಬಹುದು. ಜೊತೆಗೆ, ಅವರು ನಿರಂತರವಾಗಿ ಕೈಗೊಳ್ಳುವ ದೇಶ-ವಿದೇಶಗಳ ಪ್ರವಾಸಾನುಭವಗಳ ಸಮೃದ್ಧ ಚಿತ್ರಣ, ತನ್ನ ವೃತ್ತಿ ಮತ್ತು ವೈಯಕ್ತಿಕ ಬದುಕಿನಲ್ಲಿ ಮುಖಾಮುಖಿಯಾದ ವೈವಿಧ್ಯಮಯ ಹಿನ್ನೆಲೆಯ ಜನರ, ವಿಶೇಷವಾಗಿ ಮಹಿಳೆಯರ ಕುರಿತಂತೆ ವಸ್ತುನಿಷ್ಠ, ಅಷ್ಟೇ ಅಂತಃಕರಣದಿಂದ ಕೂಡಿದ ವ್ಯಕ್ತಿ ಚಿತ್ರಣಗಳಿವೆ.

ಇಲ್ಲಿರುವ ಲೇಖನಗಳನ್ನು ಒಬ್ಬ ಮಹಿಳೆಯಾಗಿ ಓದುವಾಗ, ಅಂಜಲಿ ಅವರ ಮಹಿಳಾಪರ ಅನನ್ಯ ಕಾಳಜಿ ಓದಿನ ಆಪ್ತತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅವರು ಓದುಗರಲ್ಲಿ ತನ್ನ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾ, ಸಂವಾದದ ಧಾಟಿಯಲ್ಲಿ ಪ್ರಶ್ನೆಗಳನ್ನು ಹಾಕುತ್ತಾ, ಯೋಚನೆಗೆ ಹಚ್ಚಿಸುತ್ತಾ, ಓದುಗರನ್ನು ತಮ್ಮ ಚಿಂತನಾಲಹರಿ ಎಂಬ ಪಯಣದ ಜೊತೆಗಾರರನ್ನಾಗಿಸುತ್ತಾರೆ. ಈ ಪುಸ್ತಕದಲ್ಲಿ ಚರ್ಚೆಗೆ ಆರಿಸಿಕೊಂಡಿರುವ ಬಹುತೇಕ ವಿಷಯಗಳು ಗಂಭೀರಸ್ವರೂಪದ್ದಾದರೂ, ಬರವಣಿಗೆಯಲ್ಲಿ ಒಂದು ಹದವಾದ ಪಾಕವನ್ನು ಗುರುತಿಸಬಹುದು.

ಮೊದಲ ಲೇಖನವು, ಹೆಸರಾಂತ 'ಗುಲಾಬಿ ಗ್ಯಾಂಗ್' ಸಂಸ್ಥಾಪಕಿ ಸಂಪತ್ ಪಾಲ್ ಅವರನ್ನು ಸಂದರ್ಶನದ ರೂಪದಲ್ಲಿ ವಸ್ತುನಿಷ್ಠ ವಿಮರ್ಶೆಯೊಂದಿಗೆ ಪರಿಚಯಿಸುತ್ತದೆ. ಇಲ್ಲಿ, 'ಹಿಂಸೆ ಮನುಷ್ಯನನ್ನು ಹೇಗೆ ಒರಟು ಮಾಡಿಬಿಡುತ್ತದೆ' ಎನ್ನುವ ಮಾತು, ವ್ಯಕ್ತಿತ್ವ ರೂಪಿಸುವಲ್ಲಿ ಸುತ್ತಲಿನ ಸಮಾಜದ ಪಾತ್ರಕ್ಕೆ ಕನ್ನಡಿ ಹಿಡಿದಂತಿದೆ. ಈ ಲೇಖನವು, ಒಂದು ರೀತಿಯಲ್ಲಿ ಪುಸ್ತಕಕ್ಕೆ ಉತ್ತಮ ಪೀಠಿಕೆಯಾಗಿ ಕೆಲಸಮಾಡಿ, ಓದುಗರು ಈ ಪುಸ್ತಕದಲ್ಲಿ ಇಂತಹದ್ದೇ ವಿಭಿನ್ನ, ಹೆಚ್ಚು ಚರ್ಚಿತವಾಗದ ವಿಷಯಗಳ, ವ್ಯಕ್ತಿತ್ವಗಳ ಮಾಹಿತಿ, ವಿಶ್ಲೇಷಣೆ, ಮತ್ತು ಅನುಸಂಧಾನವನ್ನು ನಿರೀಕ್ಷಿಸಬಹುದೆನ್ನುವ ಸುಳಿವು ನೀಡುತ್ತದೆ. ಒಟ್ಟಿನಲ್ಲಿ, ಈ ಎಲ್ಲಾ ಲೇಖನಗಳು ಸುತ್ತಲಿನ ಸಮಾಜದಲ್ಲಿ ಆಗಿರುವ, ಆಗುತ್ತಿರುವ ಮತ್ತು ಆಗುವ ಸಾಧ್ಯತೆಯಿರುವ, ಒಳ್ಳೆಯ ಮತ್ತು ಕೆಟ್ಟ ಬದಲಾವಣೆಗಳು, ಇವುಗಳ ನಡುವೆ ಮನುಷ್ಯನ ಬದುಕನ್ನು ಸುಂದರವಾಗಿಸುವ ಅಂಶಗಳನ್ನು ಮುಕ್ತವಾಗಿ ಚರ್ಚಿಸುತ್ತವೆ.

ಇಲ್ಲಿರುವ ಕೆಲವು ಲೇಖನಗಳನ್ನು ವಿಶೇಷವಾಗಿ ಗುರುತಿಸಿ ಸ್ಪಂದಿಸುವುದಾದರೆ- 'ಸಂಬಂಧಗಳು ಅಹಂ ತಣಿಸುವ ಕಾರ್ಖಾನೆಗಳಲ್ಲ', ಮನುಷ್ಯ ಸಂಬಂಧಗಳ ನಡುವೆ ಪರಸ್ಪರ ಸಂಶಯ, ಅಪನಂಬಿಕೆ ಹೇಗೆ ವೃದ್ಧಿಯಾಗುತ್ತಾ ನಾವು ದ್ವೀಪಗಳಂತಾಗಿದ್ದೇವೆ ಎನ್ನುವುದನ್ನು ತಿಳಿಸುತ್ತದೆ; 'ಅಮ್ಮ, ಅಮ್ಮ, ಅಕ್ಕ, ತಂಗಿ' ಸಂಸಾರದಲ್ಲಿ ಬೆಂದು ಬೆಂಡಾಗಿರುವ ಹೆಣ್ಣು ಮಕ್ಕಳ ಸ್ವಗತಗಳು, ನಿಟ್ಟುಸಿರುಗಳು, ಪ್ರಶ್ನೆಗಳು ಮನಸ್ಸಿನಲ್ಲಿಯೇ ಮೂಡಿ ಆವಿಯಾಗುವ ಅಥವಾ ಗಡ್ಡೆಗಳಾಗಿಯೇ ಉಳಿದುಬಿಡುವ ಸುಪ್ತ ಕಥನಗಳು; 'ಒಲಿಯುವ ಪರಿ', ಗಂಡು-ಹೆಣ್ಣಿನ ಸಂಬಂಧವು, ಮುಕ್ತವಾಗಿ ತೆರೆದ ಮನಸ್ಸು, ಮತ್ತು ಹೃದಯದಿಂದ ಕೂಡಿರಬೇಕೆಂದು ಹೇಳುತ್ತದೆ, ಒಲಿದ ಮನಸ್ಸಿನ ಹೆಣ್ಣು ದೇಹವನ್ನೊಮ್ಮೆ ಅನುಭವಿಸಿ ನೋಡು, ಎನ್ನುವುದು ಬಹಳ ಅರ್ಥಪೂರ್ಣ ಮಾತು. ಇಲ್ಲಿ ಚರ್ಚಿಸಿರುವ ಬಹುತೇಕ ವಿಷಯಗಳು, ಸಮಾನತೆಯ ಜಗತ್ತನ್ನು ಸೃಷ್ಟಿಸಲು ಬೇಕಾದ ಅಂಶಗಳೇ. ಈ ಲೇಖನಗಳ ಗುಚ್ಛದಲ್ಲಿ ಜಗತ್ತಿನ ಹೊಸ, ಹಳೆಯ ಮತ್ತು ಭವಿಷ್ಯದಲ್ಲಿ ಕಾಣ ಸಿಗಬಹುದಾದ ಬಹುತೇಕ ವಿದ್ಯಮಾನಗಳು ವಿಮರ್ಶೆಗೆ ಒಳಗಾಗುತ್ತದೆ, ಓದುಗರಲ್ಲಿ ಹೊಸ ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮಾನವೀಯ ಅಂತಃಕರಣದಿಂದ ಬರೆದ ಇವುಗಳಲ್ಲಿ, ವರ್ತಮಾನದ ಕಾಲದ ಪ್ರಬುದ್ಧ ಮಹಿಳೆಯೊಬ್ಬಳು ಹೇಗೆ ಚಿಂತಿಸಬಹುದು, ಜೀವನದ ಏಳು-ಬೀಳುಗಳಿಗೆ ಸ್ಪಂದಿಸಬಹುದು ಮತ್ತು ದಿಟ್ಟತನದಿಂದ ಬದುಕನ್ನು ಪರಿಪೂರ್ಣತೆಯತ್ತ ಕೊಂಡೊಯ್ಯಬಹುದು, ಎನ್ನುವ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.



ಗುಲಾಬಿ ಮತ್ತು ಗ್ಯಾಂಗ್
ಲೇ: ಅಂಜಲಿ ರಾಮಣ್ಣ
ಪ್ರ: ಮಹಿಮಾ ಪ್ರಕಾಶನ, ಮೈಸೂರು
ಬೆಲೆ : ರು.300/-

» ಡಾ. ಉಷಾ ಎಂ.

ಮಲೆನಾಡಿನ ಮಹಿಳಾ ಜಗತ್ತು

ಚಂದ್ರಮತಿ ಸೋಂದಾ ಅವರ ಚೊಚ್ಚಲ ಕಾದಂಬರಿ 'ದುಪಡಿ'. ದುಪಡಿ ಎಂದರೆ 'ಕೌದಿ' ಸಮಾನ. ಈ ಕೌದಿ ಭಾರತೀಯ ಪರಿಸರದಲ್ಲಿ ಏಕಕಾಲಕ್ಕೆ ಬಡತನವನ್ನು (ಹಳೆಯ ಬಟ್ಟೆಗಳನ್ನು ಹಚ್ಚಿ ಮಾಡುವ), ಹೆಣ್ಣುಮಕ್ಕಳ ಸೃಜನಶೀಲತೆಯನ್ನು, ಸಮಾಜದ ಸಾಮರಸ್ಯವನ್ನೂ ಸೂಚಿಸುವ ವಿಶಿಷ್ಟ ವಸ್ತು. ಸೂಕ್ಷ್ಮವಾಗಿ ನೋಡಿದರೆ ಕಾದಂಬರಿಯೂ ಈ ಎಲ್ಲವನ್ನೂ ಒಳಗೊಂಡಿದೆ.

'ದುಪಡಿ' ಚಂದ್ರಮತಿ ಸೋಂದಾ ಅವರ ಬಾಲ್ಯದ ನೆನಪುಗಳ ಬಣ್ಣಗಳಲ್ಲಿ ಅದ್ದಿ ತೆಗೆದ ಬರಹ. ಅವರೇ ಹೇಳುವಂತೆ, ಇದು ಅವರು ನೋಡಿದ, ಕೇಳಿದ, ಕಂಡ ಸಂಗತಿಗಳೊಂದಿಗೆ ಹಲವು ಕಲ್ಪನೆಗಳು ಸೇರಿ ರೂಪುಗೊಂಡಿರುವ ಕೃತಿ. ಸೊರಬ, ಬನವಾಸಿ ಪರಿಸರದ ರೈತಾಪಿ ಸಮುದಾಯದ ಹೆಣ್ಣುಮಕ್ಕಳ ಬಾಳಭಂಗವನ್ನು ಅವರದೇ ಭಾಷೆಯಲ್ಲಿ ಕಟ್ಟಿ ಕೊಡುವ ಪ್ರಯತ್ನದಿಂದಾಗಿ ಈ ಕಾದಂಬರಿಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟ ಸ್ಥಾನವಿದೆ. 'ಬೆಳ್ಳಂಬೆಳಗ್ಗೆ ಶುರುವಾದ ಮಳೆ ಒಂದೇಸಮನೆ ಹೊಯ್ತಾನೆ ಇತ್ತು. ದೊಡ್ಡಮಳೆ ಆದ್ರೂಕ್ಲೆ ಶಣ್ಮಳೆ, ಶಣ್ಮಳೆ ಆದ್ರೂಕ್ಲೆ ದೊಡ್ಡಮಳೆ ಅಂತ. ಆಕಾಶಕ್ಕೆ ತೂತು ಬಿದ್ದೋಯ್ದನ ಅನ್ನ ಹಂಗೆ' ಎನ್ನುವ ಕಾದಂಬರಿಯ ಆರಂಭಿಕ ಮಾತುಗಳೇ ಓದುಗರಿಗೆ ವಿಶಿಷ್ಟ ಭಾಷಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಪ್ರವೇಶಿಸುವ ಅನುಭವ ನೀಡುತ್ತದೆ. ಕನ್ನಡ ನುಡಿಯು ತನ್ನ ಒಳನುಡಿಗಳೊಂದಿಗೆ ಇಟ್ಟುಕೊಂಡಿರುವ ಅವಿನಾಸಂಬಂಧವನ್ನು ಲೇಖಕಿ ಕಾದಂಬರಿಯ ಉದ್ದಕ್ಕೂ ಸಾಕ್ಷೀಕರಿಸುತ್ತಾ ಸಾಗುತ್ತಾರೆ.

ಕಾದಂಬರಿ ನಾಯಕಿ ಅಚ್ಚಮ್ಮನ ನೆನಪುಗಳ ಮೆರವಣಿಗೆಯೊಂದಿಗೆ ಆರಂಭಗೊಳ್ಳುತ್ತದೆ. ಈ ಮೆರವಣಿಗೆಯ ಜೊತೆಗೇ ಲೇಖಕಿ ಅಚ್ಚಮ್ಮ ಮತ್ತವಳ ಮಗಳು ಕಲಾವತಿ ಮತ್ತವಳ ಮಗಳು ಆಶಾಳ ನಡುವಿನ ಸಂಭಾಷಣೆಯ ಮೂಲಕ ತಾನು ನಿರೂಪಿಸಬಯಸುತ್ತಿರುವ ಕಾಲದ ಮತ್ತು ತಲೆಮಾರಿನ ಪಲ್ಲಟಗಳ ಅಂದಾಜನ್ನು ನೀಡುತ್ತಾರೆ. ದುಡಿಮೆ, ದುಡಿಮೆ ಮತ್ತು ದುಡಿಮೆ ಈ ಮೂರನ್ನು ಬಿಟ್ಟರೆ ಭಾರತದ ಗ್ರಾಮೀಣ ರೈತಾಪಿ ಹೆಣ್ಣಿನ ಬದುಕೇ ಇಲ್ಲ. ಅಂತಹ ಹೆಣ್ಣಿನ ಪ್ರತಿರೂಪವೇ ಅಚ್ಚಮ್ಮ. ತನ್ನ ಎಂಟನೆ ವಯಸ್ಸಿನಿಂದ ಹಿಡಿದು ಸುಮಾರು ಎಂಬತ್ತರ ವಯಸ್ಸಿನವರೆಗೆ ಸಾಗುವ ಅಚ್ಚಮ್ಮ ಬದುಕಿನುದ್ದಕ್ಕೂ ಕ್ರಿಯಾಶೀಲಳು. ಹೊಟ್ಟೆ ತುಂಬಿರಲಿ, ಹಸಿದಿರಲಿ, ಮುಖದಲ್ಲಿ ನಗುವಿರಲಿ, ನಗು ಮಾಸಿರಲಿ ಎಲ್ಲವನ್ನೂ ಸ್ವೀಕರಿಸುತ್ತ ಮುನ್ನುಗ್ಗುವ ಸಮಚಿತ್ತೆ ಅವಳು. ತನ್ನ ಇಳಿವಯಸ್ಸಿನಲ್ಲಿಯೂ ಕಂಡುಕಾಣದ ಊರುಗಳಲ್ಲಿ, ವಿದೇಶಗಳಲ್ಲಿ ಬದುಕುತ್ತಿರುವ ಮಕ್ಕಳ-ಸೊಸೆಯರ ಬದುಕು-ಬಾಣಂತನಕ್ಕೂ ತನ್ನಿಂದಾದ್ದನ್ನು ಮಾಡುತ್ತೇನೆ ಎನ್ನುವ 'ಮಗು ಮುಗ್ಧ' ಮುದುಕಿ ಅದು. ಅಂತಹ ಸಾರ್ಥಕ ಬದುಕಿನ ಅಚ್ಚಮ್ಮನ ಕಥಾನಕದೊಳಗೆ ಬಂದು ಹೋಗುವ ಹತ್ತಾರು ಪಾತ್ರಗಳು ಕಾದಂಬರಿಯ ಬಂಧವನ್ನು ಸಶಕ್ತವಾಗಿಸಿವೆ.

ಇದು ಮುಖ್ಯವಾಗಿ ಗ್ರಾಮೀಣ ಪರಿಸರದ ಕೌಟುಂಬಿಕ ಕಾದಂಬರಿಯಾದರೂ ಲೇಖಕಿ ಕಾದಂಬರಿಯ ಕುಗ್ರಾಮವನ್ನು, ಅದರಲ್ಲಿನ ಸಾಧಾರಣ ಕುಟುಂಬಗಳನ್ನು, ಕುಟುಂಬದಲ್ಲಿನ ಸಾಮಾನ್ಯ ಪಾತ್ರಗಳನ್ನು ವಿಸ್ತೃತ ಸಮಾಜದೊಂದಿಗೆ ಜೋಡಿಸುವುದನ್ನು ಮರೆತಿಲ್ಲ. ಸ್ವಾತಂತ್ರ್ಯ ಚಳುವಳಿಯಿಂದ ಹಿಡಿದು ಸಾವಿರದೊಂಬೈನೂರ ಎಂಬತ್ತು-ತೊಂಬತ್ತರ ದಶಕದ ಜಾಗತಿಕ ವಿದ್ಯಮಾನಗಳ ಪರಿಣಾಮವು ಸಾಧಾರಣ ಕುಟುಂಬವೊಂದರ ಮೇಲೆ ಪ್ರಭಾವ ಬೀರುವುದನ್ನು ಸೂಕ್ಷ್ಮವಾಗಿ ತೋರಿಸುವ ಪ್ರಯತ್ನ ಮಾಡಿದ್ದಾರೆ. ನಲವತ್ತು-ಐವತ್ತರ ದಶಕಗಳಲ್ಲಿ ಗ್ರಾಮೀಣ ಪರಿಸರದ ಮೇಲು ಸಮುದಾಯಗಳ ಜನರ ಮನೆಮನಗಳಲ್ಲಿ ಹೊತ್ತಿದ ಶಿಕ್ಷಣ ಮತ್ತು ಉದ್ಯೋಗದ ದೀಪಗಳು ಎಪ್ಪತ್ತು-ಎಂಬತ್ತರ ದಶಕದಲ್ಲಿ ಹೇಗೆ ಫಲ ನೀಡಿದವು ಎಂಬುದರ ಸಾಕ್ಷಿಯಾಗಿ ಅಚ್ಚಮ್ಮನ ವಿದೇಶ ಪ್ರವಾಸವಿದೆ. ಆದರೆ ಇದನ್ನು ಲೇಖಕಿ ಅನ್ವೇಷಿಸಲು ಹೋಗಿಲ್ಲ. ಬರಿದೆ ದಾಖಲಿಸಿದ್ದಾರೆ. ಕಾದಂಬರಿಯನ್ನು ಮುಗಿಸುವ ಲೇಖಕಿಯ ಆತುರ ಇಲ್ಲಿ ಎದ್ದು ಕಾಣುತ್ತದೆ. ಈ ಅವಸರವನ್ನು ಲೇಖಕಿ ಗೆದ್ದಿದ್ದರೆ ಕಾದಂಬರಿಗೆ ಇನ್ನಷ್ಟು ಆಳಅಗಲ ಲಭಿಸುತ್ತಿತ್ತು.



ದುಪಡಿ
ಲೇ: ಡಾ. ಚಂದ್ರಮತಿ ಸೋಂದಾ
ಪ್ರ: ಜ್ಯೋತಿ ಪ್ರಕಾಶನ, ಮೈಸೂರು
ಬೆಲೆ: ರು.320/-

ದೇಶಭಕ್ತಿ ಗೀತೆ ಹಾಡಿದರೂ ನಿಷೇಧ!

ನೆಹರೂ ಅವರ ಮರಣದ ನಂತರ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಿಯಾದರು. ಕ್ರಮೇಣ, ಕೇಂದ್ರ ಸರ್ಕಾರದೊಂದಿಗೆ ಸಾವರ್ಕರರ ಸಂಬಂಧ ಕಡಿಮೆಯಾಯಿತು. ಹಿಂದಿನ ಸರ್ಕಾರದ ಪುನರಾವರ್ತಿತ ನಿರಾಕರಣೆಗಳ ನಂತರ, ಶಾಸ್ತ್ರಿಯವರ ಸರ್ಕಾರವು ಹಿರಿಯ ಸ್ವಾತಂತ್ರ್ಯ ಹೋರಾಟಗಾರನಾಗಿ ರಾಷ್ಟ್ರಕ್ಕಾಗಿ ಸೇವೆ ಸಲ್ಲಿಸಿದ್ದಕ್ಕಾಗಿ ಮತ್ತು ಅವರ ದೇಶಭಕ್ತಿಯ ಕೃತಜ್ಞತಾದ್ಯೋತಕವಾಗಿ, ಅಕ್ಟೋಬರ್ 1964ರಿಂದ ಸಾವರ್ಕರ್ ಅವರಿಗೆ ಮಾಸಾಶನವನ್ನು ನೀಡಲು ನಿರ್ಧರಿಸಿತು. ಸದ್ದಿಲ್ಲದೇ ಅವರ ಹೆಸರಿನ ಮೇಲೆ ಹೇರಿದ್ದ ವ್ಯಾಪಕ ನಿಷೇಧವನ್ನು ನಿಧಾನವಾಗಿ ತೆಗೆದುಹಾಕಲಾಯಿತು. ಗಾಂಧಿಹತ್ಯೆಯ ಪ್ರಕರಣದ ನಂತರ, ಸಾವರ್ಕರರು ಎಲ್ಲೆಡೆ ಅನಪೇಕ್ಷಿತ ವ್ಯಕ್ತಿಯಾಗಿದ್ದರು. ಅವರೊಂದಿಗಿನ ವ್ಯವಹಾರ ಇಟ್ಟುಕೊಂಡರೆ ಜನರಿಗೆ ಬೇಡದ ಕಷ್ಟ ಅನುಭವಿಸಬೇಕಿತ್ತು.

ಉದಾಹರಣೆಗೆ, ಪ್ರಸಿದ್ಧ ಸಂಗೀತ ಸಂಯೋಜಕರಾದ ಹೃದಯನಾಥ್ ಮಂಗೇಶ್ಕರರು ಆಕಾಶವಾಣಿಯಲ್ಲಿ (ಎಐಆರ್) ಕೆಲಸ ಮಾಡುತ್ತಿದ್ದರು. ಅವರ ಇಡೀ ಕುಟುಂಬವು ಸಾವರ್ಕರರಿಗೆ ಅತ್ಯಂತ ನಿಕಟವಾಗಿತ್ತು. 1955ರಲ್ಲಿ ಹದಿನೈದು ವರ್ಷ ಪ್ರಾಯದ ಅತ್ಯಂತ ಪ್ರತಿಭಾಶಾಲಿ ಸಂಯೋಜಕರು ಸಾವರ್ಕರರ ಕವಿತೆಗಳನ್ನು ಸಂಗೀತಕ್ಕೆ ಅಳವಡಿಸಲು ಅನುಮತಿ ಕೋರಿ ಸಾವರ್ಕರರನ್ನು ಸಂಪರ್ಕಿಸಿದಾಗ, ಸಾವರ್ಕರರು 'ಇಷ್ಟು ದೊಡ್ಡ ದೂಷಣೆಯ ಕೆಲಸ ಮಾಡಿ ಜೈಲಿಗೆ ಹೋಗಲು ಬಯಸುತ್ತೀರಾ?' ಎಂದು ತಮಾಷೆ ಮಾಡಿದರು. ಮಂಗೇಶ್ಕರರು ಬಿಡದೆ ಒತ್ತಾಯಿಸಿದರು. ಸಾವರ್ಕರರು ತಾವು ತಮ್ಮ ಸ್ನೇಹಿತ ನಿರಂಜನ್ ಪಾಲ್ ಅವರೊಂದಿಗೆ 1909ರಲ್ಲಿ ಬ್ರೈಟನ್ ಕಡಲತೀರದಲ್ಲಿ ಬರೆದ ತಮ್ಮ 'ಸಾಗರಾ ಪ್ರಾಣ ತಳಮಳಲಾ' ಕವಿತೆಯನ್ನು ಬಳಸಲು ಅನುಮತಿ ನೀಡಿದರು. ಹೃದಯನಾಥ್ ಇದನ್ನು ಸಂಗೀತಕ್ಕೆ ಹೊಂದಿಸಿ ರೆಕಾರ್ಡ್ ಮಾಡಿದರು.

ಆದರೆ ಇದರಿಂದಾಗಿ ಎಐಆರ್ ಮೇಲಧಿಕಾರಿಗಳು ಕೋಪಗೊಂಡರು. ಹೃದಯನಾಥ್ ಅವರು ಸಾವರ್ಕರರ ರಚನೆಯನ್ನು ಏಕೆ ಆಯ್ಕೆ ಮಾಡಿದ್ದಾರೆ ಎಂಬ ವಿವರಣೆಯನ್ನು ಕೋರಿ ಮಂಗೇಶ್ಕರರಿಗೆ ಶೋಕಾಸ್ ನೋಟಿಸ್ ನೀಡಲಾಯಿತು. ಹೃದಯನಾಥ್ ಸರಳವಾದ ಉತ್ತರವನ್ನು ನೀಡಿದರು: 'ಅತ್ಯುತ್ತಮ ಕವಿತೆ, ಅತ್ಯುತ್ತಮ ಕವಿ'. ಅವರನ್ನು ತಕ್ಷಣವೇ ಕಾರಣವನ್ನೂ ನೀಡದೆ ಎಐಆರ್‌ನಿಂದ ವಜಾ ಮಾಡಲಾಯಿತು. ವಿಡಂಬನೆಯೆಂದರೆ, ಅಸ್ಪೃಶ್ಯತೆಯ ಪಿಡುಗನ್ನು ನಿರ್ಮೂಲ ಮಾಡಲು ತನ್ನ ಜೀವನದುದ್ದಕ್ಕೂ ಶ್ರಮಿಸಿದ ವ್ಯಕ್ತಿಯ ವಿರುದ್ಧ, ಅವರನ್ನೇ ಅಸ್ಪೃಶ್ಯರೆಂಬಂತೆ ದೂರವಿಟ್ಟ ರೀತಿ ಇದು. ಆದರೆ ಈಗ ಹವೆ ಬದಲಾಗುತ್ತಿದೆ. ಅವರ (ಸಾವರ್ಕರ್) ಮಹಾಕಾವ್ಯ, 'ಜಯೋಸ್ತುತೇ ಶ್ರೀ ಮಹನ್ಮಂಗಳೇ ಶಿವಾಸ್ಪದೇ ಶುಭದೇ ಅಥವಾ 'ಸ್ವಾತಂತ್ರ್ಯ ದೇವತೆಗೆ ನಮಸ್ಕಾರ'ವನ್ನು ರೇಡಿಯೊದಲ್ಲಿ ಪ್ರಸಾರ ಮಾಡಲು ಸೇರಿಸಲಾಯಿತು.

ಈ ಮಧ್ಯೆ ಸಾವರ್ಕರರ ಆರೋಗ್ಯ ತೀವ್ರವಾಗಿ ಕ್ಷೀಣಿಸುತ್ತಿತ್ತು. ಅವರು ಸ್ವಲ್ಪ ಸಮಯದವರೆಗೆ ಮೂಲವ್ಯಾಧಿಯಿಂದ ಬಳಲುತ್ತಿದ್ದರು. ಆಗಸ್ಟ್ 1965ರಿಂದ ಗುದನಾಳ ಹಿಗ್ಗಿ ಹೊಟ್ಟೆ ತೀವ್ರವಾಗಿ ಊದಿ, ಅವರ ಆರೋಗ್ಯ ಮತ್ತೂ ಹದಗೆಟ್ಟಿತು. ಅವರಿಗೆ ಎರಡು ವಾರಗಳ ಕಾಲ ದ್ರವ ಆಹಾರವನ್ನು ಸೂಚಿಸಲಾಯಿತು. ಅಸಹನೀಯ ನೋವನ್ನು ಅನುಭವಿಸಲಾರದೆ ಸಾವರ್ಕರರು ತಮಗೆ ಚಿಕಿತ್ಸೆ ಬೇಡ, ಸಾಯಲು ಬಿಡಿ ಎಂದು ತಮ್ಮ ವೈದ್ಯರಿಗೆ ಮನವಿ ಮಾಡುತ್ತಲೇ ಇದ್ದರು. ವೈದ್ಯರು ಅವರ ಮಾತನ್ನು ಕೇಳಲು ನಿರಾಕರಿಸಿದರು.

ಈ ಕ್ಲೇಶಗಳ ನಡುವೆ 1965ರಲ್ಲಿ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿ ಭಾರತವು ನಿರ್ಣಾಯಕವಾಗಿ ಗೆದ್ದ ಸಂತೋಷದ ಸುದ್ದಿ ಬಂದಿತು. ಸಾವರ್ಕರರು ತುಂಬಾ ಸಂತೋಷಪಟ್ಟು, ಪ್ರಧಾನಿ ಶಾಸ್ತ್ರಿ ಮತ್ತು ರಕ್ಷಣಾ ಸಚಿವ ಯಶವಂತರಾವ್ ಚವಾಣ್ ಅವರಿಗೆ ತಮ್ಮ ಅಭಿನಂದನಾ ಸಂದೇಶಗಳನ್ನು ಕಳುಹಿಸಿದರು. ಶಾಸ್ತ್ರಿಯವರು ಪಾಕಿಸ್ತಾನದೊಂದಿಗೆ ಶಾಂತಿ ಮಾತುಕತೆಗಾಗಿ ತಾಷ್ಕೆಂಟ್‌ಗೆ ತೆರಳುತ್ತಿದ್ದಾಗ, ಸಾವರ್ಕರರು ಪಾಕಿಸ್ತಾನದ ವಿಶ್ವಾಸಾರ್ಹತೆಯ ಬಗ್ಗೆ ತಮ್ಮ ಆತಂಕವನ್ನು ಸಾರ್ವಜನಿಕವಾಗಿ ಹಂಚಿಕೊಂಡರು. ಮತ್ತೊಮ್ಮೆ, ಅವರ ಭವಿಷ್ಯವಾಣಿ ನಿಜವಾಯಿತು. ಸ್ವಲ್ಪವೇ ಸಮಯದ ಹಿಂದೆ ಸಾಹಸದಿಂದ ರಾಷ್ಟ್ರವನ್ನು ಮಹಾವಿಜಯದತ್ತ ಮುನ್ನಡೆಸಿದ್ದ ಶಾಸ್ತ್ರಿಯವರು ತಾಷ್ಕೆಂಟ್‌ನಲ್ಲಿ 11 ಜನವರಿ 1966 ರಂದು ಅತಿ ನಿಗೂಢ ಅವಸ್ಥೆಯಲ್ಲಿ ನಿಧನರಾದರು.



ಸಾವರ್ಕರ್ ಭಾಗ 2
ಲೇ: ವಿಕ್ರಮ್ ಸಂಪತ್
ಅನು: ನರೇಂದ್ರ ಕುಮಾರ್ ಎಸ್.ಎಸ್., ಮಂಜುಳಾ ಟೇಕಲ್
ಪ್ರ: ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
ಬೆಲೆ ರು.995/-



ಪರಿಸರದ ಒಡನಾಟ
ಲೇ: ಶಶಿಧರ ಹಾಲಾಡಿ
ಪ್ರ: ಸಪ್ನ ಬುಕ್ ಹೌಸ್
ಬೆಲೆ ರು.250/-

» ದ್ವಾರನಕುಂಟೆ ಪಾತಣ್ಣ

ಅನುಭವದ ಮೂಸೆಯಲ್ಲಿ ಮೂಡಿದ ಪ್ರಬಂಧಗಳು

ಲೇಖಕರು, ತನ್ನ ಅನುಭವದ ಮೂಸೆಯಿಂದ ಸೃಜಿಸಿದ ಪ್ರಬಂಧಗಳ ಮೂಲಕ, ಜನರಲ್ಲಿ ಪರಿಸರ ಕಾಳಜಿ ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಮಲೆನಾಡಿನ ಪರಿಸರದ ಹಿನ್ನೆಲೆಯಲ್ಲಿ ಬಾಲ್ಯವನ್ನು ಕಳೆದಿರುವ ಶಶಿಧರ ಹಾಲಾಡಿಯವರು, ಅದನ್ನೇ ಇಲ್ಲಿ 'ಹಾಡಿ'ದ್ದಾರೆ! ಅದಕ್ಕೆ ಪೂರಕವಾಗಿ ಈಗಾಗಲೇ 'ಅಬ್ಬೆ' ಕಾದಂಬರಿ ಪ್ರಕಟಿಸಿ, ಪರಿಸರದ ಕುರಿತ ದಟ್ಟ ಅನುಭವ ನೀಡಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರ ಬರಹಗಳು ಇವರ ಮೇಲೆ ಪ್ರಭಾವ ಬೀರಿದೆ ಎಂದರೆ ತಪ್ಪಾಗಲಾರದು. ಕನ್ನಡದಲ್ಲಿ ಪ್ರಬಂಧ ಪ್ರಕಾರವು ಎ.ಎನ್.ಮೂರ್ತಿರಾವ್, ಪುತಿನ, ವಿಸೀ, ಗೊರೂರು, ಕುವೆಂಪು ಮೊದಲಾದ ಹಿರಿಯ ತಲೆಮಾರಿನ ಲೇಖಕರಿಂದ ಪೋಷಿಸಲ್ಪಟ್ಟು, ಈಚೆಗೆ ಶ್ರೀನಿವಾಸ ವೈದ್ಯ, ಚಂದ್ರಶೇಖರ ಆಲೂರ, ಈರಪ್ಪ ಕಂಬಳಿ ಮುಂತಾದವರಿಂದ ಬೆಳೆದಿದೆ ಕೂಡ. ಆದರೆ, ಬೇರೆ ಪ್ರಕಾರದ ಸಾಹಿತ್ಯಕ್ಕೆ ಹೋಲಿಸಿದರೆ, (ಕತೆ, ಕಾದಂಬರಿ, ಕಾವ್ಯ) ಪ್ರಬಂಧ ಅಷ್ಟಾಗಿ ಜನಪ್ರಿಯ ಪ್ರಕಾರವಾಗದೇ ಉಳಿದಿರುವುದು ಕಾಣುತ್ತದೆ.

ಪ್ರಬಂಧ ಬರೆಯುವುದೆಂದರೆ ಕೌದಿಯನ್ನು ಹೊಲಿದಂತೆ. ಮನೆಯ ಮೂಲೆಯಲ್ಲಿದ್ದ ಬಟ್ಟೆಗೆ ಬೇಕಾದ ಆಕಾರದ ಬಣ್ಣ ಬಣ್ಣದ ತುಣುಕುಗಳನ್ನು ಇಟ್ಟು ಹೊಲಿದಾಗ ಚಿತ್ತಾರದ ಕೌದಿ ಸಿದ್ಧವಾಗುತ್ತದೆ; ಹಾಗೆಯೇ, ಮನದ ಮೂಲೆಯಲ್ಲಿದ್ದ ಅನುಭವಗಳನ್ನು ಆಯ್ದು, ಅಲ್ಲಲ್ಲಿ ಅಳವಡಿಸಿ, ಕೌದಿ ರೂಪ ಕೊಟ್ಟು ಬರೆದಾಗ ಸುಂದರ ಪ್ರಬಂಧ ಹೊರಹೊಮ್ಮುತ್ತದೆ.

ಶಶಿಧರ ಹಾಲಾಡಿ ಅವರ 'ಪರಿಸರದ ಒಡನಾಟ' ಪ್ರಬಂಧ ಸಂಗ್ರಹವನ್ನು ಓದಿದಾಗ ಪರಿಸರಕ್ಕೆ ಸಂಬಂಧಿಸಿದ ಅನೇಕ ವೈವಿಧ್ಯಮಯ ಸಂಗತಿಗಳ ಸರಮಾಲೆಯೇ ಅನಾವರಣವಾಗುತ್ತದೆ. ಅವರ ಬರಹವನ್ನು ಎರಡು ರೀತಿಯಲ್ಲಿ ವಿಶ್ಲೇಷಿಸಬಹುದು. ಮೊದಲನೆಯದು ತನ್ನೂರಿನ ಬಾಲ್ಯದ ನೆನಪಿನ ಸುರುಳಿ ರಸವತ್ತಾಗಿ ಬಿಚ್ಚಿಕೊಳ್ಳುವ ರೀತಿಯದು; ಎರಡನೆಯದು ಪರಿಸರ ಕಾಳಜಿಯ ಲೇಖನ ರೂಪದಲ್ಲಿ ರೂಪುಗೊಂಡ ಬರಹಗಳು. ಈ ಸಂಕಲನದಲ್ಲಿ 42 ಲೇಖನಗಳಿವೆ. 'ಗೂಬೆ ನತ್ತಿಂಗಗಳ ಲೋಕದಲ್ಲಿ' ಪ್ರಬಂಧವು ಪರಿಸರದಲ್ಲಿ ನಡೆಯುವ ಕುತೂಹಲಕಾರಿ ವಿದ್ಯಮಾನಗಳು, ವಿವಿಧ ಗೂಬೆಗಳ ಸ್ವರ ವಿಶೇಷ ಮೊದಲಾದವು ವಿಶಿಷ್ಟವಾಗಿ ಮೂಡಿಬಂದಿವೆ. 'ಮಿಣುಕು ಹುಳುಗಳ' ಲೇಖನದಲ್ಲಿ, ಮಳೆಗಾಲದಲ್ಲಿ ಕಾಣಸಿಗುವ ಮಿಣುಕುಹುಳಗಳ ಅದ್ಭುತ ಲೋಕದ ಪರಿಚಯವಿದೆ. ಗಂಡು ಮಿಣುಕು ಹುಳ, ಹೆಣ್ಣು ಮಿಣುಕು ಹುಳಗಳ ಪರಸ್ಪರ ಬೆಳಕಿನ ಸಂಭಾಷಣೆಯು, ಅವುಗಳ ಸಂತಾನೋತ್ಪತ್ತಿಗೆ ಕಾಣವಾಗುತ್ತದೆ. 'ಮಿಡಿ ಉಪ್ಪಿನ ಕಾಯಿ', 'ಈ ಹಣ್ಣು ತಿಂದರೆ..' ಪ್ರಬಂಧಗಳು ಹಣ್ಣುಗಳ ಕುರಿತಾದದ್ದು. ಮಿಡಿ ಮಾವಿನ ಕಾಯಿ ಉಪಯೋಗದ ಬಗ್ಗೆ ಹೇಳುತ್ತಾ, ಇತ್ತೀಚಿನ ಅಭಿವೃದ್ಧಿಯ ನೆಪದ ಕಾಮಗಾರಿಯಿಂದ, ಅವು ವಿನಾಶದತ್ತ ಸಾಗಿರುವುದನ್ನು ವಿವರಿಸಿದ್ದಾರೆ. ಹಣ್ಣು ತಿಂದರೆ ನಾಲಗೆ ಬಣ್ಣವಾಗುವ ನೇರಳೆಯ ಕುರಿತು ಉಪಯುಕ್ತ ಮಾಹಿತಿ ಇನ್ನೊಂದು ಪ್ರಬಂಧದಲ್ಲಿದೆ.

'ಜಗತ್ತಿನ ಹೊಟ್ಟೆಯಲ್ಲಿ ನಮ್ಮ ದೇಶದ ಸಿಟ್ರಸ್' ಪ್ರಬಂಧವು ಲಿಂಬೆ, ಕಿತ್ತಳೆಗಳು ನಮ್ಮ ದೇಶದಿಂದ ಹೊರದೇಶಗಳಿಗೆ ಪಯಣಿಸಿದ ವಿವರಗಳಿವೆ. ಲಿಂಬೆ ಪ್ರಭೇದದ ಎಲ್ಲಾ ಹಣ್ಣುಗಳ ಮೂಲ ಭಾರತ ಎಂಬುದು ಈ ಬರಹದ ತಿರುಳು. 'ಗೊತ್ತಾ ನಿಮಗೆ ಮುಷ್ಠ?' ಪ್ರಬಂಧದಲ್ಲಿ, ಅಪರೂಪ ಎನಿಸುವ 'ಮುಷ್ಠ' ಪದ್ಧತಿ ಬಗ್ಗೆ, ಅಂದರೆ ಹಿಂದಿನವರು ನಾಟಿ ವೈದ್ಯ ಚಿಕಿತ್ಸೆಯ ಮಾದರಿಯಲ್ಲಿ ಮೊಣಕಾಲಿನ ನೋವಿಗೂ, ಹಲ್ಲು ನೋವಿಗೂ ಅನುಸರಿಸುತ್ತಿದ್ದ ವಿಚಿತ್ರ ಚಿಕಿತ್ಸಾ ಪದ್ಧತಿಯ ವಿವರಗಳು ಪ್ರಬಂಧದ ರೂಪದಲ್ಲಿ ಬಂದಿದೆ. 'ಹಳ್ಳಿಯ ಹೆಸರಿನ ಹಿಂದೆ ಹೊರಟರೆ' ಎಂಬ ಪ್ರಬಂಧದಲ್ಲಿ, ಕೆಲವು ಊರುಗಳ ಹೆಸರಿನ ನಿಷ್ಪನ್ನದ ಹೂರಣ ಹೆಕ್ಕಿ ತೆಗೆದಿದ್ದಾರೆ ಮತ್ತು ಹೆಸರಿನ ಅಧ್ಯಯನ ನಿಜಕ್ಕೂ ಕುತೂಹಲಕಾರಿ.

'ಚಾರಣದಿಂದ ಪರಿಸರಕ್ಕೆ ಹಾನಿಯಾದೀತೆ?' 'ಬೇಸಗೆಯಲ್ಲಿ ಪರಿಸರಸ್ನೇಹಿ ಪಾನೀಯ' ಮೊದಲಾದ ಬರಹಗಳಲ್ಲಿ ಪರಿಸರ ಕಾಳಜಿ ದಟ್ಟವಾಗಿದೆ. ಚಾರಣದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ, ಬೇಸಗೆಯಲ್ಲಿ 'ಹೆಸರು ನೀರು' ನಂತಹ ಆರೋಗ್ಯಕರ ಪಾನೀಯದ ಸೇವನೆಯು ಪರಿಸರಸ್ನೇಹಿ ಎಂಬುದನ್ನು ಚಿತ್ರಿಸಿದ್ದಾರೆ.

ಈ ಸಂಕಲನದ ಪ್ರಬಂಧಗಳಲ್ಲಿ ಶಶಿಧರ ಹಾಲಾಡಿಯವರು ಪರಿಸರದ ಕುರಿತಾದ ಅನೇಕ ಮಾಹಿತಿಪೂರ್ಣ ವಿಷಯಗಳನ್ನು ಕಟ್ಟಿಕೊಟ್ಟಿದ್ದಾರೆ. ಪರಿಸರ ಅಂದರೆ ಪ್ರಕೃತಿ ನೀಡಿದ ಕೊಡುಗೆ. ಪರಿಸರದ ನಿಯಮವನ್ನು ಮಾನವನು ಎಷ್ಟು ಎಚ್ಚರಿಕೆಯಿಂದ ಪಾಲಿಸುತ್ತಾನೋ, ಆಗ ಯಾವುದಕ್ಕೂ ಕುಂದು ಬರಲಾರದು; ಒಂದು ವೇಳೆ ಪ್ರಕೃತಿಯ ವಿರುದ್ಧ ಆತ ನಡೆದರೆ, ಅದೇ ಅವನ ಅವನತಿ ಎಂಬುದನ್ನು ಮಾನವ ತಿಳಿಯಬೇಕಾಗಿದೆ. ನಮ್ಮ ಜನರಲ್ಲಿ ಇಂತಹದೊಂದು ಅರಿವು ಮೂಡಬೇಕು. ಈ ಸಂಕಲನದಲ್ಲಿ ಲೇಖಕರು ತನ್ನ ಅನುಭವದ ಮೂಸೆಯಿಂದ ಸೃಜಿಸಿದ ಪ್ರಬಂಧಗಳ ಮೂಲಕ, ಜನರಲ್ಲಿ ಪರಿಸರ ಕಾಳಜಿ ಮೂಡಿಸುವ ಮತ್ತು ಅರಿವು ಮೂಡಿಸುವ ಪ್ರಯತ್ನ ಮಾಡಿದ್ದಾರೆ. ಇದು ಕನ್ನಡ ಸಾಹಿತ್ಯಕ್ಕೆ ಅನನ್ಯ ಕೊಡುಗೆ ಎನ್ನಬಹುದು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1

ವಾಸ್ತವ ಪ್ರತಿವಾಸ್ತವ
(ಸಾಹಿತ್ಯ-ಸಂಸ್ಕೃತಿ-ವಿಮರ್ಶೆ)
ಲೇ: ಎಸ್.ದಿವಾಕರ್
ಪ್ರ: ವೀರಲೋಕ ಪ್ರತಿಷ್ಠಾನ, ಬೆಂಗಳೂರು
ಬೆಲೆ : ರೂ 375/-

2



ಮಿತ್ರಾರ್ಜಿತ
(ಪ್ರೊ.ಅ.ರಾ. ಮಿತ್ರರಅಭಿನಂದನಾಗ್ರಂಥ)
ಸಂ : ಎನ್. ರಾಮನಾಥ್, ಸೌಮ್ಯ ಮಿತ್ರ
ಪ್ರ: ತೇಜು ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 450/-

3



ಇಳಿಸಲಾಗದ ಶಿಲುಬೆ
(ಅಂಕಣ ಬರಹಗಳು)
ಲೇ: ರಘುನಾಥ ಚ.ಹ.
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ295/-

4



ಒಂದು ಪುರಾತನ ನೆಲದಲ್ಲಿ
(ಅಮಿತಾವ್‌ಘೋಷ್ ಕಾದಂಬರಿ)
ಅನು : ಮಿತ್ರಾವೆಂಕಟ್ರಾಜ
ಪ್ರ: ಮನೋಹರಗ್ರಂಥಮಾಲಾ, ಧಾರವಾಡ
ಬೆಲೆ : ರೂ 450/-

5



ಆತ್ಮನಿವೇದನೆ
(ಬನ್ನಂಜೆಗೋವಿಂದಾಚಾರ್ಯರು ನಿವೇದಿಸಿದ ಆತ್ಮಕಥನ)
ಬರೆಹ : ವೀಣಾ ಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 360/-

6



ಕುರುಕ್ಷೇತ್ರ - 1
(ಕುರುಕ್ಷೇತ್ರಯುದ್ಧದಕ್ಷಣಕ್ಷಣದ ಮಾಹಿತಿ)
ಲೇ: ಜಗದೀಶಶರ್ಮಾ ಸಂಪ
ಪ್ರ:ಇವಣ್ಣಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 300/-

7



ಗಂಗಾಜಲ
(ವೈಚಾರಿಕ ಲೇಖನಗಳು)
ಮರಾಠಿ ಮೂಲ : ಇರಾವತಿಕರ್ವೆ
ಕನ್ನಡಕ್ಕೆ : ಚಂದ್ರಕಾಂತ ಪೋಕಳೆ
ಪ್ರ:ಯಾದವಿ ಪ್ರಕಾಶನ, ಮೈಸೂರು
ಬೆಲೆ : ರೂ 158/-

8



ಯಾವುದುಚರಿತ್ರೆ?
(ಆರ್ಯರಿಂದಔರಂಗಜೇಬನವರೆಗೆ)
ಲೇ: ಎಂ.ವಿ.ಆರ್.ಶಾಸ್ತ್ರಿ
ಅನು : ಬಾಬು ಕೃಷ್ಣಮೂರ್ತಿ
ಪ್ರ: ವಸಂತ ಪ್ರಕಾಶನ
ಬೆಲೆ : ರೂ 395/-

9



ವಸಾಹತುಶಾಹಿ ಮೈಸೂರು ಸಂಸ್ಥಾನದ ಆರ್ಥಿಕಚರಿತ್ರೆ(1799-1947)
ಲೇ: ಡಾ। ಸಿದ್ದಲಿಂಗಸ್ವಾಮಿ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 280/-

10

ಅಗಸ್ತ್ಯ ದರ್ಶನ
(ಅಗಸ್ತ್ಯರ ಬಗೆಗಿನ ಚಿಂತನೆಗಳು)
ಲೇ: ಡಾ। ಸುಧಾಎಂ.ಎಸ್; ಓ. ಶಾಮಭಟ್
ಅಯೋಧ್ಯಾ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 299/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಕವಿ ಕಣ

» ಡಾ.ನಾ.ಮೊಗಸಾಲೆ

ನೀರಗುಳ್ಳೆ

ಭೋರೆಂದು ಸುರಿವ ಮಳೆಗೆ ಹುಟ್ಟಿದುವು
ಹತ್ತಾರು ನೀರಗುಳ್ಳೆಗಳು ಅಂಗಳದಲ್ಲಿ
ಎದ್ದ ಹಾಗೆ ಬಿದ್ದು ಹೋಗುತ್ತವೆ ಅವು
ಅಂಗಳದಲ್ಲಿ ಆಡುವ ಮುದ್ದು ಮಗು
ಬಿದ್ದು ಎದ್ದು ಮತ್ತೆ ಬೀಳುವಂತೆ

ನೆಲ ಮತ್ತು ಆಕಾಶದ ನಡುವೆ
ಹುಟ್ಟಿ ಮರೆಯಾಗುವ ಇವು
ಏಕೆ ಹುಟ್ಟಿದುವು? ಯಾಕೆ ತಕ್ಷಣ
ಮಾಯವಾದುವು?
ಎನ್ನುವುದು ಗೊತ್ತಿಲ್ಲ ನನಗೂ ಮಳೆಗೂ

ಪ್ರತಿಯೊಂದೂ ಘಟಿಸುವುದು ಹೀಗೆ
ತಂತಮ್ಮಷ್ಟಕ್ಕೆ ಎಂಬಂತೆ ಇರುವಾಗ
ನೀರಗುಳ್ಳೆಗಳು ಯಾಕೆ ಇದಕ್ಕೆ ಅಪವಾದ?

***

ಬೇರೆ ಬೇರೆ (ಹೆಡಿಂಗ್)
ಮನೆ ಮುಂದಿನ ಆ ಮರದ ನೆರಳು
ಬೆಳಗ್ಗೆ ಮತ್ತು ಸಂಜೆ
ನಾನು ನಿನಗಿಂತ ಉದ್ದ ಇದ್ದೇನೆ
ಎಂಬಂತಿರುತ್ತದೆ ಸದಾ

ಆದರೆ
ಆ ಮರದ ಕೊಂಬೆ ರೆಂಬೆಗಳು ಎಲೆ
ಚಿಗುರುಗಳು
ಪರಸ್ಪರ ಕೊಡೆ ಹಿಡಿದಂತಿದ್ದು
ಪ್ರತ್ಯೇಕವಾಗಿ ನೆಲಕ್ಕೆ ತಮ್ಮ ನೆರಳು ಬೀಳದ ಹಾಗೆ
ಒಂದೇ ಆದಂತಿವೆ.

ಬಿರುಬೇಸಗೆಗೆ ಅಥವಾ ಜಡಿಮಳೆಗೆ
ಆ ಮರವನಾಶ್ರಯಿಸುವವರಿಗೆ
ಮರ ಬೇರೆ ಅಲ್ಲ ನೆರಳು ಬೇರೆ ಅಲ್ಲ

ಕಣ್ಣಲ್ಲಿ ಕಣ್ಣಿಟ್ಟು ನೋಡುವ ನನಗೆ
ಮರ ಬೇರೆ ನೆರಳು ಬೇರೆ!

VISHWAVANI TV
ಯುಟ್ಯೂಬ್ ಚಾನೆಲ್
ಸಬ್‌ಸ್ಕ್ರೈಬ್ ಆಗಿ

ಹಲವು ಗಂಡುಗಳ ಮಡದಿ!



» ಶಶಿಧರಸ್ವಾಮಿ ಆರ್. ಹಿರೇಮಠ



ಕಾಕೋಳ ಗ್ರಾಮದ ವೆಂಕಟಾಪುರ ಹಾಡಿಯ ಹೊರ ವಲಯದ ಕುರುಚಲು ಕಾಡಂಚಿನ ಹೊಲದ ಸರಹದ್ದು. ಬೇಸಿಗೆಯ ದಾಹ ತಣಿಯಲು ಹಕ್ಕಿಗಳ ಗುಂಪು ಇಲ್ಲಿ ಸೇರುತ್ತವೆ. ಅವುಗಳ ಫೊಟೋಗ್ರಫಿಗೆಂದು ಮಾಡಿದ ಚಿಕ್ಕದಾದ ಹೈಡ್(ಅಡಗುತಾಣ)ನಲ್ಲಿ ನಾನು, ಚಂದ್ರು, ಮಾಲತೇಶ ಬಡಿಗೇರ ಸೇರಿ ಮುಂಜಾನೆ ಹಕ್ಕಿಗಳ ಫೊಟೊಗ್ರಫಿಗಾಗಿ ಕುಳಿತೆವು. ಹೂನ್-ಹೂನ್ -ಹೂನ್ ಎಂಬ ಕೀರಲು ಸದ್ದು ಕೇಳಿಸಿತು. ಇದು ಗುಡಗಾಡು ಹಕ್ಕಿಯ ಕೂಗು! ಪೊದೆಯಿಂದ ಗುಡಗಾಡು ದಂಪತಿ ಹಕ್ಕಿಗಳೆರಡು ಇತ್ತ ಬರ ತೊಡಗಿದವು. ಇವು ಬಲು ನಾಚಿಕೆ ಸ್ವಭಾವದ ಹಕ್ಕಿಗಳು. ಅವು ನಮ್ಮತ್ತ ಒಮ್ಮೆ ನೋಡಿ, 'ಬಿಡುದಿಲ್ರಲ್ಲಪ್ಪ ನೀವು, ಮನಿಗೊಗಿ ಮಲ್ಕೋಬೇಕು' ಎಂದು ಒಂದು ಸಲ ಚೂಂವ್‌ಗುಟ್ಟಿ ಅತ್ತ-ಇತ್ತ ತಿರುಗು ನೋಟದಿಂದ ಕ್ಯಾಮರಾಕ್ಕೆ ಪೋಸ್ ಕೊಟ್ಟು ಹತ್ತಿರದ ಪೊದೆಯತ್ತ ಓಡಿದವು.

ಈ ಹಕ್ಕಿಗಳನ್ನು 'ಗುಡುಗಾಡು ಹಕ್ಕಿ,', 'ಕರೆಚಕ್ಕಿ', 'ಚಿಟಬುರ್ಲಿ' ಎಂದು ಕರೆಯುವದುಂಟು. ಇಂಗ್ಲೀಷನಲ್ಲಿ ಬಾರ್ಡ್ ಬಟನ್‌ಕ್ವಿಲ್ ಅಥವಾ ಕಾಮನ್ ಬಸ್ಟರ್ಡ್-ಕ್ವಿಲ್ ಎನ್ನುವರು.

ಗುಬ್ಬಚ್ಚಿಗಿಂತ ಸ್ವಲ್ಪ ದೊಡ್ಡ; 15 ಸೆಂ.ಮಿ ಗಾತ್ರದ ಕಂದು ವರ್ಣದ ಪುಟ್ಟ ನೆಲವಾಸಿ ಹಕ್ಕಿ; ಬೂದು ನೆತ್ತಿ, ಕಂದಾದ ಕತ್ತು, ಬೂದು ರೆಕ್ಕೆಗಳಲ್ಲಿ ಕಪ್ಪು ಚುಕ್ಕೆಗಳು, ಸಣ್ಣ ಕಪ್ಪು ಕೊಕ್ಕು, ಬಿಳಿ ಸೋಗೆ ಹೊಂದಿರುವ ಕಣ್ಣು. ಗಿಡ್ಡ ಕಪ್ಪು ಕಾಲುಗಳು, ಮೊಂಡಾದ ಬಾಲ. ಹೆಣ್ಣು ದೊಡ್ಡದು; ಹೆಚ್ಚು ಹೊಳೆವ ಬಣ್ಣವನ್ನು ಹೊಂದಿದೆ. ಹೆಣ್ಣು ಹಕ್ಕಿಗೆ ಕಂಠದಿಂದ ಎದೆಯ ಭಾಗದವರೆಗೆ ಕಪ್ಪಾದ ಪಟ್ಟೆ ಇದೆ. ಗಂಡು ಹಕ್ಕಿಗೆ ಈ ಕಪ್ಪಾದ ಪಟ್ಟೆ ಇರುವುದಿಲ್ಲ. ಎದೆಯ ಭಾಗ ಹಾಗೂ ಪಕ್ಕೆಬದಿಯಲ್ಲಿ ಮಾಸಲು ಬಿಳಿಯಲ್ಲಿ ಕಪ್ಪಾಗಿರುವ ಗೆರೆಗಳಿವೆ.

ಕುರುಚಲು ಕಾಡು, ಹೊಲಗಳು, ಅರಣ್ಯದಂಚು ಮತ್ತು ಕೃಷಿಭೂಮಿಯಲ್ಲಿ ಹುಲ್ಲು, ಕಳೆಸಸ್ಯಗಳ ನಡುವೆ ಅಲೆದಾಡುವ ಇವುಗಳನ್ನು ಪತ್ತೆಹಚ್ಚುವದು ತುಸು ಕಷ್ಟ. ಗಿಡ್ಡ ಕಾಲು, ಗಿಡ್ಡಾದ ದುಂಡನೇಯ ರೆಕ್ಕೆಗಳಿದ್ದು ಬಹುದೂರದವರೆಗೆ ಹಾರಲಾರವು. ಆದರೆ ಇವು ಅತ್ಯುತ್ತಮ ಓಟಗಾರ ಹಕ್ಕಿಗಳು. ಇವುಗಳ ಕೂಗು ಮೋಟಾರ್ ಸೈಕಲ್ ತರಹದ ಡ್ರ-ರ-ರ-ರ-ರ, ಡ್ರ-ರ-ರ-ರ-ರ. ಎಂದಾಗಿದ್ದು ಕೆಲ ಬಾರಿ ಜೋರಾಗಿ ಹೂನ್ -ಹೂನ್-ಹೂನ್ ಎಂದು ಕೂಗುತ್ತವೆ. ನೆಲದಲ್ಲಿರುವ ಕಾಳು-ಬೀಜಗಳು, ಕೀಟ ಹಾಗೂ ಗೆದ್ದಲು ಹುಳುಗಳು ಇವುಗಳ ಆಹಾರ.

ಈ ಹಕ್ಕಿಗಳಲ್ಲಿ ಸಂತಾನಾಭಿವೃದ್ಧಿ ಕ್ರಮ ವಿಶಿಷ್ಟ. ಹೆಣ್ಣು ಬಣ್ಣ ಮತ್ತು ಗಾತ್ರದಲ್ಲಿ ಗಂಡಿಗಿಂತ ಸುಂದರವಾಗಿದ್ದು ಹೊಳವ ಮೈ ಬಣ್ಣ ಹೊಂದಿ ಪ್ರಣಯಾಸಕ್ತಿಯನ್ನು ಗಂಡಿಗೆ ವ್ಯಕ್ತಪಡಿಸಿ ಗಂಡಿನ ಸುತ್ತ ಸುತ್ತುತ್ತಾ ಮೆಲುದ್ವನಿಯಲ್ಲಿ ಸ್ವರ ಹೊರಡಿಸುತ್ತದೆ. ಪೊದೆಗಳಲ್ಲಿ ನೆಲವನ್ನು ಕೆದರಿ ಸುತ್ತಲೂ ಹುಲ್ಲಿನ ಅಂಚಿರುವ ಗೂಡನ್ನು ರಚಿಸಿ, ಸಂತಾನಾಭಿವೃದ್ಧಿಗೆ ಅಣಿಯಾಗುತ್ತದೆ. ಗಂಡಿನ ಸ್ವಾಧೀನಕ್ಕಾಗಿ ಇತರ ಹೆಣ್ಣುಗಳೊಂದಿಗೆ ಹೋರಾಡಿ, ಪ್ರತಿಸ್ಪರ್ಧಿ ಹೆಣ್ಣುಹಕ್ಕಿಗಳಿಗೆ ಸವಾಲಾಗಿ ಡ್ರ-ರ-ರ-ರ-ರ, ಡ್ರ-ರ-ರ-ರ-ರ ಎಂದು ಕೂಗಿ ಸಂಗಾತಿಯನ್ನು ಹುಡುಕುತ್ತದೆ. ಬೂದು ಮಿಶ್ರಿತ ಬಿಳಿ ಬಣ್ಣದ 3-4 ಮೊಟ್ಟೆಗಳನ್ನಿಟ್ಟು, ಗಂಡಿಗೆ ಸಂಸಾರೀಕ ಹೊಣೆ ನೀಡಿ, ಬಹು ಪತಿತ್ವ ಪಾಲಿಸುತ್ತದೆ. ಗೂಡಿನಲ್ಲಿ ಮೊಟ್ಟೆಗಳನ್ನಿಟ್ಟ ಹೆಣ್ಣು ಮತ್ತೊಬ್ಬ ಸಂಗಾತಿಯನ್ನು ಪಡೆಯಲು ಹೊರಟುಹೋಗುತ್ತದೆ. ಪಕ್ಷಿಲೋಕದಲ್ಲಿ ಪಹುಪತಿತ್ವ ಆಚರಿಸುವ ಕೆಲವೇ ಹಕ್ಕಿಗಳಲ್ಲಿ ಇದೂ ಒಂದು!

ವಿಡಿಯೋ ಕೋಚ್

ರಾತ್ರಿ ಪ್ರಯಾಣದ ಸಮಯದಲ್ಲಿ ಪುಶ್‌ಬ್ಯಾಕ್ ಸೀಟಿನ ಬಸ್ಸಿನ ಪ್ರಯಾಣಿಕರಿಗೆ ವಿಡಿಯೋ ಮೂಲಕ ಸಿನಿಮಾಗಳನ್ನು ತೋರಿಸುವ ಕಾಲ ಒಂದಿತ್ತು!

» ಬಿ ಎನ್ ಭರತ್

ಸಾವಿರದೊಂಬೈನೂರ ಎಂಬತ್ತರ ದಶಕದ ಆರಂಭದಲ್ಲಿ, ರಾತ್ರಿ ದೂರದೂರಿಗೆ ಪ್ರಯಾಣಿಸುವ ಲಕ್ಷುರಿ ಬಸ್ಸುಗಳಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸುವ ವ್ಯವಸ್ಥೆ ಇರುತ್ತಿದ್ದರೆ, ಅಂತಹ ಬಸ್ಸುಗಳ ಹೆಗ್ಗಳಿಕೆಯೇ ಬೇರೆ! ವಿಡಿಯೋ ಪ್ಲೇಯರ್‌ಗಳ ಮೂಲಕ ಟಿವಿಯಲ್ಲಿ ಚಲನಚಿತ್ರ ತೋರಿಸುವುದು ಇವುಗಳ ವಿಶೇಷತೆ. ಇವು ಸಾಮಾನ್ಯವಾಗಿ ಪ್ರಯಾಣಿಕರಿಗೆ ಪ್ರಿಯವಾಗಿರುತ್ತಿದ್ದವು. ಆಗೆಲ್ಲ ದೂರದ ಪ್ರಯಾಣದ ಬಸ್ಸುಗಳಲ್ಲಿ ಸೀಟು ಕಾಯ್ದಿರಿಸುವ ಮೊದಲು, ಬಸ್ಸುಗಳು ವೀಡಿಯೊ ಕೋಚುಗಳೇ ಎಂದು ಖಚಿತಪಡಿಸಿಕೊಳ್ಳುತ್ತಿದ್ದರು. ಹೊಸ ಹೊಸ ಚಲನಚಿತ್ರಗಳ ವಿಡಿಯೋವನ್ನು ಬಸ್ಸಲ್ಲಿ ಅರೆ ನಿದ್ದೆಯಲ್ಲಿ ನೋಡಲು ಪ್ರಯಾಣಿಕರು ಉತ್ಸುಕರಾಗಿರುತ್ತಿದ್ದರು.

ಬಸ್ಸು ಹತ್ತುವ ಮೊದಲು, ಪ್ರಯಾಣಿಕರು ಚಾಲಕನ ಕ್ಯಾಬಿನ್ ಒಳಗೆ (ಟಿವಿ ಅಳವಡಿಸುವ ಸ್ಥಳದಲ್ಲಿ) ಮರದ ಪೆಟ್ಟಿಗೆ ಇದೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳುತ್ತಿದ್ದರು! ಕೆಲವೊಮ್ಮೆ ಖಾಲಿ ಇರುತ್ತಿದ್ದ ಮರದ ಪೆಟ್ಟಿಗೆಯನ್ನು ನೋಡಿ ಪ್ರಯಾಣಿಕರು ನಿರಾಶೆಗೊಳ್ಳುತ್ತಿದ್ದುದಂತೂ ಹೌದು. ವೀಡಿಯೊ ಕಾರ್ಯನಿರ್ವಹಿಸದಿದ್ದರೆ ಪ್ರಯಾಣಿಕರ ರೋಷಾವೇಶದಿಂದ ತಪ್ಪಿಸಿಕೊಳ್ಳಲು, 'ವಿಡಿಯೋಗಾಗಿ ಹೆಚ್ಚುವರಿ ಶುಲ್ಕ ವಿಧಿಸುವುದಿಲ್ಲ, ಪ್ರಯಾಣಿಕರು ಸಹಕರಿಸಬೇಕು' ಎಂದು ಬಸ್ಸಿನವರು ಬೋರ್ಡ್ ಹಾಕಿ ಬಿಡುತ್ತಿದ್ದರು. ಆದರೆ, ಈ ವೆಚ್ಚವನ್ನು ಈಗಾಗಲೇ ಟಿಕೆಟ್ ದರದಲ್ಲಿ ಸೇರಿಸಲಾಗಿದೆ ಎಂಬ ಸತ್ಯ ಎಲ್ಲರಿಗೂ ತಿಳಿದಿರುವಂತಹುದೇ.

ಬಸ್ಸು ಹೊರಟ ಬಳಿಕ, ಬಸ್ಸಿನಲ್ಲಿರುವ ಸಹಾಯಕನು ವೀಡಿಯೊವನ್ನು ಆನ್ ಮಾಡುವವರೆಗೆ, ಪ್ರಯಾಣಿಕರಿಗೆಲ್ಲ ಕುತೂಹಲ, ಹೊಸ ಯಾವ ಚಲನಚಿತ್ರವನ್ನು ಪ್ರದರ್ಶಿಸಲಿದ್ದಾರೆ ಎಂದು. ಇಂತಹ ರಾತ್ರಿಯ ವಿಡಿಯೋ ಕೋಚ್ ಬಸ್ಸುಗಳು ಕಾಫಿ, ಚಹಾ ಕುಡಿಯಲೆಂದು ಸಣ್ಣ ವಿರಾಮಕ್ಕಾಗಿ ಎಲ್ಲಿಯಾದರೂ ನಿಲ್ಲಿಸಿದಾಗ, ಹೊರಗಿದ್ದ ದಾರಿಹೋಕರು ಬಸ್ಸಿನಲ್ಲಿ ಪ್ರದರ್ಶಿಸುತ್ತಿದ್ದ ಸಿನಿಮಾದ ತುಣುಕನ್ನು ಕೆಳಗಿನಿಂದಲೇ ಕುತೂಹಲದಿಂದ ವೀಕ್ಷಿಸುತ್ತಿದ್ದುದುಂಟು!

ಆಗೆಲ್ಲ ನನ್ನ ರಾತ್ರಿ ಪ್ರಯಾಣದ ಸಮಯದಲ್ಲಿ ನಾನು ಹಲವಾರು ಚಲನಚಿತ್ರಗಳನ್ನು ನೋಡಿರುವುದು ಇನ್ನೂ ನೆನಪಿದೆ. ಸಹಜವಾಗಿಯೇ, ಈ ಪ್ರಕ್ರಿಯೆಯಲ್ಲಿ ರಾತ್ರಿಯ ನನ್ನ ನಿದ್ದೆ ಹಾಳಾಗುತ್ತಿದ್ದುದಂತೂ ಸತ್ಯ. ಪುಶ್ ಬ್ಯಾಕ್ ಸೀಟಿನಲ್ಲಿ ನೀವು ಒರಗಿ ಕುಳಿತುಕೊಳ್ಳುವಾಗ, ಒಂದು ನಿರ್ದಿಷ್ಟ ಭಂಗಿಯಲ್ಲಿ ಮಾತ್ರ ಕುಳಿತುಕೊಳ್ಳಬೇಕಾಗಿತ್ತು. ಅಕಸ್ಮಾತ್ ಸೀಟಿನ ಹೆಡ್ ರೆಸ್ಟ್ ಮೇಲೆ ತೋಳನ್ನು ಎತ್ತಿದ್ದರೆ, ಹಿಂದೆ ಇರುವ ಪ್ರಯಾಣಿಕನು 'ಶೂ...ಶೂ' ಎಂದು ಎಚ್ಚರಿಸುತ್ತಿದ್ದರು! ಏಕೆಂದರೆ, ಅವರ ವೀಕ್ಷಣೆಗೆ ನಿಮ್ಮ ಕೈ ಅಡ್ಡ ಬಂದಿರುತ್ತಿತ್ತು!

ಹದಿನೈದು ವರ್ಷಗಳ ಹಿಂದೆ ಒಮ್ಮೆ ನಾನು ಕರ್ನಾಟಕದ ತುತ್ತ ತುದಿಯ ಜಿಲ್ಲೆಯೊಂದಕ್ಕೆ ಕರ್ನಾಟಕ ಸಾರಿಗೆ ಸಂಸ್ಥೆಯ ವಿಡಿಯೋ ಕೋಚ್ ರಾತ್ರಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅವರು ತೆಲುಗು ಸಿನಿಮಾವೊಂದನ್ನು ಪ್ರದರ್ಶಿಸಲು ಸುರು

ಮಾಡಿದರು. ನಾನು ನಿರ್ವಾಹಕನ ಬಳಿಗೆ ಹೋಗಿ ಕರ್ನಾಟಕ ಸಾರಿಗೆ ಬಸ್ಸಿನಲ್ಲಿ ಬೇರೆ ಭಾಷೆಯ ಚಲನಚಿತ್ರವನ್ನು ಯಾಕೆ ಪ್ರದರ್ಶಿಸುತ್ತೀರಿ ಎಂದು ಪ್ರಶ್ನಿಸಿದೆ. ಅವರು ಕೂಡಲೇ, ಸಿಡಿಯನ್ನು ಬದಲಿಸಿ ಕನ್ನಡ ಸಿನಿಮಾ ಹಾಕಿದರು. ಅಷ್ಟರಲ್ಲಿ ಮುಂದಿನ ನಾಲ್ಕೈದು ಸಾಲಿನಲ್ಲಿದ್ದ ಹಲವು ಪ್ರಯಾಣಿಕರು, ತೆಲುಗು ಸಿನಿಮಾ ತೆಗೆದದ್ದಕ್ಕೆ ಗಲಾಟೆ ಮಾಡಲು ಪ್ರಾರಂಭಿಸಿದರು. ನಾನು ನಿರ್ವಾಹಕನಿಗೆ ನಮ್ಮ ಸಾರಿಗೆ ಬಸ್ಸಿನಲ್ಲಿ ಬೇರೆ ಭಾಷೆಯ ಸಿನಿಮಾ ಹಾಕಲು ನಾನು ಬಿಡುವುದಿಲ್ಲ ಅಂದೆ. ನಾನೊಬ್ಬ, ಅವರು ಏಳೆಂಟು ಜನ ಇದ್ದರು. ಈ ಗಲಾಟೆಯಲ್ಲಿ ನಿರ್ವಾಹಕನು ಅದನ್ನು ಮ್ಯೂಟ್ ಮಾಡಿದ. ನಿದ್ದೆ ಮಾಡಲು ತೊಂದರೆಯಾಗುತ್ತದೆ ಎಂದು ನನಗಂತೂ ಸಿನಿಮಾ ನೋಡುವ ಆಸಕ್ತಿ ಇರಲಿಲ್ಲ. ಕೊನೆಗೆ ಅದನ್ನು ಆಫ್ ಮಾಡಿದ ಎಲ್ಲರೂ ಗೊರಕೆ ಹೊಡೆಯಲು ಆರಂಭಿಸಿದರು!

ಈಗ, ದೂರ ಪ್ರಯಾಣದ ಸಮಯದಲ್ಲಿ ಜನರು ತಮ್ಮ ಸ್ಮಾರ್ಟ್ ಫೋನಿನಲ್ಲಿ, ಟ್ಯಾಬ್‌ಗಳಲ್ಲಿ, ಲ್ಯಾಪ ಟಾಪುಗಳಲ್ಲಿ ತಮಗಿಷ್ಟದ ಚಲನಚಿತ್ರಗಳನ್ನು ವೀಕ್ಷಿಸುತ್ತಿರುತ್ತಾರೆ. ಹಾಗಾಗಿ ವೀಡಿಯೊ ಕೋಚ್‌ಗಳ ಬಗ್ಗೆ ಆಕರ್ಷಣೆ ಇಲ್ಲ. ಜತೆಗೆ, ಈಗ ಸ್ಲೀಪರ್ ಕೋಚುಗಳ ಕಾಲ! ಎಲ್ಲರೂ ಬಸ್ಸಿನಲ್ಲಿ ಮಲಗುವುದನ್ನೇ ಇಷ್ಟ ಪಡುತ್ತಾರೆ. ಪುಷ್ ಬ್ಯಾಕ್ ಸೀಟಿನ ಪಯಣವಾದಾಗ ಮಾತ್ರ ವಿಡಿಯೋ ನೋಡಲು ಸಾಧ್ಯ!

ವಾಲ್ಮೀಕಿಗಿರಿಯಿಂದ ಹುಟ್ಟಿದ ರಾಮಾಯಣ ಮಹಾನದಿ

» ಮೊದಲ ಪುಟದಿಂದ

ರಾವಣ ಇದಕ್ಕೆ ತದ್ವಿರುದ್ಧವಾದ ವ್ಯಕ್ತಿತ್ವದವ. ಅರು ಕೋಟಿ ವರ್ಷಗಳಕಾಲ ಲೋಕವನ್ನು ರೋದಿಸುವಂತೆ ಮಾಡಿದರೆ, ಲೋಕವನ್ನು ರಮಿಸಿದವ (ಸಂತೈಸಿದವ) ರಾಮ, ಈ ಎರಡರ ನಡುವೆ ಸ್ಥಿತಪ್ರಜ್ಞಳಾಗಿ ತನ್ನ ಚರಿತ್ರೆಯನ್ನು ಕಾದುಕೊಂಡವಳು ಸೀತೆ. ಹಾಗಾಗಿ ವಾಲ್ಮೀಕಿಗೆ ನಾರದರು, ಬ್ರಹ್ಮ ಹೇಳಿದ ಮೇಲೆ ಲೋಕದಲ್ಲಿ ಆದರ್ಶ ಪುರುಷ ಎನ್ನುವುದು ಕಲ್ಪನೆಯ ಮನೋಭೂಮಿಕೆಯಲ್ಲ; ವಾಸ್ತವದಲ್ಲಿ ರಾಜ್ಯವಾಳುತ್ತಿದ್ದಾನೆ ಎನ್ನುವ ಅರಿವಾಯಿತು. ಉಪನಿಷತ್ತಿನಲ್ಲಿ ಗುರು ಲೌಕಿಕವನ್ನು ಹೇಳುತ್ತಾ ಪಾರಮಾರ್ಥಿಕದ ಹಾದಿಯನ್ನು ತೋರಿಸುತ್ತಾನೆ. ಗುರು ಮಾರ್ಗವಲ್ಲ; ಹೀಗೆ ಹೋದರೆ ಇಂಥ ಊರಿಗೆ ಹೋಗಬಹುದೆಂದು ಹೇಳುವ ಕೈಮರ ಆತ. ಇಲ್ಲಿ ನಾರದ ಮತ್ತು ಬ್ರಹ್ಮ ಇಬ್ಬರೂ ಪ್ರಪಂಚಕ್ಕೆ ದಾರಿತೋರುವ ಮೂರು ವಿಶೇಷಣಗಳಾದ 'ರಾಮನಲ್ಲಿರುವ ಕಲ್ಯಾಣ ಗುಣ, ಸೀತೆಯ ಸಚ್ಚರಿತ್ರರೂಪ, ಪೌಲಸ್ತ್ಯ (ರಾವಣ) ವಧೆ', ಇವುಗಳನ್ನು ವಿವರಿಸುವ ಮಹಾಕಾವ್ಯವನ್ನು ರಚಿಸು ಎಂದು ಸೂಚಿಸುತ್ತಾರೆ.

ವಾಲ್ಮೀಕಿ ತನ್ನ ಕಾವ್ಯ ಹೇಗಿದೆ ಎನ್ನುವುದನ್ನು ಹೇಳಿಕೊಳ್ಳುವದು ಹೀಗೆ. 'ತನ್ನ ಕಾವ್ಯದಲ್ಲಿ ಅಧ್ಯಯನ ಮಾಧುರ್ಯವೂ ಇದೆ, ಗಾನ ಮಾಧುರ್ಯವೂ ಇದೆ. ದ್ರುತ-ಮಧ್ಯಮ-ವಿಲಂಬಿತಗಳಲ್ಲಿ ಸುಲಲಿತವಾಗಿ ಹಾಡಬಹುದು, ಹಾಗೇ ಇದರಲ್ಲಿ ಗಾನ-ಧ್ವನಿ-ಪರಿಚ್ಛೇದಗಳಿಗೆ ಅನುಕೂಲವಾಗಿದೆ. ನವರಸಗಳುಳ್ಳ ಇದನ್ನು ಸಪ್ತಸ್ವರಗಳಲ್ಲಿ ವೀಣಾ ವಾದ್ಯದೊಡನೆಯೂ, ತಾಳ-ಮೃದಂಗಾದಿಗಳ ಮೇಳಗಳಲ್ಲಿ ಹಾಡಬಹುದು'.

ವಾಲ್ಮೀಕಿ ಎನ್ನುವ ಕೋಗಿಲೆಯು ಕಾವ್ಯ ಎನ್ನುವ ವೃಕ್ಷದ ಶಾಖೆಗಳ ಮೇಲೆ ಕುಳಿತುಕೊಂಡು ರಾಮ,ರಾಮ ಎನ್ನುವ ಮಧುರ ಕಾವ್ಯವನ್ನು ಹಾಡಿದ ಹಿನ್ನೆಲೆ ಇದು.

ಚೈತ್ರೇ ಮಾಸೇ ಸೀತೇ ಪಕ್ಷೇ ಕಥಾ ರಾಮಾಯಣಸ್ಯ ಚ
ನವಾಹ್ನಾ ಕಿಲ ಶ್ರೋತ್ರವ್ಯಾ ಭಕ್ತಿಭಾವೇನ ಸಾದರಮ್
ಯಸ್ಯ ಶ್ರವಣಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೆ ॥

ಚೈತ್ರಮಾಸದ ಶುಕ್ಲಪಕ್ಷದ ಒಂಭತ್ತು ದಿವಸಗಳಲ್ಲಿ ರಾಮಾಯಣ ಕಥೆಯನ್ನು ಭಕ್ತಿಭಾವದಿಂದ ಕೇಳಬೇಕು. ಇದರ ಶ್ರವಣಮಾತ್ರದಿಂದಲೇ ಸಮಸ್ತಪಾಪಗಳಿಂದ ವಿಮುಕ್ತರಾಗುತ್ತಾರೆ.

ಮನುಕುಲದ ಮಾದರಿ ಹೆಣ್ಣು ಸುನೀತಾ!

» ಮೊದಲ ಪುಟದಿಂದ

ಆದರೆ ಮೊದಲಿನಿಂದಲೂ ಸಾಹಸಪ್ರವೃತ್ತಿಯವಳಾದ ನೀನು ಬಾಹ್ಯಾಕಾಶಕ್ಕೆ ಗಗನಯಾತ್ರಿಯಾಗಿ ತೆರಳಲು ಹಿಂದೆಮುಂದೆ ಯೋಚಿಸದೆ ನಿರ್ಧಾರ ಕೈಗೊಂಡಾಗ, ನಾಸಾದ ಇತರೆ ವಿಜ್ಞಾನಿಗಳಿಗೇ ಆಶ್ಚರ್ಯವಾಗಿದ್ದಿರಬಹುದು. ನಿನ್ನ ಅಚಲ ಧೈರ್ಯ, ಸಾಹಸ, ಸ್ಥಿತಪ್ರಜ್ಞತೆ, ಪ್ರಸಂಗಾವಧಾನತೆ ಯಾವ ಗಂಡಸಿಗೂ ಕಮ್ಮಿ ಇಲ್ಲ; ಮಹಿಳಾ ಶಕ್ತಿಗೆ ನೀನೊಂದು ರೂಪಕ.

ವೈಜ್ಞಾನಿಕ ಅಧ್ಯಯನ ಹಾಗೂ ಪ್ರಯೋಗಗಳನ್ನು ನಡೆಸಲು ಇಂತಹ ರೋಚಕ, ಆದರೆ ಅಪಾಯ ಸಂಭವವಿರುವ ದಾರಿಯನ್ನು ನೀನಾಗಿ ಆಯ್ಕೆಮಾಡಿಕೊಂಡೆ. ನಿಮ್ಮಂತಹ ಧೈರ್ಯ ಹೊಂದಿರುವ ಕೆಲವರಿಂದಲೇ ನಾವಿವತ್ತು ಅತ್ಯಂತ ಆಧುನಿಕ ವೈಜ್ಞಾನಿಕ ಯುಗದಲ್ಲಿ ವಾಸಿಸುತ್ತಿದ್ದೇವೆ. ನಾವು ಕೈಯಲ್ಲಿ ಹಿಡಿದಿರುವ ಮೊಬೈಲ್, ಬಳಸುವ ವಾಟ್ಸಾಪ್, ಇನ್‌ಸ್ಟಾಗ್ರಾಂ, ಲ್ಯಾಪ್‌ಟಾಪ್ ಎಲ್ಲವೂ ನಿಮ್ಮ ಸಾಧನೆಗಳ ಪರಿಣಾಮವಾಗಿಯೇ. ಮನುಷ್ಯರು ನಾವು ಅತ್ಯಂತ ಬುದ್ಧಿಜೀವಿಗಳೆಂದು ಹೇಳಿಕೊಳ್ಳಲು ಸಾಧ್ಯವಾಗಿರುವುದು ನಿಮ್ಮಂತಹವರಿಂದಲೇ. ಮನುಕುಲದ ಒಳಿತಿಗಾಗಿ ಕೆಲಸ ಮಾಡುವ ಪ್ರತಿ ವಿಜ್ಞಾನಿಯ ಹಿಂದೆಯೂ ಇಂತಹ ಮಹಾನ್ ತ್ಯಾಗದ ಹಿನ್ನೆಲೆ ಇರುತ್ತದೆ. ನಿನ್ನ ಇಂತಹ ತ್ಯಾಗ, ಸಾಹಸಗಳೇ ಮನುಕುಲದ ಉಜ್ವಲ ಭವಿಷ್ಯವನ್ನು ಬರೆಯುವ ಹೊನ್ನ ಪೆನ್ನುಗಳು. ಎಷ್ಟೊಂದು ಕಷ್ಟಗಳನ್ನು ಮೈಮೇಲೆ ನೀನಾಗಿ ಎಳೆದುಕೊಂಡೆಯಲ್ಲೆ ತಾಯಿ! ಇವೆಲ್ಲ ಸಾಧ್ಯವಾಗಿದ್ದು ನೀನು ನಂಬಿದ ಆ ಗಣಪತಿ ಹಾಗೂ ಭಗವದ್ಗೀತೆಯ ಸಂದೇಶಗಳಿಂದಲ್ಲವೆ ಸುನೀತಾ? ಹಾಗಂತ ಬಾಹ್ಯಾಕಾಶಕ್ಕೆ ಹೋಗುವ ಮುನ್ನ ನೀನೇ ಹೇಳಿಕೊಂಡಿದ್ದೀಯಲ್ಲ ಸೋದರಿ!

ಇಂದಿನ ಆಧುನಿಕ ಜಗತ್ತಿನಲ್ಲಿ, ಯಾರ್‍ಯಾರೋ ಕಾಕಪೋಕ, ಕಾಂಜಿಪೀಂಜಿ ಪುಢಾರಿಗಳ, ಪ್ರಚಾರಪ್ರಿಯ ಸೆಲೆಬ್ರಿಟಿಗಳ ಹುಟ್ಟುಹಬ್ಬವನ್ನು ನಾವೇ ದುಡ್ಡು ಖರ್ಚುಮಾಡಿ ಸಂಭ್ರಮದಿಂದ ಆಚರಿಸುತ್ತೇವೆ. ಅಂಥ ಪ್ರಚಾರಪ್ರಿಯರಿಂದ ಲೋಕಕ್ಕೆ ಯಾವ ಒಳಿತೂ ಆಗದು. ಆದರೆ ಮನುಕುಲದ ಏಳಿಗೆಗಾಗಿ 9 ತಿಂಗಳು ಬಾಹ್ಯಾಕಾಶದಲ್ಲಿದ್ದು ಮರುಹುಟ್ಟು ಪಡೆದು ಬಂದ ನಿನ್ನ ಹುಟ್ಟುಹಬ್ಬ ಆಚರಿಸಬೇಕೆಂದು ಯಾರಿಗೂ ಅನಿಸಲಿಲ್ಲವಲ್ಲ, ಛೆ, ನಾವೆಂತಹ ಕೃತಘ್ನರು!

ಕೊನೆಗೂ ಭೂಮಿಗೆ ಬಂದಿಳಿದು ಈಗ ಪುನಶ್ಚೇತನ ಕೇಂದ್ರದಲ್ಲಿ ಆರೈಕೆ ಪಡೆಯುತ್ತಿರುವ ನೀನು ಬೇಗ ಚೇತರಿಸಿಕೊಳ್ಳುವಂತಾಗಲಿ. ನೀನು ನಂಬಿರುವ ಆ ಗಣಪತಿ ನಿನಗೆ ಮೊದಲಿನ ಬಲ, ಛಲ, ಕಸುವು ನೀಡಲಿ. ನೀನು ಮೊದಲಿನಂತಾದ ಮೇಲೆ ನೀನು ಪ್ರೀತಿಸುವ ಭಾರತಕ್ಕೆ ಒಮ್ಮೆ ಬಂದು ಹೋಗು. ನಮ್ಮ ಪ್ರಧಾನಿ ಕೂಡ ನಿನ್ನನ್ನು ಭಾರತಕ್ಕೆ ಆಮಂತ್ರಿಸಿದ್ದಾರೆ.

ಶುಭವಾಗಲಿ ತಾಯಿ ನಿನಗೆ.

ಗುಂಡೋಪಾಖ್ಯಾನ

» ನಳಿನಿ ಟಿ. ಭೀಮಪ್ಪ ಧಾರವಾಡ

ಭೂಮಿ ಗುಂಡಗಿದೆ ಎಂದ ಗೆಲಿಲಿಯೋ ಗೇಲಿಗೊಳಗಾದ! ಮಕ್ಕಳ ತಲೆ ಗುಂಡು ಹೊಡೆಸುವುದು ಒಂದೆಡೆಯಾದರೆ, ಇದೇ ಫ್ಯಾಷನ್ ಆಗಿ ಯುವಕರಲ್ಲಿ ಬುಲೆಟ್ ಕಟ್ ಆಗಿದೆ! ಮಹಿಳೆಯರು ಗುಂಡು ಪ್ರಿಯರಂತೆ! ಹೇಗೆ? ಸರದಲ್ಲಿ ಧರಿಸುವ ಬಂಗಾರದ ಗುಂಡುಗಾಳೇ ಇದಕ್ಕೆ ಉತ್ತರ.

ಹಾಗೆ ನೋಡಿದರೆ, ಮಹಿಳೆಯರು ಬಹು ಹಿಂದಿನಿಂದಿನಿಂದಲೂ ಗುಂಡುಪ್ರಿಯರೆಂಬುದರಲ್ಲಿ ಸಂದೇಹವಿಲ್ಲ! ಹೇಗಂತೀರಾ? ತಮ್ಮ ಕರಿಮಣಿ ಸರದಾರನಿಗೆ ತಿಳಿಯದಂತೆ, ಸಾಸಿವೆ ಜೀರಿಗೆ ಡಬ್ಬದಲ್ಲಿ ಚೂರೂಪಾರು ಹಣ ಕೂಡಿಡುತ್ತ, ತಾಳಿಸರದಲ್ಲಿರುವ ಕರಿಮಣಿಗಳ ಜೊತೆಗೆ ಬಂಗಾರದ ಗುಂಡುಗಳ ಸಂಖ್ಯೆಯನ್ನು ನಿಧಾನವಾಗಿ ಸರದ ದಾರಕ್ಕೆ ಏರಿಸಿಕೊಳ್ಳುವುದರಲ್ಲಿ ನಿಸ್ಸೀಮರು. ಬಯಲು ಸೀಮೆಯ ಗಂಡು ಬಲುಗುಂಡೂ, ಜಗಮೊಂಡು ದುಂಡು ಹೂಚೆಂಡು ನನ್ನ ಸರದಾಗೆ ರಸಗುಂಡು ಎಂದು ಹಳೆಯ ಸಿನೆಮಾದಲ್ಲಿ ನಾಯಕಿಯೊಬ್ಬಳು, ಸಿಡಿಮದ್ದಿನ ಗುಂಡಿನ ಗಾತ್ರದ ಸರವನ್ನು ಧರಿಸಿ, ಅದನ್ನು ಕೈಯಿಂದ ಎತ್ತಿಹಿಡಿದು ವೈಯ್ಯಾರವಾಗಿ ಹಾಡುವುದನ್ನು ನೋಡಿದ ನಂತರ ನೆಲ್ಲೀಕಾಯಿ, ಬೋರುಮಾಳ, ಮೋಹನಮಾಲಾ, ಗೆಜ್ಜೆಟೀಕಿ, ಹೀಗೆ ವಿವಿಧ ವಿನ್ಯಾಸದ, ಅಳತೆಯ ಗುಂಡಾಭರಣಗಳ ಸರಮಾಲೆಗಳನ್ನು ಕೊರಳಮಾಲೆಯನ್ನಾಗಿಸಿಕೊಂಡವರು ಹೆಚ್ಚಾದರು.

ಗಟ್ಟಿಮುಟ್ಟಿನ ಲೆಕ್ಕದಲ್ಲಿ ಕೆಲವು ಗುಂಡಿನ ಮಾಲೆಗಳು, ಡಕಾಯಿತರು ಅಥವಾ ಯುದ್ಧಾಳುಗಳು ಭುಜಕ್ಕೆ, ಸೊಂಟಕ್ಕೆ ಸುತ್ತಿಕೊಳಗಳುವ ಬುಲೆಟ್ ಗುಂಡುಗಳ ಮಾಲೆಗಳನ್ನೂ ಮೀರಿಸುವಂತಿರುತ್ತವಾದ್ದರಿಂದ ಗುಂಡಿಗೆ ಗುಂಡಿಗೆಯೊಡ್ಡಿದವರು ಸಾಲಿಗೆ ಈ ಮಹಿಳಾಮಣಿಗಳನ್ನು ಸೇರಿಸಬಹುದು.

ಒಳಗೆ ಸೇರಿದರು ಗುಂಡು, ಹುಡುಗಿ ಆಗುವಳು ಗಂಡು ಎಂದು, ಸರಿರಾತ್ರಿಯಲಿ ಗುಂಡನೆಯ ಬಾಟಲನೆತ್ತಿ ಗಟಗಟ ಕುಡಿಯುತ್ತ, ಕುಣಿಯುತ್ತ ಚಿತ್ರ ನಟಿ ಗುಂಡಿನ ಹಾಡಿಗೆ ಮುನ್ನುಡಿ ಬರೆದಾಗ, ಗಂಡೆದೆಯ ಗಂಡೈಕಳೆಲ್ಲ ಗುಂಡು ಹೊಡೆಸಿಕೊಂಡಂತೆ ಗರಬಡಿದಂತೆ ನೋಡುತ್ತಿದ್ದರು; ಆಗ ಗುಂಡು ಹಾಕಿ ಬಂದ ಗಂಡನ ಜೊತೆ ಗುದ್ದಾಡುತ್ತ, ಹೊತ್ತು ಹೊತ್ತಿಗೆ ಮುದ್ದೆಗುಂಡುಗಳನ್ನು ಉರುಳಿಸುತ್ತ, ಗುಂಡಾ (ಗೋಲಿ)ಗಳೊಡನೆ ಆಡುತ್ತ, ಗುಂಡರಗೋವಿಗಳ



ಹಾಗೆ ಊರೆಲ್ಲ ಅಲೆಯುತ್ತಿರುವ ಮಕ್ಕಳನ್ನು ಸಂಭಾಳಿ ಸುತ್ತ, ಗುಡಿ ಗುಂಡಾರಗಳನ್ನು ಸುತ್ತುತ್ತಾ, ಅಡುಗೆ ಮನೆಯಲ್ಲಿನ ರುಬ್ಬುವ ಗುಂಡು, ಕಲ್ಲುಗುಂಡು ಗಳನ್ನು ಹೊರಳಾಡಿಸುತ್ತ, ಮಾತಿನಲ್ಲೇ ರುಬ್ಬುತ್ತಿದ್ದವ ರಿಗೆ, ಈ ಗುಂಡಿನ ಹಾಡು ಸ್ಫೂರ್ತಿ ನೀಡಿ, ಗಂಡಿನ ಸಮಾನತೆಯ ಜೊತೆಗೆ ಗುಂಡಿನ ಸಮಾನತೆಗೂ ಹೋರಾಡುವ ಸ್ಫೂರ್ತಿ ತಂದಿದ್ದು ಸುಳ್ಳಲ್ಲ!

ಗುಂಡು ಗುಂಡಾದ ನಾಯಕಿಯರು!

ಮೂರುಹೊತ್ತು ಅಚ್ಚುಕಟ್ಟಾಗಿ ಉಂಡುಂಡು ಗುಂಡು ಗುಂಡಾಗಿದ್ದ ಹೆಣ್ಣುಮಕ್ಕಳು ದಂಡುದಂಡಾಗಿ ಸಿನಿಮಾ ಕ್ಷೇತ್ರಕ್ಕೆ ಧುಮುಕಿ ನಾಯಕಿಯರಾಗಿ, ಗುಂಡು ಕಲ್ಲಿನಂತೆ ನಿಂತಲ್ಲಿಯೇ ನಿಂತು, ಡೈಲಾಗ್ ಉದುರಿಸುತ್ತಿದ್ದ ಕಾಲವಿತ್ತು. ಈಗ ಅಭಿರುಚಿ ಬದಲಾಗಿ, ಝೀರೋ ಎನ್ನುವ ಗುಂಡಿನ ಸೈಜಿಗೆ ಬರಲು ನಟೀಮಣಿಗಳು ನಡೆಸುವ ಕಸರತ್ತು ಒಂದೆರ ಡಲ್ಲ. ಗುಂಡನೆಯ ಮುಖದ ಹೆಣ್ಣುಗಳನ್ನು ಚಂದಿರ ವದನೆ ಎಂದು ಬಣ್ಣಿಸುವುದಿದೆ. ಹೆಣ್ಣು ಗ್ರಾಮ ದೇವತೆಗಳ ಮಂದಿರಗಳಲ್ಲಿಯೂ ಸಹ ಪೂಜೆಗೊಳ್ಳುವ ಗುಂಡನೆಯ ಶಿಲಾಗುಂಡುಗಳು ಹೆಚ್ಚಾಗಿ ಕಂಡುಬರುತ್ತವೆ.

ತಲೆ ಪೂರ್ತಿ ಗುಂಡು

ಪ್ರತಿದಿನ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಗುಂಡಿನ ದಾಳಿಯ ಬಗ್ಗೆ ಸುದ್ದಿ ಪ್ರಕಟವಾಗುತ್ತಲೇ ಇರುತ್ತದೆ. ಆದರೆ ಮಕ್ಕಳ ವಿಷಯದಲ್ಲಿ ಗುಂಡು ಎನ್ನುವ ಪದ ಚಿರಪರಿಚಿತ ಎನ್ನಬಹುದು. ನಾಮಕರಣಕ್ಕೆ ಮುಂಚೆಯೇ ಬಹುತೇಕ ಮಕ್ಕಳು ಪ್ರೀತಿಯಿಂದ ಗುಂಡು, ಗುಂಡಾ, ಗುಂಡಿ ಎನ್ನುವ ಹೆಸರಿನಿಂದಲೇ ಕರೆಸಿಕೊಳ್ಳುವುದಿದೆ. ಕೆಲವರಿಗೆ ಅದು ಖಾಯಂ ನಾಮಕರಣವಾಗಿಯೂಬಿಡುತ್ತಿದ್ದ ಕಾಲವಿತ್ತು. ಕೇಶಮುಂಡನ ಕಾರ್ಯಕ್ರಮದಲ್ಲಿ ಮಗುವಿನ ತಲೆಯನ್ನು ಗುಂಡು ಹೊಡೆಸಿ ಅನ್ವರ್ಥಕ ಗೊಳಿಸುತ್ತಿದ್ದರು. ನಂತರ ಕೆಲ ವರ್ಷಗಳವರೆಗೂ ಸಹ ಅಲ್ಲಿ ಇಲ್ಲಿ ದೇವರಿಗೆ ಮುಡಿ ಕೊಡುವ ನೆಪದಲ್ಲೋ ಅಥವಾ ಬೇಸಿಗೆಯ ನೆಪಕ್ಕೋ, ಒಟ್ಟಿನಲ್ಲಿ ಗುಂಡು ಹೊಡೆಸುವುದು ಗಂಡುಹುಡುಗರ ವಿಷಯದಲ್ಲಿ ಹೆಚ್ಚಿರುತ್ತಿತ್ತು.

ವಿಚಿತ್ರ ಎಂದರೆ, ಗುಂಡು ಎನ್ನುವ ಪದ ಆಂಗ್ಲದಲ್ಲಿ ಬುಲೆಟ್ ಆಗುತ್ತಿದ್ದಂತೆ, ಕೇಶವಿನ್ಯಾಸದ ಶೈಲಿಯೇ ಬದಲಾಗಿಬಿಡುತ್ತದೆ. ಎಳನೀರು ಬುರುಡೆಯನ್ನು ಕೆತ್ತಿದಂತೆ ಬುರುಡೆಯ ಸುತ್ತಲಿನ ಕೂದಲನ್ನು ಸಣ್ಣದಾಗಿ ಕೆತ್ತಿ, ಹಿಂದಿನ ಕೂದಲನ್ನು ಉದ್ದಕ್ಕೆ ಬಿಡುವ ಬುಲೆಟ್ ಕಟಿಂಗ್ ಎನ್ನುವ ವಿನ್ಯಾಸ ಮಾಡಿಸಿ ಕೊಂಡು, ಗುಡುಗುಡು ಎನ್ನುವ ಬುಲೆಟ್ ಬೈಕ್ ಏರಿ, ಬುಲೆಟ್‌ಗಿಂತಲೂ ವೇಗವಾಗಿ ನುಗ್ಗುವ ಗಂಡು ಮಕ್ಕಳ ದಂಡು, ಯಾವಾಗ ಯಾರ ಮೇಲೇರಿ ಹೋಗುವುದೋ ಎನ್ನುವ ಗಾಬರಿಯಲ್ಲಿ ಪಾದಚಾರಿ ಗಳ ಎದೆಯಲ್ಲಿ ಗಡಗಡ ನಡುಕವುಂಟು ಮಾಡು ವುದು ಸಹಜ. ಅದ್ಯಾಕೆ ಕೂದಲುಗಳಿಗೆ ಗಂಡುಹೈಕಳ ಮೇಲೆ ದ್ವೇಷವೋ ಗೊತ್ತಿಲ್ಲ, ಬಹುತೇಕರಿಗೆ ಚಿಕ್ಕ ವಯಸ್ಸಿನಲ್ಲೇ ಕೈಕೊಟ್ಟು ಬೋಳುಗುಂಡಣ್ಣಗಳನ್ನಾಗಿ ಮಾಡಿಬಿಡುತ್ತದೆ.

ಗುಂಡಾದ ಅಕ್ಷರ

ಪುಟ್ಟಮಕ್ಕಳು ಗೋಡೆ, ಮಣ್ಣು ಹೀಗೆ ಸಿಕ್ಕ ಸಿಕ್ಕ ಕಡೆಯಲ್ಲೆಲ್ಲಾ ಗೀಚಾಡುತ್ತಾ, ಹೆಚ್ಚಾಗಿ ಗುಂಡುಸುತ್ತುವುದೇ ಕೆಲಸ. ಶಾಲೆಯ ಮೆಟ್ಟಿಲೇರುತ್ತಿದ್ದಂತೆ, ಕೋಳಿಕಾಲಿನ ಹಾಗೆ ನಾಲ್ಕೂ ದಿಕ್ಕಿಗೆ ಚದುರಿ ಹೋಗುವ ವಿದ್ಯಾರ್ಥಿಗಳ ಅಕ್ಷರಗಳನ್ನು ಗುಂಡಾಗಿಸಲು ಶಿಕ್ಷಕರು ಪಡುವ ಶ್ರಮ ಅಷ್ಟಿಷ್ಟಲ್ಲ. ಉದ್ದನೆಯ ಕಂಬದಿಂದ ಕಂಬಕ್ಕೆ ಹಾದು ಹೋಗಿರುವ ಕರೆಂಟ್ ವಯರಿನ ಮೇಲೆ ಸಾಲಾಗಿ ಪಕ್ಷಿಗಳು ಕೂರುವಂತೆ, ಅಡ್ಡ ಮಲಗಿರುವ ಸಾಲಿನ ಗೆರೆಯ ಮೇಲೆ ಅಕ್ಷರಗಳನ್ನು ಗುಂಡಾಗಿ ಕೂರಿಸಲು, ಎರಡು, ಮೂರು, ನಾಲ್ಕು ಸಾಲುಗಳ ನೋಟ್‌ಪುಸ್ತಕಗಳಲ್ಲಿ ಎಡೆಬಿಡದೆ ತಿದ್ದಿಸುವುದಿದೆ. ತಪ್ಪಾದ ಕಡೆಯೆಲ್ಲ ಮತ್ತೆ ಗುಂಡು ಸುತ್ತಿ, ಪುನಃ ಬರೆಯಲು ಹಚ್ಚುವುದಿದೆ. ಅಂಕಗಳೂ ಸಹ ಸಂಖ್ಯೆಯ ಮುಂದೆ ಗುಂಡು ಬರುವುದಕ್ಕಿಂತ ಹಿಂದೆ ಬರುವವರೇ ಹೆಚ್ಚಾಗಿದ್ದ ಕಾಲವಿತ್ತು. ಜಾತ್ರೆ, ಉತ್ಸವಗಳಲ್ಲಿ ಜಗಜಟ್ಟಿಗಳು ತೂಕದ ಕಲ್ಲುಗುಂಡನ್ನು ಎತ್ತುವ ಪ್ರದರ್ಶನದಂತೆ, ಆಟದಲ್ಲಿಯೂ ಸಹ ಶಾಟ್‌ಪುಟ್ ಎನ್ನುವ ಬಲುಭಾರದ ಕಬ್ಬಿಣದ ಗುಂಡನ್ನು, ಮುಂದಕ್ಕೆ ಎಸೆಯುವ ಪ್ರಯತ್ನದಲ್ಲಿ ಹಿಂದಕ್ಕೆ ತೆಗೆದುಕೊಂಡು ಹೋದಾಗ, ಅಲ್ಲಿಯೇ ಕೈತಿರುಚಿದಂತಾಗಿ ಕೈಚೆಲ್ಲುವುದಿತ್ತು.

ಸರ್ಕಾರಿ ಕಚೇರಿಯಲ್ಲಿನ ಬಹುತೇಕ ಸಿಬ್ಬಂದಿಗಳು ಹೆಚ್ಚಾನುಹೆಚ್ಚು ಕೆಲಸವಿಲ್ಲದೆ ಖಾಲಿ ಕೂತು, ಲಂ(ಚ)ಚ್ ಅನ್ನು ಅಗತ್ಯಕ್ಕಿಂತ ಹೆಚ್ಚಾಗಿಯೇ ಮೇ(ಯರ್) ಯುವವರಾದ್ದರಿಂದಲೋ ಏನೋ, ಅಂತಹವರ ಉದರವೆಂಬುದು ಸದರದಿಂದ ಅಡ್ಡಾದಿಡ್ಡಿಯಾಗಿ ಬೆಳೆದು ಗುಂಡುಗಡಿಗೆಯ ಆಕಾರ ತಾಳುವುದಿದೆ. ಟೇಬಲ್ ಮೇಲಿನ ಫೈಲುಗಳಲ್ಲಿನ ಕಾಗದಪತ್ರಗಳು, ಗಾಳಿಯಲ್ಲಿ ಹಾರದಂತೆ ತಡೆಯಲು ಗುಂಡುಸೂಜಿಯನ್ನು ಚುಚ್ಚಿ, ಅವುಗಳ ಹೊಟ್ಟೆಯ ಮೇಲೆ ಗುಂಡನೆಯ ಪೇಪರ್‌ವೇಟ್ ಎನ್ನುವ ಬಣ್ಣಬಣ್ಣದ ಗಾಜಿನ ಗುಂಡನ್ನು ಇಡುವುದಿದೆ. ಇತ್ತೀಚಿನ ರಾಜಕಾರಣಿಗಳು ಸದನದಲ್ಲಿ ತಮ್ಮ ಮಾತಿನ ಸಿಡಿಗುಂಡುಗಳನ್ನು ಸಿಡಿಸುವುದಕ್ಕಿಂತ, ಆ ಗುಂಡುಗಳಲ್ಲಿ ಅಡಗಿದ ತಮ್ಮ ರಸಿಕ ಲೀಲಾವಳಿಯಿಂದಲೇ ಹೆಚ್ಚು ಸದ್ದು ಮಾಡುತ್ತಿದ್ದಾರೆ.

ಗೇಲಿಗೊಳಗಾದ ಗೆಲಿಲಿಯೋ!

ಬಟ್ಟೆಗೆ ಹೊಲಿದ ಬಟನ್ ಗುಂಡಿಗಳು ಬಿದ್ದು ಹೋದಾಗ ಇಣುಕಬಹುದಾದ ಕಿಂಡಿಯನ್ನೇನೋ ಸರಿಪಡಿಸಬಹುದು, ಆದರೆ ರಸ್ತೆಯಲ್ಲಿ ತೆಗ್ಗು ಬಿದ್ದಾಗ ಉಂಟಾಗುವ ಗುಂಡಿಯ ದುರಸ್ತಿ ಸುಲಭವಲ್ಲ. ಗುಂಡಿಯ ನೋಡಿರಣ್ಣಾ, ರಸ್ತೆಯ ಗುಂಡಿಯ ನೋಡಿರಣ್ಣ ಎಂದು ಬೈದಾಡಿಕೊಂಡೇ ಹಾರುತ್ತಿರಬೇಕು.

ಭೂಮಿ ಚಪ್ಪಟೆಯಾಗಿದೆ ಎಂದು ತಿಳಿದಿದ್ದ ಕಾಲದಲ್ಲಿ, ವಿಜ್ಞಾನಿ ಗೆಲಿಲಿಯೋ ಗೆಲಿಲಿ ಗುಂಡಗಿದೆ ಎಂದು ವಾದಿಸಿ ಗೇಲಿಗೊಳಗಾಗಿ, ಎಷ್ಟೋ ವರ್ಷಗಳು ಗೃಹಬಂಧನಕ್ಕೊಳಗಾಗಿದ್ದು ತಿಳಿದ ವಿಷಯವೇ. ಸೂರ್ಯ, ಚಂದ್ರ, ಗ್ರಹಗಳು ಎಲ್ಲವೂ ಸಹ ಗುಂಡುಮಯ. ಹರ್ಕ್ಯುಲಸ್ ಎನ್ನುವವನು ಸ್ವರ್ಗವನ್ನೇ ಗುಂಡಿನಾಕಾರವನ್ನಾಗಿಸಿ ಭುಜದ ಮೇಲೆ ಹೊತ್ತಿದ್ದಾನೆ ಎನ್ನುವ ಪುರಾಣದ ಕಥೆಗಳಿವೆ. ಆಹಾರ, ತಿನಿಸುಗಳಲ್ಲಿಯೂ ರೊಟ್ಟಿ, ಮುದ್ದೆ, ಚಪಾತಿ, ಪೂರಿ, ಜಿಲೇಬಿ, ಜಹಾಂಗೀರು, ಜಾಮೂನು, ಚಕ್ಕುಲಿ, ಕೋಡುಬಳೆ ಹೀಗೆ ಗುಂಡಾಕಾರದಲ್ಲಿರುವ ತಿನಿಸುಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಉಂಡೆಗುಂಡುಗಳ ಬಗ್ಗೆ ಎರಡು ಮಾತು ಹೇಳಲೇ ಬೇಕು. ಕೆಲವು ಬಾಯಿಯೊಳಗೆ ಇಡುತ್ತಿದ್ದಂತೆ ಕರಗಿ ಹೋದರೆ, ಮತ್ತೆ ಕೆಲವು ಗೋಡೆಗೆ ಹೊಡೆದರೆ ಚೆಂಡಿನಂತೆ ಪುಟಿದು ವಾಪಾಸು ಬರುವಂತಿರುತ್ತವೆ. ಗೋಡೆಗೆ ಮೊಳೆ ಅಥವಾ ಮರದಲ್ಲಿರುವ ಹಣು ಕಾಯಿ ಅಥವಾ ಕ್ಯಾಟರ್ ಬಿಲ್ಲಿನಲ್ಲಿ ಇಟ್ಟು ಹೊಡೆ ಯಲು ಸಲೀಸಾಗಿ ಉಪಯೋಗಿಸಬಹುದು. ಗುಂಡಾಕಾರದ ಚಕ್ರದ ಆವಿಷ್ಕಾರವಾಗಿ ಕೇವಲ ಮಣ್ಣಿನ ಪಾತ್ರೆ, ಕುಂಭಗಳನ್ನು ತಯಾರಿಸಲು ಮಾತ್ರವಲ್ಲದೆ, ವಾಹನ, ಬ್ಯಾಗು, ಹೀಗೆ ಅನೇಕ ವಸ್ತುಗಳ ಬುಡಕ್ಕೆ ಅಂಟಿಕೊಂಡು, ಭಾರ ಸಾಗಿಸುವ ಶ್ರಮವನ್ನು ಹಗುರಗೊಳಿಸಿವೆ.

ಗುಂಡಿನ ಬಗ್ಗೆ ಅದೆಷ್ಟೇ ಬರೆದರೂ ಆದಿ ಅಂತ್ಯವಿಲ್ಲದ ಗುಂಡನೆಯ ವೃತ್ತದ ಹಾಗೆ ಸುಲಭದಲ್ಲಿ ಅರಿವಿಗೆ ನಿಲುಕದು ಎಂದು ಘೋಷಿಸುತ್ತಾ ಗುಂಡೋಪಾಖ್ಯಾನವನ್ನು ಮುಕ್ತಾಯಗೊಳಿಸೋಣವೇ?

ಮದುವೆಯಾದ ನವಜೋಡಿಯು ಹನಿಮೂನ್ ಹೋಗುವುದು ಸಾಮಾನ್ಯ. ಹನಿಮೂನ್ ಬದಲಿಗೆ, ತನ್ನ ಮಡದಿಯೊಡನೆ ತೇಜಸ್ವಿಯರ ಮನೆಗೆ ಭೇಟಿ ನೀಡಿದ ಅಪರೂಪದ ಉದಾಹರಣೆ ಇಲ್ಲಿದೆ! ಇದು 1994ರ ಒಂದು 'ಪ್ರವಾಸಾನುಭವ'.

ಬದುಕು ಎಂದರೆ ಓದು ಬರಹ ಮಾತ್ರ ಅಲ್ಲ!

» ರಾಘವೇಂದ್ರ ರಾಯಲಪಾಡು



ಸಾಹಿತ್ಯಾಸಕ್ತಿಯು ನಮ್ಮಿರ್ವರ ಸಮಾನಾಸಕ್ತಿಯಾಗಿತ್ತು. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ನನ್ನ ಲೇಖನ, ಕವಿತೆಗಳನ್ನು ರುಕ್ಮಿಣಿ ಓದಿದ್ದರು. ಅವರ ಬರೆಹಗಳನ್ನು ನಾನೂ ಓದಿ ಮೆಚ್ಚಿಕೊಂಡಿದ್ದೆ; ಬೆಂಗಳೂರಿನಲ್ಲಿ ನನ್ನ ಗೆಳೆಯರ (ಅವರಣ್ಣನ) ಕೊಠಡಿಯಲ್ಲಿ, ಅರಸೀಕೆರೆಯ ರುಕ್ಮಿಣಿ ಅವರ ಪರಿಚಯವಾದಾಗ ಇಬ್ಬರಲ್ಲೂ ಪರಸ್ಪರ ಅಭಿಮಾನ ಮೆಚ್ಚುಗೆಯಿತ್ತು. ಕ್ರಮೇಣ ಪರಿಚಯ ಸ್ನೇಹವಾಗಿ, ಸ್ನೇಹ ಪ್ರೀತಿಯಾಗಿ 1994 ಮೇ 26 ರಂದು ನಾವು ದಂಪತಿಗಳಾದೆವು.

ಇಬ್ಬರೂ ವೃತ್ತಿಯಲ್ಲಿದ್ದುದರಿಂದ ಹೊಸ ಶೈಕ್ಷಣಿಕ ವರ್ಷದ ಆರಂಭವಾಗಿದ್ದ ನಿಮಿತ್ತ ಮದುವೆಗೆ ಹೆಚ್ಚಿನ ದಿನಗಳ ರಜೆ ಸಿಕ್ಕಿರಲಿಲ್ಲ. ಮದುವೆಯಾದ ಕೆಲವೇ ದಿನಗಳಿಗೆ ನಮ್ಮ ಕೆಲಸಗಳಿಗೆ ಹಾಜರಾದೆವು. ಕಾಲೇಜಿನ ವಸತಿ ನಿಲಯದಲ್ಲಿದ್ದ ನಾನು ವಾರಾಂತ್ಯದ ರಜೆಯಲ್ಲಿ ಅವರಿದ್ದೆಡೆಗೆ ಹೋಗಬಹುದಿತ್ತಷ್ಟೆ. ಪ್ರವಾಸದ ಉದ್ದೇಶಕ್ಕೆ ಹೆಚ್ಚು ರಜೆ ಹಾಕುವ ಅವಕಾಶವೂ ಇರಲಿಲ್ಲ. ಹೀಗಿರಲು ಮನೆಯ ಹಿರಿಯರು 'ಮದುವೆಯಾಗಿ ಇಷ್ಟು ದಿನವಾಯಿತು, ಹನಿಮೂನ್‌ಗೆ ಹೋಗದಿದ್ದರೆ ಹೋಗಲಿ; ಶನಿವಾರ,ಭಾನುವಾರಗಳಂದು ಕನಿಷ್ಟ ಯಾವುದಾದರೂ ಪುಣ್ಯಕ್ಷೇತ್ರಕ್ಕಾದರೂ ಹೋಗಿ ಬನ್ನಿ' ಎಂದು ಒಂದೇ ಸಮನೆ ವರಾತ ಮಾಡಿದರು.

ಆಗ ನನ್ನ ಮನಸಿಗೆ ಹೊಳೆದದ್ದು ಹೇಗಾದರೂ ಮಾಡಿ, ನವಮಡದಿಗೆ ಇದನ್ನು ಒಂದು ಆಶ್ಚರ್ಯಭರಿತ ಸುಂದರ ಮತ್ತು ಅರ್ಥಪೂರ್ಣ ಸಂದರ್ಭವಾಗಿಸಬೇಕೆಂದು. ಹಾಗೆ ಯೋಚಿಸಿ, ಒಂದು ದಿನ ಬಸ್ ಹತ್ತಿದೆವು; ನಾವು ಹೊರಟಿದ್ದು ಧರ್ಮಸ್ಥಳದ ಭೇಟಿಗೆ ಎಂದು!

ಹಲವು ಗಂಟೆಗಳ ಪ್ರಯಾಣದ ನಂತರ ಮೂಡಿಗೆರೆಯಲ್ಲಿ ಬಸ್ ಇಳಿದೆ; ರುಕ್ಮಿಣಿಯೂ ಇಳಿದರು. ಮೂಡಿಗೆರೆಯ ಬಸ್ ನಿಲ್ದಾಣದಲ್ಲಿ ಹೆಜ್ಜೆ ಹಾಕಿದಾಗ ರುಕ್ಮಿಣಿ 'ಇದೇನ್ರಿ, ಇಲ್ಲಿ ಇಳಿದಿರಿ? ಇದೇನಾ ಧರ್ಮಸ್ಥಳ? ಯಾವುದೋ ಬೇರೆ ಊರಿನ ರೀತಿ ಕಾಣಿಸುತ್ತಿದೆ' ಎಂದಿದ್ದರು ಮುಗ್ಧವಾಗಿ!

'ಬನ್ನಿ, ಇಲ್ಲಿ ನಿಮಗೊಂದು ಅಚ್ಚರಿ ಕಾದಿದೆ' ಎಂದು ಉತ್ತರಿಸಿ, 'ನಿರುತ್ತರ'ದ ಎದುರು ಕರೆದೊಯ್ದು ನಿಲ್ಲಿಸಿದೆ! ಮನೆಯ ಹೆಸರನ್ನು ಓದಿದ ಅವರು, ತುಸು ಗಲಿಬಿಲಿಗೆ ಒಳಗಾದವರಂತೆ, 'ರೀ, ಇದು ತೇಜಸ್ವಿಯವರ ಮನೆ ಅಲ್ವಾ, ನಾನು ಬರಲ್ಲಪ್ಪಾ! ಭಯವಾಗುತ್ತೆ! ಬೇಡ. ಬನ್ನಿ, ವಾಪಸ್ ಹೋಗೋಣ!' ಎಂದರೂ ಮುಖದಲ್ಲಿ ಸಂತೋಷ ತುಳುಕಿತ್ತು.

'ಅಲ್ರೀ, ಅವರ ಜೊತೆ ಏನು ಮಾತಾಡೋದು... ಅವರ ಒಂದೆರಡು ಕಾದಂಬರಿಗಳನ್ನು ಮತ್ತೊಮ್ಮೆ ಆದ್ರೂ ಓದಿಕೊಂಡು ಬರಬೇಕಿತ್ತು. ಅವರ ಸಮಯ ಹಾಳು ಮಾಡೋದು ಬೇಡ, ಅವರಿಗೆ ಸಿಟ್ಟು ಜಾಸ್ತಿ ಅಂತೆ; ಅವರ ಕೃತಿ ಓದದೇ ಬಂದಿದ್ದೇವೆ ಎಂದು ಬೈದುಬಿಟ್ಟರೆ!' ಎಂದರು. ರುಕ್ಮಿಣಿಯವರಿಗೆ ಮನದಾಳದಲ್ಲಿ ತೇಜಸ್ವಿಯವರನ್ನು ಕಂಡು ಮಾತನಾಡುವ ಆಸೆಯಿದ್ದರೂ, ಅವರೇನನ್ನುವರೋ ಎಂಬ ಭಯ. ಈ ಭಯ ನನಗೂ ಇತ್ತು. ತೇಜಸ್ವಿಯವರ ದಿಢೀರ್ ಕೋಪ, ದಿಢೀರ್ ಶಾಂತ ಸ್ಥಿತಿ ಆಗ ಸಾಕಷ್ಟು ಪ್ರಚಾರ ಪಡೆದಿತ್ತು! ಮದುವೆಯಾದ ನವಜೋಡಿಯನ್ನು ನೋಡಿ ಸ್ವಲ್ಪ ಮೃದುವಾಗಿ ವ್ಯವಹರಿಸುವರೆಂಬ ಆಲೋಚನೆ ನನ್ನದಾಗಿತ್ತು!

ತೇಜಸ್ವಿಯರ ತೋಟದೊಳಕ್ಕೆ ಪ್ರವೇಶಿಸಿದಾಗ, ಇಳಿಜಾರು ರಸ್ತೆಯಲ್ಲಿ ಬಹಳ ದೂರ ಸಾಗಬೇಕಾಯಿತು. ಬಹಳ ಎಚ್ಚರಿಕೆಯಿಂದ ನಡೆದೆವು. ಬಹುಶಃ ತೇವವಿದ್ದುದರಿಂದ ಜಾರಿಕೆಯಿತ್ತು. 'ನಿರುತ್ತರ'ದ ಅಂಗಳಕ್ಕೆ ಹೋದಾಗ, ಮನೆಯಲ್ಲಿ ಯಾರೂ ಇರಲಿಲ್ಲ. ತೇಜಸ್ವಿಯವರ ಪ್ರೀತಿಯ ಕಿವಿ ನಾಯಿ ಸಹ ಕಾಣಲಿಲ್ಲ. ಹಾಗೇ ಸ್ವಲ್ಪ ಹಿಂಜರಿಕೆಯಿಂದ ಮನೆಯ ಹಿಂಭಾಗದಲ್ಲಿ, ಮರಗಳು ತುಂಬಿದ್ದ ಕಾಡಿನಂತಹ ಜಾಗಕ್ಕೆ ಹೋದೆವು. ಪಕ್ಕದಲ್ಲಿ ಒಂದು ಹಳ್ಳ ಹರಿಯುತ್ತಿತ್ತು. ಆ ಹಳ್ಳಕ್ಕೆ ನೀರೆತ್ತುವ ಒಂದು ಯಂತ್ರ ಜೋಡಿಸಲಾಗಿತ್ತು; ಅದು ಸದ್ದು ಮಾಡುತ್ತ ಕೆಲಸ ಮಾಡುತ್ತಿದ್ದುದು ತಿಳಿಯಿತು. ಅದು ಯಾವುದೋ ಕೊಂಡು ತಂದ, ಬ್ರಾಂಡೆಡ್ ಮೋಟರು ತರಹ ಅನಿಸಲಿಲ್ಲ. ಸ್ವತಃ ಜೋಡಿಸಿ ಮಾಡಿದ ಒಂದು ಯಂತ್ರವೆಂದು ತೋರಿತು! ಅಲ್ಲಿ ಗಂಡಾಳೊಬ್ಬ ಅನಿತು ದೂರದಲ್ಲಿ ಹೆಣ್ಣಾಳೊಬ್ಬಾಕೆ ಕೆಲಸದಲ್ಲಿ ಮಗ್ನರಾಗಿದ್ದರು. ಅವರಿಗೆ ನಮ್ಮತ್ತ ಹೆಚ್ಚಿನ ಗಮನವಿರಲಿಲ್ಲ; ಬಹುಶಃ ನಮ್ಮ ರೀತಿ, ತೇಜಸ್ವಿಯವರ ಅಭಿಮಾನಿಗಳು ಅಲ್ಲಿ ಬರುವುದು ಅವರಿಗೆ ಸಾಮಾನ್ಯ ಸಂಗತಿ ಎನಿಸಿರಬಹುದು. ನಾವು ಕೇಳಿದ ಪ್ರಶ್ನೆಗಳಿಗೆ ಕ್ಲಪ್ತವಾಗಿ ಉತ್ತರಿಸಿದರು ಅಷ್ಟೇ.



ನಾವು ನಿರುತ್ತರಕ್ಕೆ ಹೋದಾಗ ಅವರು ಮನೆಯಲ್ಲಿರಲಿಲ್ಲ; ಕೆಲವು ನಿಮಿಷ ಕಾದೆವು; ತೇಜಸ್ವಿ ಬಂದರು. ಆಗ ತಾನೇ ಮೊಮ್ಮಗಳಿಗೆ ಪೋಲಿಯೋ ಹನಿಗಳನ್ನು ಹಾಕಿಸಿಕೊಂಡು ಹಿಂದಿರುಗಿದ ತೇಜಸ್ವಿಯವರು ಅಂದು ಆರಾಮ ಕುರ್ಚಿಯಲ್ಲಿ ಕೂತು ಸುಮಾರು ಒಂದು ತಾಸು ನಮ್ಮೊಡನೆ ಆರಾಮವಾಗಿ ಹರಟಿದರು.

ತೇಜಸ್ವಿಯವರು ಬಂದ ನಂತರ, ಅವರ ಮನೆಯ ಅಂಗಳದಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತ ಅವರೆದು, ನಾವೂ ಕುರ್ಚಿಯಲ್ಲಿ ಕುಳಿತು ಹರಟಿದೆವು.

'ಅಲ್ರೀ, ಯಾರ್ರೀ ಹೇಳಿದ್ದು ನಾನು ಸಿಡುಕು ಮೂತಿಯವನು ಅಂತ? ನಿಮಗೆ ಹಾಗೆ ಅನಿಸಿತಾ...' ಎಂದು ಅಂದು ನಗಾಡಿದ್ದರು ಪೂರ್ಣ ಚಂದ್ರ ತೇಜಸ್ವಿ. 'ಕೋಲಾರದ ಕಡೆಯವರು ಒಬ್ರು ಆಗಾಗ ಬರ್ತಿರ್ತಾರೆ, ಒಳ್ಳೆ ಫೋಟೋಗ್ರಾಫರ್' ಎಂದು ನನಗೆ ಪರಿಚಿತರೂ ಆಗಿದ್ದ ಶಿಡ್ಲಘಟ್ಟದ ಡಿ.ಜಿ.ಮಲ್ಲಿಕಾರ್ಜುನರನ್ನು ನೆನಪಿಸಿಕೊಂಡಿದ್ದರು. ನಂತರ ಅವರ ಮಾತು ಸರ್ಕಾರಿ ಕಚೇರಿಗಳಲ್ಲಿನ ಹೆಚ್ಚಾಗಿದ್ದ ಭ್ರಷ್ಟಾಚಾರದತ್ತ ಹೊರಳಿತ್ತು. 'ಕಚೇರಿಗಳ ಮುಂದೆ ಯಾವ ಕೆಲಸಕ್ಕೆ ಎಷ್ಟು ಅಂತ ಒಂದು ಬೆಲೆ ಪಟ್ಟಿಯನ್ನಾದರೂ ಹಾಕಿಬಿಟ್ಟರೆ ಜನರಿಗೆ ಒಂಚೂರು ಸಮಯವಾದರೂ ಉಳಿಯುತ್ತೆ' ಅಂತ ರೇಗಾಡಿದ್ದರು. 'ಅಲ್ಲಾ ಸಾರ್ ನಿಮಗೂ ಆ ಮಟ್ಟಿಗಿನ ಅನುಭವ ಆಗಿದೆಯಾ?' ಅಂದಿದ್ದಕ್ಕೆ, 'ದುರಾಸೆ ಕಣ್ರೀ, ಯಾರನ್ನೂ ಲೆಕ್ಕಿಸಲ್ಲ, ಸ್ವಂತ ಜನರಾದರೂ ಅಷ್ಟೇ' ಎಂದಿದ್ದರು.

ಹೊರಗೆ ಬಂದು ನಮ್ಮೊಡನೆ ಮಾತಿಗೆ ಸೇರಿದ ರಾಜೇಶ್ವರಿ ಅವರು 'ಪದಾರ್ಥ ಎಲ್ಲಾ ಸಿದ್ದವಿದೆ, ಕೊಂಚ ಅನ್ನಕ್ಕಿಟ್ಟರೆ ಆಯ್ತು; ಇಲ್ಲೇ ಊಟ ಮಾಡಿ ಹೋಗಿ ಆಯ್ತಾ... ಬೆಳ್ಳಕ್ಕಿ ಆಗಬಹುದಲ್ಲಾ... ಹೊಸ ಜೋಡಿ ಊಟ ಮಾಡಿಯೇ ಹೋಗಬೇಕು' ಎಂದು ತಾಕೀತು ಮಾಡಿ ಒಳ ನಡೆದಿದ್ದರು. ಅವರ ತೋಟ, ಅವರು ಮಾಡಿಕೊಂಡ ಸ್ವಂತ ಸಂಶೋಧನೆಯ ನೀರೆತ್ತುವ ಯಂತ್ರ ಇತ್ಯಾದಿಯೆಲ್ಲಾ ನೋಡಿದೆವು.

ಅಂದು ತೇಜಸ್ವಿಯವರನ್ನು ಕಂಡು ಮಾತನಾಡಿದ ನೆನಪು ನಮ್ಮಿರ್ವರ ಬದುಕಿನ ರಸಮಯ ನೆನಪಾಗಿ ಸದಾ ಉಳಿದಿದೆ. ಆನಂತರ ಆ ದಾರಿಯಲ್ಲಿ ಹಲವು ಬಾರಿ ಪ್ರಯಾಣ ಮಾಡಿದ್ದೆವಾದರೂ ಅಂದಿನ ಪ್ರಯಾಣದ ಅನುಭವ ನಮಗಂತೂ ಅಮೂಲ್ಯ, ಅದ್ವಿತೀಯ!

ಹಕ್ಕಿಗಳ ಗ್ರೀಟಿಂಗ್ ಕಾರ್ಡ್

ಅವರ ಪ್ರಕಾಶನದ ಚಟುವಟಿಕೆ ನಡೆಸುವ ಕೊಠಡಿ ಅಲ್ಲೇ ಸನಿಹದಲ್ಲಿ ಇತ್ತು;ಅದನ್ನು ನಿರ್ವಹಿಸುತ್ತಿರುವ ಹುಡುಗ ಬಹಳ ಒಳ್ಳೆಯವನೆಂದೂ ಅವರ ಹೆಸರೂ ರಾಘವೇಂದ್ರ ಎಂದೂ ಹೇಳಿದ್ದು ನೆನಪಿದೆ! ನನ್ನ ಹೆಸರೂ ರಾಘವೇಂದ್ರ ತಾನೆ, ಆದ್ದರಿಂದ, ಆ ಹೆಸರು ಇನ್ನೂ ಚೆನ್ನಾಗಿ ನೆನಪಿದೆ. ನಾವು ಅಲ್ಲಿಗೆ ಹೋಗಿದ್ದ ಸಮಯದಲ್ಲಿ, ತೇಜಸ್ವಿಯವರು ತಾವೇ ಕ್ಲಿಕ್ಕಿಸಿದ ಹಕ್ಕಿಗಳ ಚಿತ್ರಗಳನ್ನು ಬಳಸಿ, ಶುಭಾಶಯ ಪತ್ರಗಳನ್ನು ತಯಾರಿಸುವ ಹವ್ಯಾಸದಲ್ಲಿ ತೊಡಗಿದ್ದರು; ಮನೆಯಲ್ಲೇ ತಯಾರಿಸಿದಂತೆ ಇದ್ದ ಅಂತಹ ಕೆಲವು ಗ್ರೀಟಿಂಗ್ ಕಾರ್ಡುಗಳನ್ನು ನಾವೂ ಖರೀದಿಸಿ, ಊರಿಗೆ ಬಂದ ನಂತರ, ಗೆಳೆಯರಿಗೆ ಕಳಿಸಿದೆವು.

ಭೇಟಿ ಮಾಡಲು ಸಣ್ಣಗೆ ಭಯ

ತೇಜಸ್ವಿಯವರನ್ನು ಮಾತನಾಡಿಸಲು ನನ್ನ ಮಡದಿಗೆ ಒಂದು ರೀತಿಯ ಸಂಕೋಚ, ಭಯ. 'ರುಕ್ಮಿಣಿ ನಿಮ್ಮನ್ನು ಭೇಟಿಯಾಗಲು ಹೆದರಿದರು; ನೀವು ಬೇಗ ಸಿಟ್ಟಾಗಿ ರೇಗಾಡುವಿರೆಂದು ಹೆದರಿದ್ದಳು' ಎಂದು ನಾನು ಅವರಿಗೆ ಹೇಳಿದೆ. ಅದಕ್ಕೆ ಅವರು ನಗಾಡಿದ್ದರು. 'ಹಾಗೆಂದು ನನ್ನ ಬಗ್ಗೆ ಆಡಿಕೊಳ್ಳುವುದು ನನಗೂ ಗೊತ್ತಿದೆ. ಆದರೆ ಯಾವಾಗಲೂ ಯಾರಾದರೊಬ್ಬರು ಹಾಗೆ ಇರಲು ಸಾಧ್ಯವೇ?' ಎಂದರು. ಅವರ ಪುಸ್ತಕಗಳನ್ನು ಓದಿರದ ಬಗ್ಗೆಯೂ ಮಾತು ಬಂದಿತ್ತು. 'ಇಲ್ಲಿಗೆ ಸಾಹಿತಿಗಳಲ್ಲದವರೂ, ಸಾಹಿತ್ಯಾಸಕ್ತರಲ್ಲದವರೂ, ಅನಕ್ಷರಸ್ತರೂ ಬರುತ್ತಿರುತ್ತಾರೆ; ಬದುಕೆಂದರೆ ಕೇವಲ ಓದು ಬರೆಹ ಅಲ್ಲ ಕಣ್ರೀ!' ಎಂದೇನೋ ನುಡಿದಿದ್ದರು.

ಏಪ್ರಿಲ್ ಹತ್ತು ಬಂತೆಂದರೆ...

» ಡಾ. ನಿರಂಜನ ವಾನಳ್ಳಿ

ಏಪ್ರಿಲ್ ಹತ್ತು ಬಂದರೆ ಒಂಥರಾ ಖುಷಿ. ಒಂಥರಾ ಆತಂಕ. ಹಿಂದಿನ ರಾತ್ರಿಯೆಲ್ಲ ನಿದ್ದೆ ಇರುವುದಿಲ್ಲ. ಯಾಕೆಂದರೆ ಏಪ್ರಿಲ್ 10ರಂದು ನಮ್ಮ ಶಾಲೆಗಳಲ್ಲಿ ರಿಸಲ್ಟು! ಮಾರ್ಚ್ ಕೊನೆಯ ವಾರ ಪರೀಕ್ಷೆಗಳು ಮುಗಿದು ಶಾಲೆಗಳಲ್ಲಿ ಮಕ್ಕಳಿಗೆ ಕೆಲಸವೇ ಇಲ್ಲ. ಉರು ಹೊಡೆಯುವ ಗೋಜಿಲ್ಲ, ಓದಿ ಬರೆಯುವ ಕಾಟವಿಲ್ಲ. ಯಾವಾಗಲೂ ಶಾಲೆ ಹೀಗೇ ಇದ್ದರೆ ಎಷ್ಟು ಚೆನ್ನಾಗಿ ಇರುತ್ತದೆ ಎಂದುಕೊಂಡವರೆಷ್ಟೋ!

ಏಪ್ರಿಲ್ ಮೊದಲವಾರದ ದಿನಗಳು ನಮಗೆ ಆರಾಂ ದಿನಗಳು, ಆದರೆ ಮಾಸ್ತರು- ಅಕ್ಕೋರುಗಳಿಗೆ ಪುರುಸೊತ್ತೇ ಇಲ್ಲ. ಏನೇ ಕೇಳಲು ಹೋದರೂ ಸಿಟ್ಟೇಬರುತ್ತದೆ. ಯಾಕೆಂದರೆ ಆಗಷ್ಟೇ ಪರೀಕ್ಷೆ ಮುಗಿಸಿದ್ದ ಅವರು ಎಲ್ಲಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕು. ಅದನ್ನು ಬೇಕಾಬಿಟ್ಟಿ ಮಾಡುವಂತಿಲ್ಲ. ಉತ್ತರ ಪತ್ರಿಕೆಗಳನ್ನು ಹಾಕಿದ ಅಂಕಗಳ ಸಮೇತ ಪಾಲಕರಿಗೆ ಕೊಡಬೇಕು. ಯಾಕೆ ಅಂಕಗಳು ಕಡಿಮೆ ಆಗಿವೆ ಎಂಬುದನ್ನು ಮಕ್ಕಳಿಗೆ ವಿವರಿಸಬೇಕಿತ್ತು. ಅವರ ಒತ್ತಾಯವನ್ನು ತಡೆದುಕೊಳ್ಳಬೇಕು. ಹೀಗಾಗಿ ಏಪ್ರಿಲ್ ಹತ್ತರವರೆಗೆ ಮಾಸ್ತರು - ಅಕ್ಕೋರುಗಳಿಗೆ ಯಾರೊಡನೆ ಹರಟಲಿಕ್ಕೂ ಸಮಯವಿದ್ದಿಲ್ಲ.

ಅಂತೂ ನಾವೆಲ್ಲ ಕಾದಿದ್ದ ಏಪ್ರಿಲ್ ಹತ್ತು ಬರುತ್ತದೆ. ಕೆಲವರು ಖುಷಿಯಿಂದ, ಕೆಲವರು ದುಗುಡದಿಂದ ಶಾಲೆಯ ಒಳಗೆ ಬರುತ್ತಾರೆ.

ಅಧ್ಯಾಪಕರು ಮಕ್ಕಳಿಗೂ ಅವರ ಪಾಲಕರು ಬಂದರೆ ಅವರಿಗೂ ಮಕ್ಕಳ ಫಲಿತಾಂಶವನ್ನು ಹೇಳುತ್ತಾರೆ. ಅಂಕಪಟ್ಟಿಗಳನ್ನು ಕೊಡುತ್ತಾರೆ. ಕೆಲವರು ಖುಷಿಯಿಂದ ಕುಣಿದರೆ ಕೆಲವರು ಒಂದು ಅಂಕ ಕಡಿಮೆಯಾಗಿದ್ದರೂ ಭಾರೀ ಅನಾಹುತವಾದಂತೆ ಕೂಗಾಡುತ್ತಾರೆ. ಈಗ ಒಂಬತ್ತನೆ ತರಗತಿಯವರೆಗೂ ಮಕ್ಕಳನ್ನು ಫೇಲು ಮಾಡುವಂತಿಲ್ಲ. ಹೀಗಾಗಿ ರಿಸಲ್ಟಿನ ದಿನಕ್ಕೆ ಮೊದಲಿದ್ದ ಖದರಿಲ್ಲ. ಆದಿನ ಶಾಲೆಗಳಲ್ಲಿ ಪರೀಕ್ಷಾ ಫಲಿತಾಂಶ ಸಿಗುತ್ತದೆ ಎಂಬುದಷ್ಟೇ ವಿಶೇಷ. ಅದೂ ಈಗ ಏಪ್ರಿಲ್ ಹತ್ತರಂದೇ ಆಗಬೇಕೆಂಬ ನಿಯಮವಿಲ್ಲ. ಒದೊಂದು ಶಾಲೆಗಳಲ್ಲಿ ಒಂದೊಂದು ಥರ ಇರುವುದನ್ನು ನೋಡುತ್ತೇವೆ. ಹತ್ತರಂದು ರಿಸಲ್ಟ್ ಬಂದರೆ ಮರುದಿನದಿಂದ ಬೇಸಿಗೆ ರಜಾ! ಮತ್ತೆ ಸುಮಾರು ಒಂದೂವರೆ ತಿಂಗಳು ಮಕ್ಕಳು ಶಾಲೆಯತ್ತ ಮುಖಹಾಕಿಯೂ ಮಲಗುವುದಿಲ್ಲ.

ಏಪ್ರಿಲ್ ಹತ್ತು ರಿಸಲ್ಟ್ ದಿನ ಎಂಬ ಕಾರಣಕ್ಕಷ್ಟೇ ನಮಗೆ ಖುಷಿಯ ದಿನವಾಗಿರಲಿಲ್ಲ. ಆ ದಿನದಿಂದ ರಜೆ ಶುರುವಾಗುತ್ತಲ್ಲ ಅದಕ್ಕೆ. ಆಗ ರಜೆಯಲ್ಲಿ ಅಜ್ಜನ ಮನೆಗೆ ಹೋಗುತ್ತಿದ್ದೆವು. ಅಥವಾ ಅಪ್ಪ ಅಮ್ಮನ ಜೊತೆ ಪ್ರವಾಸ ಹೋಗುತ್ತಿದ್ದೆವು. ಮಲೆನಾಡಿನ ಮಕ್ಕಳಿಗೆ ಕಾಡು ತಿರುಗುವ, ಕಾಡಿನ ಹಣ್ಣುಗಳನ್ನು ಹುಡುಕುವ ಕೆಲಸವಿರುತ್ತಿತ್ತು. ಎಮ್ಮೆಗಳ ಜೊತೆ ಹೊಳೆಗೆ ಹೋಗಿ ಅವುಗಳನ್ನು ಮೀಸುವ ಜೊತೆ ಈಜಾಟ ಆಡುವ ಉದ್ಯೋಗವಿರುತ್ತಿತ್ತು. ಅದಕ್ಕೆಲ್ಲ ಏಪ್ರಿಲ್ ಹತ್ತೇ ಓನಾಮ. ಆರಂಭದ ದಿನ. ಅದಕ್ಕೇ ಜೀವನದಲ್ಲಿ ಏಪ್ರಿಲ್ ಹತ್ತಕ್ಕೆ ಮಹತ್ವ. ಎಷ್ಟು ವರ್ಷ ಕಳೆದರೂ ಏಪ್ರಿಲ್ ಹತ್ತು ಬಂದರೆ ಏನೋ ಪುಳಕ. ಕಳೆದ ದಿನಗಳ ಮೆಲುಕು ಹಾಕುವ ಖುಷಿ.

ಈ 'ಓಣಿ'ಯಲ್ಲಿ ಓದುಗರು ಜಾಸ್ತಿ ಓಡಾಡಲಿ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

• **ಭಟ್ರೇ, 'ಸಂಪಾದಕೀಯ' ಇಲ್ಲದ ದಿನಪತ್ರಿಕೆಗಳಂತೆಯೇ, 'ಓದುಗರ ಪತ್ರ'ಗಳ ವಿಭಾಗ ಹೊಂದಿರದ ದಿನಪತ್ರಿಕೆಗಳನ್ನೂ ನಾನು ಮೆಚ್ಚುವುದಿಲ್ಲ. ಲೇಖಕನಾಗಿರುವ ನಾನು ಪೂರ್ಣ ಪ್ರಮಾಣದ ಲೇಖನ ಬರೆಯುವ ಸಮಯ ಇದ್ದಾಗ, ಆ ಸಮಯವನ್ನು ಲೇಖನದ ಬದಲು ಪತ್ರಿಕೆಗೆ ಪತ್ರ ಬರೆಯಲು ಉಪಯೋಗಿಸಿಕೊಳ್ಳುವವನು. ಏಕೆಂದರೆ, ಲೇಖನಗಳಿಗಿಂತ ಪತ್ರಗಳಿಗೆ ಓದುಗರ ಸಂಖ್ಯೆಯೂ ಹೆಚ್ಚು, ಪತ್ರಗಳು ಬೀರುವ ಪರಿಣಾಮವೂ ಹೆಚ್ಚು. 'ವಿಶ್ವವಾಣಿ'ಯ ಓದುಗರು ವಾರದಲ್ಲಿ ಆರು ದಿನಗಳು ತಮ್ಮ ಇಡೀ 'ಓದುಗರ ಓಣಿ'ಯುದ್ದಕ್ಕೂ ಸಾಗಲು ನೀವು ಅನುವು ಮಾಡಿಕೊಡದಿದ್ದರೆ ಬೇಡ, ಆರೂ ದಿನಗಳೂ ತಪ್ಪದೇ, ಕನಿಷ್ಠ ಅರ್ಧ ಓಣಿ ಕ್ರಮಿಸಲಾದರೂ ಅವಕಾಶ ಮಾಡಿಕೊಡಬಾರದೇ? ಪತ್ರದ ಸ್ಥಳ ನುಂಗುವ ದೊಡ್ಡ ಲೇಖನಗಳು ಬರುತ್ತವೆ ಎಂದರೆ ನಾನು ಒಪ್ಪಲಾರೆ. ಅಂಕಣಕ್ಕೊಂದು ಶಿಸ್ತು ಇರಬೇಕಲ್ಲವೇ?**

– ಆನಂದರಾಮ ಶಾಸ್ತ್ರೀ ಅವರೇ, ನಿಮ್ಮ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಓದುಗರ ಪತ್ರ ಅಂದರೆ ಓದುಗರು ಬರೆಯುವ ಸಂಪಾದಕೀಯವಿದ್ದಂತೆ. ಪತ್ರಿಕೆಗಳಲ್ಲಿ ಎಷ್ಟೇ 'ಜಾಗ'ತಿಕ ಸಮಸ್ಯೆ ಇರಲಿ, ಓದುಗರ ಪತ್ರಗಳಿಗೆ ಜಾಗವನ್ನು ಕಲ್ಪಿಸಿ ಕೊಡಬೇಕಾದದ್ದು ಸಂಪಾದಕರ ಧರ್ಮ. 'ಒಬ್ಬ ಓದುಗನ ಪತ್ರ ಸಾವಿರ ಓದುಗರ ಅಭಿಪ್ರಾಯಗಳಿಗೆ ಸಮ' ಎಂಬ ಮಾತಿದೆ. ಕಾರಣ ಅದೇ ರೀತಿಯ ಅಭಿಪ್ರಾಯವನ್ನು ಸಾವಿರ ಮಂದಿ ಪ್ರತಿನಿಧಿಸಬಹುದು. ಪತ್ರಿಕೆಗಳಲ್ಲಿ ಬರೀ ಎರಡು-ಮೂರು ಜನ ಮಾತ್ರ ಸಂಪಾದಕೀಯ ಬರೆಯುತ್ತಾರೆ. ಹೀಗಾಗಿ ಸಂಪಾದಕೀಯದ ಒಕ್ಕಣೆ ಒಂದೇ ರೀತಿಯಾಗಿರುತ್ತದೆ.

ಆದರೆ ಓದುಗರ ಪತ್ರ ವೈವಿಧ್ಯಮಯವಾಗಿರುತ್ತದೆ. ಕಾರಣ ಪತ್ರಿಕೆಗಳ ಅಪಾರ ಸಂಖ್ಯೆಯ ಓದುಗರ ಸಮೂಹದಿಂದ ಅಂಥ ಪತ್ರಗಳು ಮೂಡಿ ಬಂದಿರುತ್ತವೆ. ಯಾವತ್ತೂ ಓದುಗರ ಪತ್ರ ಅಂಕಣ ಸ್ವಾರಸ್ಯಕರವಾಗಿಯೂ, ವಿಷಯಭರಿತವಾಗಿಯೂ, ವಿಚಿತ್ರವಾಗಿಯೂ ಇರುತ್ತದೆ. ಒಂದು ಪತ್ರಿಕೆಯ ಓದುಗರ ಮಟ್ಟವನ್ನು ಅದರಲ್ಲಿ ಪ್ರಕಟವಾಗುವ ಓದುಗರ ಪತ್ರ ವಿಭಾಗದಿಂದ ಅಳೆಯಬಹುದು. ಓದುಗರ ಪತ್ರವಿದ್ದಂತೆ, ಪತ್ರಿಕೆ ಎಂಬ ಮಾತೂ ಇದೆ.

ಯಾವ ಕಾರಣಕ್ಕೂ 'ಓದುಗರ ಪತ್ರ' ಅಂಕಣವನ್ನು ಉಪೇಕ್ಷೆ ಮಾಡುವಂತಿಲ್ಲ. ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಸರ್ದಾರ್ ಪಟೇಲ್, ಆಚಾರ್ಯ ಕೃಪಲಾನಿ, ಸರೋಜಿನಿ ನಾಯ್ಡು, ಜೆ.ಆರ್.ಡಿ. ಟಾಟಾ ಮುಂತಾದ ವ್ಯಕ್ತಿಗಳು ಅವರ ಜೀವನದ ಕಾಲಘಟ್ಟದಲ್ಲಿ ನಿರಂತರವಾಗಿ ಪತ್ರಿಕೆಗಳ 'ಓದುಗರ ಪತ್ರ' ಅಂಕಣಕ್ಕೆ ಬರೆದವರು. ನಿಮ್ಮ ಹಾಗೆ, ನಾನೂ ಯಾವುದೇ ಪತ್ರಿಕೆಯನ್ನು ಕೈಗೆತ್ತಿಕೊಂಡರೂ, 'ಓದುಗರ ಪತ್ರ' ವಿಭಾಗದ ಮೇಲೆ ಕಣ್ಣಾಡಿಸುವುದನ್ನು ತಪ್ಪಿಸುವುದಿಲ್ಲ.

ನಿಮಗೆ ಗೊತ್ತಿರಲಿ, ಸುಮಾರು 35 ವರ್ಷಗಳ ಹಿಂದೆ. ನಾನು 'ಸುಧಾ' ವಾರಪತ್ರಿಕೆಗೆ ಒಂದು ಲೇಖನವನ್ನು ಬರೆದಿದ್ದೆ. ಅದು 'ಓದುಗರ ಪತ್ರ'ದ ಮಹತ್ವದ ಕುರಿತಾಗಿತ್ತು. ಅದಕ್ಕೆ ನಾನು ನೀಡಿದ ಶೀರ್ಷಿಕೆ – 'ಓದುಗರ ಪತ್ರ, ಚಿತ್ರ ವಿಚಿತ್ರ' ಎಂದಿತ್ತು. ಆಗ ನಾನು ಪತ್ರಿಕೋದ್ಯಮ ವ್ಯಾಸಂಗ ಮುಗಿಸಿ, ಹವ್ಯಾಸಿ ಪತ್ರಕರ್ತನಾಗಿದ್ದ ದಿನಗಳು. ನಾನು ಸಹ 'ಓದುಗರ ಪತ್ರ' ವಿಭಾಗಕ್ಕೆ ಪತ್ರ ಬರೆದೂ ಬರೆದು ಪತ್ರಕರ್ತನಾದವನು. ನನ್ನ ಸಂಪಾದಕತ್ವದ ಪತ್ರಿಕೆಯಲ್ಲಿ 'ಓದುಗರ ಪತ್ರ' ವಿಭಾಗಕ್ಕೆ ಯಾವತ್ತೂ ಅಗ್ರಸ್ಥಾನ.

ಆದರೂ ಕೆಲವೊಮ್ಮೆ ಅಂಕಣಗಳು 'ಓದುಗರ ಪತ್ರ' ವಿಭಾಗವನ್ನು ಅತಿಕ್ರಮಿಸುವುದುಂಟು. ಇದು ಒಳ್ಳೆಯ ಅಭ್ಯಾಸವಂತೂ ಖಂಡಿತ ಅಲ್ಲ. ಯಾವ ಸಬೂಬು ನೀಡಿದರೂ ನಾನು ಅದನ್ನು ಒಪ್ಪುವುದಿಲ್ಲ. 'ಓದುಗರ ಪತ್ರ' ಅಂಕಣ ಪತ್ರಿಕೆಗೆ ಭೂಷಣವಿದ್ದಂತೆ. ನಮ್ಮಿಂದ ಈ ಲೋಪವಾದರೆ, ನೀವು ಕಿವಿ ಹಿಂಡುವುದನ್ನು ಮರೆಯಬೇಡಿ!

★★★

ಪ್ರದೀಪ ನಾಯಕ, ಬೆಂಗಳೂರು

• **ಸಂಪಾದಕರೇ, ನೀವು ಸದಾ ಪ್ರವಾಸದಲ್ಲಿರುತ್ತೀರಿ; ತಿಂಗಳಲ್ಲಿ ಹತ್ತು ದಿನ ವಿದೇಶ ಪ್ರವಾಸದಲ್ಲಿ ಇರುತ್ತೀರಿ ಎಂದು ಕೇಳಿದ್ದೇನೆ. ಆದರೂ ನೀವು ನಿಮ್ಮ ಯಾವ ಅಂಕಣವನ್ನೂ ತಪ್ಪಿಸುವುದಿಲ್ಲ. ಜತೆಗೆ ಪತ್ರಿಕೆಯನ್ನು ನಡೆಸಿಕೊಂಡು ಹೋಗುವ ಹೊಣೆಗಾರಿಕೆ. ನಿಮ್ಮ ಪತ್ರಿಕೆಗೆ ನೀವೇ ಮಾಲೀಕರು ಕೂಡ. ಇವೆಲ್ಲ ಹೇಗೆ ಸಾಧ್ಯವಾಗುತ್ತದೆ?**

– ಪ್ರದೀಪ ಅವರೇ, ಇದರಲ್ಲಿ ಯಾವ ಹೆಚ್ಚುಗಾರಿಕೆಯೂ ಇಲ್ಲ. ಯಾರೂ ಮಾಡದ ಮಹಾನ್ ಕೆಲಸವನ್ನು ನಾನು ಮಾಡುತ್ತಿದ್ದೇನೆ ಎಂಬ ಭಾವನೆಯನ್ನು ಇಟ್ಟುಕೊಳ್ಳಬೇಡಿ. ನಾವು ಮಾಡುವ ಕೆಲಸವನ್ನು ಗಾಢವಾಗಿ ಪ್ರೀತಿಸಿದರೆ, ನಮ್ಮ ಕೆಲಸದಲ್ಲಿ ಅಚಲ ನಿಷ್ಠೆಯನ್ನು ಹೊಂದಿದ್ದರೆ, ಯಾರಿಗಾದರೂ ಇವೆಲ್ಲ ಸಾಧ್ಯವಾಗುತ್ತವೆ. ನಾನು (ವಿದೇಶ) ಪ್ರವಾಸದಲ್ಲಿದ್ದಾಗಲೂ ಪ್ರತಿ ದಿವಸ ಎರಡು ಗಂಟೆ-ಮೂರು ಗಂಟೆ ಕಾಲವನ್ನು ನನ್ನ ಬರಹ ಮತ್ತು ಓದಿಗೆ ಮೀಸಲಾಗಿಟ್ಟಿರುತ್ತೇನೆ.

ನಾವು ಪ್ರತಿ ದಿವಸ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಯಾವ ಕೆಲಸವನ್ನಾದರೂ ಫಿಟ್ ಆಗುವಂತೆ ಸೇರಿಸಿಕೊಳ್ಳಬಹುದು. ಇದಕ್ಕೆ ಟೈಮ್ ಮ್ಯಾನೇಜ್ಮೆಂಟ್ ಬಹಳ ಮುಖ್ಯ. ಅದರಲ್ಲೂ ನಮಗೆ ಇಷ್ಟವಾದ ಕೆಲಸ ಪೂರೈಸಲು ತನ್ನಿಂದ ತಾನೇ ಸಮಯ ಹೊಂದಾಣಿಕೆಯಾಗುತ್ತದೆ. ಪ್ರತಿ ದಿವಸ ಊಟ ಮತ್ತು ನಿದ್ದೆಯನ್ನು ಏನೇ ಆದರೂ ತಪ್ಪಿಸುವುದಿಲ್ಲ. ಓದು ಮತ್ತು ಬರಹವನ್ನು ಅದರ ಜತೆಗೆ ಸೇರಿಸಿಕೊಂಡರೆ ಆಯಿತು.

ಅಮೆರಿಕದ ಅಧ್ಯಕ್ಷನಿಂದ ಹಿಡಿದು, ಸಾಮಾನ್ಯ ವ್ಯಕ್ತಿಯ ತನಕ ಎಲ್ಲರಿಗೂ ಇರುವುದು ಕೇವಲ 24 ಗಂಟೆಗಳು. ನಮ್ಮ ಸಮಯವನ್ನು ನಾವು ಹೇಗೆ ಹೊಂದಿಸಿಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ. ಇಲ್ಲಿ ಆದ್ಯತೆ (priority)ಯನ್ನು ರೂಢಿಸಿಕೊಳ್ಳಬೇಕಾದದ್ದು ಅತ್ಯಗತ್ಯ.

ರಾಜು ಪತ್ತಾರ, ಹುಬ್ಬಳ್ಳಿ

• **ಭಟ್ಟರೇ, ನಿಮ್ಮ ಪತ್ರಿಕೆಯ ಸಂಪಾದಕರ ಪುಟದಲ್ಲಿ ಪ್ರಕಟವಾಗುವ 'ಭಟ್ಟರ ಸ್ಕಾಚ್' ಪ್ರಶ್ನೋತ್ತರ ಅಂಕಣವನ್ನು ನಾನು ನಿತ್ಯವೂ ಓದುತ್ತೇನೆ. ಕಳೆದ ಏಳೆಂಟು ವರ್ಷಗಳಿಂದ ನಾನೂ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ನೀವು ಇಲ್ಲಿಯ ತನಕ ಸುಮಾರು 30 ಸಾವಿರ ಪ್ರಶ್ನೆಗಳಿಗೆ ಉತ್ತರ ನೀಡಿದ್ದೀರಿ ಎಂಬುದು ನನ್ನ ಅಂದಾಜು. ಈ ಅಂಕಣಗಳಿಗೆ ಉತ್ತರ ನೀಡಲು ನೀವು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ?**

– ರಾಜು ಪತ್ತಾರ ಅವರೇ, ನಿಜ, ನೀವು ಈ ಅಂಕಣಕ್ಕೆ ನಿರಂತರವಾಗಿ ಪ್ರಶ್ನೆಗಳನ್ನು ಕೇಳುತ್ತಿರುವುದು ನನ್ನ ಗಮನದಲ್ಲಿದೆ. ನಿಮ್ಮ ಪ್ರಶ್ನೆ ಯಾವತ್ತೂ ಸ್ವಾರಸ್ಯಕರವಾಗಿರುತ್ತದೆ. ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಬೇಕು ಎನಿಸುತ್ತದೆ. ನಾನು ಇಲ್ಲಿ ತನಕ ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ ಎಂಬುದರ ಸಣ್ಣ ಕಲ್ಪನೆಯೂ ನನಗೆ ಇರಲಿಲ್ಲ. ನೀವು ಹೇಳಿದ ಅಂಕಿ-ಸಂಖ್ಯೆಯನ್ನು ಓದಿ ನನಗೆ ಆಶ್ಚರ್ಯವಾ ಯಿತು. ನಾನು ಇಲ್ಲಿಯ ತನಕ ನೀಡಿದ ಉತ್ತರಗಳ ಸಂಖ್ಯೆ 30 ಸಾವಿರ ದಾಟಿದೆ ಎಂದು ಸೋಜಿಗವಾಯಿತು, ಇರಲಿ.

'ಭಟ್ಟರ ಸ್ಕಾಚ್' ತುಂಬಾ light hearted ಅಂಕಣ. ಈ ಅಂಕಣವನ್ನು ಡಾ.ಎಸ್.ಎಲ್.ಭೈರಪ್ಪನವರು, ನಮ್ಮ ರಾಜ್ಯದ ಪ್ರತಿಷ್ಠಿತ ಮಠವೊಂದರ ಪೀಠಾಧಿಪತಿಗಳು, ಹಲವು ಮಂತ್ರಿಗಳು, ಗಣ್ಯರು ಸೇರಿದಂತೆ ಅಸಂಖ್ಯ ಓದುಗರು ನಿತ್ಯವೂ ಓದುತ್ತಾರೆ. ಇಲ್ಲಿ ಓದುಗರು ತಮಾಷೆಯಿಂದ ಪ್ರಶ್ನೆಯನ್ನು ಕೇಳುತ್ತಾರೆ, ನಾನು ಅಷ್ಟೇ ತಮಾಷೆಯಿಂದ ಉತ್ತರಿಸುತ್ತೇನೆ. ಈ ಅಂಕಣದಲ್ಲಿ ಕೆಲವು ವ್ಯಕ್ತಿಗಳು ಆಗಾಗ ಇಣುಕುತ್ತಾರೆ. ನನಗೆ ವೈಯಕ್ತಿಕವಾಗಿ ಅವರ ಬಗ್ಗೆ ಯಾವುದೇ ಕೀಳು ಭಾವನೆ, ದ್ವೇಷವಿಲ್ಲ. ಸುಮ್ಮನೆ ಕಿಚಾಯಿಸಲೆಂದು, ಕಾಲೆಳೆಯಲೆಂದು ಕೆಲವರ ಹೆಸರುಗಳನ್ನು ಆಗಾಗ ಪ್ರಸ್ತಾಪಿಸುವುದು ಉಂಟು. ಅವರ ಬಗ್ಗೆ ನನಗೆ ಒಂದು ಮೂಲೆಯಲ್ಲಿ ಗೌರವ ಇದ್ದೇ ಇದೆ.

ಹೀಗಾಗಿ ನಾನು ಯಾರ ಕುರಿತಾದರೂ ಈ ಅಂಕಣದಲ್ಲಿ ವ್ಯಂಗ್ಯವಾಗಿ, ಚೋದ್ಯವಾಗಿ ಬರೆದಿದ್ದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ. ಸುಮ್ಮನೆ ಓದಿ, ನಕ್ಕು, ಮರೆತು ಬಿಡಬಹುದು. ನಾನೂ ಹಾಗೆ ಮಾಡುತ್ತೇನೆ. ನಾನು ನೀಡಿದ ಬಹುತೇಕ ಉತ್ತರಗಳು ನನಗೇ ಮರೆತು ಹೋಗಿರುತ್ತವೆ. ಈ ಅಂಕಣವನ್ನು ಬರೆಯಲು ನನಗೆ ಹೆಚ್ಚೆಂದರೆ ಹದಿನೈದು ನಿಮಿಷಗಳು ಸಾಕು. ಕೆಲವೊಮ್ಮೆ ಕೆಲವು ಪ್ರಶ್ನೆಗಳಿಗೆ ಉತ್ತರಿಸುವ ತಿಣುಕಾಡಿದ್ದೂ ಉಂಟು. ನಾನು ಈ ಅಂಕಣವನ್ನು ಸಾಧ್ಯವಾದಷ್ಟರ ಮಟ್ಟಿಗೆ lively ಆಗಿ ಇಡಲು ಬಯಸುತ್ತೇನೆ.

ಒಂದು ದಿನದಲ್ಲಿ ನಿಮಗೆ 15 ಕೆಲಸಗಳನ್ನು ಮಾಡಲು ಸಾಧ್ಯವಾಗದೇ ಹೋಗಬಹುದು. ಆ ಪೈಕಿ ಅತ್ಯಂತ ಪ್ರಮುಖವಾದ ಐದು ಕೆಲಸಗಳು ಯಾವವು ಎಂಬ ಆದ್ಯತೆಯನ್ನು ನಾವು ಹಾಕಿಕೊಳ್ಳಬೇಕು. ಆಗ ಯಾವ ಕಾರಣಕ್ಕೂ ಪ್ರಮುಖವಾದ ಕೆಲಸಗಳು ಮಿಸ್ ಆಗುವುದಿಲ್ಲ. ಹೀಗಾಗಿ ನಮ್ಮ ಕೆಲಸಗಳಿಗೆ ಆದ್ಯತೆಯ ಟ್ಯಾಗ್ ಹಚ್ಚಿಕೊಳ್ಳಬೇಕಾದದ್ದು ಮುಖ್ಯ.

Time management is an oxymoron. Time is beyond our control, and the clock keeps ticking regardless of how we lead our lives. Priority management is the answer to maximizing the time we have ಎಂಬ ಮಾತನ್ನು ಕೇಳಿರಬಹುದು.ಇಲ್ಲಿ ನನಗೆ, I've learned time management, organization and I have priorities ಎಂದು ಅಮೆರಿಕದ ನಾಯಕನೊಬ್ಬರು ಹೇಳಿದ ಮಾತು ನೆನಪಾಗುತ್ತದೆ.

ನಾನು ಸಹ ನನ್ನ ಹತ್ತಾರು ಕೆಲಸಗಳ ಮಧ್ಯೆ ಪ್ರತಿದಿನ ಮಾಡಲೇಬೇಕಾದ ಐದು ಕೆಲಸಗಳ ಆದ್ಯತಾ ಪಟ್ಟಿಯನ್ನು ರೂಪಿಸುತ್ತೇನೆ. ಅವುಗಳಲ್ಲಿ ನನ್ನ ಓದು ಮತ್ತು ಬರಹವೂ ಸೇರಿರುತ್ತವೆ. ಹೀಗಾಗಿ ಯಾವ ಕಾರಣಕ್ಕೂ ನನ್ನ ಅಂಕಣ ತಪ್ಪುವುದಿಲ್ಲ.

★★★

ಮೀನಾಕ್ಷಿ ಗುರುರಾಜ, ಮೈಸೂರು

• **ಭಟ್ರೇ, ನನ್ನ ಮಗ ಎರಡನೇ ವರ್ಷದ ಇಂಜಿನಿಯರಿಂಗ್ ನಲ್ಲಿದ್ದಾನೆ. ಆತ ಪ್ರತಿದಿನ ಕನಿಷ್ಠ ನಾಲ್ಕು ಗಂಟೆಯಾದರೂ ಕಂಪ್ಯೂಟರ್ ಮುಂದೆ ಕುಳಿತಿರುತ್ತಾನೆ. ಕಂಪ್ಯೂಟರ್ ಇಲ್ಲದಿದ್ದರೆ ಕೈಯಲ್ಲಿ ಮೊಬೈಲ್ ಹಿಡಿದಿರುತ್ತಾನೆ. ಕಂಪ್ಯೂಟರ್ ಮತ್ತು ಮೊಬೈಲ್ ಅನ್ನು ಬಳಸುವುದು ತಪ್ಪಲ್ಲ ಎಂದು ನೀವು ಇದೇ ಅಂಕಣದಲ್ಲಿ ಬರೆದಿದ್ದನ್ನು ಓದಿದ್ದೇನೆ. ಆದರೂ ನನ್ನ ಮಗ ಅತಿಯಾಗಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸುತ್ತಿದ್ದಾನೆ ಎಂದು ಅನಿಸುತ್ತಿದೆ. ಈ ವಿಷಯದಲ್ಲಿ ನನಗೆ ನಿಮ್ಮ ಸಲಹೆ ಮುಖ್ಯ.**

– ಮೀನಾಕ್ಷಿ ಅವರೇ, ಈ ದಿನಗಳಲ್ಲಿ ಓದುವ ಮಕ್ಕಳು ಕಂಪ್ಯೂಟರ್ ಮತ್ತು ಮೊಬೈಲ್‌ಅನ್ನು ಬಳಸುವುದು ಸರ್ವೇಸಾಮಾನ್ಯ. ಇದು ನಿಮ್ಮ- ನಮ್ಮ ಮನೆಯ ಚಿತ್ರಣವಲ್ಲ. ಜಗತ್ತಿನಲ್ಲಿ ನೀವು ಯಾರ ಮನೆಗೆ ಹೋದರೂ ಅಲ್ಲಿನ ಮಕ್ಕಳು ಕಂಪ್ಯೂಟರ್ ಮತ್ತು ಮೊಬೈಲ್‌ಅನ್ನು ಬಳಸುವುದನ್ನು ನೋಡಬಹುದು. ಇತ್ತೀಚೆಗೆ ಲಂಡನ್‌ನಿಂದ ಬಂದ ದಂಪತಿಗಳು ನನ್ನ ಮುಂದೆ ಅವರ ಮಕ್ಕಳು ಅತಿಯಾಗಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸುವ ಬಗ್ಗೆ ತಮ್ಮ ಗೋಳನ್ನು ತೋಡಿಕೊಂಡರು. ಈ ಪರಿಸ್ಥಿತಿ ಕೇವಲ ನಿಮ್ಮ ಮನೆಗೆ ಮಾತ್ರ ಸೀಮಿತವಲ್ಲ. ಇದೊಂದು ಜಾಗತಿಕ ಪಿಡುಗು. ಜಗತ್ತಿನ ಎಲ್ಲರ ಮನೆಯ ಮಕ್ಕಳೂ ಕಂಪ್ಯೂಟರ್ ಮತ್ತು ಮೊಬೈಲ್ ವ್ಯಾಮೋಹಿಗಳೇ. ಇವರು ಹೆಚ್ಚು, ಅವರು ಕಮ್ಮಿ ಎಂದು ಭಾವಿಸಬೇಕಾಗಿಲ್ಲ. ಈ ವಿಷಯದಲ್ಲಿ ಎಲ್ಲರೂ ಗರಿಷ್ಠ ಮಟ್ಟ ತಲುಪಿದವರೇ.

ಇದಕ್ಕೆ ಮುಖ್ಯ ಕಾರಣ ಈ ದಿನಗಳಲ್ಲಿ ಹೆಚ್ಚಿನ ಮಾಹಿತಿ ಹರಿದು ಬರುವುದು ಕಂಪ್ಯೂಟರ್ ಮತ್ತು ಮೊಬೈಲ್ ಗಳಿಂದ. ಕಂಪ್ಯೂಟರಿಗೂ, ಮೊಬೈಲ್‌ಗೂ, ಐಪ್ಯಾಡ್‌ಗೂ ಯಾವ ವ್ಯತ್ಯಾಸವು ಇಲ್ಲ. ಇಂದು ಕರೆ ಮಾಡಿ ಮಾತಾಡುವುದಕ್ಕಷ್ಟೇ ಮೊಬೈಲ್ ಸೀಮಿತವಾಗಿಲ್ಲ. ಮೊಬೈಲ್ ಇಲ್ಲದೇ ಹತ್ತು ನಿಮಿಷವು ಕೂಡ ಇರಲಾಗುವುದಿಲ್ಲ. ಅಷ್ಟರ ಮಟ್ಟಿಗೆ ನಾವು ಮೊಬೈಲ್ ದಾಸರಾಗಿದ್ದೇವೆ.

ಇದು ತಪ್ಪು ಎಂದು ನನಗೆ ಅನಿಸುತ್ತಿಲ್ಲ. ಕೈಯಲ್ಲಿ ಮೊಬೈಲ್ ಇದೆ ಎಂದ ಮಾತ್ರಕ್ಕೆ ಯಾವತ್ತೂ ಅದರೊಳಗಡೆ ಮುಳುಗಿ ಹೋಗಬೇಕು ಎಂದೇನೂ ಇಲ್ಲ. ಮೊಬೈಲನ್ನು ವಿವೇಚನೆಯಿಂದ ಬಳಸುವುದು ಜಾಣತನ. ಅದರಿಂದ ಸಾಧ್ಯವಾದಷ್ಟು ಮಾಹಿತಿಯನ್ನು ಹೀರಿಕೊಳ್ಳಲು ಸಾಧ್ಯವಾಗುವುದಾದರೆ ಅದು ಒಳ್ಳೆಯದೇ. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕರು ರೀಲ್ಸ್ ನೋಡುತ್ತಾ ಕಾಲಕ್ಷೇಪ ಮಾಡುತ್ತಾರೆ. ಇದು ಮಾತ್ರ ವ್ಯಸನ.

ನೀವು ರೀಲ್ಸ್ ನೋಡಲು ಆರಂಭಿಸಿದರೆ ಅದಕ್ಕೆ ಮಿತಿ, ಕೊನೆ ಎಂಬುದೇ ಇರುವುದಿಲ್ಲ. ಕೆಲವರು ನಿರಂತರವಾಗಿ ತಾಸುಗಟ್ಟಲೆ ರೀಲ್ಸ್ ನೋಡುತ್ತಲೇ ಇರುತ್ತಾರೆ. ನಿಮ್ಮ ಮಗ ಅಂಥ ವ್ಯಸನವನ್ನು ಅಂಟಿಸಿಕೊಂಡಿದ್ದರೆ ನೀವು ತಲೆಕೆಡಿಸಿಕೊಳ್ಳಿ. ಆತ ತನ್ನ ಅಭ್ಯಾಸ ಅಥವಾ ಮಾಹಿತಿ ಸಂಗ್ರಹಕ್ಕಾಗಿ ಕಂಪ್ಯೂಟರ್ ಅಥವಾ ಮೊಬೈಲ್‌ಅನ್ನು ಬಳಸುತ್ತಿದ್ದರೆ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಬೇಡಿ. ನಿಮ್ಮ ಕಾಲದಲ್ಲಿ ಓದುವುದು ಎಂದರೆ ಪುಸ್ತಕ ಓದುವುದು ಎಂದಾಗಿತ್ತು. ಆದರೆ ಈಗ ಹಾಗಿಲ್ಲ. ಪುಸ್ತಕಗಳನ್ನು ಕಂಪ್ಯೂಟರ್ ಮತ್ತು ಮೊಬೈಲ್‌ನಿಂದ ಓದಬಹುದು.

ಆದ್ದರಿಂದ ನಿಮ್ಮ ಮಗನ ಕಂಪ್ಯೂಟರ್ ಗೀಳಿನ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಡಿ. ಆತ ಕಂಪ್ಯೂಟರಿನಲ್ಲಿ ಏನನ್ನು ನೋಡುತ್ತಿದ್ದಾನೆ ಎಂಬುದನ್ನು ನಿಮ್ಮದೇ ಆದ ಬೇಹುಗಾರಿಕಾ ವಿಧಾನದಿಂದ ಚೆಕ್ ಮಾಡಿ. ಒಂದು ವೇಳೆ porno sites ನೋಡುತ್ತಿದ್ದಾನೆ ಎಂಬುದು ಗೊತ್ತಾದರೆ, ಆಕಾಶ ಉದುರಿ ಬಿದ್ದವರಂತೆ ರಂಭಾರೂಢಿ ಮಾಡಿ ಮನೆ ವಾತಾವರಣ ಕೆಡಿಸಬೇಡಿ. ನಿಮ್ಮ ಮಗ ವಯಸ್ಸಿಗೆ ಬಂದವರಂತೆ ಸಹಜವಾಗಿ ವರ್ತಿಸುತ್ತಿದ್ದಾನೆ, ಆತನ ಅಂಗಾಂಗ ಮತ್ತು ಸಂವೇದನೆಗಳೆಲ್ಲ ಸರಿಯಾಗಿ ಕೆಲಸ ಮಾಡುತ್ತಿವೆ ಎಂದು ಅರ್ಥ ಮಾಡಿಕೊಳ್ಳಿ. ಬೇಕಾದರೆ ನಿಮ್ಮ ಯಜಮಾನರನ್ನು ಕೇಳಿ, ಅವರೂ ನಿಮ್ಮ ಮಗನ ವಯಸ್ಸಿನಲ್ಲಿ ಇದೇ ರೀತಿ ಪೋಲಿಯಾಗಿದ್ದರು ಎಂಬುದು ಮಾನವರಿಕೆಯಾದೀತು!

★★★

ಕಂಪ್ಲಿ ವಿನೋದ, ಬೆಂಗಳೂರು

• **ಭಟ್ರೇ, ನಾನು ಬೇರೆ ಹೆಂಗಸಿನೊಂದಿಗೆ ಸಂಬಂಧ ಹೊಂದಿದ್ದೇನೆ ಎಂದು ನನ್ನ ಹೆಂಡತಿ ಭಾವಿಸಿರಬಹುದು ಎಂದು ನನ್ನ ಯೋಚನೆ. ನನ್ನ ಪತ್ನಿಯ ಮನಸ್ಸಿನೊಳಗೆ ನನ್ನ ಬಗ್ಗೆ ಯಾವ ಭಾವನೆ ಇದೆ ಎಂಬುದನ್ನು ತಿಳಿದುಕೊಳ್ಳುವುದು ಹೇಗೆ?**

– ವಿನೋದ ಅವರೇ, ಹೆಂಡತಿಯ ಮನಸ್ಸಿನೊಳಗೆ ಏನಿದೆ ಎಂಬುದನ್ನು ತಿಳಿದುಕೊಳ್ಳುವುದು ಇಲ್ಲಿಯ ತನಕ ಯಾವ ಗಂಡಸಿಗೂ ಸಾಧ್ಯವಾಗಿಲ್ಲ. Frankly speaking, ಈ ವಿಷಯದಲ್ಲಿ ಬೇರೆ ಯಾರಿಗೂ ಸಾಧ್ಯವಾಗದ ಸಾಧನೆಯನ್ನು ನೀವು ಮಾಡುತ್ತೀರಿ ಎಂದು ನನಗಂತೂ ಅನಿಸುವುದಿಲ್ಲ. ನೀವು ಬೇರೆ ಹೆಂಗಸನ ಜತೆ ಸಂಬಂಧ ಹೊಂದಿದ್ದೀರಿ ಎಂದು ನಿಮ್ಮ ಹೆಂಡತಿ ಇನ್ನೂ ಹೇಳಿಯೇ ಇಲ್ಲ. ನೀವು ಬೇರೆ ಸಂಬಂಧ ಹೊಂದಿರಬಹುದು ಎಂದು ನಿಮ್ಮ ಹೆಂಡತಿ ಭಾವಿಸಿದ್ದಾಳೆಂಬುದು ನಿಮ್ಮ ಊಹೆ ಅಷ್ಟೇ. ಆಕೆ ನಿಮ್ಮನ್ನು 'ಕುಂಬಳಕಾಯಿ ಕಳ್ಳ' ಎಂದು ಇನ್ನೂ ಕರೆದೇ ಇಲ್ಲ! ಆಗಲೇ ನೀವು ಹೆಗಲೊಂದನ್ನೇ ಅಲ್ಲ, ಇಡೀ ಮೈಯನ್ನೇ ಮುಟ್ಟಿಕೊಳ್ಳುತ್ತಿದ್ದೀರಿ.

ನಿಮ್ಮ ಹೆಂಡತಿ ಮನಸ್ಸಿನಲ್ಲಿ ನಿಮ್ಮ ಬಗ್ಗೆ ಎಂಥ ಭಾವನೆ ಇದೆ ಎಂದು ತಿಳಿದುಕೊಳ್ಳುವ ಹುಡುಕಾಟ ಬಿಡಿ. ಅದರ ಬದಲು ಶೀರ್ಷಾಸನ ಹಾಕಿ, ಬೆಳ್ಳುಳ್ಳಿ ಸಿಪ್ಪೆ ಬಿಡಿಸಲು ಪತ್ನಿಗೆ ಸಹಕರಿಸಿ.